ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ

ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಒಂದು ಅಧ್ಯಯನ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ಕೆ. ಮಂಜಪ್ಪ

ಮಾರ್ಗದರ್ಶಕರು
ಡಾ. ಎಚ್.ಡಿ ಪ್ರಶಾಂತ್
ಪ್ರವಾಚಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಆಗಸ್ಟ್ ೨೦೦೯

305

ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ

ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಒಂದು ಅಧ್ಯಯನ

(ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ಕೆ. ಮಂಜಪ್ಪ

ಮಾರ್ಗದರ್ಶಕರು
ಡಾ. ಎಚ್.ಡಿ ಪ್ರಶಾಂತ್
ಪ್ರವಾಚಕರು
ಅಭಿವೃದ್ಧಿ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ಆಗಸ್ಟ್ ೨೦೦೯

ಪ್ರಮಾಣ ಪತ್ರ

ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಒಂದು ಅಧ್ಯಯನ) ಎಂಬ ವಿಷಯದ ಕುರಿತು ಡಾ. ಎಚ್.ಡಿ. ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಇದುವರೆಗೂ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 24 ಆಗಸ್ಟ್ ೨೦೦೯

ಕೆ. ಮಂಜಪ್ಪ
ಸಂಶೋಧನ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಒಂದು ಅಧ್ಯಯನ) ಎಂಬ ವಿಷಯದ ಕುರಿತು ಕೆ. ಮಂಜಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಮಾಡಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಇದುವರೆಗೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 24 ಆಗಸ್ಟ್ ೨೦೦೯

ಡಾ. ಎಚ್.ಡಿ. ಪ್ರಶಾಂತ್
ಮಾರ್ಗದರ್ಶಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಅಧ್ಯಯನ ಮಾಡಲು ನನಗೆ ಅವಕಾಶ ನೀಡಿದ ಅಂದಿನ ಮಾನ್ಯಕುಲಪತಿಗಳಾದ ಡಾ. ಬಿ.ಎ. ವಿವೇಕ ರೈ, ಇಂದಿನ ಮಾನ್ಯಕುಲಪತಿಗಳಾದ ಡಾ. ಎ. ಮುರಿಗೆಪ್ಪ, ಮಾನ್ಯ ಕುಲಸಚಿವರಾದ ಶ್ರೀ ಎಸ್.ಎಸ್. ಪುಜಾರ್ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ. ವಿರೇಶ ಬಡಿಗೇರ ಇವರೆಲ್ಲರಿಗೆ ನಾನು ಕೃತಜ್ಞನಾಗಿದ್ದೇನೆ.

ಸಂಶೋಧನಾ ಅಧ್ಯಯನದ ಆರಂಭದಿಂದಲೂ ನನ್ನಲ್ಲಿದ್ದ ಆತಂಕಗಳನ್ನು ನಿವಾರಿಸಿ, ಧೈರ್ಯತುಂಬಿ, ಪ್ರೋತ್ಸಾಹಿಸುತ್ತಲೇ ಪ್ರಬಂಧ ರಚನೆಗೆ ಅಮೂಲ್ಯವಾದ ಮಾರ್ಗದರ್ಶನದ ಮಾಡುವುದರ ಮೂಲಕ ನನ್ನ ವೈಯಕ್ತಿಕ ಬದುಕಿನ ಅಭಿವೃದ್ಧಿಗೆ ಕಾರಣರಾಗಿರುವ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರವಾಚಕರಾದ ಡಾ. ಎಚ್.ಡಿ. ಪ್ರಶಾಂತ್‌ರವರಿಗೆ ನಾನೆಂದೂ ಋಣಿಯಾಗಿದ್ದೇನೆ.

ಬಾಹ್ಯ ಸಂಶೋಧನಾ ವಿದ್ಯಾರ್ಥಿಯಾಗಿ ನಾನು ನೋಂದಣಿ ಮಾಡಿದ ದಿನದಿಂದ ಪ್ರಬಂಧ ರಚನೆ ಮಾಡುವ ಹಂತದವರೆಗೆ ಉತ್ತಮವಾದ ಸಲಹೆಗಳನ್ನು ನೀಡಿದ ಅಭಿವೃದ್ಧಿ ಅಧ್ಯಯನ ವಿಭಾಗದ ಹಿರಿಯ ವಿದ್ವಾಂಸರಾದ ಡಾ. ಟಿ.ಆರ್. ಚಂದ್ರಶೇಖರ್ ಮತ್ತು ಡಾ. ಎಂ. ಚಂದ್ರ ಪೂಜಾರಿಯವರಿಗೆ ಆಭಾರಿಯಾಗಿದ್ದೇನೆ.

ನನ್ನ ಕೆಲವು ಗೊಂದಲಗಳಿಗೆ ಸ್ಪಷ್ಟೀಕರಣ ಒದಗಿಸುತ್ತಾ ನನ್ನ ಅಧ್ಯಯನಕ್ಕೆ ಸಹಕರಿಸಿದ ವಿಭಾಗದ ಅಧ್ಯಾಪಕರುಗಳಾದ ಡಾ. ಎ. ಶ್ರೀಧರ್, ಡಾ. ಸಿದ್ಧಗಂಗಮ್ಮ, ಶ್ರೀ ಜನಾರ್ದನ, ಕೆ.ಸಿ. ಚನ್ನಮ್ಮ ಇವರೆಲ್ಲರಿಗೆ ಹೃದಯಪೂರ್ವಕವಾಗಿ ನಮಿಸುತ್ತೇನೆ. ನನ್ನ ಅಧ್ಯಯನ ಕಾರ್ಯಕ್ಕೆ ಸಹಾಯ ಮಾಡಿದ ಡಾ. ಕೆ. ಸವಿತಾ, ಡಾ. ಜೆ. ಕೃಷ್ಣ, ಶ್ರೀ ಹೆಚ್.ಎಸ್. ರವೀಂದ್ರ, ಶ್ರೀಮತಿ ಬಿ. ಗಂಗಮ್ಮ ಗೌಳಿ ಮತ್ತು ಗಣೇಶ್ ಕಂಬಾರ ಇವರಿಗೆಲ್ಲಾ ತುಂಬು ಹೃದಯದಿಂದ ವಂದಿಸುತ್ತೇನೆ.

ಸಂಶೋಧನಾ ಅಧ್ಯಯನ ಕೈಗೊಳ್ಳಲು ಅಧಿಕೃತವಾಗಿ ಅನುಮತಿಸಿದ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಅಧ್ಯಯನಕ್ಕೆ ಅನುವು ಮಾಡಿಕೊಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರನ್ನು ಸೌಜನ್ಯದಿಂದ ಸ್ಮರಿಸುತ್ತೇನೆ.

ಸದಾ ನನ್ನ ಯಶಸ್ಸಿಗಾಗಿ ಹಾರೈಸುವ ನನ್ನ ಜನ್ಮದಾತರಾದ ಶ್ರೀ ಕೊಟಗಿ ಚಿಕ್ಕಣ್ಣ ಮತ್ತು ಶ್ರೀಮತಿ ಸಣ್ಣಕ್ಕ, ಮಾವನವರಾದ ಬಿ.ವಿ. ನರಸಿಂಹಮೂರ್ತಿ, ಅತ್ತೆ ತ್ರಿವೇಣಿ ಇವರನ್ನು ಅಪಾರವಾಗಿ ಗೌರವಿಸುತ್ತೇನೆ. ಅಧ್ಯಯನಕ್ಕೆ ನೆರವಾದ ನನ್ನ ಶ್ರೀಮತಿ ಕೆ.ಎಂ. ಲಕ್ಷ್ಮಿ, ಪುತ್ರ ಕೆ. ಎಂ. ಚಿನ್ಮಯ

ಸಹೋದರರಾದ ಕೆ.ಸಿ. ಶಿವಮೂರ್ತಿ, ಕೆ.ಸಿ. ಶರಣಪ್ಪ, ಕೆ.ಸಿ. ನಾಗರಾಜ ಇವರನ್ನೆಲ್ಲಾ ಅಭಿನಂದಿಸುತ್ತೇನೆ.

ಕ್ಷೇತ್ರಕಾರ್ಯದಲ್ಲಿ ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಯನ್ನು ಒದಗಿಸಿದ ಆಲೂರು ಮತ್ತು ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸಂದರ್ಶಿತ ದಲಿತ ಪೋಷಕರು, ಶಾಲಾ ಶಿಕ್ಷಕರು ಮತ್ತು ಜನಪ್ರತಿನಿಧಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕ್ಷೇತ್ರ ಕಾರ್ಯದಲ್ಲಿ ನನ್ನ ಜೊತೆಗೆ ಕೈಜೋಡಿಸಿದ ವಿದ್ಯಾರ್ಥಿ ಮಿತ್ರರಾದ ಎಚ್.ಎಂ. ನಾಗರಾಜ, ದಾನಪ್ಪ, ಮಂಜುನಾಥ, ರಾಮಕೃಷ್ಣ ಇವರನ್ನು ನೆನೆಯುತ್ತೇನೆ.

ಜಾಣ್ಮೆ ಮತ್ತು ತಾಳ್ಮೆಗಳಿಂದ ಮಹಾಪ್ರಬಂಧದ ಡಿ.ಟಿ.ಪಿ. ಮಾಡಿಕೊಟ್ಟ ಕಮಲಾಪುರದ ಎಸ್.ವಿ. ಗ್ರಾಫಿಕ್ಸ್‌ನ ಜೆ. ಶಿವಕುಮಾರ ಮತ್ತು ಜೆ. ಬಸವರಾಜು, ಈ ಮಹಾಪ್ರಬಂಧವನ್ನು ಅಚ್ಚುಕಟ್ಟಾಗಿ ಬೈಂಡ್ ಮಾಡಿಕೊಟ್ಟ ಶ್ರೀ ಮಹಂತೇಶ್ವರ ಜೆರಾಕ್ಸ್ ಮತ್ತು ಬುಕ್ ಬೈಂಡಿಂಗ್ ಧಾರಾವಾಡ ಇವರನ್ನು ಮರೆಯಲಾರೆ.

ಕೆ. ಮಂಜಪ್ಪ

ಪರಿವಿಡಿ

ಅಧ್ಯಾಯ ಒಂದು

ಅಧ್ಯಾಯ ಎರಡು

ಕೋಷ್ಟಕಗಳ ಪಟ್ಟಿ

ಸಂಕ್ಷೇಪಗಳು

ಬಿ.ಆರ್.ಸಿ	-	ಕ್ಷೇತ್ರ ಸಂಪನ್ಮೂಲ ಕೇಂದ್ರ.
ಬಿ.ಆರ್.ಸಿ.ಸಿ.	-	ಕ್ಷೇತ್ರ ಸಂಪನ್ಮೂಲ ಕೇಂದ್ರ ಸಮನ್ವಯಾಧಿಕಾರಿ.
ಸಿ.ಇ.ಸಿ	-	ಮುಂದುವರಿಕೆಯ ಶಿಕ್ಷಣ ಕೇಂದ್ರ.
ಸಿ.ಆರ್.ಪಿ.	-	ಸಮೂಹ ಸಂಪನ್ಮೂಲ ವ್ಯಕ್ತಿ.
ಡಿ.ಪಿ.ಇ.ಪಿ.	-	ಜಿಲ್ಲಾ ಪ್ರಾಥಮಿಕ ಕಾರ್ಯಕ್ರಮ.
ಡಯಟ್	-	ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.
ಇ.ಸಿ.ಸಿ.ಇ./ಇ.ಸಿ.ಇ.	-	ಶಾಲಾ ಪೂರ್ವ ಶಿಕ್ಷಣ/ಪೂರ್ವ ಪ್ರಾಥಮಿಕ ಶಿಕ್ಷಣ.
ಇ.ಜಿ.ಎಸ್.	-	ಶಿಕ್ಷಣ ಖಾತರಿ ಯೋಜನೆ.
ಎಂ.ಎಚ್.ಆರ್.ಡಿ.	-	ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ.
ಎಂ.ಎಲ್.ಎಲ್.	-	ಕಲಿಕೆಯ ಕನಿಷ್ಠ ಮಟ್ಟಗಳು.
ಎಸ್.ಡಿ.ಎಂ.ಸಿ.	-	ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ.
ಓ.ಡಿ.ಎ.	-	Overaces Development Agenics.
ಡಿ.ಎಸ್.ಇ.ಆರ್.ಟಿ	-	Directorate of State Education Research and Training
ಎಸ್.ಡಿ.ಡಿ.ಐ.	-	Swedis International Development Agenics.
ಎನ್.ಐ.ಇ.ಪಿ.ಪಿ.	-	National Institute of Education Planing and Programme
ಬಿ.ಎಂ.ಸಿ.	-	ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೊರೇಷನ್.
ಎಸ್.ಎಸ್.ಎ.	-	ಸರ್ವ ಶಿಕ್ಷಣ ಅಭಿಯಾನ.
ಎನ್.ಸಿ.ಇ.ಆರ್.ಟಿ.	-	ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ.
ಎ.ಐ.ಇ.	-	ಪರ್ಯಾಯ ಮತ್ತು ಆವಿಷ್ಕೃತ ಶಿಕ್ಷಣ.
ಆರ್.ಬಿ.ಸಿ.	-	ವಸತಿಯುತ ಸೇತುಬಂಧ ಶಿಕ್ಷಣ ಕೇಂದ್ರ
ಎನ್.ಆರ್.ಬಿ.ಸಿ	-	ವಸತಿ ರಹಿತ ಸೇತುಬಂಧ ಶಿಕ್ಷಣ ಕೇಂದ್ರ
ಎನ್.ಜಿ.ಓ	-	ಸರ್ಕಾರೇತರ ಸಂಘಟನೆಗಳು
ಪ್ರೋಬ್	-	ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜ್ಯುಕೇಶನ್

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ

೧.೧. ಪ್ರಸ್ತಾವನೆ

೧.೨. ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧.೩. ಸಮಸ್ಯೀಕರಣ

೧.೪. ಅಧ್ಯಯನದ ಉದ್ದೇಶಗಳು

೧.೫. ಅಧ್ಯಯನದ ವಿಧಾನ

೧.೬. ಅಧ್ಯಯನ ಕ್ಷೇತ್ರದ ಆಯ್ಕೆ

೧.೭. ಅಧ್ಯಯನದ ಮಹತ್ವ

೧.೮. ಅಧ್ಯಯನದ ಮಿತಿ

೧.೯. ಕ್ಷೇತ್ರಕಾರ್ಯದ ಅನುಭವ

೧.೧೦. ಅಧ್ಯಯನದ ವಿನ್ಯಾಸ

೧.೧. ಪ್ರಸ್ತಾವನೆ

ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ 'ಶಿಕ್ಷಣವೇ ಅಭಿವೃದ್ಧಿ' ಎಂಬ ಮಾತು ಇತ್ತೀಚಿನ ದಿನಗಳಲ್ಲಿ ಮಾನವ ಅಭಿವೃದ್ಧಿ ಪರಿಕಲ್ಪನೆಯ ಮೂಲಕ ಹೆಚ್ಚಾಗಿ ಕೇಳಿ ಬರುತ್ತಿದ್ದು, ಶಿಕ್ಷಣ ಮತ್ತು ಅಭಿವೃದ್ಧಿ ಒಂದು ಅವಿಭಾಜ್ಯವಾಗಿದೆ. ಅಮರ್ತ್ಯಸೇನ್ ಅವರು ಶಿಕ್ಷಣಕ್ಕೆ ಇರುವ ಪ್ರಾಮುಖ್ಯತೆಯನ್ನು ಅವರ ಅಧ್ಯಯನಗಳಲ್ಲಿ ಸವಿವರವಾಗಿ ಪ್ರತಿಪಾದಿಸಿದ್ದಾರೆ. ಹಾಗೆಯೇ ಹಕ್ಕು ಆಧಾರಿತ ಅಭಿವೃದ್ಧಿ ಕುರಿತು ಚರ್ಚಿಸುತ್ತಿರುವ ವಿದ್ವಾಂಸರುಗಳು ಶಿಕ್ಷಣವು ಪ್ರತಿಹಂತಗಳಲ್ಲಿ ಹೇಗೆ ವ್ಯಕ್ತಿಗಳನ್ನು ವಿಶೇಷ ವಾಗಿ ಮಹಿಳೆಯರನ್ನು, ದಲಿತರನ್ನು, ಅವಕಾಶ ವಂಚಿತರನ್ನು ಹಾಗೂ ಸಮಾಜದ ಅಂಚಿನ ಆಚೆ ತಳ್ಳಲ್ಪಟ್ಟ ಜನರನ್ನು ಸಬಲೀಕರಿಸಬಲ್ಲದು ಎಂಬುದನ್ನು ಒತ್ತಿ ಹೇಳಿದ್ದಾರೆ. ಮಾರ್ತಾ ಮುಸ್ಬುನ್ ಮತ್ತು ಗ್ಲೋವೇರಿ ಅವರು ಸಂಪಾದಿಸಿರುವ "ವಿಮನ್ ಕಲ್ಚರ್ ಅಂಡ್ ಡೆವಲಪ್‌ಮೆಂಟ್" ಎಂಬ ಪುಸ್ತಕದಲ್ಲಿ ಮಹಿಳಾ ಹಕ್ಕುಗಳ ಪ್ರತಿಪಾದನೆಗೆ ಮತ್ತು ಆಕೆಯ ಸಬಲೀಕರಣಕ್ಕೆ ಶಿಕ್ಷಣ ಹೇಗೆ ಪೂರಕವಾಗಿದೆ ಎಂಬುದನ್ನು ಒತ್ತಿಹೇಳಿದ್ದಾರೆ. ವಿವಿಧ ವರ್ಷಗಳಲ್ಲಿ ಪ್ರಕಟವಾಗಿರುವ ಮಾನವ ಅಭಿವೃದ್ಧಿ ವರದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಯಾವ ಪ್ರದೇಶ ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿರುತ್ತದೆಯೋ ಆ ಪ್ರದೇಶದಲ್ಲಿ ಸಾಮಾಜಿಕ ಅವಕಾಶಗಳು ಮತ್ತು ಸಮಾನತೆ ಹೆಚ್ಚು ಪರಿಣಾಮ ಕಾರಿಯಾಗಿ ದೊರಕುತ್ತಿರುವುದನ್ನು ಮಾನವ ಅಭಿವೃದ್ಧಿ ವರದಿಗಳು ಗುರುತಿಸಿವೆ. ವಿಶೇಷವಾಗಿ ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದಿರುವ ಪ್ರದೇಶಗಳಲ್ಲಿ ಮಕ್ಕಳ ಶೈಕ್ಷಣಿಕ ಭಾಗವಹಿಸುವಿಕೆ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ನಿರ್ದಿಷ್ಟವಾಗಿ ಅವಕಾಶ ವಂಚಿತ ಸಾಮಾಜಿಕ ಗುಂಪುಗಳು ಮತ್ತು ಜನಸಮುದಾಯಗಳ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಪ್ರಮಾಣ ಅತ್ಯಂತ ಹೆಚ್ಚಾಗಿರು ವುದು ಕಂಡುಬರುತ್ತದೆ. ಇದನ್ನು 'ಇಂಡಿಯಾ ಡೆವಲಪ್‌ಮೆಂಟ್ ಅಂಡ್ ಪಾರ್ಟಿಸಿಪೇಶನ್' ಎಂಬ ಪುಸ್ತಕದಲ್ಲಿ ಡ್ರೀಜ್ ಮತ್ತು ಸೇನ್ ಅವರು ಅತ್ಯಂತ ಸಮರ್ಥವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇವರು 'ಬೇಸಿಕ್ ಎಜ್ಯುಕೇಷನ್ ಆ್ಯಸ್ ಎ ಪೊಲಿಟಿಕಲ್ ಇಶ್ಯೂ' ಎಂಬ ಲೇಖನದಲ್ಲಿ ಶಿಕ್ಷಣವು ದೊರೆಯುವಿಕೆಯ ಅಸಮಾನತೆಯನ್ನು ವಿಭಿನ್ನವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವರ ಅಧ್ಯಯನದ ಪ್ರಕಾರವೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದೆ ಇರುವ ಶ್ರೀಮಂತ ಪುರುಷರು ಮತ್ತು ಗಂಡುಮಕ್ಕಳು (೧೫-೧೯ ವಯೋಮಾನದ) ಶಿಕ್ಷಣ ಪಡೆದುಕೊಳ್ಳುವುದರಲ್ಲಿ ಪ್ರಥಮ ಸ್ಥಾನ ದಲ್ಲಿದ್ದಾರೆ. ಎರಡನೆಯ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಧ್ಯಮವರ್ಗದ

ಪುರುಷರು ಕಂಡುಬರುತ್ತಾರೆ. ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಉನ್ನತ ಆದಾಯ ಕುಟುಂಬಕ್ಕೆ ಸೇರಿದ ಮಹಿಳೆಯರು ಬರುತ್ತಾರೆ. ನಾಲ್ಕನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷರು ಬರುತ್ತಾರೆ. ಈ ಪುರುಷ ವರ್ಗ ಸ್ವಲ್ಪಮಟ್ಟಿಗೆ ಬಡತನದಲ್ಲಿರುವವರು ಎಂದು ಡ್ರೀಜ್‌ರವರು ಗುರುತಿಸಿದ್ದಾರೆ. ಈ ನಾಲ್ಕು ಗುಂಪುಗಳ ನಂತರ ಶ್ರೀಮಂತ ವರ್ಗಕ್ಕೆ ಸೇರಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಬರುತ್ತಾರೆ. ನಂತರದಲ್ಲಿ ಬಡತನದ ಬೇಗೆಯಲ್ಲಿರುವ ಮಹಿಳೆಯರು ಅಥವಾ ಹೆಣ್ಣುಮಕ್ಕಳು ಬರುತ್ತಾರೆ. ಇದೇ ಅಂಶವನ್ನು ಮುಂದುವರಿಸಿ ಡ್ರೀಜ್‌ರವರು ಯಾವ ಪ್ರದೇಶದಲ್ಲಿ ಅಗತ್ಯವಾದ ಕನಿಷ್ಟ ಸೌಲಭ್ಯಗಳು ಮಾನವ ಜೀವನಕ್ಕೆ ದೊರಕುತ್ತಿಲ್ಲವೋ ಆ ಪ್ರದೇಶದಲ್ಲಿ ಬಡತನದಲ್ಲಿರುವ ಕುಟುಂಬದ ಹೆಣ್ಣುಮಕ್ಕಳು ಅದರಲ್ಲಿಯೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳು ಶಿಕ್ಷಣ ಪಡೆದುಕೊಳ್ಳುವಲ್ಲಿ ಅತ್ಯಂತ ಹಿಂದೆ ಬಿದ್ದಿದ್ದಾರೆ ಎಂಬುದನ್ನು ವಿವರವಾಗಿ ವಸ್ತುನಿಷ್ಠ ಅಂಶಗಳ ಆಧಾರದಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಶಿಕ್ಷಣ ಎಲ್ಲರಿಗೂ ದೊರೆಯಬೇಕಾದ ಸಾಮಾಜಿಕ ಅಗತ್ಯವಾಗಿದೆ. ಕರ್ನಾಟಕದಲ್ಲಿ ದಲಿತರ ಶೈಕ್ಷಣಿಕ ಪರಿಸರವನ್ನು ವಿಶಾಲ ಅರ್ಥದಲ್ಲಿ ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಮೂಲ ಆಶಯ. ಅಭಿವೃದ್ಧಿಯ ಪ್ರಮುಖ ಸೂಚ್ಯಂಕವಾದ ಶಿಕ್ಷಣವನ್ನು ಸಮಾಜದ ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವುದು ಸರ್ಕಾರಗಳ ಜವಾಬ್ದಾರಿಯೂ ಹೌದು. ಇದು ಸಂವಿಧಾನಾತ್ಮಕ ಕರ್ತವ್ಯವೂ ಆಗಿದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನ ಕಳೆದ ೬ ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ. ಆದರೆ ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಪರಿಸ್ಥಿತಿಯು ನಿಜವಾಗಿಯೂ ನಿರಾಶಾದಾಯಕವಾಗಿದೆ. ೧೯೫೧ರಲ್ಲಿ ಒಟ್ಟಾರೆ ಸಾಕ್ಷರತಾ ಪ್ರಮಾಣ ಶೇಕಡ ೧೮.೦೩ರಷ್ಟಿದ್ದರೆ, ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇಕಡ ೯.೦೦ರಷ್ಟು. ಪ್ರಾಥಮಿಕ ಹಂತದಲ್ಲಿ (೧-೫ನೇ ತರಗತಿ, ೬-೧೧ ವಯೋಮಾನ) ಒಟ್ಟು ಶಾಲಾ ದಾಖಲಾತಿ ಪ್ರಮಾಣ ಶೇಕಡ ೨೫ರಷ್ಟಿದ್ದರೆ, ಮಾಧ್ಯಮಿಕ ಶಾಲೆಯ ಹಂತದಲ್ಲಿ (೬-೮ನೇ ತರಗತಿ, ೧೧-೧೪ ವಯೋಮಾನ) ಈ ವಯೋಮಾನದ ಎಂಟು ಮಕ್ಕಳಲ್ಲಿ ಕೇವಲ ಒಂದು ಮಗು ಮಾತ್ರ ಮಾಧ್ಯಮಿಕ ಶಾಲೆಗೆ ದಾಖಲಾಗುತ್ತಿತ್ತು. ಇಪ್ಪತ್ತು ಹೆಣ್ಣುಮಕ್ಕಳಿಗೆ ಒಂದು ಹೆಣ್ಣು ಮಗು ಮಾತ್ರ ಮಾಧ್ಯಮಿಕ ಹಂತದ ಶಾಲೆಯನ್ನು ಪ್ರವೇಶಿಸುತ್ತಿತ್ತು. ಕಳೆದ ಐದು ದಶಕಗಳ ನಂತರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಸಾಧಾರಣವಾದ ಬೆಳವಣಿಗೆಗಳಾಗಿವೆ. ೦೬-೧೪ ವಯೋಮಾನದ ಸುಮಾರು ಐದು ಜನ ಮಕ್ಕಳಲ್ಲಿ ನಾಲ್ಕು ಜನ ಮಕ್ಕಳು ಶಾಲೆಗೆ ದಾಖಲಾಗುತ್ತಿದ್ದಾರೆ. ಮೂರು ಜನರಲ್ಲಿ ಇಬ್ಬರು ವ್ಯವಹಾರಿಕ (ಫಂಕ್ಷನಲ್) ಸಾಕ್ಷರರಾಗಿದ್ದಾರೆ. ಇದನ್ನು ನಾವು ಬಿಡಿಸಿ ನೋಡಿದಾಗ

ಜಾತಿ, ವರ್ಗ ಪ್ರದೇಶಗಳಲ್ಲಿ ಶೈಕ್ಷಣಿಕ ಅಭಿವೃದ್ಧಿ ಮತ್ತು ಸಾಕ್ಷರತೆಯಲ್ಲಿ ಪುರುಷ ಮತ್ತು ಮಹಿಳೆಯರಲ್ಲಿ ಭಿನ್ನವಾಗಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ (ಗೋವಿಂದ ಆರ್., ೨೦೦೨, ಪ್ರಶಾಂತ್ ಎಚ್.ಡಿ., ೨೦೦೫, ಚಂದ್ರಶೇಖರ್ ಟಿ.ಆರ್., ೨೦೦೮, ಮಧು ಎಸ್. ಪರಂಜಪೆ, ೨೦೦೭).

ಶೈಕ್ಷಣಿಕ ಅಭಿವೃದ್ಧಿಯ ಸೂಚ್ಯಂಕಗಳಲ್ಲಿ ಒಂದಾದ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ಗಮನಿಸಿದರೆ, ಸಾಕ್ಷರತಾ ಬೆಳವಣಿಗೆಯ ಪ್ರಾದೇಶಿಕ ಅಂಶಗಳು ಬೆಳಕಿಗೆ ಬರುತ್ತವೆ. ೧೯೫೧-೬೧ರ ದಶಕದಲ್ಲಿ ಶೇಕಡ ೧೦.೦೦ರ ಪ್ರಮಾಣದಲ್ಲಿ, ೧೯೬೧-೭೧ರ ದಶಕದಲ್ಲಿ ಶೇಕಡ ೬.೦೧ರ ಪ್ರಮಾಣದಲ್ಲಿ, ೧೯೭೧-೮೧ರ ದಶಕದಲ್ಲಿ ಶೇಕಡ ೯.೦೧ರ ಪ್ರಮಾಣದಲ್ಲಿ, ೧೯೮೧-೯೧ರ ದಶಕದಲ್ಲಿ ಶೇಕಡ ೮.೦೭ರ ಪ್ರಮಾಣದಲ್ಲಿ ಮತ್ತು ೧೯೯೧-೨೦೦೧ರ ದಶಕದಲ್ಲಿ ಶೇಕಡ ೧೨.೦೯ರ ಪ್ರಮಾಣದಲ್ಲಿ ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ (೧೯೬೧-೨೦೦೧) ಅನಕ್ಷರಸ್ಥರ ಸಂಖ್ಯೆ ೨೪೯.೦೦ ಮಿಲಿಯನ್‌ನಿಂದ ೨೯೬.೪೨ ಮಿಲಿಯನ್‌ಗೆ ಹೆಚ್ಚಳವಾಗಿದೆ (ಜನಗಣತಿ ೧೯೬೧; ೨೦೦೧, ರಾಷ್ಟ್ರೀಯ ಸಾಕ್ಷರತಾ ಮಿಶನ್ ೨೦೦೦). ಈ ಅಂಕಿ ಅಂಶಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಕಳೆದ ೬೦ ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಮೈಲಿಗಲ್ಲುಗಳನ್ನು ಕಂಡುಕೊಳ್ಳುವುದರ ಜೊತೆಗೆ ಸಾಧಿಸಿರುವ ಪ್ರಗತಿ ಸಣ್ಣ ಪ್ರಮಾಣದ್ದು ಎಂದು ಹೇಳಲು ಬರುವುದಿಲ್ಲ. ಆದರೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಸಾಧಿಸುವಲ್ಲಿ ಹಿಂದುಳಿದಿರುವುದು ವಿಷಾದಕರ ಸಂಗತಿಯಾಗಿದೆ.

ಕೋಷ್ಟಕ-೧.೧

ಸಾಕ್ಷರತೆಯ ದಶವಾರ್ಷಿಕ ಬೆಳವಣಿಗೆಯ ಪ್ರಮಾಣ

ವರ್ಷ	ಸಾಕ್ಷರತಾ ಪ್ರಮಾಣ	ದಶವಾರ್ಷಿಕ ಬೆಳವಣಿಗೆಯ ಪ್ರಮಾಣ	ಅನಕ್ಷರಸ್ಥರ ಸಂಖ್ಯೆ ಮಿಲಿಯನ್‌ಗಳಲ್ಲಿ
೧೯೫೧	೧೮.೩೩	—	—
೧೯೬೧	೨೮.೩೩	೧೦.೦೦	೨೪೯.೪೦
೧೯೭೧	೩೪.೦೪	೦೬.೦೧	೨೮೩.೦೩
೧೯೮೧	೪೩.೦೫	೦೯.೦೧	೩೦೫.೩೧
೧೯೯೧	೫೨.೦೨	೦೮.೦೭	೩೨೮.೮೮
೨೦೦೧	೬೫.೦೪	೧೨.೦೯	೨೯೬.೪೨

ಮೂಲ : ಜನಗಣತಿ (೨೦೦೧) ರಾಷ್ಟ್ರೀಯ ಸಾಕ್ಷರತಾ ಮಿಶನ್ (೨೦೦೦).

ಕರ್ನಾಟಕ ರಾಜ್ಯವು ರಾಷ್ಟ್ರದ ಶೈಕ್ಷಣಿಕ ಪರಿಸರದಲ್ಲಿ ಬಿಹಾರದಷ್ಟು ಹಿಂದುಳಿಯದೆ, ಕೇರಳ ರಾಜ್ಯದಷ್ಟು ಅಭಿವೃದ್ಧಿ ಸಾಧಿಸದೆ, ಹಿಮಾಚಲ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಷ್ಟು ಪ್ರಗತಿ ಕಾಣದಿದ್ದರೂ ತನ್ನದೇ ಆದಂತಹ ಪ್ರಾತಿನಿಧ್ಯವನ್ನು ಪಡೆದಿರುತ್ತದೆ. ಈ ದೃಷ್ಟಿಯಿಂದ ಕರ್ನಾಟಕ ರಾಜ್ಯವು ಮಧ್ಯಮಗತಿಯ ರಾಜ್ಯವಾಗಿದೆ (ಚಂದ್ರಶೇಖರ್ ಟಿ.ಆರ್., ೨೦೦೩). ೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೭.೦೪ರಷ್ಟಿದೆ. ಇದರಲ್ಲಿ ಪುರುಷ ಸಾಕ್ಷರತೆ ಶೇಕಡ ೭೬.೨೯ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೭.೪೫ರಷ್ಟಿದೆ. ಇದು ರಾಷ್ಟ್ರದ ಸರಾಸರಿ ಮಹಿಳಾ ಸಾಕ್ಷರತೆಗಿಂತಲೂ ಕಡಿಮೆ. ಮಹಿಳೆಯರ ಅತ್ಯಧಿಕ ಸಾಕ್ಷರತೆ ಶೇಕಡ ೮೨.೨೪ ರಷ್ಟಿದ್ದರೆ, ಪುರುಷರ ಅತ್ಯಧಿಕ ಸಾಕ್ಷರತೆಯ ಪ್ರಮಾಣ ಶೇಕಡ ೯೨.೫೪ರಷ್ಟಾಗಿರುತ್ತದೆ. ಒಟ್ಟಿನಲ್ಲಿ ಶೇಕಡ ೧೦.೦೨ರಷ್ಟು ಸಾಕ್ಷರತೆಯ ಲಿಂಗ ತಾರತಮ್ಯ ಕಂಡುಬರುತ್ತದೆ. ಒಟ್ಟಾರೆ ಪುರುಷರ ಸಾಕ್ಷರತೆ ಪ್ರಮಾಣ ಗ್ರಾಮ-ನಗರವಾರು ಮಹಿಳೆಯರ ಸಾಕ್ಷರತೆಗಿಂತ ಅಧಿಕವಾಗಿದೆ (ಸೆನ್ಸಸ್, ೨೦೦೧). ಇಲ್ಲಿ ನಮಗೆ ಎದುರಾಗುವ ಪ್ರಶ್ನೆ ಎಂದರೆ ಶೈಕ್ಷಣಿಕ ಪ್ರಗತಿಗೆ ಏನು ಪ್ರಯತ್ನಗಳು ನಡೆದಿಲ್ಲವೆ? ಎನ್ನುವಷ್ಟರ ಮಟ್ಟಿಗೆ ಕೆಲವು ಪ್ರದೇಶದ ಜನಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿ ಹಿಂದುಳಿದಿರುವುದು ತಿಳಿಯುತ್ತದೆ. ಇದರ ಅರ್ಥ ಶೈಕ್ಷಣಿಕ ಅಭಿವೃದ್ಧಿಯ ಏನೆಲ್ಲಾ ಪ್ರಯತ್ನಗಳು ನಡೆದಿಲ್ಲ ಎಂದಲ್ಲ. ಅವು ಯಾರನ್ನು ತಲುಪಬೇಕಿತ್ತೋ ಅವರನ್ನು ತಲುಪದಿರುವುದು ನಿಜವಾಗಿಯೂ ಒಂದು ಬಗೆಯ ಸವಾಲಾಗಿದೆ. ಸಾಕ್ಷರತೆ ಮತ್ತು ಶಿಕ್ಷಣದ ಪ್ರಗತಿಯು ಯಾವುದೇ ಸಮಾಜದಲ್ಲಿಯಾದರೂ ಸಾಮಾಜಿಕವಾಗಿರುತ್ತದೆಯೇ ಹೊರತು ಜೈವಿಕವಾದುದಲ್ಲ.

ಕರ್ನಾಟಕದಲ್ಲಿರುವ ಮಹಿಳೆಯರ ಕೆಳಮಟ್ಟದ ಸಾಕ್ಷರತೆ ದರವು ಶಿಕ್ಷಣವು ಮಹಿಳೆಯರಿಗೆ ಸಹಜವಾದ ಹಕ್ಕು ಎಂಬುದನ್ನು ಮಾನ್ಯತೆ ಮಾಡಲು ಸಿದ್ಧವಿಲ್ಲದಿರುವುದನ್ನು ಮತ್ತು ಇದು ಲಿಂಗ ಸಂಬಂಧಿ ಪಕ್ಷಪಾತವೆಂದು ಪ್ರತ್ಯಕ್ಷವಾಗಿ ರುಜುವಾತುಪಡಿಸುತ್ತದೆ. ಜಾತಿ, ಅಂತಸ್ತು ಮತ್ತು ಭೌಗೋಳಿಕ ಅಂಶಗಳು ಸಮಾನತೆಯ ಇತರೆ ಮೂಲಗಳಾಗಿದ್ದು, ಇದು ಮಹಿಳಾ ಸಾಕ್ಷರತಾ ಮಟ್ಟವನ್ನು ರೂಪುಗೊಳಿಸುತ್ತದೆ. ಇದು ಅಂತರ ಜಿಲ್ಲಾ ಮಹಿಳಾ ಸಾಕ್ಷರತೆಯ ನಿರ್ವಹಣೆಯನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗುತ್ತದೆ. ಬೆಂಗಳೂರು ನಗರದಲ್ಲಿ (ಶೇ ೭೭.೪೮) ಹಾಗೂ ಅತಿ ಕಡಿಮೆ ರಾಯಚೂರಿನಲ್ಲಿ (ಶೇ ೩೫.೯೩), ಗುಲ್ಬರ್ಗಾ (ಶೇ ೩೭.೯೦) ಮತ್ತು ಕೊಪ್ಪಳ (ಶೇ ೩೯.೬೧) ಆಗಿರುತ್ತದೆ. ಭೌಗೋಳಿಕವಾಗಿ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಸಮೀಪವಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಮಟ್ಟದ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳನ್ನು ಹಂಚಿಕೊಂಡಿವೆ (ಎಚ್.ಡಿ. ಪ್ರಶಾಂತ್, ೨೦೦೭).

ಕೋಷ್ಟಕ-೧.೨

ಸಾಮಾಜಿಕ ಗುಂಪುವಾರು ಸಾಕ್ಷರತಾ ದರದಲ್ಲಿನ ಗುಣಸಂಖ್ಯಾ ವ್ಯತ್ಯಾಸಗಳು (ಶೇಕಡವಾರು)

ಪ್ರದೇಶ/ಲಿಂಗ	ಒಟ್ಟು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ	
	೧೯೯೧	೨೦೦೧	೧೯೯೧	೨೦೦೧	೧೯೯೧	೨೦೦೧
			ದಕ್ಷಿಣ ಕರ್ನಾಟಕ			
ಪುರುಷ	೧೨.೭	೧೦.೪	೧೬.೨	೯.೧	೨೨.೬	೧೫.೧
ಸ್ತ್ರೀ	೨೪.೩	೧೭.೨	೩೨.೩	೧೬.೭	೩೬.೯	೨೨.೫
ಒಟ್ಟು	೧೭.೨	೧೩.೨	೨೧.೫	೧೨.೦	೨೭.೧	೧೭.೯
			ಉತ್ತರ ಕರ್ನಾಟಕ			
ಪುರುಷ	೧೫.೨	೯.೯	೨೨.೪	೧೩.೫	೨೭.೮	೧೭.೨
ಸ್ತ್ರೀ	೩೧.೫	೨೦.೪	೪೧.೨	೨೭.೧	೪೭.೫	೩೧.೮
ಒಟ್ಟು	೨೦.೯	೧೪.೦	೨೮.೫	೧೮.೪	೩೩.೪	೨೨.೨
			ಎಲ್ಲಾ ಜಿಲ್ಲೆಗಳು			
ಪುರುಷ	೧೪.೦	೧೦.೬	೧೯.೦	೧೧.೮	೨೪.೭	೧೬.೫
ಸ್ತ್ರೀ	೨೯.೬	೨೧.೩	೩೭.೫	೨೫.೦	೪೪.೬	೩೦.೪
ಒಟ್ಟು	೧೯.೮	೧೪.೮	೨೪.೮	೧೬.೭	೩೦.೫	೨೧.೫

ಮೂಲ : ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಪ್ರಾಥಮಿಕ ಜನಗಣತಿ, ಭಾರತದ ಜನಗಣತಿ ೨೦೦೧ರ ಮಾಹಿತಿ.

ಉತ್ತರ ಕರ್ನಾಟಕದಲ್ಲಿ ಸಾಕ್ಷರತೆಯಲ್ಲಿನ ಲಿಂಗ ಆಧಾರಿತ ತಾರತಮ್ಯವು ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಾಗಿದ್ದು, ಇದರಿಂದ ದಕ್ಷಿಣ ಕರ್ನಾಟಕದಲ್ಲಿನ ಲಿಂಗತಾರತಮ್ಯವು ಕನಿಷ್ಟ ಮಟ್ಟದ್ದಾಗಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಕಳೆದ ದಶಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ದರದಲ್ಲಿ ಸುಧಾರಣೆಯಾಗಿರಬಹುದಾದರೂ, ಇದು ನಗರ ಕೇಂದ್ರದ ಪಕ್ಕದಲ್ಲಿರುವಂತಹ ಅನುಕೂಲ ಹೊಂದಿರುವ ಜಿಲ್ಲೆಗೆ ಬಹಳ ಕಡಿಮೆಯೇ ಆಗಿರುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ತಾರತಮ್ಯದ ತೀಕ್ಷ್ಣತೆಯು ಕಡಿಮೆ ಇದ್ದರೂ ಸಹ ಇಲ್ಲಿಯೂ ತಾರತಮ್ಯವಿದೆ. ಇದು ಮಹಿಳೆಯರ ಆರೋಗ್ಯ ಮತ್ತು ಬಡತನದ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡುತ್ತದೆ. ಒಟ್ಟಾರೆ ಸಾಕ್ಷರತೆಯಲ್ಲಿ ಲಿಂಗಾಧಾರಿತ ತಾರತಮ್ಯವು ಕಡಿಮೆಯಾಗುತ್ತಿದ್ದು, ಇದು ಕಡಿಮೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ವೇಗವಾಗಿರುವುದು ಧೈರ್ಯ ನೀಡುವಂತದ್ದಾಗಿದ್ದರೂ, ಸಹಸ್ರಮಾನದ ಗುರಿ

ಗಳನ್ನು ಸಾಧಿಸಿಕೊಳ್ಳಲು ಕರ್ನಾಟಕದಲ್ಲಿ ಹೆಚ್ಚು ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳ ಮಧ್ಯಸ್ಥಿಕೆಯ ಅವಶ್ಯಕತೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಕೆಳಮಟ್ಟದ ಸಾಕ್ಷರತಾ ಪ್ರಮಾಣವಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಸಾಕ್ಷರತಾ ದರವು ಕೆಳಮಟ್ಟದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ (ಎಚ್.ಡಿ. ಪ್ರಶಾಂತ್, ೨೦೦೭).

ಪ್ರಾಥಮಿಕ ಶಿಕ್ಷಣ ಸೌಲಭ್ಯವು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಕೂಡ ನಿರಂತರ ವಾಗಿಯೇ ನಡೆಯುತ್ತವೆ. ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕವಾಗಿ, ಉಚಿತ ಮತ್ತು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ನೀಡಬೇಕೆಂಬುದು ನಮ್ಮ ಸಂವಿಧಾನ ರಚನಾ ಪೂರ್ವದ ಆಶಯವಾಗಿರುತ್ತದೆ. ೧೮೦೭ರಲ್ಲಿ ಟ್ರಾವಂಕೂರ್ ಮಹಾರಾಣಿ, ಪ್ರಾಂತ್ಯದ ಎಲ್ಲರಿಗೆ ಶಿಕ್ಷಣ ನೀಡುವ ಘೋಷಣೆ ಮಾಡಿದ ನಂತರ, ದಾದಾಬಾಯಿ ನವರೋಜಿಯವರು ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಬ್ರಿಟಿಷ್ ಸರ್ಕಾರ ಭಾರತೀಯ ಶಿಕ್ಷಣ ಆಯೋಗವನ್ನು ಒತ್ತಾಯಿಸಿದ್ದಾರೆ. ಬರೊಡಾದ ಮಹಾರಾಜ ಗಾಯಕ್ವಾಡ ಅಮಾರಾಯಲಿ ೧೯೦೬ರಲ್ಲಿ ಬರೋಡ ಪ್ರಾಂತ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ಶಿಕ್ಷಣಕ್ಕೆ ಸಂಬಂಧಿಸಿದಂತೆಯೇ ಗೋಪಾಲಕೃಷ್ಣ ಗೋಖಲೆಯವರು ೧೯೧೧ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಗೊತ್ತುವಳಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸಾರ್ವಜನಿಕರ ಒತ್ತಾಯದ ಕಾರಣದಿಂದ ಬ್ರಿಟಿಷ್ ಸರ್ಕಾರ ಅನೇಕ ಆಯೋಗ ಗಳನ್ನು ರಚಿಸಿತು. ನಂತರ ಸಂವಿಧಾನ ಜಾರಿಗೊಂಡ ೧೦ ವರ್ಷದೊಳಗೆ ಎಲ್ಲರಿಗೂ ಸಾರ್ವತ್ರಿಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುತ್ತೇವೆ ಎಂದು ಸಂವಿಧಾನದ ರಚನಾಕಾರರು ಸಂವಿಧಾನದ ರಚನೆಯ ಸಂದರ್ಭದಲ್ಲಿ ಸೇರಿಸಿದ್ದು ಒಂದು ಕಾಲಮಿತಿಯ ಕಾರ್ಯಕ್ರಮವಾಗಿ ಕಂಡು ಬರುತ್ತದೆ.

ಆನಂತರದಲ್ಲಿ ಅನೇಕ ರಾಷ್ಟ್ರೀಯ ಶಿಕ್ಷಣ ಆಯೋಗಗಳ ನೀತಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕವಾಗಿ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿ ಮುಂದು ವರಿದಿವೆ. ೧೯೬೪ರ ಜುಲೈ ೧೪ರಲ್ಲಿ ಕೊಠಾರಿಯವರ ಅಧ್ಯಕ್ಷತೆಯಲ್ಲಿ ರಚನೆಯಾದ ಶಿಕ್ಷಣದ ಆಯೋಗದ ಪ್ರಕಾರವಾಗಿ ೧೯೬೮ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸ ಲಾಯಿತು. ಈ ನೀತಿಯ ಆಧಾರದ ಮೇಲೆ ೧೯೮೬ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಅದನ್ನು ೧೯೯೨ರಲ್ಲಿ ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಪರಿಷ್ಕರಿಸಿ ಸಂಸತ್ತಿನಲ್ಲಿ ಅನುಮೋದನೆ ಪಡೆದುಕೊಳ್ಳಲಾಯಿತು. ೧೯೯೦ರ ನಂತರದ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮ್ಮೇಳನಗಳಲ್ಲಿ 'ಎಲ್ಲರಿಗೂ ಶಿಕ್ಷಣ' ನೀಡುವ ಅಗತ್ಯವನ್ನು ಒತ್ತಿಹೇಳಲಾಗಿದೆ. ಇದಕ್ಕೆ ಪುಷ್ಟಿನೀಡುವಾಗಿ ೧೯೯೩ರಲ್ಲಿ ಭಾರತದ ಸುಪ್ರೀಂಕೋರ್ಟ್ ಶಿಕ್ಷಣ ಪಡೆಯುವುದು ರಾಷ್ಟ್ರದ ಪ್ರತಿಯೊಬ್ಬ

ನಾಗರಿಕನ 'ಮೂಲಭೂತ ಹಕ್ಕು' ಎಂಬ ಮಹತ್ವದ ತೀರ್ಪು ನೀಡಿದೆ. ಈ ತೀರ್ಪಿನ ಆಧಾರದ ಮೇಲೆ ಭಾರತದ ಸಂವಿಧಾನವನ್ನು ತಿದ್ದುಪಡಿ (೮೬ನೇ ತಿದ್ದುಪಡಿ) ಮಾಡಿ, ಜೀವಿಸುವ ಹಕ್ಕಿನ ೨೧ನೇ ಪರಿಚ್ಛೇದದ ಜೊತೆಯಲ್ಲಿ 'ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕೆಂದು' ತಿಳಿಸುವ ೨೧-ಎ ಎಂಬ ಹೊಸ ಪರಿಚ್ಛೇದವನ್ನು ಸೃಷ್ಟಿಸಲಾಗಿದೆ. ಮುಂದುವರಿದಂತೆ ಪರಿಚ್ಛೇದ ೫೧-ಎ (ಕೆ) ಪ್ರಕಾರ ೦೬-೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಷಕರು ಶಾಲಾ ಕಲಿಕೆಗೆ ಅವಕಾಶ ಕಲ್ಪಿಸಬೇಕಾಗಿದೆ. ಈ ಬೆಳವಣಿಗೆಯಿಂದಾಗಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಹೊಸ ಆಯಾಮ ಲಭಿಸಿದಂತಾಗಿ ರಾಷ್ಟ್ರಾದ್ಯಂತ ಹೊಸ ಶೈಕ್ಷಣಿಕ ಯೋಜನೆಗಳನ್ನು ಜಾರಿಗೆ ತರುವಂತಹ ಪ್ರಯತ್ನಗಳು ಪ್ರಾರಂಭವಾದವು.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲದಿಂದ ಇಲ್ಲಿಯವರೆಗೆ ಶಿಕ್ಷಣದ ಸಾರ್ವತ್ರೀಕರಣದ ಪ್ರಯತ್ನಗಳು ನಿರಂತರವಾಗಿದ್ದರೂ, ಸಮಾಜದ ಎಲ್ಲಾ ವರ್ಗದ ಜನರು ಸಮನಾಗಿ ಶಿಕ್ಷಣ ಪಡೆದು ಕೊಳ್ಳುವುದು ಸಾಧ್ಯವಾಗಿಲ್ಲ. ಇದರಿಂದ ಶಿಕ್ಷಣದ ವಿಷಯದಲ್ಲಿ ಜಾತಿ ವರ್ಗ, ಲಿಂಗ ಮತ್ತು ಪ್ರದೇಶ ವಾರು ಭಿನ್ನತೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣ ವನ್ನು ಒದಗಿಸುವ ಪ್ರಯತ್ನ ಮತ್ತು ಅದನ್ನು ಪಡೆದುಕೊಳ್ಳುವ ಸಾಮಾಜಿಕ ಶಕ್ತಿ-ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಹೀಗೆ ಪರಿಗಣಿಸುವಾಗ ಭಾರತದಲ್ಲಿ ಶತಮಾನಗಳಿಂದಲೂ ವಂಚಿತರಾದ ಮತ್ತು ಶೈಕ್ಷಣಿಕವಾಗಿ ನಿಕೃಷ್ಟವಾಗಿರುವ ದಲಿತರ ಕಡೆಗೆ ಅದರಲ್ಲಿಯೂ ಪರಿಶಿಷ್ಟ ಜಾತಿಯವರ ಕಡೆಗೆ ಗಮನಹರಿಸಬೇಕಾಗಿದೆ. ದಲಿತರ ಶಿಕ್ಷಣದ ಕಡೆಗೆ ಗಮನಹರಿಸುವಾಗ ಸಾಮಾಜಿಕ ನ್ಯಾಯ ದೃಷ್ಟಿಯಿಂದ ನೋಡಬೇಕಾಗಿರುತ್ತದೆ. ಹೀಗೆ ನೋಡುವಾಗ ದಲಿತರಲ್ಲಿನ ಮಧ್ಯಮವರ್ಗ, ಬಡವರ್ಗ ಮತ್ತು ಮಹಿಳೆಯರ ಶೈಕ್ಷಣಿಕ ಪರಿಸರ, ದಲಿತ ಮಕ್ಕಳ ಶಿಕ್ಷಣ ಮತ್ತು ಇತರ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ.

ಸಾಕ್ಷರತೆಯು ಸಮಾಜದ ಸ್ಥಿತಿಗತಿಯನ್ನು ಅಭಿವ್ಯಕ್ತಪಡಿಸುವ ಒಂದು ಸೂಚಿಯಾಗಿದೆ. ಇದನ್ನು ಸಮಾಜದ ಚೌಕಟ್ಟಿನಿಂದ ಪ್ರತ್ಯೇಕ ಮಾಡಿ ನೋಡುವುದು ಅಥವಾ ಪರಿಭಾವಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಸಾಕ್ಷರತೆ ಮತ್ತು ಶಿಕ್ಷಣಗಳು ಮೌಲ್ಯ ನಿರಪೇಕ್ಷವಾದವುಗಳಲ್ಲ. ಆದ್ದರಿಂದಲೇ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಸಾಕ್ಷರತೆಯ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವು ತಳೆಯುವುದು ತುಂಬಾ ಅವಶ್ಯಕವಾಗಿದೆ. ಸಾಕ್ಷರತೆ ಯಾರಿಗೆ ಸಿಗಬೇಕು? ಯಾರಿಗೆ ಸಿಗಬಾರದು? ಮತ್ತು ಯಾರಿಗೆ ಎಷ್ಟು ಸಿಗಬೇಕು? ಎಂಬ ಸಂಗತಿಗಳನ್ನೆಲ್ಲಾ ನಮ್ಮ ಸಾಮಾಜಿಕ ವ್ಯವಸ್ಥೆಯು ನಿರ್ಧರಿಸುತ್ತಿರುತ್ತದೆ. ಈ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಜಾತಿಭೇದ, ವರ್ಗಭೇದ, ಮತ/ಲಿಂಗ ಭೇದಗಳು ತೀವ್ರವಾಗಿರುವುದನ್ನು ನೋಡಬಹುದಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ, ಪುರುಷರ ಸಾಕ್ಷರತೆಗಿಂತ ಕಡಿಮೆಯಾಗಿರುವುದು ಕೇವಲ ಜೈವಿಕ ಸ್ವರೂಪದ ಫಲವಾಗಿರದೆ ಸಾಮಾಜಿಕ ಸ್ವರೂಪದ ಅಂಶವೂ ಆಗಿರುತ್ತದೆ. ಸಾಕ್ಷರತೆಗೆ ಸಂಬಂಧಿಸಿದ ಸಾಧನೆ ಮತ್ತು ವೈಫಲ್ಯಗಳನ್ನು

ವ್ಯಕ್ತಿಗತ ಅಥವಾ ಜೈವಿಕ-ನೈಸರ್ಗಿಕ-ಪ್ರಾಕೃತಿಕ ನೆಲೆಗಳಲ್ಲಿ ಪರಿಭಾವಿಸುವುದು ಸಾಧ್ಯವಾಗುವುದಿಲ್ಲ. ಇವೆಲ್ಲಾ ಸಾಮಾಜಿಕ ವ್ಯವಸ್ಥೆಯು ರೂಪಿಸಿದ ಒಂದು ಸಂಗತಿಯಾಗಿರುತ್ತದೆ (ಚಂದ್ರಶೇಖರ್ ಟಿ.ಆರ್, ೨೦೦೦). ಈ ಹಿನ್ನೆಲೆಯಲ್ಲಿ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿರುತ್ತದೆ.

೧.೨. ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಇತ್ತೀಚೆಗೆ ಶಿಕ್ಷಣವು ಅದರಲ್ಲಿಯೂ ಪ್ರಾಥಮಿಕ ಶಿಕ್ಷಣ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಚರ್ಚೆಯಾಗಿ ಆದ್ಯತೆ ಪಡೆದುಕೊಂಡಿರುವ ಸಾಮಾಜಿಕ ಕ್ಷೇತ್ರವಾಗಿದೆ. ಈ ಕ್ಷೇತ್ರ ಅಭಿವೃದ್ಧಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಹೀಗೆ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿಯೇ ಆ ಕ್ಷೇತ್ರದ ಸಂಶೋಧನೆಗಳು, ಅಧ್ಯಯನ ವರದಿಗಳು ಹೊರಬರುತ್ತಿರುವುದನ್ನು ನಾವು ಕಾಣಬಹುದು. ಇವುಗಳನ್ನು ವಿಶಾಲವಾಗಿ ವರ್ಗೀಕರಿಸಲೂಬಹುದು. ಸಾಮಾಜಿಕ ಸಂಶೋಧನಾ ವರದಿಗಳು, ಅಭಿವೃದ್ಧಿ ಅಧ್ಯಯನ ವರದಿಗಳು, ಕ್ರಿಯಾ ಸಂಶೋಧನೆಗಳು ಮತ್ತು ತಳಮಟ್ಟದ ಸಂಶೋಧನಾ ಅನುಭವಗಳು ಇತ್ಯಾದಿ ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ನಮ್ಮ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದ ಅಧ್ಯಯನಗಳನ್ನು ಸಮೀಕ್ಷೆ ಮಾಡುವ ಮೂಲಕ ನಮ್ಮ ಅಧ್ಯಯನವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಲಾಗಿದೆ.

ಶಿಕ್ಷಣವು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಶಿಕ್ಷಣವು ಎಲ್ಲಾ ಪ್ರದೇಶ ಮತ್ತು ಜನವರ್ಗಗಳಲ್ಲಿ ಸಮಾನವಾಗಿರದೆ ಅಂತರ ಮತ್ತು ಅಸಮಾನತೆ ಗಳಿರುವುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಇದೇ ರೀತಿಯಾಗಿ ಶಿಕ್ಷಣದಲ್ಲಿ ಪ್ರಾದೇಶಿಕ ಅಸಮಾನತೆಯ ಅಂತರಗಳು ತೀವ್ರವಾಗುತ್ತಿವೆಯೋ ಅಥವಾ ಕಡಿಮೆಯಾಗುತ್ತಿವೆಯೋ ಎಂಬುದನ್ನು ತಿಳಿಯಲು ಹಲವು ಅಧ್ಯಯನಗಳು ಪ್ರಯತ್ನಿಸಿವೆ. ಅದರಂತೆ ಶಿಕ್ಷಣದ ಸಾಮಾಜಿಕ ಸ್ವರೂಪವನ್ನು ಹಿಡಿದಿಡುವ ಪ್ರಯತ್ನವನ್ನು ಕೆಲವು ಅಧ್ಯಯನಗಳು ಮಾಡಿವೆ. ಶಿಕ್ಷಣ, ಲಿಂಗಸಂಬಂಧಿ ಆಯಾಮಗಳು, ಲಿಂಗ ತಾರತಮ್ಯ ಇನ್ನೂ ಮುಂತಾದ ವಿಷಯಗಳನ್ನು ಕುರಿತು ಅಧ್ಯಯನಗಳು ಗುರುತಿಸಿವೆ. ನಮ್ಮ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದ ಅಧ್ಯಯನಗಳನ್ನು ಕಾಲಮಿತಿಯೊಳಗೆ ಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ನಮಗೆ ಪ್ರಮುಖವಾಗಿ ಕಂಡುಬರುವ ಅಧ್ಯಯನವೆಂದರೆ, ಪ್ರೋಬ್‌ರವರ (೧೯೯೮) "ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜ್ಯುಕೇಶನ್" ಒಂದಾಗಿದೆ. ಪ್ರೋಬ್ (೧೯೯೮) ವರದಿಯಲ್ಲಿ ಗುರುತಿಸಿದಂತೆ ಅವಿದ್ಯಾವಂತ ಪೋಷಕರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವುದಿಲ್ಲ ಎಂಬ ಸಾಮಾನ್ಯ ನಂಬಿಕೆ ಇದೆ. ಮಾಧ್ಯಮರಂಗದಲ್ಲಿಯೂ ಇದೇ ಮಾತು ಕೇಳಿಬರುತ್ತಿದೆ. ಆದರೆ ಇದಕ್ಕೆ ವಿರುದ್ಧವಾಗಿ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ವಿಶೇಷವಾದ ಆಸಕ್ತಿ ವಹಿಸುತ್ತಾರೆ

ಎಂಬುದು ಪ್ರೋಬ್ ಅಧ್ಯಯನದಿಂದ ದೃಢಪಟ್ಟಿದೆ. ವಾಸ್ತವವಾಗಿ ಶೇಕಡ ೮೦ರಷ್ಟು ಪೋಷಕರು ಎಲ್ಲಾ ಮಕ್ಕಳಿಗೆ ಶಿಕ್ಷಣವು ಕಡ್ಡಾಯವಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಶೇಕಡ ೯೮ರಷ್ಟು ಪೋಷಕರು ಗಂಡುಮಕ್ಕಳ ಶಿಕ್ಷಣಕ್ಕೆ ಮತ್ತು ಶೇಕಡ ೮೯ರಷ್ಟು ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವುದನ್ನು ಇದೇ ಅಧ್ಯಯನ ಗುರುತಿಸಿದೆ. ಆದರೆ ಕೆಲವೇ ಕೆಲವು ಪೋಷಕರು ಮಾತ್ರ ಹೆಣ್ಣುಮಕ್ಕಳಿಗೆ ಶಿಕ್ಷಣ ಬೇಕಿಲ್ಲವೆಂದಿದ್ದಾರೆ. ಇನ್ನೂ ಕೆಲವು ಪೋಷಕರು ಶಿಕ್ಷಣವಿದ್ದರೆ ಮಾತ್ರ ಜೀವನ ಮತ್ತು ಸಮಾಜದಲ್ಲಿ ಮುಂದೆ ಬರಲು ಸಾಧ್ಯ ಎಂದು ಹೇಳಿರುವುದನ್ನು ಕೂಡ ಪ್ರೋಬ್ ಅಧ್ಯಯನ ತಂಡ ಗುರುತಿಸಿದೆ.

ಅನಿತಾ ಕೆ. ಇವರು ೧೯೯೭ರಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧವಾದ "ಎಜ್ಯುಕೇಷನ್ ಪ್ಲಾನಿಂಗ್ ಫಾರ್ ಸ್ಕೂಲ್ ಎಜ್ಯುಕೇಶನ್ : ಎ ಸ್ಟಡಿ ಫಾರ್ ತ್ರಿ ಡಿಸ್ಟ್ರಿಕ್ಟ್ ಇನ್ ಕರ್ನಾಟಕ" ಎಂಬುದರಲ್ಲಿ ೭೦ ಮತ್ತು ೮೦ರ ದಶಕದಲ್ಲಿ ಉಂಟಾದ ಸಾಕ್ಷರತಾ ಬದಲಾವಣೆಯನ್ನು ವಿವರವಾಗಿ ಚರ್ಚೆಗೆ ಒಳಪಡಿಸಿದ್ದಾರೆ. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಾಕ್ಷರತೆಯಲ್ಲಿ ಕಂಡುಬಂದಿರುವ ಬದಲಾವಣೆಗಳನ್ನು ಮತ್ತು ಶಾಲಾಭಿವೃದ್ಧಿ ಯೋಜನೆಗಳು ಹೇಗೆ ಜಾರಿಗೆ ಬಂದಿವೆ ಎಂಬುದನು ಕೂಡ ತಮ್ಮ ಮಹಾಪ್ರಬಂಧದಲ್ಲಿ ಉತ್ತಮವಾಗಿ ವಿವರಿಸಿದ್ದಾರೆ.

ಥೇಕೆಡತ್ ಕೆ.ಕೆ. (೧೯೯೮) ಅವರು "ಶತಮಾನದ ಅಂಚಿನಲ್ಲಿ ಶಿಕ್ಷಣ" ಎಂಬ ಗ್ರಂಥದಲ್ಲಿ ಶಾಲೆಗೆ ಹೋಗುವ ಮಕ್ಕಳ ಕುಟುಂಬದ ಆರ್ಥಿಕ ಸ್ಥಿತಿಗೂ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗೂ ಅನ್ಯೋನ್ಯವಾದ ಸಂಬಂಧವಿರುವುದನ್ನು ಗುರುತಿಸಿದ್ದಾರೆ. ಮುಂಬೈನ ಮಹಾನಗರ ಪಾಲಿಕೆಯು ಶಾಲೆಗೆ ಹೋಗುವ ಮಕ್ಕಳ ಅಪೌಷ್ಟಿಕತೆ ಮತ್ತು ಅದಕ್ಕೆ ಸಂಬಂಧಿಸಿದ ಕಾಯಿಲೆಗಳ ಕೆಲವು ಮಾಹಿತಿಗಳನ್ನು ಒದಗಿಸಿರುವುದನ್ನು ಕೂಡ ಥೇಕ್‌ಡತ್‌ರವರು ವಿವರಿಸಿದ್ದಾರೆ. ಪ್ರಾಥಮಿಕ ಶಾಲೆಗೆ ಹೋಗುವ ೩.೦೫ಲಕ್ಷ ಮಕ್ಕಳನ್ನು ಪರೀಕ್ಷಿಸಿದ ವೈದ್ಯರು ಅಪೌಷ್ಟಿಕತೆ ಮತ್ತು ನಿರ್ಲಕ್ಷತೆಯಿಂದ ಸುಮಾರು ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇದರಲ್ಲಿ ಶೇಕಡ ೨೬.೭೬ರಷ್ಟು ಮಕ್ಕಳಿಗೆ ಅನ್ನಾಂಗದ ಕೊರತೆ ಇದ್ದರೆ, ಶೇಕಡ ೫ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದು, ಶೇಕಡ ೫೫ರಷ್ಟು ಮಕ್ಕಳಲ್ಲಿ ಹಲ್ಲಿನ ದೋಷ ಕಂಡುಬಂದಿದೆ. ಏಪ್ರಿಲ್ ೧೯೯೬ ರಿಂದ ಮಾರ್ಚ್ ೧೯೯೭ರ ನಡುವಿನ ಅವಧಿಯಲ್ಲಿ 'ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೋರೇಷನ್'ನ ವೈದ್ಯಕೀಯ ಅಧಿಕಾರಿಗಳಿಂದ ಪರೀಕ್ಷಿಸಲ್ಪಟ್ಟ ಮಕ್ಕಳ ಆರೋಗ್ಯ, ಬಡತನ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗಳ ನಡುವೆ ಇರುವ ಸಹ-ಸಂಬಂಧವನ್ನು ಅಧ್ಯಯನಕಾರರು ವಿವರವಾಗಿ ತಿಳಿಸಿದ್ದಾರೆ.

ರೇಖಾ ಕೌಲ್ ಅವರು (೨೦೦೧) "ಅಸೆಸ್ಸಿಂಗ್ ಪ್ರೈಮರಿ ಎಜ್ಯುಕೇಷನ್ ಗೋಯಿಂಗ್ ಬಿಯಾಂಡ್ ದಿ ಕ್ಲಾಸ್ ರೂಂ" ಎಂಬ ಲೇಖನದಲ್ಲಿ ವಿವಿಧ ಆದಾಯದ ಗುಂಪುಗಳನ್ನು ಕುರಿತು

ತುಲನಾತ್ಮಕವಾಗಿ ವಿಶ್ಲೇಷಣೆ ಮಾಡಿದ್ದಾರೆ. ಇವರು ತಮ್ಮ ಲೇಖನದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೊನೆಯದಾದ ಆದ್ಯತೆ ಕೊಡುತ್ತಿರುವುದನ್ನು ಗುರುತಿಸಿದ್ದಾರೆ. ಅದರಂತೆ ತಳಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಸೂಕ್ತವಾದ ಅವಕಾಶಗಳಿಲ್ಲ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಅನಿತಾ ಬಿ.ಕೆ. (೨೦೦೦) ಇವರ "ವಿಲೇಜ್ ಕ್ಯಾಸ್ಟ್ ಅಂಡ್ ಎಜ್ಯುಕೇಷನ್" ಎಂಬ ಗ್ರಂಥವು ಕ್ಷೇತ್ರ ಆಧಾರಿತ ಮಾಹಿತಿಯ ವಿಶ್ಲೇಷಣೆಯನ್ನು ಹೊಂದಿದೆ. ಇವರು ತಮ್ಮ ಅಧ್ಯಯನದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಮಕ್ಕಳ ಶಿಕ್ಷಣದ ವ್ಯತ್ಯಾಸವನ್ನು ಗುರುತಿಸುವಂತಹ ಪ್ರಯತ್ನ ಮಾಡಿದ್ದಾರೆ. ಆ ಪ್ರಯತ್ನದಲ್ಲಿ ಶೈಕ್ಷಣಿಕ ಸಮಾಜಶಾಸ್ತ್ರೀಯ ದೃಷ್ಟಿಕೋನದ ವಿವರಣೆಯು ಎದ್ದು ಕಾಣುತ್ತದೆ. ನಿರ್ದಿಷ್ಟವಾಗಿ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಕ್ರಿಯೆಗಳು ಮತ್ತು ಶಾಲೆ ನೆಲೆಗೊಂಡಿರುವ ಸ್ಥಳೀಯವಾದಂತಹ ಸಾಮಾಜಿಕ ರಚನೆಯನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಮುಂದುವರಿದಂತೆ ಲೇಖಕರು ಶಾಲೆಗಳ ಮೂಲಭೂತ ಸೌಲಭ್ಯಗಳು, ಮಕ್ಕಳ ಆರೋಗ್ಯದ ಸ್ಥಿತಿ, ಶಿಕ್ಷಕರ ಬೋಧನಾ ವಿಧಾನ ಇತ್ಯಾದಿ ಅಂಶಗಳು ಮಕ್ಕಳ ಕಲಿಕೆ ಮತ್ತು ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ನಿರ್ಧರಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕರ್ನಾಟಕ ರಾಜ್ಯದ ಸಾಕ್ಷರತೆಯನ್ನು ಕೇರಳ ರಾಜ್ಯದ ಸಾಕ್ಷರತೆಯೊಂದಿಗೆ ಹೋಲಿಕೆ ಮಾಡುತ್ತಾ, ಕೇರಳ ರಾಜ್ಯದಲ್ಲಿ ಯಾವ ಯಾವ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬುದನ್ನು ಲೇಖಕರು ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅದೇ ರೀತಿಯಾಗಿ ಲೇಖಕರು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣವು ಏಕೆ ಹಿಂದುಳಿದಿದೆ? ಮತ್ತು ಶಾಲೆಗಳಲ್ಲಿನ ಕಲಿಕಾ ಗುಣಮಟ್ಟವು ಹೇಗಿದೆ ಎಂಬುದನ್ನು ಕೂಡ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಅಧ್ಯಯನಕಾರರು ಮೂಲಭೂತ ಸೌಲಭ್ಯಗಳು, ಆದಾಯ, ಜಾತಿ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಶೈಕ್ಷಣಿಕ ಹಿಂದುಳಿಯುವಿಕೆಗೆ ಪ್ರಮುಖ ಕಾರಣಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ರೇಖಾ ವಾಜೀರ್(೨೦೦೧)ರವರು "ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜ್ಯುಕೇಷನ್, ಎನ್.ಜಿ.ಓ. ಆ್ಯಂಡ್ ಚೇಂಜ್ ಏಜನ್ಸಿ" ಎಂಬ ತಮ್ಮ ಪುಸ್ತಕದಲ್ಲಿ ಶಾಲಾ ಆಡಳಿತದಲ್ಲಿ ಸಮುದಾದ ಭಾಗವಹಿಸುವಿಕೆಯನ್ನು ಪರಿಣಾಮಕಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರೇತರ ಸಂಸ್ಥೆಗಳು ಪಠ್ಯರೂಪಿಸುವಲ್ಲಿ, ಶಾಲಾ ದಾಖಲಾತಿ, ಹಾಜರಾತಿ ಹೆಚ್ಚುಸುವಲ್ಲಿ, ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ದಾಖಲಿಸುವಲ್ಲಿ, ಜನರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಬೇಕಾದ ಅಗತ್ಯವನ್ನು ಒತ್ತಿಹೇಳಿದ್ದಾರೆ.

ಆರ್. ಇಂದಿರಾ (೨೦೦೨) ಅವರು "ಮಹಿಳೆ, ಸಮಾಜ ಮತ್ತು ಸಂಸ್ಕೃತಿ" ಎಂಬ ಗ್ರಂಥದಲ್ಲಿ ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ ಲಿಂಗ ಭೇದವನ್ನು ನಿವಾರಿಸಿದರೂ ವಾಸ್ತವವಾಗಿ

ಅಂದುಕೊಂಡಷ್ಟು ಪ್ರಗತಿಯನ್ನು ಸಾಧಿಸಲಾಗಿಲ್ಲ ಎಂಬುದನ್ನು ಗುರುತಿಸಿದ್ದಾರೆ. ಮುಂದುವರಿದು, ಆರ್ ಇಂದಿರಾ ಇವರು ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಎನ್ನುವುದು ಘೋಷಣೆಯ ಮಟ್ಟದಲ್ಲಿಯೇ ಉಳಿದುಕೊಂಡಿರುವುದು ಶೋಚನೀಯ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಈ ಶೋಚನೀಯ ಸ್ಥಿತಿಗೆ ಸಾಮಾಜಿಕ ಸಂರಚನೆಯೊಳಗಿನ ಆಚರಣೆಗಳೇ ಕಾರಣವಾಗಿದ್ದು, ಇವುಗಳನ್ನು ಸ್ಥಳೀಯ ಮಟ್ಟದಲ್ಲಿ ಅರ್ಥಮಾಡಿಕೊಂಡು ಜಾಗೃತಿ ಮೂಡಿಸುವಲ್ಲಿ ಬಹುತೇಕ ಕಾರ್ಯಕ್ರಮಗಳು ವಿಫಲವಾಗಿವೆ. ಹೀಗೆ ವಿಫಲವಾಗುವಾಗ ಕಾರ್ಯಕ್ರಮಗಳನ್ನು ರೂಪಿಸುವ ಯೋಜನಾಕಾರರು ಹೊಂದಿರುವಂತಹ ಟಾಪ್ ಡೌನ್ ಅಪ್ರೋಚ್ ಮನೋಪ್ರವೃತ್ತಿಯೂ ಕಾರಣವಾಗುತ್ತದೆ ಎಂಬ ನಿರ್ದಿಷ್ಟ ಅಂಶಗಳನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. ಮತ್ತೆ ಮುಂದುವರಿದು ಸಾಕ್ಷರತೆ ಮತ್ತು ಶಾಲಾ ದಾಖಲಾತಿಗಳಲ್ಲಿ ಹೆಚ್ಚಳವಾಗಿರುವುದು ನಿಜವಾದರೂ ದೇಶದ ವಿವಿಧ ಭಾಗಗಳಲ್ಲಿ ಸಮಾನವಾಗಿ ಹಂಚಿಕೆಯಾಗಿಲ್ಲ. ಅಷ್ಟೇ ಅಲ್ಲದೆ ಗ್ರಾಮ-ನಗರಗಳ ನಡುವೆ, ಜಾತಿ-ವರ್ಗ, ಲಿಂಗವಾರುಗಳ ಮಧ್ಯದಲ್ಲಿ ಶೈಕ್ಷಣಿಕ ಅಭಿವೃದ್ಧಿ ಹೊಂದಿದ ಮತ್ತು ಹೊಂದದೇ ಇರುವವರ ಅಂತರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ ಎಂಬ ತೀವ್ರವಾದ ಆತಂಕ ಆರ್ ಇಂದಿರಾ ಅವರದ್ದಾಗಿದೆ. ಇದನ್ನು ಸ್ಥಳೀಯ ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದರೆ ಈ ವ್ಯತ್ಯಾಸವು ಮತ್ತಷ್ಟು ಎದ್ದುಕಾಣುತ್ತದೆ ಎಂಬ ಲೇಖಕರ ಮಾತಿನಲ್ಲಿ ಅವರಿಗಿರುವ ಸಾಮಾಜಿಕ ಕಾಳಜಿಯೂ ಕಂಡುಬರುತ್ತದೆ.

ಟಿ.ಆರ್. ಚಂದ್ರಶೇಖರ್ (೨೦೦೩) ಅವರು "ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು" ಎಂಬ ಕೃತಿಯಲ್ಲಿ ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಲ್ಲಿ ವಿವರಿಸಲು ಪ್ರಯತ್ನ ಮಾಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಗಳನ್ನು ವಿವರಿಸುತ್ತಾ 'ಹಿಂದುಳಿದ ಜಿಲ್ಲೆಗಳಲ್ಲಿ ಶಿಕ್ಷಣ ಕಾಯಕಲ್ಪ' ಎಂಬ ಅಧ್ಯಾಯದಲ್ಲಿ ಬೀದರ್, ಬಿಜಾಪುರ, ಗುಲ್ಬರ್ಗಾ, ಬಾಗಲಕೋಟೆ, ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಿದ್ದಾರೆ. ಈ ಏಳು ಜಿಲ್ಲೆಗಳ ಸಾಕ್ಷರತೆಯ ತುಲನಾತ್ಮಕ ಸ್ಥಾನಮಾನವನ್ನು ಆದಾಯ ಸಾಕ್ಷರತೆಯ ನೆಲೆಯಿಂದ ನೋಡಿದಾಗ ಉಳಿದ ಜಿಲ್ಲೆಗಳ ಸ್ಥಾನಮಾನಕ್ಕಿಂತ ಕೆಳಮಟ್ಟದಲ್ಲಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಶಾಲೆಗೆ ಸೇರದ ಮಕ್ಕಳ ಪ್ರಮಾಣದ ಪ್ರಾದೇಶಿಕ ಸ್ವರೂಪ ತುಂಬಾ ಕುತೂಹಲಕಾರಿಯಾಗಿದೆ ಎಂದಿರುವ ಲೇಖಕರು ರಾಜ್ಯದ ೦೬-೧೪ವಯೋಮಾನದ ಒಟ್ಟು ಮಕ್ಕಳಲ್ಲಿ ಈ ಏಳು ಜಿಲ್ಲೆಗಳ ಪಾಲು ಶೇಕಡ ೨೮.೯ರಷ್ಟಾಗಿದೆ. ಆದರೆ ರಾಜ್ಯದಲ್ಲಿ ಶಾಲೆಗೆ ಸೇರದ ೦೬-೧೪ ವಯೋಮಾನದ ಒಟ್ಟು ಮಕ್ಕಳಲ್ಲಿ ಹಿಂದುಳಿದ ಈ ಏಳು ಜಿಲ್ಲೆಗಳ ಪಾಲು ಶೇಕಡ ೫೫.೬೭ರಷ್ಟಾಗಿದೆ. ಅಂದರೆ ರಾಜ್ಯದಲ್ಲಿನ ಶಾಲೆಗೆ ಸೇರದ ಒಟ್ಟು ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಮಕ್ಕಳು ಹಿಂದುಳಿದ ಈ ಏಳು ಜಿಲ್ಲೆಗಳಲ್ಲಿಯೇ ಶೇಖರಣೆಯಾದಂತಿದೆ ಎಂದಿದ್ದಾರೆ. ಇದಕ್ಕೆ ಪೂರಕವಾದಂತೆ, ಯಾವ ಪ್ರದೇಶದಲ್ಲಿ ೦೬-೧೪ ವಯೋಮಾನದ ಮಕ್ಕಳು ಶೇಕಡ ೧೦ಕ್ಕಿಂತ ಹೆಚ್ಚಾಗಿರುತ್ತಾರೋ ಆ ಪ್ರದೇಶದಲ್ಲಿ

[illegible]

ಜನಸಂಖ್ಯೆಯ ಬೆಳವಣಿಗೆ ಮತ್ತು ಒತ್ತಡಗಳು ಅಧಿಕವಾಗಿರುತ್ತವೆ ಎಂಬ ಅಭಿಪ್ರಾಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ವಿ.ಪಿ. ನಿರಂಜನಾರಾಧ್ಯ (೨೦೦೪) ಇವರು "ಶಾಲೆಗಳು ರಾಜಕೀಯ ಪಕ್ಷಗಳ ಶಾಖಾ ಕಛೇರಿಗಳಾಗಬೇಕೆ?" ಎಂಬ ಲೇಖನದಲ್ಲಿ ಶಿಕ್ಷಣವು ಮಾನವ ಹಕ್ಕು, ಇದನ್ನು ಯಾರು ಕಿತ್ತುಕೊಳ್ಳಲು ಸಾಧ್ಯವಿಲ್ಲ ಎಂಬ ಸದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮುಂದುವರಿದಂತೆ ಲೇಖಕರು ಶಾಲೆಗಳಲ್ಲಿ ಪಕ್ಷ ರಾಜಕೀಯವನ್ನು ಹುಟ್ಟು ಹಾಕುವ ಮೂಲಕವಾಗಿ ಶಿಕ್ಷಣದ ಸಾರ್ವತ್ರೀಕರಣದ ಪ್ರಕ್ರಿಯೆಯನ್ನು ಮೊಟಕುಗೊಳಿಸಿ, ಪ್ರಜಾಪ್ರಭುತ್ವಕ್ಕೆ ಒಂದು ರೀತಿಯಾಗಿ ತಿಲಾಂಜಲಿಯನ್ನು ಇಡಲಾಗುತ್ತದೆ ಎಂಬುದಾಗಿ ಖಾರವಾಗಿ ನುಡಿದಿದ್ದಾರೆ. ಇದರಿಂದ ಸರ್ವಾಧಿಕಾರಿ ವ್ಯವಸ್ಥೆಗೆ ಬುನಾದಿ ಹಾಕುತ್ತಾ, ತನ್ನದೇ ಆದ ಓಟ್ ಬ್ಯಾಕ್ ಅನ್ನು ಸೃಷ್ಟಿಸಿಕೊಳ್ಳುವ ಹುನ್ನಾರ ನಡೆದಿದೆ ಎಂಬ ಕ್ರಾಂತಿ ಕಾರಕ ಹೇಳಿಕೆ ಲೇಖಕರದ್ದಾಗಿದೆ. ಅಷ್ಟೇ ಅಲ್ಲದೆ ಪ್ರಜಾಸತ್ತೆಯ ಉಳಿವಿಗಾಗಿ ನಾಗರಿಕ ಸಮಾಜ ಇದನ್ನು ಒಕ್ಕೂರಲಿನಿಂದ ಖಂಡಿಸಬೇಕಾದ ಮತ್ತು ಶಾಲೆಗಳನ್ನು ಪಕ್ಷ ರಾಜಕೀಯದಿಂದ ದೂರ ಉಳಿಸಬೇಕಾದ ಅವಶ್ಯಕತೆ ಹೆಚ್ಚಾಗಿದೆ. ಈ ಹಿನ್ನೆಲೆಯ ಹೋರಾಟಗಳು ನಡೆಯುತ್ತಾ ಅದರಲ್ಲಿ ಎಲ್ಲಾ ಪ್ರಗತಿಪರ ಶಕ್ತಿಗಳ ಬೆಂಬಲ ಮತ್ತು ಸಹಕಾರಗಳು ನಿರ್ಣಾಯಕವಾಗಲಿದೆ ಎಂಬಂತಹ ಹೋರಾಟದ ಮನೋಭಾವವನ್ನು ಲೇಖಕರು ಹೊಂದಿದ್ದಾರೆ.

ಎಚ್.ಡಿ. ಪ್ರಶಾಂತ್(೨೦೦೫)ರವರು "ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ" ಎಂಬ ಪುಸ್ತಕದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ, ಅದರ ಸಾರ್ವತ್ರೀಕರಣ ಮತ್ತು ಮೂಲಭೂತ ಹಕ್ಕಾಗಿ ಶಿಕ್ಷಣ ಎಂಬ ಬಹುಮುಖ್ಯ ಅಂಶಗಳನ್ನು ವಿವರಿಸಿದ್ದಾರೆ. ಸಾಕ್ಷರತೆಯಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕವಾದ ಅಸಮಾನತೆಗಳಿದ್ದು, ನಗರ-ಗ್ರಾಮೀಣ, ರಾಜ್ಯ ಮತ್ತು ರಾಷ್ಟ್ರ ಮಟ್ಟಗಳಲ್ಲಿರುವ ಲಿಂಗ ತಾರತಮ್ಯದ ಅಂಶಗಳನ್ನು ಲೇಖಕರು ವಿವರವಾಗಿ ತಿಳಿಸಿದ್ದಾರೆ. ಮುಂದುವರಿದು ಲೇಖಕರು ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಮಕ್ಕಳ ಶಿಕ್ಷಣದ ಪ್ರೇರಕಾಂಶಗಳು, ಗಂಡು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ನಡುವಿನ ವ್ಯತ್ಯಾಸಗಳನ್ನು ಗುರುತಿಸುತ್ತಾ, ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಭಾಗವಹಿಸುವಿಕೆಯ ಅಗತ್ಯವನ್ನು ಒತ್ತಿಹೇಳಿದ್ದಾರೆ. ಗ್ರಾಮ ಮಟ್ಟದಲ್ಲಿ ಸಾಕ್ಷರತೆ ನಿರುತ್ಸಾಹದಾಯಕವಾಗಿದೆ ಎಂದು ತಿಳಿಸುವ ಲೇಖಕರು ಶಿಕ್ಷಣದ ಬಗ್ಗೆ ಸ್ಥಳೀಯವಾಗಿ ಗ್ರಾಮಸ್ಥರು ಹೊಂದಿರುವ ಉದಾಸೀನತೆಯೇ ಕಾರಣ ಎಂದಿದ್ದಾರೆ.

ಶಿವರಾಜ ಬಿ.ಕೆ. ವಿಠೋಬ ಭೀಮಣ್ಣ (೨೦೦೫) ಇವರು "ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ" ಎಂಬ ಲೇಖನದಲ್ಲಿ ಶಿಕ್ಷಣವನ್ನು ನಿರ್ದರಿಸುವ ಅಂಶಗಳಾದ, ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆಗಳನ್ನು ಆಧರಿಸಿ ಆಯಾ ಪ್ರದೇಶ ಕ್ವಮುಗುಣವಾದ ಅಸಮಾನತೆಯನ್ನು ವಿವರಿಸಿದ್ದಾರೆ. ಇವರ ಪ್ರಕಾರ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾದೇಶಿಕ

ಅಸಮಾನತೆ ಕಂಡುಬರುವಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆಯನ್ನು ವಿಭಾಗವಾರು ನೋಡಿದಾಗ ಗುಲ್ಬರ್ಗಾದಲ್ಲಿ ಶೇಕಡ ೫೦.೬೮ರಷ್ಟಿದ್ದರೆ, ಬೆಂಗಳೂರಿನಲ್ಲಿ ಶೇಕಡ ೮೩.೯೧ರಷ್ಟಿರುವುದು ಸಾಕ್ಷರತೆಯ ಪ್ರಾದೇಶಿಕ ಭಿನ್ನತೆಯನ್ನು ತೋರಿಸುತ್ತದೆ. ಇದಕ್ಕೆ ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಅಂಶಗಳು ಕಾರಣವಾಗಿವೆ ಎಂಬುದನ್ನು ಲೇಖಕರು ಗುರುತಿಸುತ್ತಾರೆ. ಇವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ದೋಷ ಯುಕ್ತ ಆರ್ಥಿಕ ನೀತಿ, ಅದಕ್ಷ ಆಡಳಿತ, ಬಂಡವಾಳದ ಅಭಾವ, ಜಾತಿಪದ್ಧತಿ, ಆರ್ಥಿಕ ಯೋಜನೆಗಳ ಅಸಮರ್ಪಕ ಅನುಷ್ಠಾನ, ಬಡತನ ಇನ್ನು ಮುಂತಾದವುಗಳನ್ನು ಲೇಖಕರು ಗುರುತಿಸುತ್ತಾರೆ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಘ-ಸಂಸ್ಥೆಗಳು ರೂಪಿಸಿಕೊಂಡ ಯೋಜನೆಗಳು ವಿಫಲವಾಗಲು ಆಡಳಿತ ಯಂತ್ರದ ಕೊರತೆ ಅಥವಾ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿರುವುದನ್ನು ಲೇಖಕರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಸರ್ಕಾರ ಮತ್ತು ಆಡಳಿತ ವರ್ಗಗಳು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳತ್ತ ಹೆಚ್ಚಿನ ಗಮನವನ್ನು ಹರಿಸಲೇಬೇಕು. ಇಲ್ಲವಾದರೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳು ಹಿಂದುಳಿಯುತ್ತಲೇ ಹೋಗುತ್ತವೆ. ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ಜಿಲ್ಲೆಗಳು ಹಾಗೆಯೇ ಮುಂದುವರಿಯುತ್ತವೆ. ಅಂತಿಮವಾಗಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂಬುದಾಗಿ ಲೇಖಕರು ವಾದಿಸುತ್ತಾರೆ.

ಎಚ್.ಡಿ. ಪ್ರಶಾಂತ್ (೨೦೦೬) ರವರು "ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ ಕಾರ್ಯಕ್ಷಮತೆ" ಎಂಬ ಪುಸ್ತಕದಲ್ಲಿ ಸಮುದಾಯದ ಸಹಭಾಗಿತ್ವ ಯಾಕೆ? ಅದರ ಪ್ರಯತ್ನಗಳು ಅಧ್ಯಯನದ ಮಹತ್ವ ಮತ್ತು ಮಿತಿಗಳನ್ನು ವಿವರಿಸಿದ್ದಾರೆ. ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣವು ನಡೆದು ಬಂದ ದಾರಿ, ಮತ್ತು ಅದರ ಪ್ರಯತ್ನಗಳನ್ನು ಹೇಳುವುದರ ಮೂಲಕ ಎಸ್.ಡಿ.ಎಂ.ಸಿ.ಯನ್ನು ಹೊಸದಾಗಿ ನೋಡುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಶಾಲಾ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ. ಪಾತ್ರ ಏನು? ಸಭೆ, ನಿರ್ಣಯಗಳು, ಸಮನ್ವಯತೆ ಮತ್ತು ಶಾಲಾ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ತಳಮಟ್ಟದಿಂದ ಸುಧಾರಿಸಬೇಕಾದ ಸಾಮಾಜಿಕ, ಆರ್ಥಿಕ ಭಿನ್ನತೆಗಳೊಂದಿಗೆ ಶಾಲಾ ಶಿಕ್ಷಣದಲ್ಲಿನ ತೊಂದರೆ ಮತ್ತು ಪರಿಹಾರಗಳನ್ನು ಲೇಖಕರು ತಮ್ಮ ಸಂಶೋಧನೆಯಲ್ಲಿ ಕಂಡುಕೊಂಡಿದ್ದಾರೆ.

ವಿಲ್‌ಫ್ರೆಡ್ ಡಿಸೋಜ (೨೦೦೬) ರವರು "ರೈತರಿಗೆ ಆಸೆ, ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು" ಎಂಬ ಲೇಖನದಲ್ಲಿ ದುಡ್ಡಿನ ಆಸೆಗಾಗಿ ರೈತ ಕುಟುಂಬಗಳು ತಮ್ಮ ಮಕ್ಕಳ ಬದುಕನ್ನು ಬಲಿಕೊಡುತ್ತಿರುವ ಸತ್ಯಾಂಶವನ್ನು ವಿವರಿಸಿದ್ದಾರೆ. ಸಾಲದ ಸಂಕೋಲೆಯಲ್ಲಿ ಸಿಲುಕಿ ಅದರಿಂದ ಹೊರಬರಲು ತವಕಿಸುತ್ತಿರುವ ರೈತರು ಲಾಭ ತರುವ ಹೊಸ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ಸಹಜವೆಂದು ಒಪ್ಪಿಕೊಳ್ಳುವ ಲೇಖಕರು, ಬಹುರಾಷ್ಟ್ರೀಯ

ಬೀಜೋತ್ಪಾದನೆಯ ಕಂಪನಿಗಳು ಸೃಷ್ಟಿಸಿದ ಇಂತಹ ಜಾಲದಲ್ಲಿ ಸಿಲುಕಿದ ರೈತರು ಅಲ್ಪಸ್ವಲ್ಪ ಲಾಭದ ಗುಂಗಿನಲ್ಲಿ ತಮ್ಮ ಮಕ್ಕಳ ಜೀವನವನ್ನೇ ಬಲಿಕೊಡುತ್ತಿದ್ದಾರೆಂದು ಆತಂಕ ವ್ಯಕ್ತಪಡಿಸಿದ್ದಾರೆ. ಮುಂದುವರಿದಂತೆ ಲೇಖಕರು, ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ಮಕ್ಕಳು ದಾಖಲಾಗಿದ್ದರೂ, ಮಕ್ಕಳು ಶಾಲೆಗಳಲ್ಲಿ ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಏಕೆಂದರೆ ಶಾಲೆಗಳಲ್ಲಿ ದಾಖಲಾದ ಮಕ್ಕಳೆಲ್ಲರೂ ಶಾಲೆಗೆ ಹಾಜರಾಗದೆ ಸ್ಥಳೀಯವಾಗಿ ನಿರ್ಮಾಣವಾಗಿರುವಂತಹ ಬೀಜೋತ್ಪಾದನೆಯ ಕೇಂದ್ರಗಳಲ್ಲಿ ದುಡಿಯಲು ಹೋಗಿದ್ದಾರೆ. ಇಲ್ಲಿಯೇ ಇನ್ನೊಂದು ಕಡೆ ಬಾಲಕಾರ್ಮಿಕತೆಯ ಅಮಾನವೀಯತೆಯು ಆಚರಣೆಯಲ್ಲಿದ್ದು, ದಾವಣಗೆರೆ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಕಂಡುಬರುತ್ತದೆ. ಹಾಗಾಗಿ ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳು ಈಗಲಾದರೂ ಎಚ್ಚೆತ್ತು, ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಮತ್ತೆ ಶಾಲೆಗೆ ಕರೆ ತರಬೇಕೆಂದಿದ್ದಾರೆ.

ಟಿ.ಆರ್. ಚಂದ್ರಶೇಖರ್(೨೦೦೬)ರವರು "ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ" ಎಂಬ ಲೇಖನದಲ್ಲಿ ಪ್ರಮುಖವಾಗಿ ಪ್ರಾದೇಶಿಕ ಸ್ವರೂಪ, ಜಾತಿ ಸ್ವರೂಪ ಮತ್ತು ಲಿಂಗಸಂಬಂಧಿ ಸ್ವರೂಪ ಎಂಬ ಮೂರು ಆಯಾಮಗಳನ್ನು ಚರ್ಚಿಸಿದ್ದಾರೆ. ಮುಂದುವರಿದು, ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಸಮಸ್ಯೆಗೆ ಅನೇಕ ಕಾರಣಗಳನ್ನು ಗುರುತಿಸುತ್ತಾ ಸಾಮಾಜಿಕ, ರಾಜಕೀಯ ಮತ್ತು ಚಾರಿತ್ರಿಕ ಕಾರಣಗಳು ಮುಖ್ಯ ಎಂದಿದ್ದಾರೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಊಟ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದರಿಂದ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವು ಸ್ವಲ್ಪ ಕಡಿಮೆಯಾದರೂ ಸಮುದಾಯದ ವಲಸೆಗಳು ಪುನರಾವರ್ತನೆಯಾಗುವ ಪ್ರದೇಶಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಕಡಿಮೆಗೊಳಿಸಲು ಉದ್ಯೋಗ ಭದ್ರತೆಯೂ ಪ್ರಮುಖವಾಗುತ್ತದೆ ಎಂಬುದನ್ನು ಲೇಖಕರು ಪ್ರತಿಪಾದಿಸಿದ್ದಾರೆ.

ಭಾರತದಲ್ಲಿ 'ಸರ್ವರಿಗೂ ಶಿಕ್ಷಣ' ಎಂಬ ನೀತಿಯು ೧೯೪೭ ರಿಂದ ಅನುಷ್ಠಾನದಲ್ಲಿದ್ದರೂ ಶಿಕ್ಷಣದ ಸಾರ್ವತ್ರೀಕರಣ ಸಂಪೂರ್ಣವಾಗಿಲ್ಲ. ಶಿಕ್ಷಣದ ಸಾರ್ವತ್ರೀಕರಣದ ಅನೇಕ ಪ್ರಯತ್ನಗಳ ಫಲವಾಗಿ ೨೦೦೧-೦೨ರಲ್ಲಿ ಪ್ರಾಥಮಿಕ ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇಕಡ ೪೦.೦೭ ರಿಂದ ಶೇಕಡ ೩೫.೦೬ಕ್ಕೆ ಕಡಿಮೆಯಾಗಿದ್ದರೂ, ೦೬-೧೪ ವರ್ಷ ವಯಸ್ಸಿನ ಸುಮಾರು ೨೩ ದಶಲಕ್ಷ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆ, ಹಾಗೂ ಬಹುಸಂಖ್ಯೆಯ ಮಕ್ಕಳ ೫ನೇ ತರಗತಿಯಲ್ಲಿ ಪುನರಾವರ್ತನೆಯಾಗುತ್ತಿದ್ದಾರೆಂಬುದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ೨೦೦೩-೦೪ರ ವರದಿಯಿಂದ ತಿಳಿಯುತ್ತದೆ. ೦೬-೧೪ ವರ್ಷ ವಯಸ್ಸಿನ ಶೇಕಡ ೩೦ರಷ್ಟು ಮಕ್ಕಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳೇ ಶಾಲೆಗೆ ಹಾಜರಾಗದಿರುವುದನ್ನು ೧೯೮೬-೮೭ರ ರಾಷ್ಟ್ರೀಯ ಮಾದರಿ ಸಮೀಕ್ಷೆ ಗುರುತಿಸಿದೆ.

ಆದುದರಿಂದ ರಾಷ್ಟ್ರದ ಪ್ರತಿಯೊಂದು ಮಗುವೂ ಶಾಲೆಯಲ್ಲಿರುವಂತೆ ಮಾಡುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯಶಸ್ವಿಗಾಗಿ ಎಲ್ಲಾ ಮಕ್ಕಳಿಗೆ ಶಾಲಾ ಸೌಲಭ್ಯಗಳನ್ನು ವಿಸ್ತರಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಆದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಕುರಿತು ವಿವಿಧ ಪ್ರದೇಶ, ಸಮುದಾಯ, ಜಾತಿವರ್ಗ ಮತ್ತು ಲಿಂಗವಾರು ಭಿನ್ನತೆಗಳು ಉಳಿದುಕೊಂಡಿರುತ್ತವೆ. ಜೊತೆಗೆ ಶಿಕ್ಷಣದ ಗುಣಮಟ್ಟದಲ್ಲಿಯೂ ಕೊರತೆಗಳು ಕಂಡುಬರುತ್ತಿವೆ. ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ ಪ್ರಮಾಣಿಕವಾದ ಪ್ರಯತ್ನಗಳನ್ನು ಮಾಡುವ ಅಗತ್ಯವಿರುತ್ತದೆ (ಬಂಡೋಪಾಧ್ಯಾಯ, ೨೦೦೬). ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸರ್ಕಾರೇತರ ಸಂಘ-ಸಂಸ್ಥೆಗಳು, ಶಿಕ್ಷಣ ತಜ್ಞರು, ಸಮಾಜ ವಿಜ್ಞಾನಿಗಳು, ಜನಪ್ರತಿನಿಧಿಗಳು, ಶಿಕ್ಷಕರು, ಪೋಷಕರು, ಸಾರ್ವಜನಿಕರು ಸೇರಿಕೊಂಡು ಇಡೀ ಸಾಮಾಜಿಕ ವ್ಯವಸ್ಥೆಯೇ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗೆ ಅಮೂಲಾಗ್ರ ವಾಗಿ ಶ್ರಮಿಸುವುದು ಸಾಮಾಜಿಕ ಆದ್ಯತೆ ಎನಿಸುತ್ತದೆ. ಈ ರೀತಿಯಾದ ಪ್ರಯತ್ನಗಳ ಫಲವಾಗಿ ದೀರ್ಘಾವಧಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಅಭಿವೃದ್ಧಿ ಸಾಧ್ಯ.

ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವ ಪಂಜಾಬ, ಹರಿಯಾಣ, ಅಸ್ಸಾಂ, ಬಿಹಾರ, ತ್ರಿಪುರ, ಝಾರ್ಖಂಡ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಶಾಲೆಗೆ ಹೋಗುವ ವಯೋಮಾನದ ಶೇಕಡ ೯೦ರಷ್ಟು ಮಕ್ಕಳು ಸರ್ಕಾರಿ ಶಾಲೆಗೆ ಹಾಜರಾಗುವುದು ಬೆಳಕಿಗೆ ಬಂದಿದೆ (ಶ್ರೀಮತಿ ಶಾಂತಾ ಸಿನ್ಹ, ಕನ್ನಡಕ್ಕೆ ಜಿ.ಡಿ. ಪಾಟೀಲ, ೨೦೦೬). ವಿಶೇಷವೆಂದರೆ ಕೊಠಡಿಗಳ ಅಭಾವ, ಶಿಕ್ಷಕರ ಕೊರತೆ, ಕುಡಿಯುವ ನೀರು ಮತ್ತು ಶೌಚಾಲಯದ ಕೊರತೆ, ಕಳಪೆ ಮಟ್ಟದ ಶಿಕ್ಷಣ ಇತ್ಯಾದಿಗಳಿಂದ ಅಪಖ್ಯಾತಿಯಾದ ಸರ್ಕಾರಿ ಶಾಲೆಗಳಿಗೇಕೆ ಮಕ್ಕಳು ಹಾಜರಾಗುತ್ತಾರೆ? ಎಂಬ ಸಹಜವಾದ ಪ್ರಶ್ನೆ ಎದುರಾಗುತ್ತದೆ. ತಮ್ಮ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾದರೆ ಮಾತ್ರ ಬಡತನದ ವಿಷವೃತ್ತದಿಂದ ಪಾರಾಗಲು ಸಾಧ್ಯ ಎಂಬ ಪೋಷಕರ ದೃಢನಂಬಿಕೆಯೇ ಉತ್ತರವಾಗಿರುವುದು ಶಿಕ್ಷಣದ ಬೇಡಿಕೆಯನ್ನು ವ್ಯಕ್ತಪಡಿಸಿದಂತಾಗುತ್ತದೆ. ಒಂದರ್ಥದಲ್ಲಿ ಮಕ್ಕಳು ವಿದ್ಯಾವಂತರಾದರೆ ಬಡತನದ ವಿಷವೃತ್ತದಿಂದ ಪಾರಾಗುವುದು ವಿಳಂಬವಾದರೂ, ಬಡಕುಟುಂಬಗಳ ಜೀವನ ವಿಧಾನ ಮತ್ತು ಮೌಲ್ಯಗಳು ಬದಲಾಗುತ್ತವೆ.

ಬುಡಕಟ್ಟಿನ ಜನಸಮುದಾಯಗಳಿಂದ ಕೂಡಿದ ಈಶಾನ್ಯ ಪ್ರಾಂತ್ಯದ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಯಲ್ಲಿ ಬಡತನ ಮತ್ತು ಲಿಂಗ ತಾರತಮ್ಯಗಳು ಎದ್ದುಕಾಣುತ್ತವೆ. ಈಶಾನ್ಯ ಪ್ರಾಂತ್ಯದ ಕೆಲವು ರಾಜ್ಯಗಳಲ್ಲಿ ಬಡತನದ ತೀವ್ರತೆ, ನಗರ ಮತ್ತು ಗ್ರಾಮೀಣ ಬಡತನಗಳ ಅಂತರ ಹೆಚ್ಚಾಗಿದ್ದರೂ ಹೆಚ್ಚಿನ ಪ್ರಮಾಣದಲ್ಲಿರುವ ಸಾಕ್ಷರತೆ ಯಲ್ಲಿ ಲಿಂಗ ತಾರತಮ್ಯವಿದೆ. ಆದರೆ ಲಿಂಗ ತಾರತಮ್ಯಕ್ಕೆ ಬಡತನವೇ ಕಾರಣವಾಗಿಲ್ಲವೆಂಬುದು

ವಿಶೇಷ. ಈಶಾನ್ಯ ರಾಜ್ಯಗಳ ನಗರ ಭಾಗದಲ್ಲಿ ಶಾಲೆಗೆ ಹೋಗುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿರುವುದು ವಿಭಿನ್ನ ಸಂಗತಿ. ಅದರಂತೆಯೇ ಈ ರಾಜ್ಯಗಳಲ್ಲಿ ಶಾಲೆಗೆ ಹೋಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ಮಕ್ಕಳಲ್ಲಿ ಮಹತ್ವದ ವ್ಯತ್ಯಾಸ ಗಳಿಲ್ಲದಿರುವುದು ಕೂಡ (ನಿರಂಕರ್ ಶ್ರೀವಾಸ್ತವ, ಅಮರೇಶ್ ದುಬೆ, ಜುಲೈ ೨೦೦೨) ತಕ್ಕಮಟ್ಟಿಗೆ ಸಮಾಧಾನ ಪಡುವ ವಿಷಯವಾಗಿದೆ.

ಕಲ್ಕತ್ತಾದ ಪೂರ್ವ ಕೊಳಗೇರಿಗಳಲ್ಲಿ ಸಾಕ್ಷರತಾ ಪ್ರಮಾಣ ಸಾಮಾನ್ಯವಾಗಿ ಕಡಿಮೆ ಇರುತ್ತದೆ ಎಂಬುದಾಗಿ ನಂಬಿದ್ದರೂ ೨೦೦೧ರ ಜನಗಣತಿ ಪ್ರಕಾರ ಅನೇಕ ಕೊಳಗೇರಿ ಪ್ರದೇಶಗಳ ಆಯ್ದ ವಾರ್ಡ್‌ಗಳಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡ ೭೦ಕ್ಕಿಂತ ಅಧಿಕವಾಗಿದೆ. ವಿಚಿತ್ರವೆಂದರೆ ಕೊಳಗೇರಿ ಪ್ರದೇಶದ ಸಾಕ್ಷರತೆಗಿಂತ ಕೊಳಗೇರಿಯಲ್ಲದ ಪ್ರದೇಶದ ಸಾಕ್ಷರತಾ ಪ್ರಮಾಣ ಕಡಿಮೆ ಇರುವುದಾಗಿದೆ. ತಾಯಿಯ ಸಾಕ್ಷರತೆ ಮಟ್ಟವು ಮಕ್ಕಳ ಶಿಕ್ಷಣದ ನಿರ್ಧಾರಕವಾಗಿದ್ದು, ಕೊಳಗೇರಿಯಲ್ಲಿನ ಹೆಚ್ಚಿನ ತಾಯಂದಿರು ಅವಿದ್ಯಾವಂತರಾಗಿದ್ದರೂ, ಮಹಿಳಾ ಸಾಕ್ಷರತೆಯ ಪ್ರಮಾಣ ಶೇಕಡ ೬೦ಕ್ಕಿಂತ ಜಾಸ್ತಿ ಯಾಗಿರುವುದು ವ್ಯತಿರಿಕ್ತವಾದ ಅಂಶವಾಗುತ್ತದೆ. ಆದರೆ ಗಾಳಿ-ಬೆಳಕಿನ ಅಭಾವವಿರುವ ಚಿಕ್ಕಕೋಣೆಯಲ್ಲಿ ವಾಸ, ಆಗಾಗ್ಗೆ ಸ್ವಚ್ಛಗೊಳಿಸದ ಶೌಚಾಲಯದ ಬಳಕೆ, ಅನಾರೋಗ್ಯದ ಸ್ಥಿತಿಯಲ್ಲಿ ಅಡಿಗೆ ಮಾಡುವ, ಸ್ಥಳೀಯ ರಬ್ಬರ್ ಮತ್ತು ಚರ್ಮದ ಕಾರ್ಖಾನೆಗಳ ಮಾಲಿನ್ಯಗಳಿಂದ ಕೂಡಿದ ಪರಿಸರದಲ್ಲಿ ಕೊಳಗೇರಿ ಪ್ರದೇಶದ ಮಕ್ಕಳು ಮನೆಪಾಠದ ತಯಾರಿ ಮಾಡುವುದು ಕಷ್ಟದ ವಿಷಯ.

ಅಲ್ಲದೇ ಈ ಪ್ರದೇಶದ ಜನರ ಆದಾಯವೂ ಕಡಿಮೆ ಇರುವುದರಿಂದ ಮಕ್ಕಳಿಗೆ ಅಪೌಷ್ಟಿಕತೆ ಯಾಗಿ ಕಾಯಿಲೆಗೆ ಬೀಳುತ್ತಾರೆ. ಉದ್ಯೋಗದ ಭದ್ರತೆ ಇಲ್ಲದೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಪೋಷಕರಿಗೆ ಪರ್ಯಾಯ ಆದಾಯದ ಮೂಲವಿಲ್ಲದೆ ಜೀವನ ನಿರ್ವಹಣೆಗಾಗಿ ವಲಸೆ ಹೋಗುತ್ತಾರೆ. ಈ ರೀತಿಯಾದ ಅನಿವಾರ್ಯದ ಕಾರಣಗಳಿಂದ ಕೊಳಗೇರಿ ಪ್ರದೇಶದ ಮಕ್ಕಳು ಶಾಲೆಗೆ ಗೈರು ಹಾಜರಾಗುತ್ತಾರೆ ಎಂಬುದು ವರದಿಯಾಗಿದೆ. ಕೊಳೆಗೇರಿ ಪ್ರದೇಶದ ಸರ್ಕಾರಿ ಶಾಲೆ ಮತ್ತು ಮುನಿಸಿಪಲ್ ಕಾರ್ಪೋರೇಷನ್ ಶಾಲೆಗಳಲ್ಲಿ ದಾಖಲಾತಿ ದೊರೆಯದ ಮಕ್ಕಳಿಗೆ, ಹತ್ತಿರದಲ್ಲಿರುವ ಮತ್ತು ಹೊಂದಾಣಿಕೆ ಸ್ವಭಾವವಿರುವ ಸರ್ಕಾರೇತರ ಸಂಸ್ಥೆಗಳ ಶಾಲೆಗಳಲ್ಲಿ ದಾಖಲಾತಿ ದೊರೆಯುತ್ತದೆ. ಇದರಿಂದಾಗಿ ಶೇಕಡ ೩೮.೯೬ರಷ್ಟು ಮಕ್ಕಳು ಆರು ತಿಂಗಳಲ್ಲಿ ಶೇಕಡ ೮೦ರಷ್ಟು ತರಗತಿಗಳಿಗೆ ಹಾಜರಾದರೆ, ಶೇಕಡ ೨೪.೫೩ರಷ್ಟು ಮಕ್ಕಳು ಶೇಕಡ ೫೦ರಷ್ಟು ಶಾಲೆಯ ತರಗತಿಗಳಿಗೆ ಹಾಜರಾಗಿ ದ್ದಾರೆ. ಒಟ್ಟಿನಲ್ಲಿ ನಿರಂತರವಾಗಿ ಹಾಜರಾಗುವ ಮಕ್ಕಳ ಸಂಖ್ಯೆಗಿಂತ ಹಾಜರಾಗದ ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು ಕಂಡುಬರುತ್ತದೆ (ರತನ್ ಖಾಸ್-ನಬೀಸ್, ತಾನಿಯಾ ಚಟರ್ಜಿ, ೨೦೦೭).

ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದ ರಾಜ್ಯವಾದಂತಹ ಮಹಾರಾಷ್ಟ್ರದಲ್ಲಿಯೂ ಶಿಕ್ಷಣದ ವಿಷಯದಲ್ಲಿ ಪ್ರದೇಶ, ಜಾತಿ-ವರ್ಗ, ಲಿಂಗ ಆಧಾರಿತವಾದ ತಾರತಮ್ಯಗಳಿವೆ. ನಗರ ಮತ್ತು

ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಶೇಕಡ ೩೭ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ಶೇಕಡ ೮೦ರಷ್ಟು ಜನ ಶೇಕಡ ೪೦ರಷ್ಟು ಶಿಕ್ಷಣವನ್ನು ಮತ್ತು ಶೇಕಡ ೭೦ರಷ್ಟು ಜನ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಗ್ರಾಮೀಣ ಮಹಿಳೆಯರು ಹಿಂದುಳಿದ ವರ್ಗವಲ್ಲದ ಪುರುಷರು ಪಡೆಯುವ ಶಿಕ್ಷಣದ ೧/೩ರಷ್ಟು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಅರ್ಧದಷ್ಟು ಜನಸಂಖ್ಯೆ ಶಿಕ್ಷಣವನ್ನೇ ಪಡೆದುಕೊಳ್ಳದೆ, ಶೇಕಡ ೮೦ ರಷ್ಟು ಜನಸಂಖ್ಯೆ ೧/೩ರಷ್ಟು ಶಿಕ್ಷಣವನ್ನು ಪಡೆಯುತ್ತಿದೆ. ಆದರೆ ನಗರದ ಶೇಕಡ ೨೦ರಷ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆ ಶಿಕ್ಷಣ ಪಡೆಯದೇ, ೮೦ರಷ್ಟು ಜನಸಂಖ್ಯೆ ಶೇಕಡ ೫೦ಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ಶೇಕಡ ೧೦ರಷ್ಟು ಜನಸಂಖ್ಯೆ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದೆ.

ಗ್ರಾಮೀಣ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೨೮ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ೮೦ರಷ್ಟು ಜನಸಂಖ್ಯೆ ಶೇಕಡ ೫೦ಕ್ಕಿಂತ ಹೆಚ್ಚಿನ ಶಿಕ್ಷಣ ಮತ್ತು ಶೇಕಡ ೧೦ರಷ್ಟು ಜನಸಂಖ್ಯೆ ಶೇಕಡ ೭೫ರಷ್ಟು ಶಿಕ್ಷಣವನ್ನು ಪಡೆದುಕೊಳ್ಳುತ್ತಿದೆ. ಆದರೆ ನಗರ ಪ್ರದೇಶದ ಹಿಂದುಳಿದ ವರ್ಗವಲ್ಲದ ಶೇಕಡ ೧೫ರಷ್ಟು ಜನಸಂಖ್ಯೆ ಶಿಕ್ಷಣ ಪಡೆಯದೇ, ಶೇಕಡ ೧೫ರಷ್ಟು ಜನ ಶೇಕಡ ೭೫ಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಶಿಕ್ಷಣದ ಅಸಮಾನತೆ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿದೆ. ನಗರದ ಪುರುಷರಲ್ಲಿ ಶಿಕ್ಷಣದ ಕಡಿಮೆ ತಾರತಮ್ಯಗಳಿದ್ದರೆ, ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚಿನ ತಾರತಮ್ಯಗಳಿರುವುದು (ಮಧು ಎಸ್. ಪರಂಜಪೆ, ೨೦೦೭) ಅಧ್ಯಯನಗಳಿಂದ ದೃಢಪಟ್ಟಿದೆ.

೨೦೦೧ರ ಜನಗಣತಿ ಪ್ರಕಾರ ೧೯೯೧ ರಿಂದ ೨೦೦೧ರ ಅವಧಿಯಲ್ಲಿ ಕರ್ನಾಟಕ ರಾಜ್ಯದ ಸಾಕ್ಷರತಾ ಪ್ರಮಾಣ ಶೇಕಡ ೫೬.೪ ರಿಂದ ಶೇಕಡ ೬೬.೬೪ಕ್ಕೆ ಹೆಚ್ಚಾಗಿರುವುದರಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯಕ್ಕೆ ಐದನೇ ಸ್ಥಾನ ಮತ್ತು ಇತರೆ ರಾಜ್ಯಗಳಿಗೆ ಹೋಲಿಸಿದಾಗ ೨೨ನೇ ಸ್ಥಾನ ಲಭ್ಯವಾಗುತ್ತದೆ. ಕರ್ನಾಟಕದ ಪುರುಷ ಸಾಕ್ಷರತೆ ಮತ್ತು ಮಹಿಳಾ ಸಾಕ್ಷರತೆಗಳು ಕ್ರಮವಾಗಿ ಶೇಕಡ ೭೬.೧೦ರಷ್ಟು ಮತ್ತು ಶೇಕಡ ೫೬.೮೭ರಷ್ಟಿದ್ದು, ನಗರ ಸಾಕ್ಷರತೆ ಶೇಕಡ ೮೧.೦೫ರಷ್ಟು ಹಾಗೂ ಗ್ರಾಮೀಣ ಸಾಕ್ಷರತೆ ಶೇಕಡ ೫೯ರಷ್ಟಿದೆ. ಭಾರತದ ನಗರಗಳ ಕೊಳಚೆ ಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕದ ನಗರ ಕೊಳಚೆ ಪ್ರದೇಶದ ಸಾಕ್ಷರತೆ ಅತ್ಯಂತ ಕೆಳಮಟ್ಟದಲ್ಲಿದೆ. ಕರ್ನಾಟಕದ ೧೨ ಜಿಲ್ಲೆಗಳ ಸಾಕ್ಷರತೆ ಗರಿಷ್ಠ ಪ್ರಮಾಣದಲ್ಲಿದ್ದರೆ ಉಳಿದ ಜಿಲ್ಲೆಗಳ ಸಾಕ್ಷರತೆಯು ಕನಿಷ್ಠ ಪ್ರಮಾಣದಲ್ಲಿರುತ್ತದೆ

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣವು ಕಡಿಮೆ ಇದೆ. ಅದಕ್ಕಾಗಿ ಲೋಕ ಶಿಕ್ಷಣ ಇಲಾಖೆಯ 'ಮುಂದುವರಿಕೆ ಶಿಕ್ಷಣ', 'ಶಿಬಿರ ಸಾಕ್ಷರತೆ', 'ವಿದ್ಯಾರ್ಥಿಗಳ ಮೂಲಕ

ಸಾಕ್ಷರತೆ', 'ಪುನಶ್ಚೇತನ', ಕುಷ್ಟರೋಗಿಗಳಿಗೆ, ಜೈಲುವಾಸಿಗಳಿಗೆ ಮತ್ತು ಭಿಕ್ಷುಕರಿಗಾಗಿರುವ ಸಾಕ್ಷರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದೇ ರೀತಿಯಾಗಿ ರಾಜ್ಯ ಸಂಪನ್ಮೂಲ ಕೇಂದ್ರವು 'ಬಾರವ್ವ ಕಲಿಯೋಕೆ' ಎಂಬ ಪಠ್ಯಪುಸ್ತಕದ ಸಾಫ್ಟ್‌ವೇರ್ ಸಿದ್ದಪಡಿಸಿ ಕಂಪ್ಯೂಟರ್ ಮೂಲಕ ಮತ್ತು ರೇಡಿಯೋ ಪಾಠಗಳನ್ನು ತಯಾರಿಸಿ ಆಕಾಶವಾಣಿ ಮೂಲಕ ಸಾಕ್ಷರತೆ ನೀಡಲಾಗುತ್ತದೆ. ಅಲ್ಲದೇ ಶೈಕ್ಷಣಿಕವಾಗಿ ಹಿಂದುಳಿದ ಗುಲಬರ್ಗಾ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಮವಾಗಿ ೮೯೫ ಮತ್ತು ೮೮೫ ಎಜುಸ್ಯಾಟ್ ಶಾಲೆಗಳ್ನು ಪ್ರಾರಂಭಿಸಿ ಸಾಕ್ಷರತೆ ನೀಡಲಾಗುತ್ತದೆ. ಶೀಘ್ರವಾಗಿ ಕಲಿಯ ಬಹುದಾದ ಪಠ್ಯಪುಸ್ತಕ 'ಸಾಕ್ಷರ ಸಂಗಾತಿ'ಯನ್ನು ಸಾಫ್ಟ್‌ವೇರ್‌ಗೆ ಅಳವಡಿಲಾಗಿದೆ (ಟಿ. ವೆಂಕಟೇಶ್, ೨೦೦೭).

ಇವುಗಳೊಂದಿಗೆ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕಲಿಕಾ ಆಂದೋಲನ, ಪರಿಹಾರ ಬೋಧನೆ ಇನ್ನು ಮುಂತಾದ ಯೋಜನೆಗಳಿವೆ. ಅದರಂತೆ ಮೆರಿಟ್ ಆಧಾರಿತ ಶಿಕ್ಷಕರ ನೇಮಕಾತಿಯಲ್ಲಿ ಶೇಕಡ ೫೦ರಷ್ಟು ಮಹಿಳೆಯರ ನೇಮಕ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತರಬೇತಿ ಕೇಂದ್ರ ಸ್ಥಾಪನೆ, ಶಾಲಾ ಕೊಠಡಿಗಳ ನಿರ್ಮಾಣ, ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ, ಕೈಚೀಲ, ಮಧ್ಯಾಹ್ನದ ಊಟ ಒದಗಿಸುವುದು ಇತ್ಯಾದಿಗಳಿಂದ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ (ಎಚ್.ಜಿ. ಗೋವಿಂದೇಗೌಡ, ೧೯೯೭). ಆದರೂ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವು ಸಂಪೂರ್ಣವಾಗಿ ಸುಧಾರಣೆಯಾಗಿರುವುದಿಲ್ಲ. ಆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಕರು, ಕೊಠಡಿಗಳು, ಕಲಿಕಾ ಸಾಮಗ್ರಿಗಳು, ಆಟದ ಮೈದಾನ, ನೀರಿನ ವ್ಯವಸ್ಥೆ, ಶೌಚಾಲಯ ಮತ್ತು ಕಾಂಪೌಂಡ್ ಮುಂತಾದ ಸೌಲಭ್ಯಗಳು ಸರಿಯಾದ ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದರಿಂದ ಪ್ರಾಥಮಿಕ ಶಿಕ್ಷಣ ಹಿಂದುಳಿದಿದೆ (ಎಚ್.ಡಿ. ಪ್ರಶಾಂತ್, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ-ವಿಚಾರಸಂಕಿರಣ, ಆಗಸ್ಟ್-೨೦೦೭).

ಸಮೀಕ್ಷಿಸಿದ ಎಲ್ಲಾ ಅಧ್ಯಯನಗಳು ಅಖಿಲಭಾರತ ಮಟ್ಟದಿಂದ ಈಶಾನ್ಯ ರಾಜ್ಯಗಳು, ಕೋಲ್ಕತ್ತಾದ ಕೊಳಗೇರಿ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶ ಗಳವರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಾದೇಶಿಕ, ಜಾತಿ ವರ್ಗ, ಲಿಂಗ ಮತ್ತು ಗುಣಮಟ್ಟಗಳಲ್ಲಿ ಭಿನ್ನತೆಗಳಿರುವುದನ್ನು ಗುರುತಿಸಿವೆ. ಇದಕ್ಕೆಲ್ಲಾ ಬಡತನ, ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಮೂಲಸೌಲಭ್ಯ, ಶಿಕ್ಷಕರ ಕೊರತೆ ಮತ್ತು ಪೋಷಕರ ಭಾವನೆ ಇತ್ಯಾದಿ ಅಂಶಗಳು ಕಾರಣವಾಗಿರುವುದು ಸಮೀಕ್ಷಿಸಿದ ಅಧ್ಯಯನಗಳಿಂದ ತಿಳಿಯುತ್ತದೆ. ಆದರೆ ಇದುವರೆಗಿನ ಅಧ್ಯಯನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಗಮನಹರಿಸಿದ ಅಧ್ಯಯನಗಳು ವಿರಳ ಎನಿಸುತ್ತದೆ. ಈ ನಿಟ್ಟಿನಲ್ಲಿ "ಬಡತನವು ಶಿಕ್ಷಣದ ಕೊರತೆಗೆ ಕಾರಣ ಮತ್ತು ಪರಿಣಾಮವಾಗಿದ್ದು,

ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ದೈಹಿಕ ಕಾರಣಗಳಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ದುರ್ಬಲ ವರ್ಗಗಳು ಶೈಕ್ಷಣಿಕ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ" ಎಂಬುದನ್ನು ಗುರುತಿಸಿರುವ ಶ್ರೀ ಪದ್ಮ ರಾಮಚಂದ್ರನ್ ಮತ್ತು ವಸಂತಕುಮಾರ್‌ರವರ ಅಧ್ಯಯನವು ಉಲ್ಲೇಖನಾರ್ಹವಾಗಿದೆ.

ಅದರಂತೆ "ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣ, ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳೆಲ್ಲ ಅಗತ್ಯ"ವೆಂದು ಹೇಳಿರುವ ಡಿ.ವಿ. ಹೆಗಡೆಯವರ ಅಧ್ಯಯನವೂ ಸಂಬಂಧಪಟ್ಟದ್ದಾಗಿದೆ. ಆದರೆ ವಾಸ್ತವವಾಗಿ ಬಡತನ, ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ದೈಹಿಕ ಕಾರಣಗಳೊಂದಿಗೆ ಇನ್ನಿತರೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಂಶಗಳು ಕೂಡಾ ಶಿಕ್ಷಣದ ಕೊರತಗೆ ಕಾರಣ ವಾಗುತ್ತವೆ. ಅಲ್ಲದೆ ದೈಹಿಕ ಶಿಕ್ಷಣ ಮತ್ತು ಬೌದ್ಧಿಕ ಬೆಳವಣಿಗೆಗೆ ಅನುಕೂಲವಾದ ಪರಿಸರ ಮತ್ತು ಪರಿಕರಗಳ ಜೊತೆಗೆ ಶಿಕ್ಷಣ ಪಡೆದುಕೊಳ್ಳುವ ಇಚ್ಛಾಶಕ್ತಿ ಮತ್ತು ಮನೋಪ್ರವೃತ್ತಿಗಳು ಸಹ ಗ್ರಾಮೀಣ ಪ್ರದೇಶದ ದುರ್ಬಲ ವರ್ಗದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾಗಿರಬೇಕಾಗುತ್ತವೆ. ಆದ್ದರಿಂದ ಈ ಎಲ್ಲಾ ಅಧ್ಯಯನಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಶೈಕ್ಷಣಿಕವಾಗಿ ಯಾಕೆ ಹಿಂದುಳಿದಿದ್ದಾರೆ ಎಂಬ ಅಂಶವನ್ನು ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಮೂಲಕ ಶೈಕ್ಷಣಿಕ ಸ್ಥಿತಿಗತಿಗಳನ್ನು ವಿವರಿಸಲು ವಿಫಲವಾಗಿವೆ. ಈ ಹಿನ್ನೆಲೆಯಲ್ಲಿ ನಿರ್ದಿಷ್ಟವಾಗಿ ಶಿಕ್ಷಣ ಕುರಿತಂತೆ ದಲಿತರ ಮನೋಪ್ರವೃತ್ತಿ ಮತ್ತು ಶಿಕ್ಷಣ ಪಡೆಯುವಾಗ ದಲಿತರು ಸ್ಥಳೀಯವಾಗಿ ಎದುರಿಸುತ್ತಿರುವ ಸಮಸ್ಯೆಯ ಕಾರಣ ಮತ್ತು ಪರಿಹಾರಗಳನ್ನೊಳಗೊಂಡಂತೆ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಅಗತ್ಯವಿದೆ.

ನಾವು ಸಮೀಕ್ಷಿಸಿದ ಅಧ್ಯಯನಗಳು ಆರ್ಥಿಕ ಬೆಳವಣಿಗೆಯ ಮಾನದಂಡದಲ್ಲಿ ಅಂಕಿ-ಅಂಶಗಳಿಂದ ಕೂಡಿದ ಅಧ್ಯಯನಗಳಾಗಿರುತ್ತವೆ. ಅಂಕಿ-ಅಂಶಗಳಿಂದ ಕೂಡಿದ ಅಧ್ಯಯನಗಳು ವಿವಿಧ ಅಧ್ಯಯನ ತಂಡ ಮತ್ತು ಆಯೋಗಗಳು ನೀಡಿದ ವರದಿಗಳ ರೀತಿಯಲ್ಲಿರುತ್ತವೆ ಹಾಗೂ ಸರ್ಕಾರದ ವಿವಿಧ ಇಲಾಖೆಗಳು ತಯಾರಿಸಿದ ವರದಿಗಳು ಆಗಿರುತ್ತವೆ. ಈ ಅಂಕಿ-ಸಂಖ್ಯೆ ಆಧಾರಿತ ವರದಿಗಳಿಂದ ಕೂಡಿದ ಅಧ್ಯಯನಗಳು ಮಕ್ಕಳ ಶಾಲಾ ಭಾಗವಹಿಸುವಿಕೆಯ ವಾಸ್ತವಿಕ ಚಿತ್ರಣ ನೀಡಲು ಹಿಂದುಳಿಯುತ್ತವೆ. ಅಲ್ಲದೇ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವಲ್ಲಿ ಅಧ್ಯಯನಗಳು ವಿಫಲವಾಗುತ್ತವೆ. ಇದರ ಅರ್ಥ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಅಂಕಿ-ಸಂಖ್ಯೆ ಆಧಾರಿತ ಅಧ್ಯಯನಗಳು ವಿಫಲವೆಂದಲ್ಲ, ಆದರೆ ಇವು ಸ್ಥಳೀಯ ಸಾಂಸ್ಕೃತಿಕ ನೆಲೆಯಲ್ಲಿ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸ್ವಲ್ಪಮಟ್ಟಿಗೆ ವಿಫಲವಾಗಿವೆ ಎಂಬುದು ತಿಳಿಯುತ್ತದೆ. ಇಲ್ಲಿ ನಮಗೆ ಒಂದು ಪ್ರಶ್ನೆ ಎದುರಾಗುತ್ತದೆ.

[illegible]

[illegible]

[illegible]

ಇದಕ್ಕೆ ಸಾಂಸ್ಕೃತಿಕ ಅಧ್ಯಯನಗಳು ಪರಿಹಾರ ಎಂಬುದು ನಮ್ಮ ವಾದವಲ್ಲ. ಆದರೆ ಈ ಎರಡೂ ಅಧ್ಯಯನಗಳಲ್ಲಿನ ಸಾಮ್ಯತೆ ಮತ್ತು ಭಿನ್ನತೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಎರಡೂ ಅಧ್ಯಯನಗಳನ್ನೊಳಗೊಂಡಂತೆ ದಲಿತರ ಶೈಕ್ಷಣಿಕ ಪರಿಸರವನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

೧.೩. ಸಮಸ್ಯೀಕರಣ

ಅಧ್ಯಯನಗಳನ್ನು ಸಮೀಕ್ಷೆ ಮಾಡಿದ ನಂತರ ನಮಗೆ ಅನೇಕ ಪ್ರಶ್ನೆಗಳು ಎದುರಾಗುತ್ತವೆ. ದಲಿತರ ಶಾಲಾ ಭಾಗವಹಿಸುವಿಕೆಯಲ್ಲಿ ಹಿಂದುಳಿಯಲು ಕಾರಣಗಳು ಯಾವುವು? ಆ ಕಾರಣಗಳು ಸಾಮಾಜಿಕ ವಾದವೇ? ಆರ್ಥಿಕ ಸ್ವರೂಪದವೇ? ಶೈಕ್ಷಣಿಕ ವಾದವೇ? ಸಾಂಸ್ಕೃತಿಕ ಸ್ವರೂಪದವೇ? ಆರ್ಥಿಕ ಕಾರಣ ಯಾವ ಬಗೆಯವು? ಶೈಕ್ಷಣಿಕ ಕಾರಣಗಳು ಯಾವ ಬಗೆಯವು? ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೇಗೆ ತಡೆಯೊಡ್ಡುತ್ತಿವೆ? ದಲಿತ ಮಕ್ಕಳು ಶಾಲೆಯಲ್ಲಿ ಭಾಗವಹಿಸದಂತೆ ತಡೆಯೊಡ್ಡುತ್ತಿರುವ ಅಂಶಗಳು ಯಾವುವು? ಇವುಗಳಲ್ಲಿ ರಾಜಕೀಯ ಅಂಶಗಳ ಪ್ರಭಾವವೆಷ್ಟು? ಆರ್ಥಿಕ ಅಂಶಗಳ ಪ್ರಭಾವವೆಷ್ಟು? ಸಾಮಾಜಿಕ ಅಂಶಗಳ ಪ್ರಭಾವವೆಷ್ಟು? ಸಾಂಸ್ಕೃತಿಕ ಅಂಶಗಳ ಪ್ರಭಾವವೆಷ್ಟು? ದಲಿತರಲ್ಲಿಯೇ ಇರುವ ತಾರತಮ್ಯ ಯಾವ ಬಗೆಯದು? ಹೀಗಿರುವಾಗ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಪ್ರಮಾಣ ಕಡಿಮೆ ಇರಲು ಕಾರಣವೇನು? ಶಿಕ್ಷಣ ಪಡೆದುಕೊಳ್ಳುವಲ್ಲಿ ದಲಿತ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಯಾವ ಅಂಶಗಳು ಕಾರಣವಾಗುತ್ತವೆ? ಮಕ್ಕಳ ಶಿಕ್ಷಣದ ಬಗ್ಗೆ ದಲಿತ ಪೋಷಕರ ಮನೋಪ್ರವೃತ್ತಿ ಹೇಗಿದೆ? ಅವರ ಮನೋಪ್ರವೃತ್ತಿ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಯಾವ ರೀತಿಯ ಸಂಬಂಧವಿದೆ? ಈಗಾಗಲೇ ಅನುಷ್ಠಾನದಲ್ಲಿರುವ ಶಿಕ್ಷಣದ ಸೌಲಭ್ಯಗಳು ದಲಿತ ಮಕ್ಕಳಿಗೆ ದೊರಕುತ್ತಿವೆಯೇ? ಅವುಗಳನ್ನು ಪಡೆದುಕೊಳ್ಳುವಲ್ಲಿ ದಲಿತ ಪೋಷಕರು ಮತ್ತು ಮಕ್ಕಳ ಆಸಕ್ತಿ ಹೇಗಿದೆ? ಶಿಕ್ಷಣದ ಸೌಲಭ್ಯ ಪಡೆದುಕೊಳ್ಳುವಿಕೆ ಮತ್ತು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಂಬಂಧವಿದೆಯೇ? ಸರ್ಕಾರದಿಂದ ಲಭ್ಯಿಸುವ ಶಿಕ್ಷಣದ ಸೌಲಭ್ಯಗಳಿಲ್ಲದೆ ದಲಿತ ಮಕ್ಕಳು ಶಿಕ್ಷಣ ಪಡೆಯುವರೆ? ಎಂಬಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದರ ಮೂಲಕ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯ ಒಟ್ಟು ಚಿತ್ರಣವೇನು? ಎಂಬುದನ್ನು ಅರ್ಥಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿರುತ್ತದೆ.

೧.೪. ಅಧ್ಯಯನದ ಉದ್ದೇಶಗಳು

೧. ಸಾಕ್ಷರತೆಯಲ್ಲಿ ದಲಿತರು ಮತ್ತು ದಲಿತೇತರರ ನಡುವಿನ ಅಂತರವನ್ನು ಗುರುತಿಸುವುದು.

೨. ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ(ದಾಖಲಾತಿ, ಹಾಜರಾತಿ ಮತ್ತು ಶಾಲೆ ಬಿಟ್ಟವರು)ಯನ್ನು ಗುರುತಿಸುವುದು.

೩. ಶಿಕ್ಷಣದ ಬಗ್ಗೆ ದಲಿತರ ಮನೋಪ್ರವೃತ್ತಿಯನ್ನು ಅರ್ಥಮಾಡಿಕೊಳ್ಳುವುದು.

೪. ದಲಿತ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಣದ ಸೌಲಭ್ಯ ಸಾಮಾಜಿಕವಾಗಿ ಯಾವ ಪ್ರಮಾಣದಲ್ಲಿ ದೊರಯುತ್ತಿವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು.

೫. ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳಿಗೂ ಮತ್ತು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗಳ ನಡುವಿನ ಸಂಬಂಧವನ್ನು ಗುರುತಿಸುವುದು.

೧.೫. ಅಧ್ಯಯನದ ವಿಧಾನ

ಈ ಸಂಶೋಧನಾ ಪ್ರಬಂಧವು ಎಂಫಿರಿಕಲ್ ಅಧ್ಯಯನವಾಗಿರುವುದರಿಂದ ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಥಮವಾಗಿ ಅನುಷಂಗಿಕ ಮಾಹಿತಿ ಯನ್ನು ಮತ್ತು ಅಂಕಿ-ಸಂಖ್ಯೆಗಳನ್ನು ಶೇಖರಿಸಲಾಗಿದೆ. ಇವುಗಳಲ್ಲಿ ಶಾಲೆಗಳ ದಾಖಲೆಗಳು, ಶಿಕ್ಷಣ ಆಯೋಗದ ವರದಿಗಳು, ಜನಗಣತಿ ವರದಿ, ಮಾನವ ಅಭಿವೃದ್ಧಿ ವರದಿಗಳು ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವರದಿಗಳು, ಯೋಜನಾ ಇಲಾಖೆಯ ವರದಿಗಳು ಮತ್ತು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಂದ ಪ್ರಕಟಿಸಲ್ಪಡುವ ಜಿಲ್ಲಾ ಅಂಕಿ-ಅಂಶಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಶಿಕ್ಷಣದ ಬಗ್ಗೆ ರಾಜ್ಯ, ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಲ್ಪಟ್ಟ ಲೇಖನಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ವಿವಿಧ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲ್ಪಟ್ಟ ಸಂಪ್ರಬಂಧಗಳು, ಸಮಾಜ ಸಂಶೋಧನಾ ಪತ್ರಿಕೆಗಳು ಇತ್ಯಾದಿಗಳಿಂದಲೂ ವಿಷಯಗಳನ್ನು ಕಲೆ ಹಾಕಲಾಗಿದೆ. ವಿಷಯ ಪರಿಣತರ ಮತ್ತು ಶಿಕ್ಷಣ ತಜ್ಞರು ನಡೆಸಿದ ಚರ್ಚೆ, ಸಂವಾದ, ವಿಚಾರ ಸಂಕಿರಣಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಮಂಡಿತವಾದ ಉಪನ್ಯಾಸಗಳ ಸಾರಾಂಶಗಳನ್ನು ಬಳಸಿ ಕೊಳ್ಳಲಾಗಿದೆ.

ಅಧ್ಯಯನಕ್ಕೆ ಅಗತ್ಯವಾದ ಪ್ರಾಥಮಿಕ ಮಾಹಿತಿಯನ್ನು ದಲಿತ ಪೋಷಕರು, ಶಾಲಾ ಶಿಕ್ಷಕರು ಮತ್ತು ಜನಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಸಂದರ್ಶನ ಮಾಡುವುದರ ಮೂಲಕ ಸಂಗ್ರಹಿಸಲಾಗಿದೆ. ಸಂದರ್ಭಾನುಸಾರ ಅವಲೋಕನ ವಿಧಾನದಿಂದಲೂ ಪೂರಕ ಮಾಹಿತಿಯನ್ನು ಪಡೆಯಲಾಗಿದೆ. ಶಿಕ್ಷಕರ ಪ್ರಶ್ನಾವಳಿಯಲ್ಲಿ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಮತ್ತು ಅವರಿಗೆ ಲಭ್ಯವಿರುವ ಶಾಲಾ ಸೌಲಭ್ಯಗಳ ನಡುವಿನ ಸಂಬಂಧ ಕುರಿತಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಮಾಹಿತಿ ಸಂಗ್ರಹಿಸುವಾಗ ದಲಿತ ಮಕ್ಕಳಲ್ಲಿ ಶಾಲಾ ಸೌಲಭ್ಯಗಳನ್ನು ಪಡೆದುಕೊಳ್ಳುವ ಮತ್ತು ಶಿಕ್ಷಣ ಪಡೆದು ಕೊಳ್ಳುವ ಆಸಕ್ತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ತಿಳಿಯಲಾಗಿದೆ. ಪೋಷಕರ ಪ್ರಶ್ನಾವಳಿಯ ಮೂಲಕ ದಲಿತರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಮತ್ತು ದಲಿತರ ಶೈಕ್ಷಣಿಕ ಮನೋಪ್ರವೃತ್ತಿಗಳ ನಡುವಿನ ಸಂಬಂಧದ ಮಾಹಿತಿಯನ್ನು ತಿಳಿದುಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ದಲಿತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಆಸಕ್ತಿಗಳನ್ನು ಪರಿಶೀಲಿಸಲಾಗಿದೆ. ಅದೇ ರೀತಿಯಾಗಿ ಜನಪ್ರತಿನಿಧಿಗಳ ಪ್ರಶ್ನಾವಳಿಯಿಂದ ದಲಿತರ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಹಾಗೂ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಗಳಿಗಿರುವ ಸಂಬಂಧದ ಮಾಹಿತಿಯನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಶಾಲೆಗಳಲ್ಲಿ ದಲಿತ ಮಕ್ಕಳನ್ನು ಗಮನಿಸುವುದರ ಮೂಲಕ ಕೆಲವು ಅಂಶಗಳನ್ನು ಗ್ರಹಿಸಲಾಗಿದೆ. ಶಿಕ್ಷಣದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳಲ್ಲಿ ಭಾಗವಹಿಸಿ ಪರಿಣಿತರ ಮತ್ತು ವಿದ್ವಾಂಸರ ಅಭಿಪ್ರಾಯದ ಮೂಲಕ ಕೆಲವಾರು ಸೂಕ್ಷ್ಮ ವಿಷಯಗಳನ್ನು ಮನನ ಮಾಡಿಕೊಳ್ಳಲಾಗಿದೆ. ಈಗಾಗಲೇ ಪ್ರಕಟಿಸಲ್ಪಟ್ಟಿರುವ ಪುಸ್ತಕ, ವರದಿ ಗಳು, ಮಾಸಪತ್ರಿಕೆ, ವಾರ ಪತ್ರಿಕೆಗಳು, ದಿನಪತ್ರಿಕೆಗಳು ಇತ್ಯಾದಿ ಮಾಧ್ಯಮ ಮೂಲಗಳಿಂದ ಅಧ್ಯಯನಕ್ಕೆ ಬೇಕಾದ ಅನುಷಂಗಿಕ ಮಾಹಿತಿಗಳನ್ನು ಪಡೆಯಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ವಿಭಾಗಿಸಿ, ಅಗತ್ಯವಾದ ಕಡೆ ಕೋಷ್ಟಕಗಳನ್ನು ಬಳಸಿ ಮತ್ತು ಕೋಷ್ಟಕಗಳನ್ನು ಬಳಸದೇ ಇರುವ ಕಡೆಗಳಲ್ಲಿ ಶೇಕಡವಾರು ಪ್ರಮಾಣದ ಮಾಹಿತಿ ಬಳಸುತ್ತಾ ವಿಶ್ಲೇಷಣೆ ಮಾಡಲಾಗಿದೆ.

೧.೬. ಅಧ್ಯಯನ ಕ್ಷೇತ್ರದ ಆಯ್ಕೆ

ಪ್ರಾದೇಶಿಕ ಅಸಮಾನತೆಯ ಅಧ್ಯಯನದ ಉನ್ನತಾಧಿಕಾರ ಸಮಿತಿಯ ವರದಿ, ರಾಜ್ಯದ ತಾಲೂಕುಗಳನ್ನು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ, ಹಿಂದುಳಿದ, ಸ್ವಲ್ಪ ಹಿಂದುಳಿದ, ಅತ್ಯಂತ ಹಿಂದುಳಿದ ತಾಲೂಕುಗಳು ಎಂದು ಗುರುತಿಸಲು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದ ಸುಮಾರು ೩೫ ಸೂಚ್ಯಂಕಗಳನ್ನು ಬಳಸಿಕೊಂಡಿದೆ. ಅದರಲ್ಲಿ ಶಿಕ್ಷಣ ಒಂದು ಸೂಚ್ಯಂಕ. ಶೈಕ್ಷಣಿಕವಾಗಿ ಮುಂದುವರಿದ ಅಥವಾ ಹಿಂದುಳಿದ ಪ್ರದೇಶವನ್ನು ಗುರುತಿಸಲು ಆ ಪ್ರದೇಶದ ಸಾಕ್ಷರತೆ (ಪುರುಷ ಮತ್ತು ಮಹಿಳೆಯರು ಪ್ರತ್ಯೇಕವಾಗಿ) ಮಕ್ಕಳು-ಶಿಕ್ಷಕರ ಅನುಪಾತ, ಮಧ್ಯದಲ್ಲಿ ಶಾಲೆ ಬಿಟ್ಟ (೬-೧೪ ವರ್ಷದ) ಮಕ್ಕಳ ಸಂಖ್ಯೆ, ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಸಂಖ್ಯೆ, ಶಾಲೆಯ ದಾಖಲಾತಿ ಪ್ರಮಾಣ ಇತ್ಯಾದಿಗಳನ್ನು ಬಳಸಿಕೊಂಡಿದೆ. ಇದನ್ನು ಶಿಕ್ಷಣದ ಮೂಲಸೌಲಭ್ಯ ಸೂಚ್ಯಂಕ ಎಂದು ಕರೆಯಲಾಗಿದೆ (ಎಚ್.ಪಿ.ಸಿ.ಎಫ್.ಆರ್.ಆರ್.ಐ. ೨೦೦೨, ಎಚ್.ಡಿ. ಪ್ರಶಾಂತ್ ೨೦೦೫).

ಶಿಕ್ಷಣದ ಮೂಲಸೌಲಭ್ಯದ ಸೂಚ್ಯಂಕದ ಪ್ರಕಾರ ದಕ್ಷಿಣ ಕರ್ನಾಟಕದ ೯೦ ತಾಲ್ಲೂಕುಗಳು ಮತ್ತು ಉತ್ತರ ಕರ್ನಾಟಕದ ೫೩ ತಾಲ್ಲೂಕುಗಳು ಸಾಪೇಕ್ಷವಾಗಿ ಮುಂದುವರಿದಿವೆ. ಹಿಂದುಳಿದ ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಮೂರು ಮತ್ತು ಉತ್ತರ ಕರ್ನಾಟಕದಲ್ಲಿನ ೮ ತಾಲ್ಲೂಕುಗಳು ಸೇರಿ ಒಟ್ಟು ೧೧ ತಾಲ್ಲೂಕುಗಳಾಗಿವೆ. ಸ್ವಲ್ಪ ಹಿಂದುಳಿದ ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿ ಎರಡು ಇದ್ದು ಉತ್ತರ ಕರ್ನಾಟಕದಲ್ಲಿ ಇವುಗಳ ಸಂಖ್ಯೆ ೯ ಸೇರಿಕೊಂಡು ಒಟ್ಟು ಸ್ವಲ್ಪ ಹಿಂದುಳಿದ ತಾಲೂಕುಗಳ ಸಂಖ್ಯೆಯೂ ೧೧ ಇದೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳು ದಕ್ಷಿಣ ಕರ್ನಾಟಕದಲ್ಲಿರದೆ

ಉತ್ತರ ಕರ್ನಾಟಕದಲ್ಲಿ ಮಾತ್ರ ಒಟ್ಟು ೧೦ ತಾಲ್ಲೂಕುಗಳಿದೆ. ಒಟ್ಟಾರೆ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಉತ್ತರ ಕರ್ನಾಟಕ ಪ್ರದೇಶಕ್ಕಿಂತ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ಹೆಚ್ಚಿನ ತಾಲ್ಲೂಕುಗಳಿವೆ ಎಂದು ಸ್ಪಷ್ಟವಾಗುತ್ತದೆ.

ಅದರಂತೆ ಉತ್ತರ ಕರ್ನಾಟಕದ ಎರಡು ವಿಭಾಗಗಳಾದ ಬೆಳಗಾವಿ ಮತ್ತು ಗುಲ್ಬರ್ಗಾಗಳನ್ನು ತುಲನೆ ಮಾಡಿ ನೋಡಿದರೆ ಬೆಳಗಾವಿಗಿಂತ ಗುಲ್ಬರ್ಗಾ ವಿಭಾಗದಲ್ಲಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ಹೆಚ್ಚಾಗಿರುವುದು ತಿಳಿಯುತ್ತದೆ. ಅಲ್ಲದೇ ಬೆಳಗಾವಿ ವಿಭಾಗದಲ್ಲಿ ಸಾಪೇಕ್ಷವಾಗಿ ಅಭಿವೃದ್ಧಿಯಾದ ೪೦ ತಾಲ್ಲೂಕುಗಳಿದ್ದರೆ ಗುಲ್ಬರ್ಗಾ ವಿಭಾಗದಲ್ಲಿ ಕೇವಲ ೧೩ ಇರುವುದು ಕೂಡ ಗೋಚರಿಸುತ್ತದೆ. ಆದ್ದರಿಂದ ಉತ್ತರ ಕರ್ನಾಟಕದ ಎರಡು ವಿಭಾಗಗಳ ಪೈಕಿ ಬೆಳಗಾವಿ ವಿಭಾಗಕ್ಕಿಂತ ಗುಲ್ಬರ್ಗಾ ವಿಭಾಗವೇ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ಹೆಚ್ಚಿನ ತಾಲ್ಲೂಕುಗಳನ್ನು ಹೊಂದಿದೆ ಎಂಬುದು ಸ್ಪಷ್ಟ.

೧೯೯೯ ಮತ್ತು ೨೦೦೫ರ ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೧ರ ಜನಗಣತಿ ವರದಿ ಹಾಗೂ ಪ್ರಾದೇಶಿಕ ಅಸಮಾನತೆಯ ಉನ್ನತಾಧಿಕಾರ ಸಮಿತಿಯ ವರದಿಗಳ ಹಿನ್ನೆಲೆಯಲ್ಲಿ ತಿಳಿದುಬರುವ ಪ್ರಮುಖ ಅಂಶವೆಂದರೆ ಕರ್ನಾಟಕದಲ್ಲಿ ಹೆಚ್ಚು ಹಿಂದುಳಿದಿರುವ ತಾಲೂಕುಗಳು ಹೆಚ್ಚಾಗಿರುವ ಪ್ರದೇಶ ಗುಲ್ಬರ್ಗಾ ವಿಭಾಗವೆಂದು ಸ್ಪಷ್ಟವಾಗಿದೆ. ಈ ಗುಲ್ಬರ್ಗಾ ವಿಭಾಗದಲ್ಲಿ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಕಾರಣದಿಂದ ರಾಜ್ಯದ ಆದಾಯದಲ್ಲಿ ಮೊದಲ ಒಂಬತ್ತನೇ ಸ್ಥಾನದಲ್ಲಿ ಇದ್ದರೆ ಶಿಕ್ಷಣದಲ್ಲಿ ೨೩ನೇ ಸ್ಥಾನದಲ್ಲಿದ್ದು ಅತ್ಯಂತ ಹಿಂದುಳಿದಿರುವುದು ತಿಳಿದುಬರುತ್ತದೆ. ಏಕೆ ಶಿಕ್ಷಣದಲ್ಲಿ ಹಿಂದುಳಿದಿದೆ ಎಂಬ ಕುತೂಹಲದಲ್ಲಿ ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಶೈಕ್ಷಣಿಕ ಸೂಚ್ಯಂಕವನ್ನು ಬಳ್ಳಾರಿ ಜಿಲ್ಲೆಗೆ ಇಡಿಯಾಗಿ ಅನ್ವಯಿಸಿ ನೋಡಿದಾಗ ಗುಲ್ಬರ್ಗ ವಿಭಾಗದಲ್ಲಿ ಬಳ್ಳಾರಿ ಜಿಲ್ಲೆ ಸ್ವಲ್ಪಮಟ್ಟಿಗೆ ಸುಧಾರಿಸಿರುವ ಜಿಲ್ಲೆಯಾಗಿ ಕಂಡುಬರುತ್ತದೆ. ಈ ಅಂಶವನ್ನು ಸೂಕ್ಷ್ಮವಾಗಿ ಗಮನಿಸಲು ಬಳ್ಳಾರಿ ಜಿಲ್ಲೆಯನ್ನು ತಾಲೂಕುಗಳಾಗಿ ವಿಂಗಡಿಸಿದಾಗ ಬಳ್ಳಾರಿ ಜಿಲ್ಲೆಯಲ್ಲಿರುವ ಏಳು ತಾಲೂಕುಗಳಲ್ಲಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿರುವ ಒಂದು ತಾಲೂಕು ಸಿರುಗುಪ್ಪ ಮತ್ತು ಸ್ವಲ್ಪ ಹಿಂದುಳಿದಿರುವ ತಾಲೂಕು ಸಂಡೂರು. ಉಳಿದ ಐದು ತಾಲೂಕುಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿರುತ್ತವೆ. ಶಿಕ್ಷಣದ ಮೂಲಸೌಲಭ್ಯದ ಸೂಚ್ಯಂಕದ ಪ್ರಕಾರ (ಎಚ್.ಡಿ. ಪ್ರಶಾಂತ, ೨೦೦೫) ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿ, ನೀರಾವರಿ ಸೌಲಭ್ಯವಿರುವ ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಭಾಗದ ನಂ. ೧೦. ಮುದ್ದಾಪುರ ಗ್ರಾಮ ಪಂಚಾಯಿತಿಗೆ ಸೇರಿದ ಎಲ್ಲಾ ಗ್ರಾಮ ಮತ್ತು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ, ಮಳೆಯಾಶ್ರಿತ ಪ್ರದೇಶದ ಕೂಡ್ಲಿಗಿ ತಾಲ್ಲೂಕಿನ ಹೊಸಹಳ್ಳಿ ಭಾಗದ ಆಲೂರು ಗ್ರಾಮ ಪಂಚಾಯತಿಗೆ ಸೇರಿದ ಎಲ್ಲಾ ಗ್ರಾಮಗಳನ್ನು ಅಧ್ಯಯನ ಕ್ಷೇತ್ರದ ವ್ಯಾಪ್ತಿಯನ್ನಾಗಿಸಿಕೊಳ್ಳಲಾಗಿದೆ. ಹಾಗಾಗಿ ಬಳ್ಳಾರಿ ಜಿಲ್ಲೆಯನ್ನು ಅಧ್ಯಯನ ಕ್ಷೇತ್ರವೆಂದು ಪರಿಗಣಿಸಲಾಗಿದೆ.

ಕೋಷ್ಟಕ-೧.೩

ಕರ್ನಾಟಕ ಮಾನವ ಅಭಿವೃದ್ಧಿ ವರದಿ–೨೦೦೫

ಕ್ರ.ಸಂ.		ಆರೋಗ್ಯ		ಶಿಕ್ಷಣ		ಆದಾಯ		ಮಾನವ ಅಭಿವೃದ್ಧಿ	
		ಸೂಚಿ	ಸ್ಥಾನ	ಸೂಚಿ	ಸ್ಥಾನ	ಸೂಚಿ	ಸ್ಥಾನ	ಸೂಚಿ	ಸ್ಥಾನ
೦೧.	ಬಾಗಲಕೋಟೆ	೦.೫೯೭	೨೭	೦.೩೬೩	೨೨	೦.೫೩೯	೧೨	೦.೫೯೧	೨೨
೦೨.	ಬೆಂಗಳೂರು ಗ್ರಾ	೦.೬೯೨	೬	೦.೬೬೨	೨೦	೦.೬೦೫	೪	೦.೬೫೩	೬
೦೩.	ಬೆಂಗಳೂರು ನ	೦.೭೦೫	೫	೦.೮೮೭	೧	೦.೬೬೬	೧	೦.೭೫೩	೧
೦೪.	ಬೆಳಗಾವಿ	೦.೭೧೨	೨	೦.೬೯೯	೧೫	೦.೫೩೨	೧೩	೦.೬೪೮	೮
೦೫.	ಬಳ್ಳಾರಿ	೦.೬೮೫	೭	೦.೬೧೮	೨೩	೦.೫೪೯	೯	೦.೬೧೮	೧೮
೦೬.	ಬೀದರ	೦.೬೩೮	೧೭	೦.೬೮೯	೧೭	೦.೪೭೦	೨೬	೦.೫೯೯	೨೧
೦೭.	ಬಿಜಾಪುರ	೦.೬೨೭	೨೪	೦.೬೪೨	೨೧	೦.೪೯೯	೨೩	೦.೫೮೯	೨೩
೦೮.	ಚಾಮರಾಜನಗರ	೦.೬೪೨	೧೫	೦.೫೭೦	೨೬	೦.೫೧೮	೧೭	೦.೫೭೬	೨೫
೦೯.	ಚಿಕ್ಕಮಗಳೂರು	೦.೬೩೭	೧೯	೦.೭೪೨	೯	೦.೫೬೩	೬	೦.೬೪೭	೯
೧೦.	ಚಿತ್ರದುರ್ಗ	೦.೬೬೦	೧೨	೦.೭೦೪	೧೪	೦.೫೧೭	೧೮	೦.೬೨೭	೧೬
೧೧.	ದಕ್ಷಿಣ ಕನ್ನಡ	೦.೭೦೭	೩	೦.೮೨೩	೪	೦.೬೩೬	೨	೦.೭೨೨	೨
೧೨.	ದಾವಣಗೆರೆ	೦.೬೮೦	೮	೦.೭೧೧	೧೩	೦.೫೧೫	೧೯	೦.೬೩೫	೧೨

೧೩.	ಧಾರವಾಡ	೦.೬೧೫	೨೬	೦.೭೫೮	೭	೦.೫೫೩	೮	೦.೬೪೨	೧೦
೧೪.	ಗದಗ	೦.೬೨೮	೨೩	೦.೭೫೦	೮	೦.೫೨೫	೧೫	೦.೬೩೪	೧೩
೧೫.	ಗುಲ್ಬರ್ಗಾ	೦.೬೩೨	೨೦	೦.೫೭೨	೨೫	೦.೪೯೦	೨೫	೦.೫೬೪	೨೬
೧೬.	ಹಾಸನ	೦.೬೭೦	೧೦	೦.೭೨೯	೧೦	೦.೫೧೯	೧೬	೦.೬೩೯	೧೧
೧೭.	ಹಾವೇರಿ	೦.೬೨೦	೨೫	೦.೬೯೯	೧೬	೦.೪೧೯	೨೪	೦.೬೦೩	೨೦
೧೮.	ಕೊಡಗು	೦.೬೩೮	೧೮	೦.೮೩೩	೩	೦.೬೨೧	೩	೦.೬೯೭	೪
೧೯.	ಕೋಲಾರ	೦.೬೫೩	೧೩	೦.೭೧೩	೧೨	೦.೫೦೮	೨೧	೦.೬೨೫	೧೭
೨೦.	ಕೊಪ್ಪಳ	೦.೬೪೨	೧೬	೦.೫೭೬	೨೪	೦.೫೨೯	೧೪	೦.೫೮೨	೨೪
೨೧.	ಮಂಡ್ಯ	೦.೬೩೬	೨೧	೦.೬೮೨	೧೮	೦.೫೧೩	೨೦	೦.೬೦೯	೧೯
೨೨.	ಮೈಸೂರು	೦.೬೬೩	೧೧	೦.೬೬೯	೧೯	೦.೫೬೧	೭	೦.೬೩೧	೧೪
೨೩.	ರಾಯಚೂರು	೦.೬೪೮	೧೪	೦.೫೨೪	೨೭	೦.೪೬೯	೨೭	೦.೫೪೭	೨೭
೨೪.	ಶಿವಮೊಗ್ಗ	೦.೭೦೭	೪	೦.೭೬೬	೬	೦.೫೪೭	೧೦	೦.೬೭೩	೫
೨೫.	ತುಮಕೂರು	೦.೬೭೨	೯	೦.೭೧೪	೧೧	೦.೫೦೫	೨೨	೦.೬೩೦	೧೫
೨೬.	ಉಡುಪಿ	೦.೭೧೩	೧	೦.೮೪೨	೨	೦.೫೮೮	೫	೦.೭೧೪	೩
೨೭.	ಉತ್ತರಕನ್ನಡ	೦.೬೩೨	೨೨	೦.೭೮೧	೫	೦.೫೪೬	೧೧	೦.೬೫೩	೭
	ಕರ್ನಾಟಕದ ಸರಾಸರಿ	**೦.೬೮೦**		**೦.೭೧೨**		**೦.೫೫೯**		**೦.೬೫೦**	

ಮೂಲ : ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫, ಯೋಜನಾ ಇಲಾಖೆ, ಬೆಂಗಳೂರು.

ಅಧ್ಯಯನ ಕ್ಷೇತ್ರ ಶೈಕ್ಷಣಿಕವಾಗಿ ಅಭಿವೃದ್ಧಿಯಾದ ತಾಲ್ಲೂಕುಗಳಲ್ಲಿದ್ದರೂ ನೀರಾವರಿ ಪ್ರದೇಶ ಮತ್ತು ಮಳೆಯಾಶ್ರಿತ ಪ್ರದೇಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಅಧ್ಯಯನ ಕ್ಷೇತ್ರದ ಎರಡು ಗ್ರಾಮಪಂಚಾಯತಿಗಳ ವಿವರಗಳನ್ನು ೨ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

೧.೭. ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಅಧ್ಯಯನ ಕ್ಷೇತ್ರದ ದಲಿತರ ಶೈಕ್ಷಣಿಕ ಸ್ಥಿತಿ-ಗತಿಗಳ ಒಳನೋಟಗಳನ್ನು ತಿಳಿಸುತ್ತದೆ. ಅದೇ ರೀತಿಯಾಗಿ ದಲಿತರ ಸಾಮಾಜಿಕ-ಆರ್ಥಿಕ ಸ್ಥಿತಿ-ಗತಿಗೆ ತಕ್ಕಂತೆ ಪ್ರತ್ಯೇಕವಾಗಿ ಶಿಕ್ಷಣದ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸಹಕಾರಿಯಾಗುತ್ತದೆ. ಅಲ್ಲದೆ ಶಿಕ್ಷಣ ಇಲಾಖೆಗೆ ಅಗತ್ಯವಾದ ಉಪಯುಕ್ತ ಮಾಹಿತಿಗಳು ಅಧ್ಯಯನದಿಂದ ಲಭ್ಯವಾಗುತ್ತವೆ. ಅಂತಿಮವಾಗಿ ಶೈಕ್ಷಣಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಸಮಾಜದ ಅಂಚಿನ ಸಮುದಾಯಗಳ ಶೈಕ್ಷಣಿಕ ಕಾರ್ಯಕ್ರಮಗಳ ರಚನೆಗೆ ಪ್ರಸ್ತುತ ಅಧ್ಯಯನವು ನೆರವಾಗಬಹುದು.

೧.೮. ಅಧ್ಯಯನದ ಮಿತಿ

ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಸೀಮಿತಗೊಂಡಿರುವುದು ಪ್ರಸ್ತುತ ಅಧ್ಯಯನದ ಮಿತಿಯಾಗಿದೆ. ನೀರಾವರಿ ಪ್ರದೇಶದ ಒಂದು ಗ್ರಾಮ ಪಂಚಾಯಿತಿ ಮತ್ತು ಮಳೆಯಾಶ್ರಿತ ಪ್ರದೇಶದ ಇನ್ನೊಂದು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಶಾಲೆಗಳನ್ನು ಅಧ್ಯಯನಕ್ಕೊಳಪಡಿಸಿರುವುದು ಅಧ್ಯಯನದ ಇನ್ನೊಂದು ಮಿತಿಯಾಗಿರುತ್ತದೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯವನ್ನು ೨೦೦೬ ಮಾರ್ಚ್‌ನಿಂದ ೨೦೦೯ರ ಮಾರ್ಚ್‌ವರೆಗೆ ನಡೆಸಲಾಗಿದೆ. ಇದು ಕೂಡ ಅಧ್ಯಯನ ಒಂದು ಮಿತಿ.

೧.೯. ಕ್ಷೇತ್ರಕಾರ್ಯದ ಅನುಭವ

ಆಯ್ಕೆ ಮಾಡಿಕೊಂಡ ಅಧ್ಯಯನ ಕ್ಷೇತ್ರದ ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಭಾಗದ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ಮತ್ತು ಕೂಡ್ಲಿಗಿ ತಾಲ್ಲೂಕಿನ ಹೊಸಹಳ್ಳಿ ಭಾಗದ ಆಲೂರು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಮಾಡಲಾಗಿದೆ. ನಿರ್ದಿಷ್ಟವಾಗಿ ಈ ಎರಡು ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಒಟ್ಟು ೨೦೦ ದಲಿತ ಕುಟುಂಬಗಳ ಪೋಷಕರನ್ನು ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಲಾಗಿದೆ. ಅದರಂತೆ ಸದರಿ ಗ್ರಾಮಪಂಚಾಯಿತಿ ವ್ಯಾಪ್ತಿಗೊಳಪಡುವ ಶಾಲೆಗಳ ಶಿಕ್ಷಕರು ಮತ್ತು ಗ್ರಾಮಪಂಚಾಯತಿಯ ಸದಸ್ಯರನ್ನು ಕೂಡ ಪ್ರಶ್ನಾವಳಿ ಮೂಲಕ ಸಂದರ್ಶನ ಮಾಡಲಾಗಿದೆ. ಹೀಗೆ ಮಾಡಲಾದ ಕ್ಷೇತ್ರಕಾರ್ಯದ ಸಂದರ್ಶನದಿಂದ ಲಭಿಸಿದ ಅನುಭವ ಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಮೊದಲನೆಯದಾಗಿ ದಲಿತ ಪೋಷಕರಿಂದಾದ ಅನುಭವ ಪ್ರಮುಖವಾಗಿರುತ್ತದೆ. ದಲಿತ ಪೋಷಕರನ್ನು ಸಂದರ್ಶಿಸಿ ಪ್ರಶ್ನಾವಳಿಯಲ್ಲಿನ ಮಾಹಿತಿ ಪಡೆಯುವಾಗ ಅವರಲ್ಲಿ ಉತ್ಸಾಹ ಮತ್ತು

ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿತ್ತು. ಸಂದರ್ಶನದ ವೇಳೆಯಲ್ಲಿ ದಲಿತ ಪೋಷಕರು ಸ್ವಯಂ ಸಿದ್ಧರಾಗಿ ಮಾಹಿತಿಗಳನ್ನು ನೀಡುತ್ತಿರುವಾಗ ಅವರ ಮನಸ್ಸಿನಲ್ಲಿ ಇದರಿಂದ ಕೆಲವೊಂದು ಪ್ರಯೋಜನಗಳು ನಮಗೆ ಸಿಗಬಹುದು ಎಂದು ಕೆಲವರು ತಮ್ಮ ನೀರಿಕ್ಷೆಗಳನ್ನು ವ್ಯಕ್ತ ಪಡಿಸುತ್ತಿದ್ದರೆ, ಮತ್ತೆ ಕೆಲವರು ವ್ಯಕ್ತಪಡಿಸುತ್ತಿರಲಿಲ್ಲ. ಇನ್ನು ಕೆಲವು ದಲಿತ ಪೋಷಕರು ಸರ್ಕಾರದ ಸೌಲಭ್ಯಗಳು ಲಭ್ಯವಾಗದಿರುವುದರ ಬಗ್ಗೆ ಆರೋಪಿಸುತ್ತಿದ್ದಾರೆ. ಕೆಲವರು ಸೌಲಭ್ಯಗಳಿಗಾಗಿ ನಮ್ಮನ್ನೇ ಆಗ್ರಹಿಸುತ್ತಿದ್ದಾಗ ಅವರನ್ನು ನಿಭಾಯಿಸುವುದು ಕಷ್ಟವಾಯಿತು. ಆದರೆ ಅವರು ಹೆಚ್ಚು ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದುದು ವಿಶೇಷವಾಗಿ ಕಂಡುಬಂತು. ಇವೆಲ್ಲವುಗಳ ಜೊತೆಯಲ್ಲಿ ಯಾರಿಗೆ ಏನು ಹೇಳಿದರೂ ತಮ್ಮ ಕಷ್ಟಗಳು ತೀರುವುದಿಲ್ಲವೆಂಬ ನಿರುತ್ಸಾಹದ ಮಾತುಗಳು ಕೆಲವು ದಲಿತ ಪೋಷ ಕರಿಂದ ಕೇಳಿ ಬಂದರೂ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ವಿಶೇಷವಾದ ಕಾಳಜಿ ಎದ್ದು ಕಾಣುತ್ತಿತ್ತು.

ಎರಡನೆಯದಾಗಿ ಶಿಕ್ಷಕರಿಂದಾದ ಅನುಭವವೆಂದರೆ, ಕೆಲವು ಶಿಕ್ಷಕರು ದಲಿತ ಮಕ್ಕಳು ಮತ್ತು ದಲಿತ ಪೋಷಕರನ್ನು ದೂಷಣೆ ಮಾಡುತ್ತಿದ್ದರೆ, ಮತ್ತೆ ಕೆಲವರು ಎಲ್ಲಾ ವಿಷಯವನ್ನು ಮುಚ್ಚಿಟ್ಟು ದಲಿತ ಮಕ್ಕಳು ಸರಿಯಾಗಿ ಶಾಲೆಗೆ ಬರುತ್ತಾರೆಂಬ ಜಾಣತನ ತೋರಿಸುತ್ತಿದ್ದ ಅನುಭವವಾಗಿದೆ. ಕೆಲವು ಶಿಕ್ಷಕರು ದಲಿತ ಮಕ್ಕಳ ಶಿಕ್ಷಣದ ಸುಧಾರಣೆಗೆ ಬಿಗಿಪಟ್ಟಿನ ಸಲಹೆಗಳನ್ನು ನೀಡಿದರೆ ಮತ್ತೆ ಕೆಲವರು ಕಾಟಾಚಾರಕ್ಕೆ ಮಾಹಿತಿ ನೀಡಿದ್ದಾರೆ ಎನಿಸಿದೆ. ವಿಶೇಷವಾಗಿ ದಲಿತ ಜಾತಿಯ ಶಿಕ್ಷಕರು ದಲಿತ ಮಕ್ಕಳ ಪ್ರಸ್ತುತ ಶೈಕ್ಷಣಿಕ ಸ್ಥಿತಿಯನ್ನು ಹಿಂದಿನ ಶೈಕ್ಷಣಿಕ ಸ್ಥಿತಿಗೆ ಹೋಲಿಕೆ ಮಾಡುತ್ತಾ ಸಮಾಧಾನ ಪಡುತ್ತಾರೆ. ಆದರೆ ಇದೇ ದಲಿತ ಮಕ್ಕಳ ಪ್ರಸ್ತುತ ಶೈಕ್ಷಣಿಕ ಸ್ಥಿತಿಯನ್ನು ಬೇರೆ ಜಾತಿಯ ಮಕ್ಕಳ ಸದ್ಯದ ಶೈಕ್ಷಣಿಕ ಸ್ಥಿತಿಯ ಜೊತೆಗೆ ಹೋಲಿಸಿ ನೋಡುತ್ತಾ ಅತೃಪ್ತರಾಗುತ್ತಾರೆ. ಆದರೂ ಕೂಡ ದಲಿತ ಮಕ್ಕಳ ಪ್ರಸ್ತುತ ಶೈಕ್ಷಣಿಕ ಸ್ಥಿತಿ-ಗತಿಗಳನ್ನು ಸುಧಾರಿಸುವಂತಹ ಅದಮ್ಯವಾದ ಆಸಕ್ತಿ ಮತ್ತು ಕಾಳಜಿಗಳನ್ನು ದಲಿತ ಜಾತಿಯ ಶಿಕ್ಷಕರು ವ್ಯಕ್ತಪಡಿಸುತ್ತಾರೆ. ಇದನ್ನು ಗಮನಿಸಿದರೆ ಸಜಾತಿಯ ಅಭಿಮಾನ ಮತ್ತು ಆಕರ್ಷಣೆಗಳಿಂದ ದಲಿತ ಜಾತಿಯ ಶಿಕ್ಷಕರು ಈ ರೀತಿಯಾಗಿ ಹೇಳುತ್ತಿದ್ದಾರೆ ಎನಿಸುವುದಿಲ್ಲ.

ಮೂರನೆಯದಾಗಿ ಜನಪ್ರತಿನಿಧಿಗಳಿಂದಾದ ಅನುಭವವನ್ನು ಹೇಳಬೇಕಾಗುತ್ತದೆ. ದಲಿತ ವರ್ಗದ ಜನ ಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯನ್ನು ಕುರಿತಾಗಿ ಅಸಮಾಧಾನ ಮತ್ತು ಅತೃಪ್ತಿ ಗಳನ್ನು ವ್ಯಕ್ತಪಡಿಸುತ್ತಾರೆ. ಇದರ ಜೊತೆಯಲ್ಲಿಯೇ ದಲಿತರ ಶಿಕ್ಷಣ ಸ್ಥಿತಿಯನ್ನು ಸುಧಾರಿಸುವಂತಹ ಭರವಸೆಗಳು ಕಂಡುಬಂದರೂ ಶೀಘ್ರವಾಗಿ ಪರಿಹಾರ ಲಭಿಸುವುದಿಲ್ಲವೆಂಬ ಅಸಹಾಯಕತೆಯೂ ಎದ್ದು ಕಾಣುತ್ತದೆ. ಆದರೆ ಬೇರೆ ಜಾತಿಯ ಜನಪ್ರತಿನಿಧಿಗಳು ದಲಿತ ಮಕ್ಕಳ ಶೈಕ್ಷಣಿಕ ಸ್ಥಿತಿಯ ವಿಷಯ ದಲ್ಲಿ ವಿಭಿನ್ನ ಅಭಿಪ್ರಾಯಗಳನ್ನು ಹೇಳುತ್ತಾರೆ. ಕೆಲವು ಜನಪ್ರತಿನಿಧಿಗಳು ದಲಿತ ಮಕ್ಕಳಿಗೆ ಉತ್ತಮ ಸೌಲಭ್ಯಗಳು ಸಿಗುವುದರಿಂದ ಅವರ ಶಿಕ್ಷಣದ ಸ್ಥಿತಿ ಚೆನ್ನಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸು

ತ್ತಾರೆ. ಮತ್ತೆ ಕೆಲವು ಜನಪ್ರತಿನಿಧಿಗಳು ದಲಿತ ಮಕ್ಕಳಿಗೆ ಲಭ್ಯವಾಗುವಂತಹ ಸೌಲಭ್ಯಗಳು ತಮ್ಮ ಮಕ್ಕಳಿಗೆ ಲಭ್ಯವಿದ್ದರೆ ಇನ್ನಷ್ಟು ಚೆನ್ನಾಗಿರುತ್ತಿತ್ತು ಎನ್ನುತ್ತಾರೆ. ಇನ್ನೂ ಕೆಲವು ಜನ ಪ್ರತಿನಿಧಿಗಳು ದಲಿತ ಮಕ್ಕಳಿಗೆ ಏನೆಲ್ಲಾ ಸೌಲಭ್ಯ ಮತ್ತು ಸಹಾಯಗಳನ್ನು ನೀಡಿದರೂ ಅವುಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳುವುದಿಲ್ಲವೆಂಬ ಆರೋಪಿತ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

೧.೧೦. ಅಧ್ಯಯನದ ವಿನ್ಯಾಸ

ಪ್ರಸ್ತುತ ಮಹಾಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳಿವೆ. ಪ್ರಥಮ ಅಧ್ಯಾಯದಲ್ಲಿ ಅಧ್ಯಯನ ವಿಷಯದ ಪ್ರಸ್ತಾವನೆ, ಅಧ್ಯಯನದ ಸಮಸ್ಯೆ, ಇದುವರೆಗೆ ಮಾಡಲಾಗಿರುವ ಅಧ್ಯಯನಗಳ ಸಮೀಕ್ಷೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವ, ಅಧ್ಯಯನದ ಮಿತಿ ಮತ್ತು ಕ್ಷೇತ್ರ ಕಾರ್ಯದ ಅನುಭವಗಳನ್ನು ವಿವರಿಸಿದೆ.

ಎರಡನೆಯ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರದ ಪರಿಚಯವನ್ನು ದಾಖಲಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ ಅಂಶಗಳು ಮತ್ತು ಹವಾಮಾನ, ಜನಸಂಖ್ಯೆ ಮತ್ತು ಜನಸಾಂದ್ರತೆ, ಆಡಳಿತ ವ್ಯವಸ್ಥೆ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ, ರಾಜಕೀಯ ಸ್ಥಿತಿ ಹಾಗೂ ಶೈಕ್ಷಣಿಕ ಸ್ಥಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರದ ದಲಿತರ ಸ್ಥಿತಿ-ಗತಿಗಳ ಮಾಹಿತಿ ಇದೆ. ಅಧ್ಯಯನ ಕ್ಷೇತ್ರದಲ್ಲಿರುವ ದಲಿತರ ಜನಸಂಖ್ಯೆ, ಅವರ ವೈವಾಹಿಕ ಸ್ಥಿತಿ, ದಲಿತರ ಶೈಕ್ಷಣಿಕ ಮಟ್ಟ, ಉದ್ಯೋಗದ ಸ್ಥಿತಿ, ಆದಾಯದ ಪ್ರಮಾಣ ಇತ್ಯಾದಿಯಾದ ಮೂಲಮಾಹಿತಿಗಳ ವಿವರಣೆಗಳು ಇರುತ್ತವೆ.

ನಾಲ್ಕನೆಯ ಅಧ್ಯಾಯದಲ್ಲಿ ದಲಿತರ ಶೈಕ್ಷಣಿಕ ಪರಿಸರದ ಬಗ್ಗೆ ಸಮೀಕ್ಷೆ ಮಾಡಲಾಗಿದೆ. ದಲಿತರ ಸಾಕ್ಷರತಾ ಪ್ರಮಾಣ, ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು (ಕಾರ್ಯಕ್ರಮಗಳು), ಶೈಕ್ಷಣಿಕ ಸೌಲಭ್ಯದ ವಿಷಯದಲ್ಲಿ ದಲಿತ ಪೋಷಕರ ತಿಳುವಳಿಕೆ, ಲಭ್ಯವಿರುವಂತಹ ಶಿಕ್ಷಣ ಸೌಲಭ್ಯಗಳು, ದಲಿತ ಪೋಷಕರಿಗೆ ತೃಪ್ತಿಯೇ? ಅಥವಾ ಇಲ್ಲವೇ? ಎಂಬಂತಹ ಅಂಶಗಳೊಂದಿಗೆ ಸಾಮಾಜಿಕ ಅಭಿಪ್ರಾಯಗಳ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ದಲಿತರ ಶೈಕ್ಷಣಿಕ ಮನೋಪ್ರವೃತ್ತಿ ಮತ್ತು ಶಾಲಾ ಭಾಗವಹಿಸುವಿಕೆಗಳನ್ನು ಕುರಿತು ಚರ್ಚಿಸಲಾಗಿದೆ. ದಲಿತರ ನೆಲೆಯಲ್ಲಿ ಶೈಕ್ಷಣಿಕ ಮನೋಪ್ರವೃತ್ತಿ, ಗಂಡುಮಕ್ಕಳ ಶಿಕ್ಷಣ ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಇರುವ ಅಭಿಪ್ರಾಯವೇನು? ಶಿಕ್ಷಣ-ವಿವಾಹ ಮತ್ತು ಜಾತಿಗಳ ನಡುವಿನ ಸಂಬಂಧ, ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು, ಪ್ರೇರಕಾಂಶಗಳ ಪ್ರಭಾವ, ಶಿಕ್ಷಣದ ಆಸಕ್ತಿ, ಪ್ರಾಥಮಿಕ ಶಿಕ್ಷಣದ ಖಾಸಗಿ ವೆಚ್ಚ, ದಲಿತರಿಗೆ ದೊರಕುವ ಶಾಲಾ ಸೌಲಭ್ಯಗಳನ್ನು ಕುರಿತು ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ದಲಿತರ ಸಮಾಜೋರ್ಥಿಕ ಸ್ಥಿತಿ ಮತ್ತು ಮಕ್ಕಳ ಶಿಕ್ಷಣವನ್ನು ಕುರಿತು ವಿವರಿಸಲಾಗಿದೆ. ದಲಿತರ ಸಾಮಾಜಿಕ ಸನ್ನಿವೇಶ, ದಲಿತರ ಆರ್ಥಿಕ ಸ್ಥಿತಿ, ದಲಿತರ ರಾಜಕೀಯ ಸ್ಥಿತಿ ಮತ್ತು ದಲಿತ ಮಕ್ಕಳ ಶಾಲಾ ಶಿಕ್ಷಣವನ್ನು ವಿವರಿಸಲಾಗಿದೆ.

ಅಧ್ಯಾಯ ಏಳರಲ್ಲಿ ದಲಿತರ ಶೈಕ್ಷಣಿಕ ಪರಿಸ್ಥಿತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ, ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದೇಕೆ? ಬಡತನವು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಅಡ್ಡಿಯಾಗುವುದೇ? ಶಿಕ್ಷಕರ ಮನೋಪ್ರವೃತ್ತಿ ಮತ್ತು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಹೇಗಿದೆ? ಎಂಬ ಅಂಶಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳನ್ನು ವಿವರಿಸುವುದರೊಂದಿಗೆ ಸಮಾರೋಪ ಮಾಡಲಾಗಿದೆ.

ಕೊನೆಟಿಪ್ಪಣಿಗಳು

೧. 'ದಲಿತರು' ಎಂಬ ಪದದ ವ್ಯಾಖ್ಯಾನ ವೈಶಾಲ್ಯವಾಗಿದ್ದರೂ ಸರ್ಕಾರಿ ದಾಖಲೆಗಳಲ್ಲಿ ಪರಿಶಿಷ್ಟ ಜಾತಿಗೆ ಸೆರಿದ ಮಾದರಿಯಲ್ಲಿ ಮಾಹಿತಿಗಳು ಲಭ್ಯವಾಗಿರುವುದರಿಂದ ಪರಿಶಿಷ್ಟ ಜಾತಿಗೆ ಸೇರಿದ ಎಲ್ಲಾ ಜಾತಿ ವರ್ಗದ ಜನರನ್ನು ಪ್ರಸ್ತುತ ಅಧ್ಯಯನದಲ್ಲಿ 'ದಲಿತರು' ಎಂಬ ಸೀಮಿತ ಅರ್ಥದಲ್ಲಿ ಪರಿಭಾವಿಸಿಕೊಳ್ಳಲಾಗಿದೆ.

೨. ಶೈಕ್ಷಣಿಕ ಪರಿಸರ : ಅಧ್ಯಯನ ಕ್ಷೇತ್ರದ ದಲಿತರ ಸಾಕ್ಷರತೆ ಪ್ರಮಾಣ, ಶಿಕ್ಷಣ, ಶಾಲಾ ಭಾಗವಹಿಸುವಿಕೆ, ಶಾಲೆಯ ದಾಖಲಾತಿ-ಹಾಜರಾತಿ, ದಲಿತ ಪೋಷಕರ ಮನೋಪ್ರವೃತ್ತಿ ಇತ್ಯಾದಿ ಗಳನ್ನೊಳಗೊಂಡ ಪರಿಸರವನ್ನು 'ಶೈಕ್ಷಣಿಕ ಪರಿಸರ' ಎಂದು ಪರಿಭಾವಿಸಲಾಗಿದೆ.

೩. ಪರಿಸ್ಥಿತಿ : ಅಧ್ಯಯನ ಕ್ಷೇತ್ರದ ದಲಿತರ ಕೌಟುಂಬಿಕ ಸ್ಥಿತಿ, ಸಾಮಾಜಿಕ ಸ್ಥಾನಮಾನ, ಆರ್ಥಿಕ ಸ್ಥಿತಿಗತಿಗಳು, ಧಾರ್ಮಿಕ ಆಚರಣೆಗಳು, ರಾಜಕೀಯ ಪರಿಜ್ಞಾನ ಇತ್ಯಾದಿಗಳನ್ನೊಳಗೊಂಡ ಸ್ಥಿತಿಯನ್ನು 'ಪರಿಸ್ಥಿತಿ' ಎಂಬುದಾಗಿ ಪರಿಭಾವಿಸಲಾಗಿದೆ.

ಗ್ರಂಥಸೂಚಿ

೧. ಅಖಿಲ ಆರ್., (೨೦೦೫), *ರೀಚಿಂಗ್ ಗ್ಲೋಬಲ್ ಗೋಲ್ಸ್ ಇನ್ ಪ್ರೈಮರಿ ಎಜ್ಯುಕೇಶನ್*, ಸಮ್ ಜಂಡರ್ ಕನ್ಸರ್ನ್ ಫಾರ್ ತಮಿಳುನಾಡು, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೨. ಕರೂರ ಎಸ್.ಜಿ., (೨೦೦೩), ಶಿಕ್ಷಣ ಮಾರ್ಗ, ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

೩. ಗೋವಿಂದೇಗೌಡ ಎಚ್.ಜಿ., (೧೯೯೬), *ಸರ್ಕಾರಗಳ ರಾಜಕೀಯ ಬದ್ಧತೆ ಹಾಗೂ ಸಹಾಯ ಆಗ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯ*, ಯೋಜನಾ, ಅಭ್ಯುದಯ ಮಾಸಪತ್ರಿಕೆ (ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೪. ಗೋವಿಂದ ಆರ್., (೨೦೦೫), *ಭಾರತದಲ್ಲಿ ಸರ್ವರಿಗೂ ಪ್ರಾಥಮಿಕ ಶಿಕ್ಷಣ ಪ್ರಗತಿ ಮತ್ತು ಸವಾಲುಗಳು*, ಯೋಜನಾ, ಅಭ್ಯುದಯ ಮಾಸಪತ್ರಿಕೆ (ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೫. ಚಂದ್ರಪೂಜಾರಿ ಎಂ., (೨೦೦೫), **ಸಮಾಜ ಸಂಶೋಧನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬. ಚಂದ್ರಶೇಖರ್ ಟಿ.ಆರ್., (೨೦೦೮), **ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೭. ಚಂದ್ರಶೇಖರ್ ಟಿ.ಆರ್., (೨೦೦೫), *ಅಸ್ಪೃಶ್ಯತೆ ಆರ್ಥಿಕತೆ ಮತ್ತು ಅಭಿವೃದ್ಧಿ*, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೮. ಜನದ್ಯಾಲ ಬಿ.ಜಿ. ತಿಲಕ್, (೨೦೦೪), *ಎಜ್ಯುಕೇಷನ್ ಇನ್ ದ ಯು.ಪಿ.ಎ. ಗೌರ್ನಮೆಂಟ್ ಕಾಮನ್ ಮಿನಿಮಮ್ ಪ್ರೋಗ್ರಾಮ್*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಅಕ್ಟೋಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೯. ನಿರಂಕರ್ ಶ್ರೀವಾಸ್ತವ ಮತ್ತು ಅಮರೇಶ್ ದುಬೆ, (೨೦೦೭), *ಎಲಿಮೆಂಟರಿ ಎಜ್ಯುಕೇಶನ್ ಪಾವರ್ಟಿ ಅಂಡ್ ಜಂಡರ್ ಡಿಫರೆನ್ಸಿಯಲ್ಸ್ ಇನ್ ನಾರ್ತ್ ಈಸ್ಟ್ ಇಂಡಿಯಾ : ಸಮ್ ಇಶ್ಯೂಸ್, ಎಜ್ಯುಕೇಶನ್ ಪ್ಲಾನಿಂಗ್ ಅಂಡ್ ಅಡ್ಮನಿಸ್ಟ್ರೇಶನ್*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜುಲೈ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೦. ಪರ್ಜಾನ ಅಫ್ರಿದಿ, (೨೦೦೫). *ಮಿಡ್ ಡೇ ಮಿಲ್ಸ್ ಇನ್ ಟು ಸ್ಟೇಟ್ಸ್ ಕನ್‌ಫರ್‌ಮಿಂಗ್ ದ ಫೈನಾನ್ಸಿಯಲ್ ಇನ್‌ಸ್ಟಿಟೂಷನಲ್ ಆರ್ಗನೈಜೇಷನ್ ಆಫ್ ಪ್ರೋಗ್ರಾಮ್*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಏಪ್ರಿಲ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೧. ಪದ್ಮಾರಾಮಚಂದ್ರನ್ ಮತ್ತು ವಸಂತ ಕುಮಾರ್, (೨೦೦೫), ಎಜ್ಯುಕೇಶನ್ ಇನ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನ್ಯೂಡೆಲ್ಲಿ.

೧೨. ಪಾರ್ವತಮ್ಮ ಸಿ., (೨೦೦೨), ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೩. ಪ್ರಶಾಂತ್ ಎಚ್.ಡಿ., (೨೦೦೫), *ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೪. ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೫. ಪ್ರಶಾಂತ್ ಎಚ್.ಡಿ., (೨೦೦೬), ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ. ಕಾರ್ಯ ಕ್ಷಮತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೬. ಪ್ರಶಾಂತ್ ಎಚ್.ಡಿ., (೨೦೦೬), *ಹೈದ್ರಾಬಾದ್ ಕರ್ನಾಟಕದಲ್ಲಿ : ಶಾಲಾ ಶಿಕ್ಷಣ ಸಾರ್ವತ್ರೀಕರಣದ ಅನುಭವಗಳು,* ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ, ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ (ಆಗಸ್ಟ್), ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೭. ಮಧುಮಿತ ಬಂಡೋಪಾಧ್ಯಾಯ, (೨೦೦೬), *ಎಜ್ಯುಕೇಶನ್ ಆಫ್ ಮಾರ್ಜಿನಲೈಸ್ಡ್ ಗ್ರೂಪ್ ಇನ್ ಇಂಡಿಯಾ, ಸೋಷಿಯಲ್ ಚೇಂಜ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್ ಸಿಂಗ್ ರೋಡ್, ಮುಂಬೈ.

೧೮. ಮಧು ಎಸ್. ಪರಂಜಪೆ, (೨೦೦೭), *ಅನ್ ಈವನ್ ಡಿಸ್ಟ್ರಿಬ್ಯೂಶನ್ ಆಫ್ ಎಜ್ಯುಕೇಶನ್ ಇನ್ ಮಹಾರಾಷ್ಟ್ರ, ರೂರಲ್, ಅರ್ಬನ್, ಜಂಡರ್ ಅಂಡ್ ಕ್ಯಾಸ್ಟ್ ಇನ್ ಈಕ್ವಾಲಿಟೀಸ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜನವರಿ), ಹಿತಕಾರಿ ಹೌಸ್, ಶಾಹಿದ್ ಭಗತ್ ಸಿಂಗ್ ರೋಡ್, ಮುಂಬೈ.

೧೯. ರಜನಿಕಾಂತ್ ಎಂ.ಎಸ್., (೨೦೦೬), *ಮಕ್ಕಳ ಹಕ್ಕುಗಳು ಸ್ಥಿತಿಗತಿ,* ಯೋಜನಾ ಅಭ್ಯುದಯ ಮಾಸಪತ್ರಿಕೆ (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೨೦. ರತನ್ ಖಾಸ್ ನಬೀಸ್, ತಾನಿಯಾ ಚಟರ್ಜಿ, (೨೦೦೭), *ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಎಜ್ಯುಕೇಷನ್, ಎ ಫೀಲ್ಡ್ ಸರ್ವೇ ಇನ್ ಈಸ್ಟರ್ನ್ ಸ್ಲಮ್ಸ್ ಆಫ್ ಕೋಲ್ಕತ್ತಾ,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜೂನ್ ೨), ಹಿತಕಾರಿ ಹೌಸ್, ಶಾಹಿದ್ ಭಗತ್ ಸಿಂಗ್ ರೋಡ್, ಮುಂಬೈ.

೨೧. ವೆಂಕಟೇಶ್ ಟಿ., (೨೦೦೭), *ಸರ್ವರಿಗೂ ಶಿಕ್ಷಣ ಗುರಿ ಸಾಧನೆಗೆ ಐ.ಸಿ.ಟಿ.,* ಯೋಜನಾ ಅಭ್ಯುದಯ ಮಾಸಪತ್ರಿಕೆ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೨೨. ಶಾಂತಾ ಸಿನ್ಹ, ಕನ್ನಡಕ್ಕೆ ಜಿ.ಡಿ. ಪಾಟೀಲ, (೨೦೦೬), *ಶಾಲೆಗಳಿಗಾಗಿ ಸಮಗ್ರ ಶಿಕ್ಷಣ ಹಕ್ಕಿಗಾಗಿ ಬಡವರ ಹೋರಾಟ,* ಯೋಜನಾ ಅಭ್ಯುದಯ ಮಾಸಪತ್ರಿಕೆ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೨೩. ಸುಮಂಗಲಾ ಅತ್ತಿಗೇರಿ, (೨೦೦೭), **ಕೃಷಿ ಜಾನಪದ ಮತ್ತು ಮಹಿಳೆ,** ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೨೪. ಸೂರ್ಯನಾತ್ ಯು ಕಾಮತ್, (೧೯೮೬), **ಮೈಸೂರು ಗೆಜೆಟಿಯರ್ ಭಾಗ-೩,** ವಿ.ವಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು.

೨೫. ಹೆಗಡೆ ಡಿ.ವಿ., (೨೦೦೪), *ಮಕ್ಕಳ ಅಭಿವೃದ್ಧಿ ಎಲ್ಲರ ಹೊಣೆ,* ಯೋಜನಾ ಅಭ್ಯುದಯ ಮಾಸಪತ್ರಿಕೆ, (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೨೬. ಹಚೇಲ ಪಿ.ಡಿ., (೧೯೯೬), *ಸಾಮಾಜಿಕ ಏಳಿಗೆಗೆ ಸಾಧನವಾಗಿ ಶಿಕ್ಷಣ,* ಯೋಜನಾ ಅಭ್ಯುದಯ ಮಾಸಪತ್ರಿಕೆ (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

• • •

ಅಧ್ಯಾಯ-೨

ಅಧ್ಯಯನ ಕ್ಷೇತ್ರದ ಪರಿಚಯ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕು ಗ್ರಾಮಪಂಚಾಯತಿಗಳ ಕ್ಷೇತ್ರಕಾರ್ಯ ಮಾಡಿದ ನೆಲೆಗಳು



ಹೊಸಪೇಟೆ ತಾಲೂಕು ಗ್ರಾಮಪಂಚಾಯತಿ ಕ್ಷೇತ್ರಕಾರ್ಯ ಮಾಡಿದ ನೆಲೆಗಳು



*೧ – ನಂ.೧೦ ಮುದ್ದಾಪುರ
*೨ – ಬೆಳಗೋಡ್‌ಹಾಳ್
*೩– ಯಲ್ಲಮ್ಮಕ್ಯಾಂಪ್
*೪ – ಕಣವಿ ತಿಮ್ಮಲಾಪುರ

ಕೂಡ್ಲಿಗಿ ತಾಲೂಕು ಗ್ರಾಮಪಂಚಾಯತಿ ಕ್ಷೇತ್ರಕಾರ್ಯ ಮಾಡಿದ ನೆಲೆಗಳು



*೧ – ಆಲೂರು
*೨ – ಯಂಬಳೆ
*೩– ಕಾನಾಮಡುಗು
*೪ – ಕೆಂಚಮಲ್ಲನಹಳ್ಳಿ

ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಒಂದು ನಿರ್ದಿಷ್ಟ ಅಧ್ಯಯನ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಅಧ್ಯಯನ ಕ್ಷೇತ್ರದ ಆಯ್ಕೆ ಮಾಡಿಕೊಳ್ಳಲು ಈ ಕೆಳಗಿನ ವಿಧಾನವನ್ನು ಅನುಸರಿಸಲಾಯಿತು. ಅಧ್ಯಯನ ಕ್ಷೇತ್ರದ ಆಯ್ಕೆಯನ್ನು ಪ್ರಾದೇಶಿಕ ಅಸಮಾನತೆಯ ಉನ್ನತಾಧಿಕಾರ ಸಮಿತಿ ವರದಿ, ಶಿಕ್ಷಣದ ಮೂಲಸೌಲಭ್ಯದ ಸೂಚ್ಯಂಕ, ೧೯೯೯ರ ಕರ್ನಾಟಕ ಮಾನವ ಅಭಿವೃದ್ಧಿ ವರದಿ ಮತ್ತು ೨೦೦೧ರ ಜನಗಣತಿ ವರದಿ ಇತ್ಯಾದಿಗಳ ಹಿನ್ನೆಲೆ ಮತ್ತು ಆಧಾರದ ಮೇಲೆ ಮಾಡಲಾಯಿತು. ಪ್ರಾದೇಶಿಕ ಅಸಮಾನತೆಯ ಅಧ್ಯಯನ ಸಮಿತಿಯು ಕರ್ನಾಟಕ ರಾಜ್ಯದ ತಾಲ್ಲೂಕುಗಳನ್ನು ತುಲನಾತ್ಮಕವಾಗಿ ಅಭಿವೃದ್ಧಿ ಹೊಂದಿದ, ಹಿಂದುಳಿದ, ಸ್ವಲ್ಪ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದೆ. ಹೀಗೆ ಗುರುತಿಸಲು ಬಳಸಿಕೊಂಡ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು ೩೫ ಸೂಚ್ಯಂಕಗಳಲ್ಲಿ ಶಿಕ್ಷಣವು ಒಂದಾಗಿದೆ. ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿದ ಅಥವಾ ಹಿಂದುಳಿದ ಪ್ರದೇಶವನ್ನು ಆ ಪ್ರದೇಶದ ಒಟ್ಟು ಸಾಕ್ಷರತೆ (ಪುರುಷ ಮತ್ತು ಮಹಿಳೆಯರು ಪ್ರತ್ಯೇಕವಾಗಿ), ಮಕ್ಕಳು-ಶಿಕ್ಷಕರ ಪ್ರಮಾಣ, ಮಧ್ಯದಲ್ಲಿಯೇ ಶಾಲೆ ಬಿಟ್ಟ (೬-೧೫ ವಯೋಮಾನದ) ಮಕ್ಕಳ ಸಂಖ್ಯೆ, ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಸಂಖ್ಯೆ, ಶಾಲಾ ದಾಖಲಾತಿಯ ಪ್ರಮಾಣ ಇತ್ಯಾದಿ ಸೂಚ್ಯಂಕಗಳ ಸಹಾಯದಿಂದ ಗುರುತಿಸಲಾಗಿದೆ. ಇದನ್ನೇ ಶಿಕ್ಷಣದ ಮೂಲಸೌಲಭ್ಯ ಸೂಚ್ಯಂಕ ಎಂದು ಕರೆಯಲಾಗಿದೆ. (ಎಚ್.ಪಿ.ಸಿ.ಎಫ್.ಆರ್.ಆರ್.ಐ., ೨೦೦೨). ಈ ಶಿಕ್ಷಣದ ಮೂಲಸೌಲಭ್ಯ ಸೂಚ್ಯಂಕ ಬಳಸಿಕೊಂಡು ರಾಜ್ಯದ ೧೭೫ ತಾಲ್ಲೂಕುಗಳನ್ನು ಮುಂದುವರಿದ, ಹಿಂದುಳಿದ, ಸ್ವಲ್ಪ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗಿದೆ.

ಶೈಕ್ಷಣಿಕ ಮೂಲಸೌಲಭ್ಯ ಸೂಚ್ಯಂಕದ ಪ್ರಕಾರ ದಕ್ಷಿಣ ಕರ್ನಾಟಕದ ೯೦ ತಾಲ್ಲೂಕುಗಳು ಮತ್ತು ಉತ್ತರ ಕರ್ನಾಟಕದ ೫೩ ತಾಲ್ಲೂಕುಗಳು ಸೇರಿ ಒಟ್ಟು ೧೪೩ ತಾಲ್ಲೂಕುಗಳು ರಾಜ್ಯದ ಮುಂದುವರಿದ ತಾಲ್ಲೂಕುಗಳಾಗಿವೆ. ದಕ್ಷಿಣ ಕರ್ನಾಟಕದ ೩ ತಾಲ್ಲೂಕುಗಳು ಮತ್ತು ಉತ್ತರ ಕರ್ನಾಟಕದ ೮ ತಾಲ್ಲೂಕುಗಳು ಕೂಡಿ ಒಟ್ಟು ೧೧ ತಾಲ್ಲೂಕುಗಳು ರಾಜ್ಯದ ಹಿಂದುಳಿದ ತಾಲ್ಲೂಕುಗಳಾಗಿರುತ್ತವೆ. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿರುವ ೨ ಸ್ವಲ್ಪ ಹಿಂದುಳಿದ ತಾಲ್ಲೂಕುಗಳು ಮತ್ತು ಉತ್ತರ ಕರ್ನಾಟಕ ಪ್ರದೇಶದಲ್ಲಿರುವ ೯ ಸ್ವಲ್ಪ ಹಿಂದುಳಿದ ತಾಲ್ಲೂಕುಗಳಿಂದಾಗಿ ರಾಜ್ಯದಲ್ಲಿನ ಸ್ವಲ್ಪ ಹಿಂದುಳಿದ ಒಟ್ಟು ತಾಲ್ಲೂಕುಗಳ ಸಂಖ್ಯೆಯೂ ಕೂಡ ೧೧ ಆಗಿರುತ್ತದೆ. ಆದರೆ ಅತ್ಯಂತ ಹಿಂದುಳಿದಂತಹ ತಾಲ್ಲೂಕುಗಳ ಸಂಖ್ಯೆ ದಕ್ಷಿಣ ಕರ್ನಾಟಕದಲ್ಲಿ ಶೂನ್ಯವಾಗಿ ಉತ್ತರ ಕರ್ನಾಟಕದಲ್ಲಿ

ಮಾತ್ರ ಇವುಗಳ ಸಂಖ್ಯೆ ೧೦ ಆಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ಸಂಖ್ಯೆ (೯೦) ಹೆಚ್ಚಾಗಿರುವ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಹಿಂದುಳಿದಂತಹ ತಾಲ್ಲೂಕುಗಳಿಲ್ಲದೆ, ಹಿಂದುಳಿದ ಮತ್ತು ಸ್ವಲ್ಪ ಹಿಂದುಳಿದಂತಹ ತಾಲ್ಲೂಕುಗಳು ಕ್ರಮವಾಗಿ ೩ ಮತ್ತು ೨ ಆಗಿರುತ್ತವೆ. ಆದರೆ ಉತ್ತರ ಕರ್ನಾಟಕದ ಪ್ರದೇಶದಲ್ಲಿ ಅಭಿವೃದ್ಧಿ ಹೊಂದಿದ ಕಡಿಮೆ ಸಂಖ್ಯೆಯ (೫೩) ತಾಲ್ಲೂಕುಗಳೊಂದಿಗೆ, ಹಿಂದುಳಿದ, ಸ್ವಲ್ಪಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲೂಕುಗಳು ಕ್ರಮವಾಗಿ ೮, ೯ ಮತ್ತು ೧೦ ಇರುತ್ತವೆ. ಇನ್ನೂ ನಿರ್ದಿಷ್ಟ ವಾಗಿ ಹೇಳಬೇಕೆಂದರೆ ಉತ್ತರ ಕರ್ನಾಟಕದ ಎರಡು ಕಂದಾಯ ವಿಭಾಗಗಳಾದ ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗಗಳನ್ನು ಹೋಲಿಸಿ, ನೋಡಿದರೆ, ಬೆಳಗಾವಿ ವಿಭಾಗಕ್ಕಿಂತ ಗುಲ್ಬರ್ಗಾ ವಿಭಾಗದಲ್ಲಿಯೇ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ಹೆಚ್ಚಾಗಿದೆ. ಆದರೆ ಸಾಪೇಕ್ಷ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು ಗುಲ್ಬರ್ಗಾ ವಿಭಾಗಕ್ಕಿಂತ (೧೩) ಬೆಳಗಾವಿ ವಿಭಾಗದಲ್ಲಿಯೇ (೪೦) ಅಧಿಕವಾಗಿರುತ್ತವೆ. ಇದರಿಂದ ಸ್ಪಷ್ಟವಾಗುವುದೇನೆಂದರೆ ದಕ್ಷಿಣ ಕರ್ನಾಟಕ ಪ್ರದೇಶ ಮತ್ತು ಉತ್ತರ ಕರ್ನಾಟಕ ಪ್ರದೇಶದ ಬೆಳಗಾವಿ ವಿಭಾಗಕ್ಕಿಂತ ಗುಲ್ಬರ್ಗಾ ವಿಭಾಗವೇ ಶೈಕ್ಷಣಿಕ ಮೂಲಸೌಲಭ್ಯದ ಸೂಚ್ಯಂಕದಂತೆ ಹಿಂದುಳಿದ ವಿಭಾಗವಾಗಿರುತ್ತದೆ.

ಶಿಕ್ಷಣದ ಮೂಲಸೌಲಭ್ಯದ ಸೂಚ್ಯಂಕದ ಪ್ರಕಾರ ಹಿಂದುಳಿದ ವಿಭಾಗವೆಂದು ಪರಿಗಣಿಸಲ್ಪಟ್ಟಿರುವ ಗುಲ್ಬರ್ಗಾ ವಿಭಾಗದಲ್ಲಿ ಬರುವ ಬಳ್ಳಾರಿ ಜಿಲ್ಲೆಯ ಒಟ್ಟು ಏಳು ತಾಲ್ಲೂಕುಗಳಲ್ಲಿ ಐದು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿವೆ. ಉಳಿದೆರಡರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕು ಸಿರುಗುಪ್ಪ ಮತ್ತು ಸ್ವಲ್ಪ ಹಿಂದುಳಿದ ತಾಲ್ಲೂಕು ಸಂಡೂರು ಆಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳ ನೀರಾವರಿ ಪ್ರದೇಶದ ಒಂದು ಗ್ರಾಮಪಂಚಾಯತಿ ಮತ್ತು ಮಳೆಯಾಶ್ರಿತ ಪ್ರದೇಶದ ಇನ್ನೊಂದು ಗ್ರಾಮಪಂಚಾಯತಿಗಳನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಈ ಎರಡು ಗ್ರಾಮಪಂಚಾಯತಿಗಳನ್ನು ನೀರಾವರಿ ಪ್ರದೇಶ ಮತ್ತು ಮಳೆಯಾಶ್ರಿತ ಪ್ರದೇಶವಾಗಿರುವುದರ ದೃಷ್ಟಿಯಿಂದ ಪ್ರಸ್ತುತ ಅಧ್ಯಯನ ಮಾಡಲಾಯಿತು (ಎಚ್.ಡಿ. ಪ್ರಶಾಂತ್, ೨೦೦೫).

ಪ್ರಾದೇಶಿಕ ಅಸಮಾನತೆಯ ಉನ್ನತಾಧಿಕಾರ ಸಮಿತಿ ವರದಿ ಮತ್ತು ಶಿಕ್ಷಣದ ಮೂಲ ಸೌಲಭ್ಯದ ಸೂಚ್ಯಾಂಕ (ಎಚ್.ಡಿ. ಪ್ರಶಾಂತ್, ೨೦೦೫) ೧೯೯೯ರ ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೧ರ ಜನಗಣತಿ ವರದಿ ಆಧಾರದ ಮೇಲೆ ಆಯ್ಕೆ ಮಾಡಿಕೊಂಡ ಬಳ್ಳಾರಿ ಜಿಲ್ಲೆಯ ಎರಡು ಗ್ರಾಮಪಂಚಾಯತಿಗಳೇ ಪ್ರಸ್ತುತ ಅಧ್ಯಯನದ ಅಧ್ಯಯನ ಕ್ಷೇತ್ರ. ಅಧ್ಯಯನ ಕ್ಷೇತ್ರದ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಗಳನ್ನು ಅಧ್ಯಯನ ಮಾಡಲು ಪೂರಕವಾದ ಕೆಲವು ಮಾಹಿತಿಗಳು ಅಗತ್ಯ. ಆ ಕಾರಣದಿಂದ ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕ

ಅಂಶಗಳು, ಪ್ರಾಕೃತಿಕ ಸಂಪನ್ಮೂಲ, ಜನಸಂಖ್ಯೆ, ಆರ್ಥಿಕತೆ, ಆಡಳಿತ ಶಿಕ್ಷಣ ಇತ್ಯಾದಿ ವಿಷಯಗಳನ್ನು ಸೂಕ್ಷ್ಮವಾಗಿ ಪರಿಚಯಿಸಲಾಗಿದೆ.

೨.೧. ಚಾರಿತ್ರಿಕ ಹಿನ್ನೆಲೆ

ಕರ್ನಾಟಕ ರಾಜ್ಯದ ಈಶಾನ್ಯ ಭಾಗದಲ್ಲಿರುವ ಬಳ್ಳಾರಿ ಜಿಲ್ಲೆ ಬ್ರಿಟಿಷರ ಆಡಳಿತ ಕಾಲದಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ೧೯೫೩ರ ಪೂರ್ವದಲ್ಲಿ ಜಿಲ್ಲೆಯಲ್ಲಿ ಬಳ್ಳಾರಿ, ಸಿರುಗುಪ್ಪ, ಸಂಡೂರು, ಹೊಸಪೇಟೆ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹಡಗಲಿ, ಮಲ್ಲಾಪುರ, ಹರಪನಹಳ್ಳಿ, ಆಂಧ್ರ ಪ್ರದೇಶದ ಆಲೂರು, ಆದೋನಿ ಮತ್ತು ರಾಯದುರ್ಗ ಸೇರಿ ಒಟ್ಟು ೧೨ ತಾಲ್ಲೂಕುಗಳು ಇದ್ದವು. ೧೯೫೩ರಲ್ಲಿ ಆದ ಭಾಷಾವಾರು ಪ್ರಾಂತ್ಯದ ರಚನೆಯಿಂದಾಗಿ ಆಲೂರು, ಆದೋನಿ ಮತ್ತು ರಾಯದುರ್ಗ ತಾಲ್ಲೂಕುಗಳು ಆಂಧ್ರಪ್ರದೇಶಕ್ಕೆ ಸೇರಿಕೊಂಡವು. ಸುಗಮ ಆಡಳಿತದ ದೃಷ್ಟಿಯಿಂದ ೧೯೯೭ರಲ್ಲಿ ಹೊಸ ಜಿಲ್ಲೆ ರಚಿಸುವಾಗ, ಜಿಲ್ಲೆಯ ಹರಪನಹಳ್ಳಿ ತಾಲ್ಲೂಕನ್ನು ಪಕ್ಕದ ದಾವಣಗೆರೆ ಜಿಲ್ಲೆಗೆ ಬಿಟ್ಟು ಕೊಡಲಾಗಿದೆ. ಹಾಗಾಗಿ ಬಳ್ಳಾರಿಯಲ್ಲಿ ಪ್ರಸ್ತುತ ಒಟ್ಟು ಏಳು ತಾಲ್ಲೂಕುಗಳಿದ್ದು, ಇತಿಹಾಸ ಪ್ರಸಿದ್ಧ ಮತ್ತು ವಿಶ್ವಪರಂಪರೆಯ ಪಟ್ಟಿಯಲ್ಲಿರುವ ಹಂಪಿಯು ಬಳ್ಳಾರಿ ಜಿಲ್ಲೆಯ ವ್ಯಾಪ್ತಿ ಯಲ್ಲಿರುವುದು ಒಂದು ವಿಶೇಷವೇ ಸರಿ (ಯರಿಸ್ವಾಮಿ ಎಂ., ೨೦೦೨). ಈ ಹಂಪಿಯು ವಿಜಯನಗರ ಸಾಮ್ರಾಜ್ಯದ ಆಡಳಿತದ ಕೇಂದ್ರ ಸ್ಥಳವಾಗಿದ್ದು, ಪ್ರಸ್ತುತ ಪ್ರಸಿದ್ಧವಾದ ಪ್ರವಾಸಿ ತಾಣವೂ ಹೌದು. ಈ ರೀತಿಯಾದ ಚಾರಿತ್ರಿಕ ಹಿನ್ನೆಲೆ ಮತ್ತು ಪ್ರಚಲಿತ ಹಿರಿಮೆಗಳಿರುವ ಬಳ್ಳಾರಿ ಜಿಲ್ಲೆಯಲ್ಲಿನ ಅಧ್ಯಯನ ಕ್ಷೇತ್ರದಲ್ಲಿ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ ಕುರಿತಾದ ಸೂಕ್ಷ್ಮ ಅಧ್ಯಯನ ಸೂಕ್ತವೆನಿಸುತ್ತದೆ.

೨.೨. ಭೌಗೋಳಿಕ ಅಂಶಗಳು

ಬಳ್ಳಾರಿ ಜಿಲ್ಲೆಯು ನೈರುತ್ಯ ಮತ್ತು ಈಶಾನ್ಯ ದಿಕ್ಕುಗಳ ನಡುವೆ ಈಶಾನ್ಯ ಭಾಗದಲ್ಲಿದ್ದು, ಕರ್ನಾಟಕ ರಾಜ್ಯದ ಪೂರ್ವಭಾಗದ ಮಧ್ಯೆ ದಕ್ಷಿಣೋತ್ತರವಾಗಿ ನೆಲೆಗೊಂಡಿದೆ. ೮೪೨೦.೦೦ ಚದುರ ಕಿಲೋಮೀಟರ್ ವಿಸ್ತೀರ್ಣ ಹೊಂದಿದ ಬಳ್ಳಾರಿ ಜಿಲ್ಲೆಯು ರಾಜ್ಯದ ಒಟ್ಟು ವಿಸ್ತೀರ್ಣದ ಶೇಕಡ ೬ರಷ್ಟು ವಿಸ್ತೀರ್ಣ ಹೊಂದಿ ೧೧ನೇ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಿಂದ ಸುಮಾರು ೩೦೫ ಕಿಲೋಮೀಟರ್ ದೂರದಲ್ಲಿರುವ ಬಳ್ಳಾರಿ ೧೪°-೧೩° ಡಿಗ್ರಿ ಮತ್ತು ೧೫°-೫೦° ಡಿಗ್ರಿ ಪೂರ್ವ ರೇಖಾಂಶಗಳ ನಡುವೆ ಇರುವ ಸ್ಥಳವಾಗಿದೆ. ಬಳ್ಳಾರಿ ಜಿಲ್ಲೆಯ ಪೂರ್ವದಿಕ್ಕಿನ ಕಡೆಗೆ ಪಕ್ಕದ ಆಂಧ್ರ-ಪ್ರದೇಶ ರಾಜ್ಯ, ಪಶ್ಚಿಮ ದಿಕ್ಕಿನಲ್ಲಿ ಕರ್ನಾಟಕ ರಾಜ್ಯದ ಧಾರವಾಡ ಜಿಲ್ಲೆ, ಉತ್ತರದಲ್ಲಿ ರಾಯಚೂರು ಜಿಲ್ಲೆ ಮತ್ತು ದಕ್ಷಿಣದ ಕಡೆಯಲ್ಲಿ ಚಿತ್ರದುರ್ಗ ಜಿಲ್ಲೆಗಳು ಭೌಗೋಳಿಕ ಗಡಿಗಳಾಗಿರುತ್ತವೆ. ಸಮತಟ್ಟಾದ ಭೂಪ್ರದೇಶವಿರುವ ಬಳ್ಳಾರಿ ಜಿಲ್ಲೆಯ ಪೂರ್ವಭಾಗವು ಕೃಷಿಗೆ ಯೋಗ್ಯವಾಗಿರುತ್ತದೆ (ಅಂಕಿ-ಅಂಶಗಳ ನೋಟ ೨೦೦೨-೦೩) ಎಂಬುದು ಭೌಗೋಳಿಕ ಅಂಶವಾಗಿದೆ.

೨.೩. ನೈಸರ್ಗಿಕ ಸಂಪನ್ಮೂಲ ಮತ್ತು ಹವಾಮಾನ

ಜಿಲ್ಲೆಯ ನೈಸರ್ಗಿಕ ಗಡಿಯಂತಿರುವ ತುಂಗಭದ್ರಾ ನದಿ ಪಶ್ಚಿಮದಲ್ಲಿ ಹಾವೇರಿ, ಗದಗ ಮತ್ತು ಕೊಪ್ಪಳ ಜಿಲ್ಲೆಗಳನ್ನು ಮತ್ತು ಉತ್ತರದಲ್ಲಿ ರಾಯಚೂರು ಜಿಲ್ಲೆಗಳನ್ನು ವಿಭಾಗಿಸುತ್ತದೆ. ಜಿಲ್ಲೆಯ ಪೂರ್ವ ಭಾಗದಲ್ಲಿರುವ ಕಪ್ಪು ಮಣ್ಣಿನ ಪ್ರದೇಶ ಮತ್ತು ಹಗರಿ ನದಿಗಳು ಕೃಷಿ ಮತ್ತು ತೋಟಗಾರಿಕೆಗಳಿಗೆ ಅನುಕೂಲಕರವಾಗಿವೆ. ಜಿಲ್ಲೆಯ ಇನ್ನೊಂದು ನೈಸರ್ಗಿಕ ಸಂಪತ್ತಾದ ಸಂಡೂರು ತಾಲ್ಲೂಕಿನ ಗುಡ್ಡಗಳ ಪ್ರದೇಶ ಸಮುದ್ರ ಮಟ್ಟಕ್ಕಿಂತ ೩೨೦೦ ಅಡಿ ಎತ್ತರದಲ್ಲಿದ್ದು, ಹೆಚ್ಚಾಗಿ ಗಣಿ ಚಟುವಟಿಕೆಗಳಿಗೆ ತುತ್ತಾಗಿರುವುದು ಒಂದು ದುರಂತವೆನಿಸುತ್ತದೆ (ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೦೨-೦೩). ಇಡೀ ವರ್ಷದ ಹೆಚ್ಚಿನ ಕಾಲದಲ್ಲಿ ಶುಷ್ಕ ಹವಾಮಾನ ಹೊಂದಿರುವ ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ಅತ್ಯಂತ ಹೆಚ್ಚಿನ ಉಷ್ಣಾಂಶವಿರುತ್ತದೆ. ಸಾಮಾನ್ಯವಾಗಿ ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳವರೆಗಿನ ಮೂರು ತಿಂಗಳಲ್ಲಿ ಮಾತ್ರ ಜಿಲ್ಲೆಯಲ್ಲಿ ತಂಪಾದ ವಾತಾವರಣವಿರುತ್ತದೆ. ಚಳಿಗಾಲದಲ್ಲಿ ಜಿಲ್ಲೆಯ ಕನಿಷ್ಟ ಉಷ್ಣಾಂಶ ೯-೧೦° ಸೆಲ್ಸಿಯಸ್ ಮತ್ತು ಗರಿಷ್ಟ ಉಷ್ಣಾಂಶ ೩೫° ಸೆಲ್ಸಿಯಸ್‌ವರೆಗೆ ಇರುತ್ತದೆ. ಮಾರ್ಚ್‌ನಿಂದ ಮೇ ತಿಂಗಳವರೆಗಿನ ಮೂರು ತಿಂಗಳ ಅವಧಿಯಲ್ಲಿನ ಬೇಸಿಗೆ ಕಾಲದ ಜಿಲ್ಲೆಯ ಉಷ್ಣಾಂಶವು ರಾಜ್ಯದಲ್ಲಿಯೇ ಹೆಚ್ಚಿನ ಪ್ರಮಾಣ ದಲ್ಲಿರುತ್ತದೆ. ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ಸಾಮಾನ್ಯವಾಗಿ ಕನಿಷ್ಠ ೧೫° ಸೆಲ್ಸಿಯಸ್‌ನಿಂದ ಗರಿಷ್ಟ ೪೪° ಸೆಲ್ಸಿಯಸ್‌ವರೆಗಿನ ಉಷ್ಣಾಂಶವು ಇದ್ದೇ ಇರುತ್ತದೆ.

೨.೪. ಜಿಲ್ಲೆಯ ಜನಸಂಖ್ಯೆ

೨೦೦೧ರ ಜನಗಣತಿಯಂತೆ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ೨೦,೨೫,೨೪೨ ಜನಸಂಖ್ಯೆಯಲ್ಲಿ ೧೦,೨೯,೭೪೧ ಜನ ಪುರುಷರು ಮತ್ತು ೯,೯೭,೪೨೬ ಮಹಿಳೆಯರಿರುವುದು, ಮಹಿಳೆಯರಿಗಿಂತ ಪುರುಷರೇ ಅಧಿಕವಾಗಿರುವುದನ್ನು ತೋರಿಸುತ್ತದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ೧೩,೧೯,೨೩೯ ಜನ (ಶೇಕಡ ೩೪.೮೭ರಷ್ಟು) ಗ್ರಾಮೀಣ ಭಾಗದಲ್ಲಿ ವಾಸವಾಗಿದ್ದು, ನಗರದ ಜನಸಂಖ್ಯೆಗಿಂತ ಗ್ರಾಮೀಣ ಜನಸಂಖ್ಯೆಯೇ ಅಧಿಕವಾಗಿರುವುದನ್ನು ತಿಳಿಸುತ್ತದೆ. ಜಿಲ್ಲೆಯ ಪರಿಶಿಷ್ಟ ಪಂಗಡದ ಜನಸಂಖ್ಯೆಗಿಂತ ಪರಿಶಿಷ್ಟ ಜಾತಿಯವರೇ ಜಾಸ್ತಿಯಾಗಿರುವ ಮಾಹಿತಿಯೂ ಇದೆ. ಅಂದರೆ ೩,೭೪,೨೧೮ ಜನ ಪರಿಶಿಷ್ಟ ಜಾತಿಗೆ ಸೇರಿದ ಮತ್ತು ೩,೬೪,೬೩೮ ಜನ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನ ಜಿಲ್ಲೆಯಲ್ಲಿದ್ದಾರೆ. ತಾಲ್ಲೂಕುವಾರು ಜನಸಂಖ್ಯೆಯನ್ನು ನೋಡಿದಾಗ ಸಿರುಗುಪ್ಪ ತಾಲ್ಲೂಕಿನಲ್ಲಿ ೨,೩೫,೩೪೪ ಜನಸಂಖ್ಯೆ, ಬಳ್ಳಾರಿ ತಾಲ್ಲೂಕಿನಲ್ಲಿ ೬,೨೫,೪೯೪ ಸಂಡೂರು ತಾಲ್ಲೂಕಿನಲ್ಲಿ ೧,೯೧,೧೬೬ ಜನ, ಕೂಡ್ಲಿಗಿ ತಾಲ್ಲೂಕಿನಲ್ಲಿ ೨,೭೨,೧೮೩ ಜನಸಂಖ್ಯೆ, ಹೊಸಪೇಟೆ ತಾಲ್ಲೂಕಿನಲ್ಲಿ ೩,೭೪,೯೪೯ ಜನ, ಹಗರಿಬೊಮ್ಮನಹಳ್ಳಿಯ ತಾಲ್ಲೂಕಿನಲ್ಲಿ ೧,೫೫,೮೮೬ ಜನಸಂಖ್ಯೆ ಮತ್ತು ಹಡಗಲಿಯಲ್ಲಿ ೧,೬೯,೧೦೮ ಜನಸಂಖ್ಯೆ ಇರುತ್ತದೆ. ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳ ಪೈಕಿ

ಕೋಷ್ಟಕ-೨.೧

ಜಿಲ್ಲೆಯ ಜನಸಂಖ್ಯೆ ಮತ್ತು ಜನಸಾಂದ್ರತೆ

ಕ್ರ.ಸಂ	ತಾಲ್ಲೂಕು	ಒಟ್ಟು ಜನಸಂಖ್ಯೆ	ಪುರುಷರು	ಮಹಿಳೆಯರು	ಗ್ರಾಮೀಣ	ನಗರ	ಜನಸಾಂದ್ರತೆ	ಲಿಂಗಾನುಪಾತ
೦೧.	ಹಡಗಲಿ	೧೬೮೧೧೮	೮೫೦೫೧	೮೩೦೬೭	೧೪೪೭೦೪	೨೩೪೧೪	೧೭೭	೯೭೭
೦೨.	ಹಗರಿಬೊಮ್ಮನಹಳ್ಳಿ	೧೫೯೮೮೬	೮೦೭೭೦	೭೯೧೧೬	೧೫೯೮೮೬	—	೧೬೪	೯೮೦
೦೩.	ಹೊಸಪೇಟೆ	೩೭೪೯೪೯	೧೮೯೬೭೪	೧೮೫೨೭೫	೧೫೩೪೯೯	೨೨೧೪೫೦	೪೧೫	೯೭೭
೦೪.	ಸಿರುಗುಪ್ಪ	೨೩೫೩೪೪	೧೧೭೭೩೫	೧೧೭೬೧೩	೧೬೮೮೪೨	೬೬೫೦೨	೨೨೭	೯೯೯
೦೫.	ಬಳ್ಳಾರಿ	೬೨೫೪೯೪	೩೧೯೦೦೮	೩೦೬೪೮೬	೩೦೮೭೨೮	೩೧೬೭೬೬	೩೭೦	೯೬೧
೦೬.	ಸಂಡೂರು	೧೯೧೧೬೬	೯೮೨೭೮	೯೨೮೮೮	೧೫೬೯೯೮	೩೪೧೬೮	೧೬೬	೯೪೫
೦೭.	ಕೂಡ್ಲಿಗಿ	೧೨೭೧೮೩	೧೩೯೨೦೨	೧೩೨೯೮೧	೨೨೭೬೩೩	೪೪೫೫೦	೧೬೮	೯೫೫
	ಜಿಲ್ಲಾ ಮೊತ್ತ	೨೦೨೭೧೪೦	೧೦೨೯೭೪೧	೯೯೭೪೨೬	೧೩೨೦೨೯೦	೭೦೬೮೫೦	೨೪೦	೯೬೯

ಮೂಲ : ಸೆನ್ಸಸ್ ಆಫ್ ಇಂಡಿಯಾ ೨೦೦೧, ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.

ಬಳ್ಳಾರಿ ತಾಲ್ಲೂಕಿನಲ್ಲಿ ಹೆಚ್ಚಿನ ಜನಸಂಖ್ಯೆ ಇರುವುದು ಗೋಚರವಾಗುತ್ತಿದ್ದು, ಮಹಿಳೆಯರಿಗಿಂತ ಪುರುಷರೇ ಅಧಿಕವಾಗಿದ್ದಾರೆ. ಜನಸಂಖ್ಯಾ ಗಾತ್ರದ ದೃಷ್ಟಿಯಿಂದ ಕರ್ನಾಟಕ ರಾಜ್ಯದ ಶೇಕಡ ೩.೮೪ರಷ್ಟು ಜನಸಂಖ್ಯೆ ಹೊಂದಿರುವ ಬಳ್ಳಾರಿ ಜಿಲ್ಲೆಗೆ ರಾಜ್ಯದ ೭ನೇ ಸ್ಥಾನವು ಪ್ರಾಪ್ತವಾಗಿದೆ. ಜಿಲ್ಲೆಯ ಪ್ರತಿ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಜನಸಾಂದ್ರತೆಯು ೨೪೦ ಇದ್ದು, ರಾಜ್ಯದ ಸರಾಸರಿ ಜನಸಾಂದ್ರತೆಗಿಂತ ಕಡಿಮೆ ಇದೆ. ಜನಸಾಂದ್ರತೆಯ ದೃಷ್ಟಿಯಿಂದ ಹೊಸಪೇಟೆಗೆ ಪ್ರಥಮ ಸ್ಥಾನ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕಿಗೆ ಕಡೆಯ ಸ್ಥಾನಗಳು ಲಭ್ಯವಾಗುತ್ತವೆ. ಜಿಲ್ಲೆಯಲ್ಲಿ ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಲಿಂಗಾನುಪಾತದ ಪ್ರಮಾಣ ೯೬೯ರಷ್ಟು ಇದ್ದು, ಸಿರುಗುಪ್ಪ ತಾಲ್ಲೂಕಿನಲ್ಲಿ ಹೆಚ್ಚಿನ ಲಿಂಗಾನುಪಾತ (೧೦೦೦-೯೯೯) ಮತ್ತು ಸಂಡೂರು ತಾಲ್ಲೂಕಿನಲ್ಲಿ ಕಡಿಮೆ ಲಿಂಗಾನುಪಾತ(೧೦೦೦-೯೪೫)ವಿದೆ.

೨.೫. ಜಿಲ್ಲೆಯ ಆರ್ಥಿಕ ವ್ಯವಸ್ಥೆ

ಬಳ್ಳಾರಿ ಅಕ್ಷರಶಃ ಬಡಜನರಿಂದ ಕೂಡಿದ ಶ್ರೀಮಂತ ಜಿಲ್ಲೆಯಾಗಿದೆ. ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಶೇಕಡ ೭೫ರಷ್ಟು ಜನ ವಂಶಪಾರಂಪರ್ಯದಿಂದಲೂ ಕೃಷಿ ಮತ್ತು ತತ್ಸಂಬಂಧಿತ ಚಟುವಟಿಕೆಗಳನ್ನೇ ಪ್ರಧಾನವಾಗಿ ಅವಲಂಬಿಸಿದ್ದಾರೆ. ತುಂಗಭದ್ರಾ ನದಿಯನ್ನು ಹೊರತುಪಡಿಸಿದಂತೆ ಹೆಚ್ಚಾಗಿ ಮಳೆಯನ್ನೇ ನಂಬಿರುವ ಜಿಲ್ಲೆಯ ಕೃಷಿ ಕ್ಷೇತ್ರವು ಅನಿಶ್ಚಿತವಾಗಿ ರುವುದರಿಂದ ಉದ್ಯೋಗ ಮತ್ತು ಆದಾಯಗಳು ಏರುಪೇರಿನಿಂದ ಕೂಡಿರುತ್ತವೆ. ಜಿಲ್ಲೆಯ ಏಕೈಕ ದೊಡ್ಡ ಕೈಗಾರಿಕೆ ಯಾದ ವಿಜಯನಗರ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (ಜಿಂದಾಲ್) ಮತ್ತು ಕೆಲವು ಸಣ್ಣಪುಟ್ಟ ಕಾರ್ಖಾನೆಗಳಂತೂ ಸದ್ಯದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ನಲುಗಾಡುತ್ತಿವೆ. ಅಲ್ಲದೇ ಆಧುನೀಕರಣದ ಪ್ರಭಾವದಿಂದ ಗೃಹ ಕೈಗಾರಿಕೆಗಳು ಮತ್ತು ಗ್ರಾಮೀಣ ಕುಶಲಕರ್ಮಿಗಳು ಬಾರಿ ದುರ್ಬಲತೆ ಹೊಂದಿವೆ ಎನ್ನಬಹುದು. ಅಭಿವೃದ್ಧಿಗೆ ಪೂರಕವಾದ ಮಾನವ ಶ್ರಮ ಶಕ್ತಿ ಮತ್ತು ಬಂಡವಾಳಗಳ ವಿನಿಯೋಗಗಳು ಏರುಪೇರಿನಿಂದ ಕೂಡಿದ್ದರೂ ಕಡೆಗಣಿಸುವಂತೆ ಇರುವುದಿಲ್ಲ. ಒಟ್ಟಿನಲ್ಲಿ ಜಿಲ್ಲೆಯ ಕೃಷಿ, ಕೈಗಾರಿಕೆ, ಸಾರಿಗೆ ಸಂಪರ್ಕ ಮತ್ತು ಇತರೆ ಸೇವಾ ಕ್ಷೇತ್ರಗಳ ಸ್ಥಿತಿ ಉತ್ತಮವಾಗಿಲ್ಲ. ವಿಪರೀತ ಬೆಲೆ ಏರಿಕೆಯ ಬಿಸಿಯಿಂದಾಗಿ ಜಿಲ್ಲೆಯ ಜನಜೀವನಮಟ್ಟವು ಸುಧಾರಣೆ ಯಾಗದೆ ಸ್ಥಿರವಾಗಿದ್ದು, ಕೇವಲ ಕೆಲವೇ ಜನರ ಅಧೀನವಾಗಿರುವ ಸಂಪತ್ತು ಜನಸಾಮಾನ್ಯರಿಗೆ ಬಿಸಿಲ್ಗುದುರೆಯಂತಾಗಿದೆ. ರಾಜ್ಯದ ಒಟ್ಟು ೧,೦೪,೮೧,೪೪೯ ಲಕ್ಷ ರೂಪಾಯಿಗಳ ಆದಾಯದಲ್ಲಿ ಜಿಲ್ಲೆಯ ಆದಾಯ ೩,೬೫,೫೪೯ ಲಕ್ಷ ರೂಪಾಯಿಗಳಾಗಿವೆ. ರಾಜ್ಯದ ಒಟ್ಟು ಆದಾಯದ ಶೇಕಡ ೩.೬೫ರಷ್ಟು ಪಾಲನ್ನು ನೀಡುವ ಜಿಲ್ಲೆಗೆ ರಾಜ್ಯದಲ್ಲಿ ೧೫ನೇ ಸ್ಥಾನವಿದೆ. ಅದೇ ರೀತಿಯಾಗಿ ಜಿಲ್ಲೆಯ ತಲಾ ಆದಾಯವು ೧೮,೧೪೫ ರೂಪಾಯಿಗಳಾಗಿರುತ್ತದೆ (ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ, ೨೦೦೩).

೨.೬. ಜಿಲ್ಲೆಯ ಆಡಳಿತ

ಜಿಲ್ಲೆಯ ಆಡಳಿತ ಕೇಂದ್ರ ಸ್ಥಳವು ಬಳ್ಳಾರಿಯಾಗಿದೆ. ಏಳು ತಾಲ್ಲೂಕುಗಳಿರುವ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕು ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಒಟ್ಟು ಎರಡು ನಗರ ಸಭೆಗಳು, ಕಂಪ್ಲಿಯಲ್ಲಿ ಏಕೈಕ ಪುರಸಭೆ, ಸಿರುಗುಪ್ಪ, ತೆಕ್ಕಲಕೋಟೆ, ಸಂಡೂರು, ಕೂಡ್ಲಿಗಿ, ಕೊಟ್ಟೂರು, ಹಡಗಲಿ ಮತ್ತು ಕಮಲಾಪುರಗಳಲ್ಲಿ ಒಂದರಂತೆ ಒಟ್ಟು ಏಳು ಪಟ್ಟಣ ಪಂಚಾಯತಿಗಳು ಇವೆ. ಜಿಲ್ಲೆಯ ಒಟ್ಟು ೫೪೨ ಗ್ರಾಮಗಳಲ್ಲಿ ೫೧೭ ಜನವಸತಿ ಗ್ರಾಮಗಳಿದ್ದು ಉಳಿದ ೨೫ ಗ್ರಾಮಗಳಲ್ಲಿ ಜನವಸತಿ ಇಲ್ಲ.

೨.೭. ಜಿಲ್ಲೆಯ ಶೈಕ್ಷಣಿಕ ಸ್ಥಿತಿ

ಒಂದು ಪ್ರದೇಶದ ಶೈಕ್ಷಣಿಕ ಸ್ಥಿತಿಯನ್ನು ಸೂಚಿಸುವ ಪ್ರಮುಖ ಸೂಚಕವಾದ ಸಾಕ್ಷರತೆಯು ಉಪಕರಣವಾದಿ ಗುಣದ ಜೊತೆಯಲ್ಲಿ ಅಂತಸ್ಥವಾದಿ ಗುಣವನ್ನು ಕೂಡ ಹೊಂದಿರುತ್ತದೆ. ಅಂತೆಯೇ ಸಾಮಾಜೋ-ಆರ್ಥಿಕ ಅಭಿವೃದ್ಧಿಗೆ ಶಿಕ್ಷಣ ಅವಶ್ಯಕವಾಗಿ ಬೇಕಾಗಿದೆ. ಆದರೆ ಗಡಿನಾಡಾದ ಬಳ್ಳಾರಿ ಜಿಲ್ಲೆ ಶೈಕ್ಷಣಿಕವಾಗಿ ಬಹಳವಾಗಿ ಹಿಂದುಳಿದಿದೆ. ಹೆಚ್ಚಾಗಿ ಕನ್ನಡಿಗರೇ ಇರುವ ಬಳ್ಳಾರಿ ಜಿಲ್ಲೆ ಸ್ವಾತಂತ್ರ್ಯ ಪೂರ್ವದಲ್ಲಿ ಹೈದ್ರಾಬಾದ್ ನಿಜಾಮರ ಕಾಲದಲ್ಲಿ ಕಡೆಗಣಿಸಲ್ಪಟ್ಟಿತ್ತು ಎಂಬ ಮಾತುಗಳು ಕೇಳಿಬರುತ್ತವೆ. ಆದರೆ ಬ್ರಿಟಿಷರ ಆಡಳಿತದಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ನಂತರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲವಾರು ಸುಧಾರಣೆಗಳು ಕಂಡುಬಂದವು. ಕ್ರಿ.ಶ. ೧೮೨೩ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಇವರ ನೇತೃತ್ವದಲ್ಲಿ ರಚನೆಯಾದ ಸಮಿತಿಯು ಜಿಲ್ಲೆ ಯಾದ್ಯಂತ ಪ್ರವಾಸ ಮಾಡುವುದರ ಮೂಲಕ ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಬಳ್ಳಾರಿ ಜಿಲ್ಲೆ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ ಎಂಬ ವರದಿಯನ್ನು ಮದ್ರಾಸ್ ಗೌವರ್ನರ್‌ರವರಿಗೆ ಸಲ್ಲಿಸಿದೆ.

ಸ್ವಾತಂತ್ರ್ಯಾ ನಂತರದಲ್ಲಿ ಶಿಕ್ಷಣದ ಸುಧಾರಣೆಗಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ. ಫಲಿತಾಂಶವಾಗಿ ಬಳ್ಳಾರಿ ಜಿಲ್ಲೆಯ ಒಟ್ಟು ಸಾಕ್ಷರತೆ ಪ್ರಮಾಣವು ಶೇಕಡ ೫೭.೦೪ರಷ್ಟಿದೆ. ಇದರಲ್ಲಿ ಪುರುಷರ ಸಾಕ್ಷರತೆ ೬೯.೦೨ರಷ್ಟು ಮತ್ತು ಮಹಿಳೆಯರ ಸಾಕ್ಷರತೆ ಶೇಕಡ ೪೫.೦೩ರಷ್ಟು ಇರುತ್ತದೆ. ಇಲ್ಲಿ ಪುರುಷ ಮತ್ತು ಮಹಿಳೆಯರ ನಡುವಿನ ಸಾಕ್ಷರತಾ ಲಿಂಗತಾರತಮ್ಯ ಶೇಕಡ ೨೩.೯೯ರಷ್ಟಿರುತ್ತದೆ. ಜಿಲ್ಲೆಯ ಗ್ರಾಮೀಣ ಪ್ರದೇಶದ ಒಟ್ಟು ಸಾಕ್ಷರತೆಯು ಶೇಕಡ ೫೦.೦೩ರಷ್ಟಿದ್ದು, ಕರ್ನಾಟಕದ ಗ್ರಾಮೀಣ ಪ್ರದೇಶದ ಸಾಕ್ಷರತೆಗಿಂತ ಶೇಕಡ ೮.೮೫ಕ್ಕಿಂತ ಕಡಿಮೆ ಇದೆ. ಜಿಲ್ಲೆಯ ಗ್ರಾಮೀಣ ಭಾಗದ ಒಟ್ಟು ಪುರುಷರ ಸಾಕ್ಷರತೆಯು ಶೇಕಡ ೬೩.೦೫ರಷ್ಟಾಗಿದ್ದು, ರಾಜ್ಯದ ಗ್ರಾಮೀಣ ಪ್ರದೇಶದ ಒಟ್ಟು ಪುರುಷರ ಸಾಕ್ಷರತೆಗಿಂತ ಶೇಕಡ ೬.೫೯ರಷ್ಟು ಕಡಿಮೆ ಆಗಿರುತ್ತದೆ. ಜಿಲ್ಲೆಯ ಗ್ರಾಮೀಣ ಪ್ರದೇಶದ ಮಹಿಳೆಯರ ಸಾಕ್ಷರತೆ ಶೇಕಡ ೩೬.೦೮ರಷ್ಟಿದ್ದು, ರಾಜ್ಯದ ಗ್ರಾಮೀಣ ಪ್ರದೇಶದ ಒಟ್ಟು ಮಹಿಳಾ ಸಾಕ್ಷರತೆಗಿಂತ ಶೇಕಡ ೧೧.೦೭ರಷ್ಟು ಕಡಿಮೆ ಯಾಗಿರುತ್ತದೆ. ಬಳ್ಳಾರಿ ಜಿಲ್ಲೆಯ ಅತ್ಯಂತ ಹೆಚ್ಚಿನ ಸಾಕ್ಷರತೆಯಾದ ಶೇಕಡ ೭೪.೦೩ರಷ್ಟು

ಸಂಡೂರು ತಾಲ್ಲೂಕಿನ ನಗರ ಪ್ರದೇಶದಲ್ಲಿ ಮತ್ತು ಅತ್ಯಂತ ಕಡಿಮೆ ಸಾಕ್ಷರತೆಯ ಪ್ರಮಾಣವಾದ ಶೇಕಡ ೪೦.೦೩ರಷ್ಟು ಸಿರುಗುಪ್ಪ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ ಇರುತ್ತವೆ. ಇವುಗಳ ನಡುವಿರುವ ಅಂತರ ಶೇಕಡ ೩೪ರಷ್ಟಾಗಿದೆ (ಎಚ್.ಡಿ. ಪ್ರಶಾಂತ, ೨೦೦೫).

ಕೋಷ್ಟಕ-೨.೨

ಜಿಲ್ಲೆಯ ವಿವಿಧ ತಾಲ್ಲೂಕುಗಳ ನಗರ/ಗ್ರಾಮೀಣ ಸಾಕ್ಷರತೆ

ಕ್ರ.ಸಂ.	ತಾಲ್ಲೂಕು	ಪುರುಷರು	ಮಹಿಳೆಯರು	ಒಟ್ಟು
೦೧.	ಹಡಗಲಿ	೭೨.೧	೪೮.೨	೬೦.೩
	ಗ್ರಾಮೀಣ	೭೧.೫	೪೬.೩	೫೯.೯
	ನಗರ	೭೬.೧	೬೦.೩	೬೮.೫
೦೨.	ಹಗರಿಬೊಮ್ಮನಹಳ್ಳಿ	೭೦.೮	೪೫.೨	೫೮.೧
	ಗ್ರಾಮೀಣ	೭೦.೮	೪೫.೨	೫೮.೧
	ನಗರ	ಲಭ್ಯವಿಲ್ಲ	ಲಭ್ಯವಿಲ್ಲ	ಲಭ್ಯವಿಲ್ಲ
೦೩.	ಹೊಸಪೇಟೆ	೭೧.೦೬	೫೦.೦	೬೦.೯
	ಗ್ರಾಮೀಣ	೫೯.೩	೩೪.೩	೪೬.೯
	ನಗರ	೭೯.೭	೬೦.೫	೭೦.೩
೦೪.	ಸಿರುಗುಪ್ಪ	೫೬.೯	೩೦.೩	೪೩.೬
	ಗ್ರಾಮೀಣ	೫೪.೪	೨೬.೫	೪೦.೩
	ನಗರ	೬೩.೩	೪೦.೨	೫೧.೭
೦೫.	ಬಳ್ಳಾರಿ	೭೦.೮	೪೮.೨	೫೯.೭
	ಗ್ರಾಮೀಣ	೫೮.೬	೩೧.೦	೪೪.೯
	ನಗರ	೮೨.೧	೬೪.೬	೭೩.೬
೦೬.	ಸಂಡೂರು	೬೫.೫	೪೦.೪	೫೩.೩
	ಗ್ರಾಮೀಣ	೬೧.೪	೩೫.೧	೪೮.೬
	ನಗರ	೮೩.೫	೬೪.೩	೭೪.೩
೦೭.	ಕೂಡ್ಲಿಗಿ	೭೨.೧	೪೬.೪	೫೯.೫
	ಗ್ರಾಮೀಣ	೭೦.೬	೪೩.೪	೫೭.೩
	ನಗರ	೭೯.೬	೬೧.೪	೭೦.೮

ಮೂಲ : ಸೆನ್ಸಸ್ ಆಫ್ ಇಂಡಿಯಾ ೨೦೦೧, ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.

ಕೋಷ್ಟಕ-೨.೩

ಜಿಲ್ಲೆಯ ಅಕ್ಷರಸ್ಥರು, ಅನಕ್ಷರಸ್ಥರು ಮತ್ತು ಸಾಕ್ಷರತೆ

ವಿವರ	ರಾಜ್ಯ	ಬಳ್ಳಾರಿ ಜಿಲ್ಲೆ	ರಾಜ್ಯದಲ್ಲಿ ಜಿಲ್ಲಾಪಾಲು
ಜನಸಂಖ್ಯೆ	೫೨೭೩೩೯೫೮	೨೦೨೫೨೪೨	೩.೮೪
ಅಕ್ಷರಸ್ಥರು	೩೦೭೭೪೯೮೮	೧೦೦೦೬೦೨	೩.೨೫
ಅನಕ್ಷರಸ್ಥರು	೧೫೧೩೨೮೦೨	೭೨೩೪೨೩	೪.೭೮
ಸಾಕ್ಷರತೆ	೬೭.೦೪	೫೮.೦೪	—
ಅನಕ್ಷರತೆ	೩೨.೯೬	೪೧.೯೬	೪೭.೮

ಮೂಲ : ಎಚ್.ಡಿ. ಪ್ರಶಾಂತ್, ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಕೋಷ್ಟಕ-೨.೪

ಜಿಲ್ಲೆಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಾಕ್ಷರತಾ ಪ್ರಮಾಣ ೨೦೦೧ (ಶೇಕಡವಾರು)

ಕ್ರ.ಸಂ.	ಜಿಲ್ಲೆ	ಪ್ರದೇಶ	ಸಾಕ್ಷರತಾ ಪ್ರಮಾಣ		
			ಪುರುಷರು	ಮಹಿಳೆಯರು	ಒಟ್ಟು
೦೧.	ಬಳ್ಳಾರಿ	ಒಟ್ಟು	೬೯.೨	೪೫.೩	೫೭.೪
		ಗ್ರಾಮೀಣ	೬೩.೫	೩೬.೮	೫೦.೩
		ನಗರ	೭೯.೪	೬೦.೭	೭೦.೨
೦೨.	ಪರಿಶಿಷ್ಟ ಜಾತಿ	ಒಟ್ಟು	೫೫.೫	೨೯.೦	೪೨.೩
		ಗ್ರಾಮೀಣ	೫೦.೪	೨೩.೪	೩೬.೯
		ನಗರ	೬೮.೦	೪೩.೪	೫೫.೮
೦೩.	ಪರಿಸಿಷ್ಟ ಪಂಗಡ	ಒಟ್ಟು	೫೩.೪	೨೮.೮	೪೧.೧
		ಗ್ರಾಮೀಣ	೫೦.೫	೨೫.೧	೩೭.೯
		ಒಟ್ಟು	೬೨.೮	೪೦.೭	೫೧.೭

ಮೂಲ : ಬಳ್ಳಾರಿ ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೇಟ್, ಸೆನ್ಸಸ್ ಆಫ್ ಇಂಡಿಯಾ ೨೦೦೧, ಅಭಿವೃದ್ಧಿ ಅಧ್ಯಯನ ಪತ್ರಿಕೆ, ಸಂಪುಟ ೩, ಸಂಚಿಕೆ ೨, ೨೦೦೫.

ಕೋಷ್ಟಕ ೨.೩ರಂತೆ ಕರ್ನಾಟಕ ರಾಜ್ಯದ ಒಟ್ಟು ೫೨೭,೩೩೯೫೮ ಜನಸಂಖ್ಯೆಯಲ್ಲಿ ಬಳ್ಳಾರಿ ಜಿಲ್ಲೆಯೊಂದರಲ್ಲಿಯೇ ೨೦೨೫೨೪೨ ಜನರಿದ್ದು, ರಾಜ್ಯದಲ್ಲಿ ಜಿಲ್ಲೆಯ ಪಾಲು ಶೇಕಡ ೩.೮೪ರಷ್ಟಾಗಿದೆ. ರಾಜ್ಯದಲ್ಲಿರುವ ಒಟ್ಟು ೩೦೭೭೪೯೮೮ ಅಕ್ಷರಸ್ಥರ ಪೈಕಿ ಬಳ್ಳಾರಿ ಜಿಲ್ಲೆಯಲ್ಲಿ ೧೦೦೦೬೦೨ ಜನ ಅಕ್ಷರಸ್ಥರಾಗಿದ್ದು ಶೇಕಡ ೩.೨೫ರಷ್ಟು ಪಾಲನ್ನು ಹೊಂದಿದೆ. ಉಳಿದಂತೆ ರಾಜ್ಯದ ಒಟ್ಟು ಅನಕ್ಷರಸ್ಥರ ಸಂಖ್ಯೆ ೧೫೧೩೨೮೦೨ರಲ್ಲಿ ಬಳ್ಳಾರಿ ಜಿಲ್ಲೆಯ ಪಾಲು ಶೇಕಡ ೪.೭೮ರಷ್ಟಾದ ೭೨೩೪೨೩ರಷ್ಟು ಜನಸಂಖ್ಯೆ ಇದೆ. ರಾಜ್ಯದ ಸರಾಸರಿ ಸಾಕ್ಷರತೆ ಪ್ರಮಾಣ ಶೇಕಡ ೬೭.೦೪ರಷ್ಟಿದ್ದರೆ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯು ಶೇಕಡ ೫೮.೦೪ ಮತ್ತು ರಾಜ್ಯದ ಸರಾಸರಿ ಅನಕ್ಷರತೆ ಶೇಕಡ ೩೨.೯೬ರಷ್ಟಿದ್ದರೆ ಬಳ್ಳಾರಿ ಜಿಲ್ಲೆಯ ಅನಕ್ಷರತೆಯು ಶೇಕಡ ೪೧.೯೬ರಷ್ಟಿದೆ. ಇಲ್ಲಿ ಗಮನೀಯ ಅಂಶವೆಂದರೆ ಬಳ್ಳಾರಿ ಜಿಲ್ಲೆಯ ಸಾಕ್ಷರತೆಯು ರಾಜ್ಯದ ಸರಾಸರಿ ಕಡಿಮೆ ಇದ್ದು ಇದಕ್ಕೆ ವ್ಯತಿರಿಕ್ತವಾಗಿ ರಾಜ್ಯದ ಸರಾಸರಿ ಅನಕ್ಷರತೆಗಿಂತ ಬಳ್ಳಾರಿ ಜಿಲ್ಲೆಯ ಅನಕ್ಷರತೆಯು ಅಧಿಕವಾಗಿರುತ್ತದೆ. ನಿರ್ದಿಷ್ಟವಾಗಿ ಬಳ್ಳಾರಿ ಜಿಲ್ಲೆ ೨೦೨೫೨೪೨ ಒಟ್ಟು ಜನಸಂಖ್ಯೆಯಲ್ಲಿ ೧೦೦೦೬೦೨ ಜನ ಅಕ್ಷರಸ್ಥರು ಮತ್ತು ೭೨೩೪೨೩ ಜನರು ಅನಕ್ಷರಸ್ಥರಿದ್ದು, ಶೇಕಡ ೫೮.೦೪ರಷ್ಟು ಸಾಕ್ಷರತೆ ಮತ್ತು ಶೇಕಡ ೪೧.೯೬ರಷ್ಟು ಅನಕ್ಷರತೆಯನ್ನು ಹೊಂದಿದೆ.

ಕೋಷ್ಟಕ ೨.೪ರ ಪ್ರಕಾರವಾಗಿ ಬಳ್ಳಾರಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ನಗರ ಪ್ರದೇಶಕ್ಕಿಂತಲೂ ಕಡಿಮೆ ಪ್ರಮಾಣದ ಸಾಕ್ಷರತೆಯು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಶೇಕಡ ೫೦.೩ರಷ್ಟು ಸಾಕ್ಷರತೆ ಇದ್ದರೆ, ನಗರ ಪ್ರದೇಶದಲ್ಲಿ ಶೇಕಡ ೭೦.೨ರಷ್ಟಿದೆ. ನಗರ ಪ್ರದೇಶದ ಸಾಕ್ಷರತೆಗಿಂತ ಕಡಿಮೆ ಇರುವ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲೆಯ ಪುರುಷರ ಸಾಕ್ಷರತೆಗಿಂತ ಮಹಿಳೆಯರ ಸಾಕ್ಷರತೆಯೂ ಕೂಡ ಕಡಿಮೆ ಇರುತ್ತದೆ. ಜಿಲ್ಲೆಯ ಗ್ರಾಮೀಣ ಪುರುಷರ ಸಾಕ್ಷರತೆ ಶೇಕಡ ೬೩.೫ರಷ್ಟಿದ್ದರೆ, ಗ್ರಾಮೀಣ ಮಹಿಳಾ ಸಾಕ್ಷರತೆಯು ಶೇಕಡ ೩೬.೮ರಷ್ಟಿದೆ. ಇದೇ ಚಿತ್ರಣವು ಬಳ್ಳಾರಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದದವರಲ್ಲಿಯೂ ಕಂಡುಬರುತ್ತದೆ. ಬಳ್ಳಾರಿ ಜಿಲ್ಲೆಯ ನಗರ ಪ್ರದೇಶದ ದಲಿತ ಸಾಕ್ಷರತೆಗಿಂತ ಗ್ರಾಮೀಣ ಪ್ರದೇಶದ ದಲಿತರ ಸಾಕ್ಷರತೆ ಕಡಿಮೆ ಇದೆ. ಜಿಲ್ಲೆಯ ನಗರ ಪ್ರದೇಶದ ದಲಿತರ ಸಾಕ್ಷರತೆ ಶೇಕಡ ೫೫.೮ರಷ್ಟಿದ್ದರೆ, ಗ್ರಾಮೀಣ ಪ್ರದೇಶದ ದಲಿತರ ಸಾಕ್ಷರತೆಯು ಶೇಕಡ ೩೬.೯ರಷ್ಟಿದೆ. ಜಿಲ್ಲೆಯ ನಗರ ಪ್ರದೇಶದ ದಲಿತ ಸಾಕ್ಷರತೆಗಿಂತ ಕಡಿಮೆ ಇರುವ ಗ್ರಾಮೀಣ ಪ್ರದೇಶದ ದಲಿತ ಸಾಕ್ಷರತೆಯಲ್ಲಿಯೂ ದಲಿತ ಪುರುಷ ಸಾಕ್ಷರತೆಗಿಂತ, ದಲಿತ ಮಹಿಳಾ ಸಾಕ್ಷರತೆಯು ಕಡಿಮೆ ಇದೆ. ಜಿಲ್ಲೆಯ ಗ್ರಾಮೀಣ ಪ್ರದೇಶದ ದಲಿತ ಪುರುಷರ ಸಾಕ್ಷರತೆ ಶೇಕಡ ೫೦.೪ರಷ್ಟಿದ್ದರೆ, ಗ್ರಾಮೀಣ ಭಾಗದ ದಲಿತ ಮಹಿಳಾ ಸಾಕ್ಷರತೆಯು ಶೇಕಡ ೨೩.೪ರಷ್ಟಾಗಿದೆ.

ಬಳ್ಳಾರಿ ಜಿಲ್ಲೆಯ ಒಟ್ಟು ಸಾಕ್ಷರತೆಯ ಅಂಶಗಳು ಮತ್ತು ದಲಿತ ಸಾಕ್ಷರತೆಯ ಅಂಶಗಳಂತೆಯೇ ಪರಿಶಿಷ್ಟ ಪಂಗಡದ ಸಾಕ್ಷರತೆಯ ಅಂಶಗಳಲ್ಲಿ ಹೋಲಿಕೆಗಳಿವೆ. ಜಿಲ್ಲೆಯ ಪರಿಶಿಷ್ಟ ಪಂಗಡದ ಸಾಕ್ಷರತೆ ನಗರ ಪ್ರದೇಶದಲ್ಲಿ ಶೇಕಡ ೫೧.೭ರಷ್ಟಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇಕಡ ೩೭.೯ರಷ್ಟಿದೆ. ಕಡಿಮೆ ಇರುವ ಜಿಲ್ಲೆಯ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಪುರುಷರ ಸಾಕ್ಷರತೆ ಶೇಕಡ ೫೦.೫ರಷ್ಟಿರುತ್ತದೆ, ಮಹಿಳಾ ಸಾಕ್ಷರತೆಯೂ ಶೇಕಡ ೨೫.೧ರಷ್ಟಿರುತ್ತದೆ. ಒಟ್ಟಾರೆ ಯಾಗಿ ಜಿಲ್ಲೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಮತ್ತು ಪುರುಷರಿಗಿಂತ ಮಹಿಳೆ ಯರಲ್ಲಿ ಕಡಿಮೆ ಪ್ರಮಾಣದ ಸಾಕ್ಷರತೆ ಇದೆ.

ಹೊಸಪೇಟೆ ತಾಲ್ಲೂಕು : ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲ್ಲೂಕಾದ ಹೊಸಪೇಟೆ ಕಂದಾಯ ಉಪವಿಭಾಗದ ಕೇಂದ್ರವೂ ಆಗಿರುತ್ತದೆ. ತುಂಗಭದ್ರಾ ನದಿ ಮೂಲದ ನೀರಾವರಿ ಸೌಲಭ್ಯ ಹೆಚ್ಚಾಗಿ ತಾಲ್ಲೂಕಿನ ಪೂರ್ವಭಾಗದ ಗ್ರಾಮಗಳಿಗೆ ಮಾತ್ರ ಲಭ್ಯವಾಗುತ್ತಿದ್ದು, ಕೆಲವೇ ಪ್ರದೇಶಕ್ಕೆ ಸೀಮಿತವಾಗಿದೆ. ಆದರೂ ಈ ನೀರಾವರಿ ಪ್ರದೇಶದಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆಯುವುದರಿಂದ ಮತ್ತು ಕೃಷಿಯೇತರ ಚಟುವಟಿಕೆಗಳಿಂದಾಗಿ ಹೊಸಪೇಟೆ ಮಾರುಕಟ್ಟೆ ವ್ಯವಹಾರ ಹೆಚ್ಚಾಗಿದೆ.

೨೦೦೧ರ ಜನಗಣತಿ ಪ್ರಕಾರ ಹೊಸಪೇಟೆ ತಾಲ್ಲೂಕಿನಲ್ಲಿರುವ ಒಟ್ಟು ೩,೭೪,೯೪೯ ಜನಸಂಖ್ಯೆಯಲ್ಲಿ ೧,೮೯,೬೭೪ರಷ್ಟು ಜನ ಪುರುಷರು ಮತ್ತು ೧,೮೫,೨೭೫ರಷ್ಟು ಜನ ಮಹಿಳೆ ಯರಿದ್ದಾರೆ. ಹೆಚ್ಚಿನ ಜನಸಂಖ್ಯೆ ಹೊಂದಿದ ಬಳ್ಳಾರಿ ಜಿಲ್ಲೆಯ ೨ನೇ ತಾಲ್ಲೂಕಾದ ಹೊಸಪೇಟೆಯು ಜಿಲ್ಲೆಗೆ ಶೇಕಡ ೧೮.೨೪ರಷ್ಟು ಪಾಲನ್ನು ಒದಗಿಸುತ್ತದೆ. ಶೇಕಡ ೩೨.೯೧ರಷ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆಯನ್ನು ಹೊಂದಿರುವ ಈ ತಾಲ್ಲೂಕು, ಜಿಲ್ಲೆಯಲ್ಲಿಯೇ ೩ನೇ ಸ್ಥಾನದಲ್ಲಿದೆ. ಶೇಕಡ ೬೦.೦೯ರಷ್ಟು ಸಾಕ್ಷರತೆ ಹೊಂದಿರುವ ಹೊಸಪೇಟೆ ತಾಲ್ಲೂಕಿನಲ್ಲಿ ಲಿಂಗಾಯತ, ನಾಯಕರು, ಹರಿಜನ, ಮುಸ್ಲಿಂ, ಕುರುಬರು ಮತ್ತು ಒಕ್ಕಲಿಗರು ಮುಂತಾದ ಜನಸಮುದಾಯಗಳು ವಾಸವಾಗಿವೆ. ರಾಜಕೀಯವಾಗಿ ಹೊಸಪೇಟೆ ತಾಲ್ಲೂಕು 'ವಿಜಯನಗರ' ಎಂಬ ಹೆಸರಿನ ಸ್ವತಂತ್ರವಾದ ವಿಧಾನ ಸಭಾ ಕ್ಷೇತ್ರವನ್ನು ಹೊಂದಿರುತ್ತದೆ.

ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ : ಹೊಸಪೇಟೆ ತಾಲ್ಲೂಕಿನ ಒಟ್ಟು ಎಪ್ಪತ್ನಾಲ್ಕು ಗ್ರಾಮ ಗಳಲ್ಲಿ ಒಂದಾದ ನಂ.೧೦ ಮುದ್ದಾಪುರ, ಹೊಸಪೇಟೆಯಿಂದ ಕಂಪ್ಲಿ ಮಾರ್ಗವಾಗಿ ೨೮ ಕಿಲೋ ಮೀಟರ್ ದೂರದಲ್ಲಿದೆ. ಅಧಿಕಾರ ವಿಕೇಂದ್ರೀಕರಣದ ಪ್ರಕಾರವಾಗಿ ಗ್ರಾಮಪಂಚಾಯತಿಯ ಕೇಂದ್ರ ಸ್ಥಳವಾದ ನಂ.೧೦ ಮುದ್ದಾಪುರದ ವ್ಯಾಪ್ತಿಗೆ ಬೆಳಗೋಡುಹಾಳ್, ಕಣಿವೆ ತಿಮ್ಮಲಾಪುರ ಗ್ರಾಮಗಳು, ಎಲ್ಲಮ್ಮ ಕ್ಯಾಂಪ್ ಮತ್ತು ಪ್ರಭುಕ್ಯಾಂಪ್‌ಗಳು ಸೇರಿವೆ.

೨೦೦೧ರ ಜನಗಣತಿ ಮಾಹಿತಿಯಂತೆ ನಂ.೧೦ ಮುದ್ದಾಪುರ ಗ್ರಾಮದ (ಎಲ್ಲಮ್ಮ ಕ್ಯಾಂಪ್ ಮತ್ತು ಪ್ರಭುಕ್ಯಾಂಪ್ ಒಳಗೊಂಡು) ಒಟ್ಟು ೪,೯೨೫ ಜನಸಂಖ್ಯೆಯಲ್ಲಿ ೨,೪೮೫ ಪುರುಷ ಮತ್ತು

[illegible]

೨,೪೪೦ ಮಹಿಳೆಯರಿದ್ದಾರೆ. ಈ ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಕುರುಬ, ಗೊಲ್ಲ, ದೇವಾಂಗ, ಗಂಗಾಮತ, ಉಪ್ಪಾರ, ಹರಿಜನ, ಬೋವಿ, ಕೊರಚ ಮತ್ತು ಮುಸ್ಲಿಂ ಸಮುದಾಯದ ಜನರು ಇದ್ದಾರೆ. ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಯ ೬೨೪ ಪುರುಷ ಮತ್ತು ೬೨೧ ಮಹಿಳೆಯರೊಂದಿಗೆ ಪರಿಶಿಷ್ಟ ಪಂಗಡದ ೧೬೬ ಪುರುಷರು ಮತ್ತು ೧೬೧ ಮಹಿಳೆಯರು ಇದ್ದಾರೆ. ಈ ಗ್ರಾಮದಲ್ಲಿರುವ ಏಳು ವರ್ಷ ಮೇಲ್ಪಟ್ಟವರ ಸಾಕ್ಷರತೆ ಪ್ರಮಾಣ ಶೇಕಡ ೫೪.೩ರಷ್ಟಾಗಿದ್ದು ಪುರುಷ ಸಾಕ್ಷರತೆ ಶೇಕಡ ೬೭ ಮತ್ತು ಮಹಿಳೆಯರ ಸಾಕ್ಷರತೆ ಶೇಕಡ ೪೧.೨ರಷ್ಟಾಗಿರುತ್ತದೆ.

ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಗೆ ಸೇರಿದ, ಬೆಳಗೋಡ್‌ಹಾಳ್ ಗ್ರಾಮದಲ್ಲಿ ಒಟ್ಟು ೧,೪೭೧ ಜನರಿದ್ದು ಅದರಲ್ಲಿ ೭೨೬ ಪುರುಷರು ಮತ್ತು ೭೪೫ ಜನ ಮಹಿಳೆಯರಾಗಿದ್ದಾರೆ. ಈ ಗ್ರಾಮದಲ್ಲಿಯೂ ಕುರುಬ, ನಾಯಕರು, ಕಬ್ಬೇರು, ಲಿಂಗಾಯತ, ಹರಿಜನ, ಚಲವಾದಿ, ಮುಸ್ಲಿಂ ಜನಾಂಗದವರು ವಾಸವಾಗಿದ್ದಾರೆ. ಈ ಗ್ರಾಮದಲ್ಲಿರುವ ಪರಿಶಿಷ್ಟ ಜಾತಿಯ ಪುರುಷರು ೨೩೦ ಜನ ಮತ್ತು ಮಹಿಳೆಯರು ೨೪೨ ಜನ. ಅದರಂತೆ ಈ ಗ್ರಾಮದಲ್ಲಿ ಪರಿಶಿಷ್ಟ ಪಂಗಡದ ೩೮ ಪುರುಷ ಮತ್ತು ೨೮ ಮಹಿಳಾ ಜನಸಂಖ್ಯೆ ಇದೆ. ಈ ಊರಿನ ಸಾಕ್ಷರತೆ ಪ್ರಮಾಣ ಶೇಕಡ ೪೩.೭ರಷ್ಟಿದ್ದು, ಪುರುಷ ಸಾಕ್ಷರತೆ ಶೇಕಡ ೬೦.೪ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೨೭.೬ರಷ್ಟಾಗಿದೆ.

ಇದೇ ತೆರನಾಗಿ ಕಣಿವೆ ತಿಮ್ಮಲಾಪುರದಲ್ಲಿ ೨೦೦೧ರ ಜನಗಣತಿ ಪ್ರಕಾರವಾಗಿ ೧,೬೮೫ ಒಟ್ಟು ಜನಸಂಖ್ಯೆ ಇದ್ದು, ಇದರಲ್ಲಿ ೮೬೫ ಪುರುಷರು ಮತ್ತು ೮೨೦ ಮಹಿಳೆಯರಾಗಿದ್ದಾರೆ. ಈ ಊರಿನಲ್ಲಿಯೂ ಸಹ ಕುರುಬರು, ಹರಿಜನ, ನಾಯಕ, ಗೊಲ್ಲ ಮತ್ತು ಲಿಂಗಾಯತ ಕೋಮಿಗೆ ಸೇರಿದವರಿದ್ದಾರೆ. ಅದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ೮೦ ಜನ ಪುರುಷರು ಮತ್ತು ೭೫ ಜನ ಮಹಿಳೆಯರ ಜೊತೆಗೆ ಪರಿಶಿಷ್ಟ ಪಂಗಡದ ೩೭೪ ಪುರುಷರು ಮತ್ತು ೩೧೯ ಮಹಿಳೆಯರಿದ್ದಾರೆ. ಈ ಗ್ರಾಮದಲ್ಲಿ ಶೇಕಡ ೪೨.೧ರಷ್ಟು ಸಾಕ್ಷರತೆ ಇದ್ದು, ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೫೭.೬ರಷ್ಟು ಮತ್ತು ಮಹಿಳೆಯರ ಸಾಕ್ಷರತೆಯು ಶೇಕಡ ೨೫.೫ರಷ್ಟಾಗಿರುತ್ತದೆ.

ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ತುಂಗಭದ್ರಾ ನದಿ ಮೂಲದ ನೀರಾವರಿ ಆಶ್ರಿತ ಕೃಷಿ ಮತ್ತು ತತ್ಸಂಬಂಧಿತ ಚಟುವಟಿಕೆಗಳೇ ಪ್ರಧಾನವಾಗಿರುತ್ತದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಭತ್ತ, ಕಬ್ಬು, ಬಾಳೆ, ಹತ್ತಿ ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ.

ಕೂಡ್ಲಿಗಿ ತಾಲ್ಲೂಕು : ಬಳ್ಳಾರಿ ಜಿಲ್ಲೆಯ ಒಟ್ಟು ಏಳು ತಾಲ್ಲೂಕುಗಳಲ್ಲಿ ಒಂದಾದ ಕೂಡ್ಲಿಗಿ ತಾಲ್ಲೂಕು, ಜಿಲ್ಲೆಯ ನೈರುತ್ಯ ಭಾಗದಲ್ಲಿದ್ದು ಒಟ್ಟು ೯೧ ಗ್ರಾಮಗಳು ೨ ಪಟ್ಟಣಗಳನ್ನು ಹೊಂದಿದೆ. ೨೦೦೧ರ ಜನಗಣತಿ ಪ್ರಕಾರ ಕೂಡ್ಲಿಗಿ ತಾಲ್ಲೂಕು ವಿಸ್ತೀರ್ಣದಲ್ಲಿ ೨ನೇ ಸ್ಥಾನ ಮತ್ತು ಜನಸಂಖ್ಯಾ ಗಾತ್ರದಲ್ಲಿ ೩ನೇ ಸ್ಥಾನಗಳನ್ನು ಜಿಲ್ಲೆಯಲ್ಲಿ ಪಡೆದುಕೊಂಡಿದೆ. ಕೂಡ್ಲಿಗಿ ತಾಲ್ಲೂಕಿನ ಒಟ್ಟು ಜನಸಂಖ್ಯೆ ೨,೭೨,೧೮೩ ಆಗಿದ್ದು, ಇದರಲ್ಲಿ ೧,೩೯,೨೦೨ ಜನ ಪುರುಷರು ಮತ್ತು

೧,೩೨,೯೮೧ ಮಹಿಳಾ ಜನಸಂಖ್ಯೆ ಇರುತ್ತದೆ. ತಾಲ್ಲೂಕಿನ ಒಟ್ಟು ಜನಸಂಖ್ಯೆಯ ಶೇಕಡ ೧೯.೨ರಷ್ಟು ಪರಿಶಿಷ್ಟ ಜಾತಿ ಮತ್ತು ಶೇಕಡ ೨೭.೧ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ. ತಾಲ್ಲೂಕಿನ ಸರಾಸರಿ ಸಾಕ್ಷರತೆ ಶೇಕಡ ೫೯.೫ರಲ್ಲಿ ಪುರುಷರ ಸಾಕ್ಷರತೆಯು ಶೇಕಡ ೭೨.೧ ಮತ್ತು ಮಹಿಳಾ ಸಾಕ್ಷರತೆ ಶೇಕಡ ೪೬.೮ರಷ್ಟಾಗಿರುತ್ತದೆ. ತಾಲ್ಲೂಕಿನಲ್ಲಿ ಮಳೆಯಾಧಾರಿತ ಒಣಬೇಸಾಯ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳೇ ಪ್ರಮುಖವಾಗಿರುತ್ತವೆ. ತಾಲ್ಲೂಕಿನ ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯುವ ಮುಖ್ಯವಾದ ಬೆಳೆಗಳೆಂದರೆ ಶೇಂಗಾ, ಜೋಳ, ರಾಗಿ, ನವಣೆ ಮತ್ತು ತೊಗರಿಗಳಾಗಿರುತ್ತವೆ.

ಆಲೂರು ಗ್ರಾಮಪಂಚಾಯತಿ : ಕೂಡ್ಲಿಗಿ ತಾಲ್ಲೂಕಿನ ೯೧ ಗ್ರಾಮಗಳಲ್ಲಿ ಒಂದಾದ ಆಲೂರು, ಕೂಡ್ಲಿಗಿಯಿಂದ ದಕ್ಷಿಣದ ಚಿತ್ರದುರ್ಗದ ಕಡೆಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-೧೩ ಮಾರ್ಗದಲ್ಲಿ ೩೮ ಕಿ.ಮೀಟರ್ ದೂರದಲ್ಲಿರುತ್ತದೆ. ಗ್ರಾಮಪಂಚಾಯತಿಯ ಕೇಂದ್ರಸ್ಥಳವಾದ ಆಲೂರು ಗ್ರಾಮ ಪಂಚಾಯತಿಗೆ ಆಲೂರು, ಕಾನಾಮಡುಗು, ಮಾಲೂರು, ಕೆಂಚಮಲ್ಲನಹಳ್ಳಿ ಮತ್ತು ಯಂಬಳೆ ಗ್ರಾಮಗಳು ಒಳಪಡುತ್ತವೆ. ೨೦೦೧ರ ಜನಗಣತಿಯಂತೆ ಕಾನಾಮಡುಗನ್ನು ಸೇರಿಸಿಕೊಂಡಂತೆ ಆಲೂರು ಗ್ರಾಮದ ಒಟ್ಟು ಜನಸಂಖ್ಯೆ ೪,೪೮೦ರಲ್ಲಿ, ಪುರುಷರು ೨,೩೦೯ ಮತ್ತು ಮಹಿಳೆಯರು ೨,೧೩೧ರಷ್ಟು ಇದ್ದಾರೆ. ಗ್ರಾಮದಲ್ಲಿರುವ ಪರಿಶಿಷ್ಟ ಜಾತಿಯ ಪುರುಷರು ೩೯೭ ಜನ ಮತ್ತು ಮಹಿಳೆಯರು ೩೮೧ ಜನ ಹಾಗೂ ಪರಿಶಿಷ್ಟ ಪಂಗಡದ ೩೧೧ ಪುರುಷರು ಮತ್ತು ೨೯೮ ಮಹಿಳೆಯರಿದ್ದಾರೆ. ಲಿಂಗಾಯತ, ರೆಡ್ಡಿ, ಕುರುಬರು, ನಾಯಕ, ಹರಿಜನ, ವಡ್ಡರು ಮತ್ತು ಮುಸ್ಲಿಂ ಜನಾಂಗಗಳಿಂದ ಕೂಡಿದ ಗ್ರಾಮದ ಸಾಕ್ಷರತೆ ಶೇಕಡ ೬೬.೪ರಷ್ಟಿದ್ದು, ಪುರುಷರ ಸಾಕ್ಷರತೆ ಶೇಕಡ ೭೭.೭ ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೧.೮ರಷ್ಟಾಗಿರುತ್ತದೆ.

ಮಾಲೂರು ಮತ್ತು ಯಂಬಳೆಗಳನ್ನು ಸೇರಿಸಿಕೊಂಡಂತೆ ಕೆಂಚಮಲ್ಲನಹಳ್ಳಿಯ ಒಟ್ಟು ಜನಸಂಖ್ಯೆ ೩,೬೯ ಆಗಿದ್ದು, ಪುರುಷರ ಸಂಖ್ಯೆ ೧,೮೭೬ ಮತ್ತು ಮಹಿಳೆಯರ ಸಂಖ್ಯೆ ೧,೮೨೩ರಷ್ಟು ಇರುತ್ತದೆ. ಗ್ರಾಮದ ಪರಿಶಿಷ್ಟ ಜಾತಿಯ ಪುರುಷರು ೬೫ ಮತ್ತು ಮಹಿಳೆಯರು ೬೪ ಆಗಿದ್ದಾರೆ. ಅದೇ ರೀತಿ ಪರಿಶಿಷ್ಟ ಪಂಗಡದ ಪುರುಷರು ೮೩ ಮತ್ತು ಮಹಿಳೆಯರು ೬೪ ಜನರಿದ್ದಾರೆ. ಲಿಂಗಾಯತ, ಕುರುಬರು, ವಡ್ಡರು, ಪಿಂಜಾರರು, ಲಂಬಾಣಿ, ನಾಯಕರು, ಹರಿಜನ ಸಮುದಾಯಗಳಿರುವ ಕೆಂಚಮಲ್ಲನಹಳ್ಳಿಯ ಸಾಕ್ಷರತೆ ಶೇಕಡ ೫೮.೭ರಲ್ಲಿ, ಪುರುಷರ ಸಾಕ್ಷರತೆ ಶೇಕಡ ೭೩.೦ ಮತ್ತು ಮಹಿಳೆಯರ ಸಾಕ್ಷರತೆ ಶೇಕಡ ೪೩.೬ರಷ್ಟಿರುತ್ತದೆ.

ಗ್ರಂಥಸೂಚಿ

೧. *ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿ* (೨೦೦೫), ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

[illegible]

[illegible]

[illegible]

[illegible]

[illegible]

೨. ಚಂದ್ರಶೇಖರ್ ಟಿ.ಆರ್. (೨೦೦೬), *ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೩. ಚಂದ್ರಶೇಖರ್ ಟಿ.ಆರ್. (೨೦೦೭), *ಕರ್ನಾಟಕದ ಪ್ರಾದೇಶಿಕ ಅಸಮಾನತೆ, ಅಭಿವೃದ್ಧಿ ಪಥ,* ಸುವರ್ಣ ಕರ್ನಾಟಕ ಸಂಪುಟ-೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೪. ಚಿದ್ರೆ ಶಂಕರಯ್ಯ ಸ್ವಾಮಿ (೨೦೦೮), *ಸಾಧಕ,* ಅಭಿಂದನಾ ಗ್ರಂಥ, ಚಿದ್ರೆ ಶಂಕರಯ್ಯಸ್ವಾಮಿ ಅಭಿನಂದನಾ ಸಮಿತಿ, ಈಶಾನ್ಯ ವಲಯ ಗುಲಬರ್ಗಾ.

೫. ಜನಾರ್ದನ (೨೦೦೩), *ಕರ್ನಾಟಕ ತಾಲ್ಲೂಕುವಾರು ಜನಸಂಖ್ಯೆ ಅಕ್ಷರಸ್ಥರು ಮತ್ತು ಸಾಕ್ಷರತೆ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬. ಪ್ರಶಾಂತ್ ಎಚ್.ಡಿ. (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೭. ಪ್ರಶಾಂತ್ ಎಚ್.ಡಿ. (೨೦೦೭), *ಶಾಲಾ ಶಿಕ್ಷಣ ಅಭಿವೃದ್ಧಿ ಪಥ,* ಸುವರ್ಣ ಕರ್ನಾಟಕ ಸಂಪುಟ-೧, ಸಂಪಾದಕರು ಹಿ.ಚಿ. ಬೋರಲಿಂಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೮. ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ (೨೦೦೨-೦೩), ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.

೯. ಮಲ್ಲಿಕಾರ್ಜುನ ಕಿಚಡಿ (೨೦೦೩), ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಶಿಕ್ಷಣ ಪ್ರಗತಿ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೦. ಯರಿಸ್ವಾಮಿ ಎಂ. (೨೦೦೨), ಗ್ರಾಮಪಂಚಾಯಿತಿ ಮತ್ತು ಸಬಲೀಕರಣ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೧. ರಾಜಶೇಖರ್ ಜಿ. (೨೦೦೮), *ಶಿಕ್ಷಣ ಒಂದು ಚಿಂತನೆ,* ಟೀಚರ್ ಶೈಕ್ಷಣಿಕ ಮಾಸಪತ್ರಿಕೆ, (ಏಪ್ರಿಲ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

೧೨. ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ (೨೦೦೨-೦೩), ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೧೩. ಸವಿತ ಕೆ. (೨೦೦೮), ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ-ಸಂಬಂಧಿ ಆಯಾಮಗಳು ಮತ್ತು ಸಮಾಜೋ-ಆರ್ಥಿಕ ಅಂಶಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೪. ಸೆನ್ಸಸ್ ಆಫ್ ಇಂಡಿಯಾ (೨೦೦೧), ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.

• • •

ಅಧ್ಯಾಯ-೩

ದಲಿತರ ಸ್ಥಿತಿ-ಗತಿಗಳು

೧೯೯೯ರ ಕರ್ನಾಟಕ ಮಾನವ ಅಭಿವೃದ್ಧಿ ವರದಿ, ೨೦೦೧ರ ಜನಗಣತಿ ವರದಿ ಮತ್ತು ಪ್ರಾದೇಶಿಕ ಅಸಮಾನತೆಯ ಉನ್ನತಾಧಿಕಾರ ಸಮಿತಿಯ ವರದಿ ಹಾಗೂ ಶಿಕ್ಷಣದ ಮೂಲಸೌಲಭ್ಯದ ಸೂಚ್ಯಂಕದ ಪ್ರಕಾರ ಅಧ್ಯಯನ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಂಡ ಅಧ್ಯಯನ ಕ್ಷೇತ್ರದಲ್ಲಿ ಸಾಪೇಕ್ಷವಾಗಿ ಶೈಕ್ಷಣಿಕ ಅಭಿವೃದ್ಧಿ ಹೊಂದಿದ ನೀರಾವರಿ ಸೌಲಭ್ಯವಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಂಪ್ಲಿ ಭಾಗದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಗೆ ಸೇರಿದ ಮುದ್ದಾಪುರ, ಯಲ್ಲಮ್ಮ ಕ್ಯಾಂಪ್, ಬೆಳಗೋಡು ಹಾಳ್ ಮತ್ತು ಕಣಿವೆ ತಿಮ್ಮಲಾಪುರ ಗ್ರಾಮಗಳು ಬರುತ್ತವೆ. ಅದೇ ರೀತಿ ಸಾಪೇಕ್ಷವಾಗಿ ಶೈಕ್ಷಣಿಕ ಅಭಿವೃದ್ಧಿ ಹೊಂದಿದ ಮತ್ತು ಮಳೆಯಾಶ್ರಿತ ಪ್ರದೇಶವಾದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಭಾಗದ ಆಲೂರು ಗ್ರಾಮಪಂಚಾಯತಿ ಆಡಳಿತದಲ್ಲಿರುವ ಆಲೂರು, ಕಾನಾಮಡಗು, ಕೆಂಚಮಲ್ಲನಹಳ್ಳಿ ಮತ್ತು ಯಂಬಳೆ ಗ್ರಾಮಗಳು ಸೇರಿಕೊಂಡಿರುತ್ತವೆ. ಅಧ್ಯಯನ ಕ್ಷೇತ್ರದ ಒಂದು ಗ್ರಾಮಪಂಚಾಯತಿ ಆಡಳಿತ ವ್ಯಾಪ್ತಿಯ ನಾಲ್ಕು ಗ್ರಾಮಗಳ ಒಂದುನೂರ ಜನ ದಲಿತ ಪೋಷಕರು ಮತ್ತು ಇನ್ನೊಂದು ಗ್ರಾಮಪಂಚಾಯತಿ ಆಡಳಿತ ವ್ಯಾಪ್ತಿಯ ನಾಲ್ಕು ಗ್ರಾಮಗಳ ಒಂದು ನೂರ ದಲಿತ ಪೋಷಕರು ಸೇರಿಕೊಂಡು ಒಟ್ಟು ಎರಡು ನೂರು ದಲಿತ ಪೋಷಕರನ್ನು ಸಂದರ್ಶನ ಮಾಡಲಾಗಿದೆ.

ಸಂದರ್ಶನ ಮಾಡಿದ ದಲಿತ ಪೋಷಕರಿಂದ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಸಾಮಾನ್ಯ ಮಾಹಿತಿಯೊಂದಿಗೆ ಅಧ್ಯಯನದ ಉದ್ದೇಶಗಳಿಗೆ ಅನುಗುಣವಾದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಸಂಗ್ರಹಿಸಿದ ಸಾಮಾನ್ಯ ಸಂಗತಿಗಳೆಂದರೆ ಜನಸಂಖ್ಯೆ, ವಿವಾಹ, ಶಿಕ್ಷಣ, ಉದ್ಯೋಗ, ಭೂಮಿ, ಆದಾಯ ಇನ್ನು ಮುಂತಾದವುಗಳು ದಲಿತರ ಸ್ಥಿತಿ-ಗತಿಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತವೆ. ಇವುಗಳ ವಿವರಣೆಯನ್ನು ಇದೇ ಅಧ್ಯಾಯದ ಮುಂದಿನ ಭಾಗದಲ್ಲಿ ನೀಡಲಾಗಿದೆ.

೩.೧. ಜನಸಂಖ್ಯೆ

ಅಧ್ಯಯನ ಕ್ಷೇತ್ರದ ಒಟ್ಟು ಜನಸಂಖ್ಯೆ, ವಿವಿಧ ವಯೋಮಾನವಾರು ಜನಸಂಖ್ಯೆ ಕುರಿತು ಮುಂದೆ ವಿವರಿಸಲಾಗಿದೆ. ಅಧ್ಯಯನ ಕ್ಷೇತ್ರದಲ್ಲಿ ಸಂದರ್ಶನ ಮಾಡಿದ ಒಟ್ಟು ಎರಡು ನೂರು ದಲಿತ ಕುಟುಂಬಗಳಲ್ಲಿ ಒಟ್ಟು ೧,೦೬೨ ಜನರಿದ್ದು, ಅದರಲ್ಲಿ (ಶೇಕಡ ೫೨ರಷ್ಟು) ೫೫೭ ಜನ ಪುರುಷರು ಮತ್ತು ಉಳಿದ (ಶೇಕಡ ೪೮ರಷ್ಟು) ೫೦೫ ಜನ ಮಹಿಳೆಯರಾಗಿದ್ದಾರೆ. ಗ್ರಾಮ ಪಂಚಾಯತಿವಾರು ಹೇಳುವುದಾದರೆ ಮುದ್ದಾಪುರ ಗ್ರಾಮಪಂಚಾಯತಿ ಒಂದರಲ್ಲಿ ಒಂದು ನೂರು ದಲಿತ ಕುಟುಂಬಗಳಲ್ಲಿನ ಒಟ್ಟು ೫೪೨ ದಲಿತರಲ್ಲಿ ೨೭೧ ಪುರುಷರು ಮತ್ತು ಅಷ್ಟೇ ಪ್ರಮಾಣದ

ಮಹಿಳೆಯರಿದ್ದಾರೆ. ಆಲೂರು ಗ್ರಾಮಪಂಚಾಯತಿಯಲ್ಲಿನ ನೂರು ದಲಿತ ಕುಟುಂಬದಲ್ಲಿರುವ ಒಟ್ಟು ೫೨೦ ದಲಿತರಲ್ಲಿ ೨೮೬ ಪುರುಷರಿದ್ದರೆ, ೨೩೪ ಜನ ಮಹಿಳೆಯರಿದ್ದಾರೆ.

ಕೋಷ್ಟಕ-೩.೧

ಅಧ್ಯಯನ ಕ್ಷೇತ್ರದ ಜನಸಂಖ್ಯೆ

ಕ್ರ.ಸಂ.	ಗ್ರಾಮದ ಹೆಸರು	ಕುಟುಂಬ	ಜನಸಂಖ್ಯೆ		ಒಟ್ಟು ಜನಸಂಖ್ಯೆ
			ಗಂಡು	ಹೆಣ್ಣು	
೦೧.	ನಂ. ೧೦ ಮುದ್ದಾಪುರ	೫೬	೧೫೩	೧೬೨	೩೧೫
೦೨.	ಯಲ್ಲಮ್ಮ ಕ್ಯಾಂಪ್	೧೦	೧೯	೩೧	೫೦
೦೩.	ಬೆಳಗೋಡ ಹಾಳ್-೫	೨೫	೬೯	೫೮	೧೨೭
೦೪.	ಕಣವಿ ತಿಮ್ಮಲಾಪುರ	೦೯	೩೦	೨೦	೫೦
	ಒಟ್ಟು ಮುದ್ದಾಪುರ ಗ್ರಾ.ಪಂ.	೧೦೦	೨೭೧	೧೭೧	೫೪೨
೦೫.	ಆಲೂರು	೩೨	೮೬	೮೪	೧೭೦
೦೬.	ಕಾನಾಮಡುಗು	೨೬	೭೬	೫೮	೧೩೪
೦೭.	ಕೆಂಚಮಲ್ಲನಹಳ್ಳಿ	೨೭	೭೮	೫೯	೧೩೭
೦೮.	ಮಂಬಳೆ	೧೫	೪೬	೩೩	೭೯
	ಒಟ್ಟು ಆಲೂರು ಗ್ರಾ.ಪಂ.	೧೦೦	೨೮೬	೨೩೪	೫೨೦
	ಒಟ್ಟು ಜಿಲ್ಲಾವಾರು ಸಂಖ್ಯೆ	೨೦೦	೫೫೭	೫೦೫	೧೦೬೨
	ಶೇಕಡವಾರು ಪ್ರಮಾಣ		೫೨	೪೮	

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ಸಂದರ್ಶನ ಮಾಡಿದ ದಲಿತ ಕುಟುಂಬಗಳ ಜನಸಂಖ್ಯೆಯನ್ನು ವಿವಿಧ ವಯೋಮಾನದಲ್ಲಿ ನೋಡಿದಾಗ ಒಂದರಿಂದ ಐದು ವರ್ಷದ ವಯಸ್ಸಿನ ೪೨ ಜನ ಗಂಡುಮಕ್ಕಳು ಮತ್ತು ೪೪ ಜನ ಹೆಣ್ಣುಮಕ್ಕಳು ಸೇರಿ ಒಟ್ಟಿನಲ್ಲಿ ೮೬ ದಲಿತ ಮಕ್ಕಳಿದ್ದಾರೆ. ಇದೇ ವಯಸ್ಸಿನ ೧೨ ಜನ ಗಂಡುಮಕ್ಕಳು ಮತ್ತು ೨೪ ಜನ ಹೆಣ್ಣುಮಕ್ಕಳು ಸೇರಿ ಒಟ್ಟು ೩೬ ಜನ ದಲಿತ ಮಕ್ಕಳು ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿದ್ದಾರೆ. ಆಲೂರು ಗ್ರಾಮಪಂಚಾಯಿತಿಯಲ್ಲಿ ಇದೇ ವಯೋಮಾನದ ೩೦ ಜನ ಗಂಡುಮಕ್ಕಳು ಮತ್ತು ೨೦ ಜನ ಹೆಣ್ಣುಮಕ್ಕಳು ಸೇರಿಕೊಂಡು ಒಟ್ಟಿನಲ್ಲಿ ೫೦ ಜನ ದಲಿತ ಮಕ್ಕಳಿದ್ದಾರೆ.

ಕೋಷ್ಟಕ-೩.೨

ವಿವಿಧ ವಯೋಮಾನವಾರು ಜನಸಂಖ್ಯೆ

ಕ್ರ.ಸಂ. ಗ್ರಾಮದ ಹೆಸರು	೦-೪ ವರ್ಷ			೦೫-೧೪ ವರ್ಷ			೧೫-೪೦ ವರ್ಷ			೪೧-೬೦ ವರ್ಷ			೬೧ ವರ್ಷ ಮೇಲ್ಪಟ್ಟ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೦೧. ಮುದ್ದಾಪುರ	೦೮	೧೯	೨೭	೫೦	೫೬	೧೦೬	೬೬	೬೯	೧೩೫	೨೬	೧೬	೪೨	೦೫	-	೦೫
೦೨. ಯಲ್ಲಮ್ಮ ಕ್ಯಾಂಪ್	೦೧	೦೩	೦೪	೧೨	೧೩	೨೫	೦೬	೦೮	೧೪	೦೧	೦೫	೦೬	೦೧	-	೦೧
೦೩. ಬೆಳಗೋಡ್ ಹಾಳ್	೦೨	೦೧	೦೩	೨೯	೧೮	೪೭	೨೭	೩೧	೫೮	೧೨	೦೬	೧೮	೦೧	-	೦೧
೦೪. ಕಣವಿ ತಿಮ್ಮಲಾಪುರ	೦೧	೦೧	೦೨	೦೯	೦೫	೧೪	೧೬	೧೨	೨೮	೦೩	೦೩	೦೬	-	-	-
ಒಟ್ಟು ಮುದ್ದಾಪುರ ಗ್ರಾ.ಪಂ.	೧೨	೨೪	೩೬	೧೦೦	೯೨	೧೯೨	೧೧೫	೧೨೦	೨೩೫	೪೨	೩೦	೭೨	೦೬	೦೧	೦೭
೦೫. ಆಲೂರು	೦೫	೦೫	೧೦	೨೧	೨೩	೪೪	೪೧	೪೪	೮೫	೧೮	೧೦	೨೮	೦೧	೦೨	೦೩
೦೬. ಕಾನಾಮಡುಗು	೧೪	೦೪	೧೮	೧೩	೧೪	೨೭	೩೯	೩೨	೭೧	೦೬	೦೮	೧೪	೦೩	-	೦೩
೦೭. ಕೆಂಚಮಲ್ಲನ ಹಳ್ಳಿ	೦೫	೦೯	೧೪	೧೯	೧೬	೩೫	೩೦	೨೦	೫೦	೧೪	೧೪	೨೮	೦೩	೦೧	೦೪
೦೮. ಯಂಬಳೆ	೦೬	೦೨	೦೮	೦೮	೦೬	೧೪	೨೪	೧೮	೪೨	೦೭	೦೫	೧೨	೦೧	೦೨	೦೩
ಒಟ್ಟು ಆಲೂರು ಗ್ರಾ.ಪಂ.	೩೦	೨೦	೫೦	೬೧	೫೯	೧೨೦	೧೪೦	೧೧೪	೨೫೪	೪೫	೩೭	೮೨	೦೮	೦೫	೧೩
ಒಟ್ಟು ಜಿಲ್ಲಾವಾರು	೪೨	೪೪	೮೬	೧೬೧	೧೫೧	೩೧೨	೨೫೫	೨೩೪	೪೮೯	೮೭	೬೭	೧೫೪	೧೪	೦೬	೨೦

ಮೂಲ : ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ (೨೦೦೨-೦೩) ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.

ಅಧ್ಯಯನ ಕ್ಷೇತ್ರದಲ್ಲಿ ೦೬-೧೭ ವರ್ಷ ವಯಸ್ಸಿನ ೧೬೧ ಗಂಡುಮಕ್ಕಳು ಮತ್ತು ೧೫೧ ಹೆಣ್ಣುಮಕ್ಕಳನ್ನೊಳಗೊಂಡಂತೆ ಒಟ್ಟು ೩೧೨ ಜನ ದಲಿತ ಮಕ್ಕಳಿದ್ದಾರೆ. ಪ್ರತ್ಯೇಕವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ೧೦೦ ಜನ ಗಂಡುಮಕ್ಕಳು ಮತ್ತು ೯೨ ಜನ ಹೆಣ್ಣುಮಕ್ಕಳಿಂದ ಕೂಡಿದ ಒಟ್ಟು ೧೯೨ ಜನ ದಲಿತ ಮಕ್ಕಳ್ನು ಗುರುತಿಸಲಾಗಿದೆ. ಅದರಂತೆ ಆಲೂರು ಗ್ರಾಮಪಂಚಾಯತಿಯಲ್ಲಿ ೬೧ ಜನ ಗಂಡುಮಕ್ಕಳು ಮತ್ತು ೫೯ ಜನ ಹೆಣ್ಣುಮಕ್ಕಳು ಸೇರಿ ಒಟ್ಟು ೧೨೦ ಜನ ದಲಿತ ಮಕ್ಕಳಿರುವುದು ತಿಳಿದಿದೆ.

೧೮ ರಿಂದ ೪೦ ವರ್ಷ ವಯಸ್ಸಿನ ಒಟ್ಟು ೪೮೯ ಜನ ದಲಿತರಲ್ಲಿ ೨೫೫ ಜನ ಪುರುಷರು ಮತ್ತು ೨೩೪ ಜನ ಮಹಿಳೆಯರು ಅಧ್ಯಯನ ಕ್ಷೇತ್ರದಲ್ಲಿರುವುದು ಸಂದರ್ಶನದಿಂದ ತಿಳಿದಿದೆ. ಇದೇ ವಯೋಮಾನದ ೧೧೫ ಜನ ಗಂಡಸರು ಮತ್ತು ೧೨೦ ಜನ ಹೆಂಗಸರು ಸೇರಿ ಒಟ್ಟು ೨೩೫ ಜನರು ನಂ. ೧೦ ಮುದ್ದಾಪುರದಲ್ಲಿ ಹಾಗೂ ೧೪೦ ಜನ ಗಂಡಸರು ಮತ್ತು ೧೧೪ ಜನ ಹೆಂಗಸರು ಸೇರಿ ಒಟ್ಟು ೨೫೪ ಜನರು ಆಲೂರು ಗ್ರಾಮಪಂಚಾಯಿತಿಯಲ್ಲಿದ್ದಾರೆ.

ಅಧ್ಯಯನ ಕ್ಷೇತ್ರದಲ್ಲಿ ಸಂದರ್ಶನ ಮಾಡಿದ ಕುಟುಂಬಗಳಲ್ಲಿ ೪೧ ರಿಂದ ೬೦ ವರ್ಷ ವಯೋಮಾನದ ೮೭ ಜನ ಪುರುಷರು ಮತ್ತು ೬೭ ಜನ ಮಹಿಳೆಯರು ಸೇರಿ ಒಟ್ಟು ೧೫೪ ಜನ ದಲಿತರಿದ್ದಾರೆ. ಇದೇ ವಯಸ್ಸಿನ ೪೨ ಜನ ಪುರುಷರು ಮತ್ತು ೩೦ ಜನ ಮಹಿಳೆಯರು ಸೇರಿದಂತೆ ಒಟ್ಟಾರೆ ೭೨ ಜನ ದಲಿತರು ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಹಾಗೂ ೪೫ ಜನ ಗಂಡಸರು ಮತ್ತು ೩೭ ಜನ ಹೆಂಗಸರು ಕೂಡಿ ಒಟ್ಟು ೮೨ ಜನ ದಲಿತರು ಆಲೂರು ಗ್ರಾಮಪಂಚಾಯತಿಯಲ್ಲಿದ್ದಾರೆ.

೬೧ ವರ್ಷಕ್ಕೆ ಮೇಲ್ಪಟ್ಟ ೨೦ ಜನ ದಲಿತರಲ್ಲಿ ೧೪ ಜನ ಪುರುಷರು ಮತ್ತು ೬ ಜನ ಮಹಿಳೆಯರು ಸಂದರ್ಶನ ಮಾಡಿದ ದಲಿತ ಕುಟುಂಬಗಳಲ್ಲಿದ್ದಾರೆ. ಈ ವಯಸ್ಸಿನವರು ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಏಳು ಜನರಿದ್ದು ಅದರಲ್ಲಿ ೬ ಜನ ಪುರುಷರು ಮತ್ತು ಒಬ್ಬ ಮಹಿಳೆ ಇದ್ದಾಳೆ. ಆಲೂರು ಗ್ರಾಮಪಂಚಾಯತಿಯ ೧೩ ಜನ ದಲಿತರಲ್ಲಿ ೮ ಜನ ಪುರುಷರು ಮತ್ತು ೫ ಜನ ಮಹಿಳೆಯರಾಗಿದ್ದಾರೆ.

೩.೨. ವೈವಾಹಿಕ ಸ್ಥಿತಿ

ಸಂದರ್ಶನ ಮಾಡಿದ ದಲಿತ ಕುಟುಂಬಗಳಲ್ಲಿ ಒಟ್ಟು ೬೪೧ (೬೦%) ಅವಿವಾಹಿತರಿದ್ದು ಅದರಲ್ಲಿ ೩೬೮ ಜನ ಪುರುಷರು ಮತ್ತು ೨೭೩ ಜನ ಮಹಿಳೆಯರಾಗಿದ್ದಾರೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ೧೮೨ ಜನ ಗಂಡಸರು ಮತ್ತು ೧೫೩ ಜನ ಮಹಿಳೆಯರು ಸೇರಿ ಒಟ್ಟು ೩೩೫ ಜನ (ಶೇಕಡ ೬೧.೬೯) ಅವಿವಾಹಿತರಿದ್ದಾರೆ. ಅದೇ ರೀತಿಯಾಗಿ ಆಲೂರು

ಗ್ರಾಮಪಂಚಾಯತಿಯಲ್ಲಿ ೧೮೬ ಜನ ಗಂಡಸರು ಮತ್ತು ೧೨೦ ಜನ ಹೆಂಗಸರು ಸೇರಿ ಒಟ್ಟು ೩೦೬ (ಶೇಕಡ ೫೮.೯೫) ಜನ ಅವಿವಾಹಿತರಿದ್ದಾರೆ.

ಸಂದರ್ಶನ ಮಾಡಿದ ದಲಿತ ಕುಟುಂಬಗಳಲ್ಲಿ ಒಟ್ಟು ೩೪೯ ಜನ ವಿವಾಹಿತರಿದ್ದು (ಶೇಕಡ ೩೩) ಅದರಲ್ಲಿ ೧೭೩ ಜನ ಪುರುಷರು ಮತ್ತು ೧೭೬ ಜನ ಮಹಿಳೆಯರಿದ್ದಾರೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿರುವ ಒಟ್ಟು ೧೬೦ (ಶೇಕಡ ೨೯.೪೬) ಜನ ವಿವಾಹಿತರಲ್ಲಿ ೭೯ ಜನ ಗಂಡಸರಾದರೆ ಇನ್ನೂಳಿದ ೮೧ ಜನ ಮಹಿಳೆಯರಿದ್ದಾರೆ. ಆಲೂರು ಗ್ರಾಮಪಂಚಾಯತಿ ಯಲ್ಲಿರುವ ಒಟ್ಟು ೧೮೯ (ಶೇಕಡ ೩೬.೪೧) ಜನ ವಿವಾಹಿತರಲ್ಲಿ ೯೪ ಜನ ಗಂಡಸರು ಮತ್ತು ೯೫ ಜನ ಮಹಿಳೆಯರಿದ್ದಾರೆ.

ಸಂದರ್ಶನ ಮಾಡಿದ ಕುಟುಂಬಗಳಲ್ಲಿ ಒಟ್ಟು ೧೬ ಜನ ವಿಧುರರು ಮತ್ತು ೪೯ ಜನ ವಿಧವೆಯರು ಸೇರಿ ೬೫ ಜನ (ಶೇಕಡ ೬) ಇದ್ದಾರೆ. ಇದನ್ನು ಗ್ರಾಮಪಂಚಾಯತಿವಾರು ನೋಡಿದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ೧೨ ಜನ ವಿಧುರರು ಮತ್ತು ೨೯ ಜನ ವಿಧವೆಯರು ಸೇರಿ ಒಟ್ಟು ೪೧ (ಶೇಕಡ ೭.೫೫) ಜನರು ಇದ್ದಾರೆ. ಅದರಂತೆ ಆಲೂರು ಗ್ರಾಮಪಂಚಾಯತಿಯಲ್ಲಿ ೪ ಜನ ವಿಧುರರು ಮತ್ತು ೨೦ ಜನ ವಿಧವೆಯರು ಸೇರಿ ಒಟ್ಟು ೨೪ ಜನ (ಶೇಕಡ ೪.೬೨) ಇದ್ದಾರೆ.

ಇನ್ನು ಸಾಮಾಜಿಕ ಅನಿಷ್ಟವೆನಿಸಿಕೊಂಡಿರುವ ದೇವದಾಸಿ ಪದ್ಧತಿಯು ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಮಾತ್ರ ಶೇಕಡ ೧.೨೮ರಷ್ಟಿದ್ದು (ಒಟ್ಟು ೭ ಜನ) ಆಲೂರು ಗ್ರಾಮಪಂಚಾ ಯತಿಯಲ್ಲಿ ಕಂಡುಬಂದಿರುವುದಿಲ್ಲ.

೩.೩. ಶಿಕ್ಷಣ

ಅಧ್ಯಯನ ಕ್ಷೇತ್ರದಲ್ಲಿ ಸಂದರ್ಶನ ಮಾಡಿದ ದಲಿತ ಕುಟುಂಬಗಳ ಒಟ್ಟು ೧೬೩ ಜನ (ಶೇಕಡ ೩೧ರಷ್ಟು) ಪ್ರಾಥಮಿಕ ಶಿಕ್ಷಣ ಪಡೆದಿದ್ದು ಅದರಲ್ಲಿ ೯೦ ಜನ ಪುರುಷರಾದರೆ ೭೩ ಜನ ಮಹಿಳೆಯರಿದ್ದಾರೆ. ಇದನ್ನೇ ಗ್ರಾಮಪಂಚಾಯತಿವಾರು ಗಮನಿಸಿದರೆ ನಂ. ೧೦ ಮುದ್ದಾಪುರದಲ್ಲಿ ೧೦೦ ಜನ (ಶೇಕಡ ೪೦.೪೮ರಷ್ಟು) ಪ್ರಾಥಮಿಕ ಶಿಕ್ಷಣ ಪಡೆದುಕೊಂಡಿದ್ದು, ಅದರಲ್ಲಿ ೫೬ ಜನ ಪುರುಷರು ಮತ್ತು ೪೪ ಜನ ಮಹಿಳೆಯರಿದ್ದಾರೆ. ಆಲೂರು ಗ್ರಾಮಪಂಚಾಯತಿ ಪ್ರದೇಶದಲ್ಲಿ ಒಟ್ಟು (ಶೇಕಡ ೨೧.೦೭ರಷ್ಟು) ೬೩ ಜನ ಪ್ರಾಥಮಿಕ ಶಿಕ್ಷಣ ಪಡೆದು ಅದರಲ್ಲಿ ೩೪ ಜನ ಪುರುಷರಿದ್ದರೆ ೨೯ ಜನ ಮಹಿಳೆಯರಿದ್ದಾರೆ. ಅದೇ ರೀತಿಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದವರ ಪ್ರಮಾಣ ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೧೬೦ ಜನ(ಶೇಕಡ ೨೯ರಷ್ಟು)ರಿದ್ದು, ಅದರಲ್ಲಿ ೯೦ ಜನ ಗಂಡಸರಾದರೆ ಉಳಿದ ೭೦ ಜನ ಮಹಿಳೆಯರಾಗಿದ್ದಾರೆ. ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದವರ ಪ್ರಮಾಣ ಒಟ್ಟು ೭೫ ಜನ (ಶೇಕಡ ೩೦.೩೬)ರಲ್ಲಿ ೪೮ ಜನ

ಕೋಷ್ಟಕ-೩.೩

ನಂ.೧೦ ಮುದ್ದಾಪುರ ಮತ್ತು ಆಲೂರು ಗ್ರಾಮಪಂಚಾಯಿತಿಗಳ ದಲಿತರ ಶೈಕ್ಷಣಿಕ ಮಟ್ಟ

ಕ್ರ.ಸಂ. ಗ್ರಾಮದ ಹೆಸರು	ಪ್ರಾಥಮಿಕ			ಮಾಧ್ಯಮಿಕ			ಪ್ರೌಢಶಾಲೆ			ಡಿಪ್ಲೋಮಾ			ಪಿಯುಸಿ			ಪದವಿ			ಸ್ನಾತಕೋತ್ತರ			ಇತರೆ		
	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೦೧. ಮುದ್ದಾಪುರ	೨೨	೨೪	೪೬	೨೫	೧೪	೩೯	೧೪	೦೯	೨೩	-	-	-	೦೮	೦೬	೧೪	೦೩	೦೧	೦೪	-	-	-	-	-	-
೦೨. ಯಲ್ಲಮ್ಮ ಕ್ಯಾಂಪ್	೦೬	೦೮	೧೪	೦೫	೦೪	೦೯	೦೧	೦೧	೦೨	-	-	-	೦೧	-	೦೧	-	-	-	೦೧	೦೧	೦೨	-	-	-
೦೩. ಬೆಳಗೋಡ್ ಹಾಳ್	೨೦	೦೯	೨೯	೧೩	೦೭	೨೦	೦೯	೦೬	೧೫	೦೧	-	೦೧	೦೧	೦೧	೦೨	-	-	-	೦೧	೦೧	೦೨	-	-	-
೦೪. ಕಣವಿ ತಿಮ್ಮಲಾಪುರ	೦೮	೦೩	೧೧	೦೫	೦೨	೦೭	೦೬	೦೧	೦೭	-	-	-	-	-	-	೦೧	-	೦೧	-	-	-	-	-	-
ಒಟ್ಟು ಮುದ್ದಾಪುರ ಗ್ರಾ.ಪಂ.	೫೬	೪೪	೧೦೦	೪೮	೨೭	೭೫	೩೦	೧೭	೪೭	೦೧	-	೦೧	೧೦	೦೭	೧೭	೦೪	೦೧	೦೫	೦೧	೦೧	೦೨	-	-	-
೦೫. ಆಲೂರು	೧೧	೧೦	೨೧	೧೩	೧೬	೨೯	೧೩	೧೪	೨೭	೧೦	-	೦೧	೧೯	೦೭	೨೬	೦೮	-	೦೮	-	-	-	೦೧	-	೦೧
೦೬. ಕಾನಾಮಡುಗು	೦೮	೦೮	೧೬	೧೪	೧೨	೨೬	೧೨	೦೬	೧೮	೦೧	-	೦೧	೦೭	೦೧	೦೮	೦೨	-	೦೨	-	-	-	೦೪	೦೪	೦೮
೦೭. ಕೆಂಚಮಲ್ಲನಹಳ್ಳಿ	೧೧	೦೮	೧೯	೦೯	೦೬	೧೫	೧೩	೦೨	೧೫	೦೧	-	೦೧	೦೯	೦೩	೧೨	-	-	-	-	-	-	೦೨	-	೦೨
೦೮. ಯಂಬಳೆ	೦೪	೦೩	೦೭	೦೬	೦೯	೧೫	೧೦	-	೧೦	-	-	-	೦೮	-	೦೮	೦೨	-	೦೨	-	-	-	೦೧	-	೦೧
ಒಟ್ಟು ಆಲೂರು ಗ್ರಾ.ಪಂ.	೩೪	೨೯	೬೩	೪೨	೪೩	೮೫	೪೮	೨೨	೭೦	೦೩	-	೦೩	೪೩	೧೧	೫೪	೧೨	-	೧೨	-	-	-	೧೧	೦೧	೧೨
ಶೇಕಡವಾರು	೩೧			೨೯			೨೧			೦೧			೧೩			೦೩			-			೦೨		

ಮೂಲ : ಸೆನ್ಸಸ್ ಆಫ್ ಇಂಡಿಯಾ (೨೦೦೧) ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೇಟ್, ಬಳ್ಳಾರಿ.

ಪುರುಷರು ಮತ್ತು ೨೭ ಜನ ಮಹಿಳೆಯರು ಸೇರಿದ್ದಾರೆ. ಆಲೂರು ಗ್ರಾಮಪಂಚಾಯತಿಯಲ್ಲಾದರೆ ಮಾಧ್ಯಮಿಕ ಶಿಕ್ಷಣ ಪಡೆದವರ ಪ್ರಮಾಣ ಒಟ್ಟು ೮೫ (ಶೇಕಡ ೨೮.೪೨ರಷ್ಟು) ಜನರಲ್ಲಿ ೪೨ ಜನ ಗಂಡುಮಕ್ಕಳು ಮತ್ತು ೪೩ ಜನ ಹೆಣ್ಣುಮಕ್ಕಳು ಇದ್ದಾರೆ.

ಪ್ರೌಢಶಾಲಾ ಶಿಕ್ಷಣ ಪಡೆದವರ ಪ್ರಮಾಣ ಸಂದರ್ಶನ ಮಾಡಿದ ಕುಟುಂಬಗಳಲ್ಲಿ ಒಟ್ಟು ೧೧೭ ಜನ (ಶೇಕಡ ೨೧ರಷ್ಟು) ಇದ್ದು, ಅದರಲ್ಲಿ ೭೮ ಜನ ಗಂಡುಮಕ್ಕಳು ಮತ್ತು ೩೯ ಜನ ಹೆಣ್ಣುಮಕ್ಕಳಿದ್ದಾರೆ. ಮುದ್ದಾಪುರ ಗ್ರಾಮಪಂಚಾಯತಿಯೊಂದರಲ್ಲೇ ಪ್ರೌಢಶಾಲಾ ಶಿಕ್ಷಣವನ್ನು ಪಡೆದ ಒಟ್ಟು ೪೭ ಜನರಿದ್ದು (ಶೇಕಡ ೧೯.೦೨ರಷ್ಟು) ಅದರಲ್ಲಿ ೩೦ ಜನ ಗಂಡುಸರು ಮತ್ತು ೧೭ ಜನ ಹೆಂಗಸರಿದ್ದಾರೆ. ಅದರಂತೆ ಆಲೂರು ಗ್ರಾಮಪಂಚಾಯತಿಯಲ್ಲಿ ಒಟ್ಟು ೭೦ ಜನ ದಲಿತರು ಪ್ರೌಢಶಿಕ್ಷಣ ಪಡೆದಿದ್ದು (ಶೇಕಡ ೨೩.೪೧ರಷ್ಟು) ಅದರಲ್ಲಿ ೪೮ ಜನ ಗಂಡುಮಕ್ಕಳು ಮತ್ತು ೨೨ ಜನ ಹೆಣ್ಣುಮಕ್ಕಳಿದ್ದಾರೆ. ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೪ ಜನ ಪುರುಷರು ಡಿಪ್ಲೋಮಾ ಶಿಕ್ಷಣ ಪಡೆದವರಿದ್ದು, ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಒಬ್ಬ ಪುರುಷ ಮತ್ತು ಆಲೂರು ಗ್ರಾಮಪಂಚಾಯಿತಿಯಲ್ಲಿ ಮೂರು ಜನ ಪುರುಷರಿದ್ದಾರೆ. ಆದರೆ ಎರಡೂ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಮಹಿಳೆಯರು ಡಿಪ್ಲೋಮಾ ಶಿಕ್ಷಣ ಪಡೆದುಕೊಂಡಿಲ್ಲದಿರುವುದು ತಿಳಿಯುತ್ತದೆ.

ಅಧ್ಯಯನ ಕ್ಷೇತ್ರದಲ್ಲಿನ ಸಂದರ್ಶಿತ ಕುಟುಂಬಗಳ ಒಟ್ಟು ೭೧ ಜನ (ಶೇಕಡ ೧೩ರಷ್ಟು) ಪದವಿ ಪೂರ್ವಶಿಕ್ಷಣ ಪಡೆದಿದ್ದು, ಅದರಲ್ಲಿ ೫೩ಜನ ಪುರುಷರು ಮತ್ತು ೧೮ ಜನ ಮಹಿಳೆಯರಿದ್ದಾರೆ. ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಪದವಿ ಪೂರ್ವ ಶಿಕ್ಷಣ ಪಡೆದವರ ಪ್ರಮಾಣ ಒಟ್ಟು ೧೭ ಜನ(ಶೇಕಡ ೬.೮೮ರಷ್ಟು)ರಾಗಿದ್ದು ಅದರಲ್ಲಿ ೧೦ ಜನ ಪುರುಷರಾದರೆ ಉಳಿದಂತೆ ೭ ಜನ ಮಹಿಳೆಯರಾಗಿದ್ದಾರೆ. ಆಲೂರು ಗ್ರಾಮಪಂಚಾಯಿತಿಯಲ್ಲಿ ಒಟ್ಟು ೫೪ ಜನ ಪದವಿ ಪೂರ್ವ ಶಿಕ್ಷಣವನ್ನು ಪಡೆದವರಿದ್ದು (ಶೇಕಡ ೧೮.೦೬ರಷ್ಟು) ೪೩ ಜನ ಗಂಡುಮಕ್ಕಳು ಮತ್ತು ೧೧ ಜನ ಹೆಣ್ಣುಮಕ್ಕಳಾಗಿದ್ದಾರೆ. ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೧೭ ಜನ (ಶೇಕಡ ೩ರಷ್ಟು) ಪದವಿ ಶಿಕ್ಷಣ ಪಡೆದವರಲ್ಲಿ ೧೬ ಜನ ಪುರುಷರು ಮತ್ತು ಒಬ್ಬರು ಮಾತ್ರ ಮಹಿಳೆ ಇದ್ದಾರೆ.

ಗ್ರಾಮಪಂಚಾಯಿತಿವಾರು ಹೇಳುವುದಾದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಒಟ್ಟು ೫ ಜನ ಪದವೀಧರರಿದ್ದು (ಶೇಕಡ ೨.೦೨ರಷ್ಟು) ಅದರಲ್ಲಿ ಗಂಡುಮಕ್ಕಳು ನಾಲ್ಕು ಜನ ಹೆಣ್ಣುಮಕ್ಕಳು ಒಬ್ಬರಿದ್ದಾರೆ. ಆಲೂರು ಗ್ರಾಮಪಂಚಾಯಿತಿಯಲ್ಲಿ ೧೨ ಜನ ಪದವೀಧರರಿದ್ದು (ಶೇಕಡ ೩ರಷ್ಟು) ಎಲ್ಲರೂ ಪುರುಷರು. ಸ್ನಾತಕೋತ್ತರ ಪದವಿಯನ್ನು ಪಡೆದವರ ಪ್ರಮಾಣ ಸಂದರ್ಶಿತ ಕುಟುಂಬಗಳಲ್ಲಿ ಒಟ್ಟು ಇಬ್ಬರಿದ್ದು (ಶೇಕಡ ೦.೮ರಷ್ಟು) ಇವರು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿರುವ ಒಬ್ಬರು ಪುರುಷರು ಮತ್ತು ಒಬ್ಬರು ಮಹಿಳೆಯರಾಗಿದ್ದಾರೆ. ಆದರೆ ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲಿ ಸ್ನಾತಕೋತ್ತರ ಪದವೀಧರರು ಕಂಡುಬರುವುದಿಲ್ಲ. ಇತರೆ

ತರಬೇತಿ ಶಿಕ್ಷಣ ಪಡೆದವರು ಅಧ್ಯಯನ ಕ್ಷೇತ್ರದ ಆಲೂರು ಗ್ರಾಮಪಂಚಾಯಿತಿಯ ಸಂದರ್ಶಿತ ಕುಟುಂಬಗಳಲ್ಲಿ ಮಾತ್ರ ಒಟ್ಟು ೧೨ ಜನರಿದ್ದು, ಅದರಲ್ಲಿ ೧೧ ಜನ ಪುರುಷರು ಮತ್ತು ಒಬ್ಬರು ಮಹಿಳೆಯರಾಗಿದ್ದಾರೆ. ಆದರೆ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಇತರೆ ತರಬೇತಿ ಪಡೆದವರು ಇರುವುದಿಲ್ಲ ಎಂದು ತಿಳಿದುಬಂದಿರುತ್ತದೆ.

ಅಧ್ಯಯನ ಕ್ಷೇತ್ರದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ದಲಿತರ ಪ್ರಮಾಣ ಒಟ್ಟು ೧೬೩ರಲ್ಲಿ (ಶೇಕಡ ೩೧ರಷ್ಟು) ಪುರುಷರು ಮಹಿಳೆಯರ ಪ್ರಮಾಣಕ್ಕಿಂತ ಹೆಚ್ಚಾಗಿದ್ದಾರೆ. ಇದೇ ರೀತಿಯ ಪರಿಸ್ಥಿತಿಯ ಎರಡೂ ಗ್ರಾಮಪಂಚಾಯಿತಿಗಳನ್ನು ಪ್ರತ್ಯೇಕವಾಗಿ ನೋಡಿದಾಗಲೂ ಕಂಡುಬರುತ್ತದೆ. ಮಾಧ್ಯಮಿಕ ಶಿಕ್ಷಣ ಪಡೆದ ಒಟ್ಟು ದಲಿತರ ಪ್ರಮಾಣ ೧೬೦ (ಶೇಕಡ ೨೯ರಷ್ಟು) ಜನರಲ್ಲಿ ಕೂಡ ದಲಿತ ಮಹಿಳೆಯರಿಗಿಂತ ಪುರುಷರೇ ಮುಂದಿದ್ದಾರೆ. ಈ ವಿಷಯವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿದ್ದರೂ ಆಲೂರು ಗ್ರಾಮಪಂಚಾಯತಿಯಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದ ಪ್ರಮಾಣ (ಶೇಕಡ ೪೨ರಷ್ಟು) ಕ್ಕಿಂತ ಮಹಿಳೆಯರ ಪ್ರಮಾಣ (ಶೇಕಡ ೪೩ರಷ್ಟು) ಸ್ವಲ್ಪ ಹೆಚ್ಚಾಗಿದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ನೀರಾವರಿ ಪ್ರದೇಶದಲ್ಲಿನ ದಲಿತರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೊಡುವ ಆದ್ಯತೆಗಿಂತ ಮಳೆಯಾಶ್ರಿತ ಪ್ರದೇಶದಲ್ಲಿನ ದಲಿತರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆಂಬ ಅಂಶವು ಬೆಳಕಿಗೆ ಬರುತ್ತದೆ.

ಆದರೆ ಪ್ರೌಢಶಿಕ್ಷಣದ ವಿಷಯದಲ್ಲಿ ಒಟ್ಟು ೧೧೭ (ಶೇಕಡ ೨೧ರಷ್ಟು) ಜನ ದಲಿತರಲ್ಲಿ ಮಹಿಳೆಯರಿಗಿಂತ (ಶೇಕಡ ೬೯ರಷ್ಟು) ಪುರುಷರೇ (ಶೇಕಡ ೭೮ರಷ್ಟು) ಹೆಚ್ಚಾಗಿರುವ ಸಂಗತಿಯು ಎರಡೂ ಪಂಚಾಯತಿಗಳಲ್ಲಿಯೂ ಕಂಡುಬರುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಡಿಪ್ಲೋಮಾ ಶಿಕ್ಷಣ ಪಡೆದ ದಲಿತರ ಪ್ರಮಾಣ ಗೌಣವಾಗಿದ್ದು ಸಾಪೇಕ್ಷವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಗಿಂತ (ಶೇಕಡ ೧ರಷ್ಟು) ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿ (೩ ಜನ) ಹೆಚ್ಚಾಗಿದ್ದಾರೆ. ಇದನ್ನು ಅವಲೋಕಿಸಿದಾಗ ನೀರಾವರಿ ಪ್ರದೇಶದ ದಲಿತರು ಡಿಪ್ಲೋಮಾ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡುವುದಕ್ಕಿಂತ ಮಳೆಯಾಶ್ರಿತ ಪ್ರದೇಶದ ದಲಿತರೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ ಎಂಬುದು ಗೊತ್ತಾಗುತ್ತದೆ.

ಆದರೂ ಕೂಡ ಎರಡು ಗ್ರಾಮಪಂಚಾಯತಿಗಳಲ್ಲಿ ಡಿಪ್ಲೋಮಾ ಶಿಕ್ಷಣವನ್ನು ಪಡೆದ ಮಹಿಳೆಯರಿಲ್ಲದಿರುವುದು ಎದ್ದುಕಾಣುತ್ತದೆ. ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ.) ಪಡೆದ ದಲಿತರ ಪ್ರಮಾಣ ಒಟ್ಟು ೭೧ ಜನ(ಶೇಕಡ ೧೩ರಷ್ಟು)ರಲ್ಲಿ ಮಹಿಳೆಯರು (ಶೇಕಡ ೧೮ರಷ್ಟು) ಪುರುಷರಿ ಗಿಂತಲೂ (೫೩ ಜನ) ಕಡಿಮೆ ಇರುವ ಅಧ್ಯಯನ ಕ್ಷೇತ್ರದ ಸಾಮಾನ್ಯ ಸ್ಥಿತಿಯಂತೆ ಎರಡೂ ಗ್ರಾಮಪಂಚಾಯತಿಗಳಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದರೆ ಪದವಿ ಪೂರ್ವ ಶಿಕ್ಷಣ ಪಡೆದವರ ಪ್ರಮಾಣ ನೀರಾವರಿ ಪ್ರದೇಶದಲ್ಲಿರುವುದಕ್ಕಿಂತ ಮಳೆಯಾಶ್ರಿತ ಪ್ರದೇಶ

ದಲ್ಲಿಯೇ ಹೆಚ್ಚಾಗಿರುವುದು ಗೊತ್ತಾಗುತ್ತದೆ. ಇದರಿಂದ ಮಳೆಯಾಶ್ರಿತ ಪ್ರದೇಶದಲ್ಲಿನ ದಲಿತರು ಶಿಕ್ಷಣಾಸಕ್ತರಾಗಿದ್ದಾರೆಂದು ತಿಳಿಯುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಪದವಿ ಪಡೆದ ಒಟ್ಟು ೧೭ ಜನ (ಶೇಕಡ ೩ರಷ್ಟು) ದಲಿತರಲ್ಲಿ ಪುರುಷರೇ ಪ್ರಧಾನವಾಗಿದ್ದು, ಮಹಿಳೆಯರು ಗೌಣವಾಗಿದ್ದಾರೆ (ಒಬ್ಬರು). ನಂ.೧೦ ಮುದ್ದಾಪುರದಲ್ಲಿ ಈ ಚಿತ್ರಣವಿದೆ.

ಆಲೂರು ಗ್ರಾಮಪಂಚಾಯತಿಯಲ್ಲಿ ಪದವಿ ಪಡೆದ ದಲಿತ ಮಹಿಳೆಯರೇ ಕಂಡುಬರದಿರುವುದು ಒಂದು ಆತಂಕ. ಮುಂದುವರಿದಂತೆ ಸ್ನಾತಕೋತ್ತರ ಶಿಕ್ಷಣ ಪಡೆದ ದಲಿತರಲ್ಲಿ (ಶೇಕಡ ೦.೬ರಷ್ಟು) ಒಬ್ಬರು ಪುರುಷ ಮತ್ತು ಒಬ್ಬರು ಮಹಿಳೆಯರಿರುವುದು ಸಮಾನತೆಯ ಅಂಶವಾಗುತ್ತದೆ. ಈ ಸಂಗತಿ ನಂ.೧೦ ಮುದ್ದಾಪುರದಲ್ಲಿ ಮಾತ್ರವಿದ್ದು, ಆಲೂರು ಗ್ರಾಮಪಂಚಾಯತಿಯಲ್ಲಿ ಇರುವುದಿಲ್ಲ. ಅಂದರೆ ಮಳೆಯಾಶ್ರಿತ ಪ್ರದೇಶದಲ್ಲಿ ದಲಿತರು ಉನ್ನತ ಶಿಕ್ಷಣಕ್ಕೆ ಹೋಗಲು ಆರ್ಥಿಕ ಅಂಶ ಮುಖ್ಯವಾಗುತ್ತದೆ. ಇನ್ನೊಂದು ವಿಚಿತ್ರವೆಂದರೆ ಕೆಲವು ತರಬೇತಿ ಶಿಕ್ಷಣ ಪಡೆದ ದಲಿತರು ಅಧ್ಯಯನ ಕ್ಷೇತ್ರದಲ್ಲಿ ಸ್ವಲ್ಪ ಪ್ರಮಾಣ(೧೨ ಜನ)ದಲ್ಲಿದ್ದು, ಇವರೆಲ್ಲರೂ ಆಲೂರು ಗ್ರಾಮಪಂಚಾಯತಿಯಲ್ಲಿದ್ದಾರೆ. ಆದರೆ ನಂ. ೧೦ ಮುದ್ದಾಪುರದಲ್ಲಿ ತರಬೇತಿ ಶಿಕ್ಷಣ ಪಡೆದವರು ಇಲ್ಲದಿರುವುದು ತರಬೇತಿ ಶಿಕ್ಷಣಕ್ಕೆ ನೀರಾವರಿ ಪ್ರದೇಶದ ದಲಿತರು ಹೆಚ್ಚಿನ ಆಸಕ್ತಿ ಮತ್ತು ಪ್ರಾಮುಖ್ಯತೆ ಕೊಟ್ಟಿಲ್ಲದಿರುವುದು ಕಂಡುಬರುತ್ತದೆ.

ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಶಿಕ್ಷಣದ ಮಟ್ಟವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಹೋದಂತೆ ಶಿಕ್ಷಣ ಪಡೆದ ದಲಿತರ ಪ್ರಮಾಣ ಕಡಿಮೆಯಾಗುತ್ತ ಸಾಗಿರುತ್ತದೆ. ಆದರೂ ಈ ವಿಷಯದಲ್ಲಿ ಸಾಪೇಕ್ಷವಾಗಿ ನೀರಾವರಿ ಪ್ರದೇಶಕ್ಕಿಂತ ಮಳೆಯಾಶ್ರಿತ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು. ಇದಕ್ಕೆ ಹೊಂದಿಕೊಂಡಂತೆ ಶಿಕ್ಷಣ ಪಡೆದ ಪುರುಷರೇ ಮಹಿಳೆಯರಿಗಿಂತ ಹೆಚ್ಚಾಗಿದ್ದು, ಪುರುಷ ಮತ್ತು ಮಹಿಳೆಯರ ಶಿಕ್ಷಣದ ಅಂತರವೂ ಅಧಿಕವಾಗಿದೆ. ಶಿಕ್ಷಣದ ಮಹಿಳೆ-ಪುರುಷರ ಅಂತರ ಉನ್ನತ ಶಿಕ್ಷಣಕ್ಕೆ ಹೋದಂತೆಲ್ಲಾ ಹೆಚ್ಚಾಗುತ್ತಾ ಹೋಗುತ್ತದೆ. ಇದೇ ಅಂತರವು ನೀರಾವರಿ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು, ಮಳೆಯಾಶ್ರಿತ ಪ್ರದೇಶದಲ್ಲಿ ಸಾಪೇಕ್ಷವಾಗಿ ಕಡಿಮೆ ಎನಿಸುತ್ತದೆ. ಇನ್ನೂ ತರಬೇತಿ ಶಿಕ್ಷಣದ ಕಡೆಗೆ ದಲಿತರ ಗಮನ ಕಡಿಮೆ ಇದ್ದು, ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದಲ್ಲಿರುವ ಒಂದು ಕೊರತೆ ಎನಿಸುತ್ತದೆ. ಒಟ್ಟಿನಲ್ಲಿ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಶಿಕ್ಷಣ ಪ್ರಾದೇಶಿಕ ಭಿನ್ನತೆಗಳಿಂದ ಕೂಡಿರುವುದು ತಿಳಿಯುತ್ತದೆ.

೩.೪. ಉದ್ಯೋಗ

ಅಧ್ಯಯನ ಕ್ಷೇತ್ರದ ಸಂದರ್ಶಿತ ದಲಿತ ಕುಟುಂಬಗಳ ಉದ್ಯೋಗದ ವಿಷಯಕ್ಕೆ ಬಂದಾಗ ೫೮ ಜನ (ಶೇಕಡ ೧೧ರಷ್ಟು) ದಲಿತರು ಕೃಷಿಯನ್ನು ಮಾಡುತ್ತಿದ್ದು, ಅದರಲ್ಲಿ ೫೫ ಜನ ಪುರುಷ

ರಾದರೆ ಉಳಿದ ೩ ಜನ ಮಹಿಳೆಯರಾಗಿದ್ದಾರೆ. ಇದನ್ನೇ ಗ್ರಾಮಪಂಚಾಯತಿವಾರು ನೋಡಿದರೆ ನಂ. ೧೦ ಮುದ್ದಾಪುರದಲ್ಲಿರುವ ಒಟ್ಟು ೮ ಜನ ಕೃಷಿಕರಲ್ಲಿ (ಶೇಕಡ ೨.೮೮ರಷ್ಟು) ಏಳು ಜನ ಪುರುಷರು ಮತ್ತು ಒಬ್ಬರು ಮಹಿಳೆಯರಾಗಿದ್ದಾರೆ. ಆಲೂರು ಗ್ರಾಮಪಂಚಾಯಿತಿಯಲ್ಲಾದರೆ ಒಟ್ಟು ೫೦ ಜನ (ಶೇಕಡ ೨೧ರಷ್ಟು) ಕೃಷಿಕರಿದ್ದು, ಅದರಲ್ಲಿ ೪೮ ಜನ ಪುರುಷರಾದರೆ ಉಳಿದಂತಹ ಇಬ್ಬರು ಮಹಿಳೆಯರಾಗಿದ್ದಾರೆ. ಹೀಗೆ ಕೃಷಿಯನ್ನು ಉದ್ಯೋಗವನ್ನಾಗಿಸಿಕೊಂಡ ಅಧ್ಯಯನ ಕ್ಷೇತ್ರದ ದಲಿತರು ಅಲ್ಪಸ್ವಲ್ಪ ಭೂಮಿ ಅಂದರೆ ನಾಲ್ಕು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿದವ ರಾಗಿದ್ದಾರೆ. ಆದರೆ ಅಲ್ಪಸ್ವಲ್ಪವೂ ಜಮೀನು ಹೊಂದದೆ ಬೇರೆಯವರ ಜಮೀನುಗಳಲ್ಲಿ ಕೃಷಿ ಕೂಲಿ ಮಾಡುವಂತವರ ಪ್ರಮಾಣ ಒಟ್ಟು ೪೧೬ ಇದ್ದು (ಶೇಕಡ ೮೧ರಷ್ಟು) ಇದರಲ್ಲಿ ೨೨೮ ಜನ ಪುರುಷರು ಮತ್ತು ೧೮೮ ಜನ ಮಹಿಳೆಯರು ಸೇರಿಕೊಂಡಿದ್ದಾರೆ.

ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ೨೪೭ ಜನ (ಶೇಕಡ ೮೯.೧೬ರಷ್ಟು) ದಲಿತರು ಕೃಷಿ ಕೂಲಿಯನ್ನು ತಮ್ಮ ಜೀವನಕ್ಕಾಗಿ ನಂಬಿದ್ದು, ಇದರಲ್ಲಿ ೧೩೭ ಜನ ಗಂಡಸರು ಮತ್ತು ೧೧೦ ಜನ ಹೆಣ್ಣುಮಕ್ಕಳಿದ್ದಾರೆ. ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಒಟ್ಟು ೧೬೯ ಜನ (ಶೇಕಡ ೭೧ರಷ್ಟು) ದಲಿತರು ಕೃಷಿ ಕೂಲಿಯನ್ನು ಮಾಡುತ್ತಿದ್ದು, ಇದರಲ್ಲಿ ೯೧ ಜನ ಪುರುಷರಾದರೆ ಇನ್ನುಳಿದ ೭೮ ಜನ ಮಹಿಳೆಯರಾಗಿದ್ದಾರೆ. ಸರ್ಕಾರಿ ಉದ್ಯೋಗವನ್ನು ಮಾಡುತ್ತಿರುವವವರ ಪ್ರಮಾಣ ಅಧ್ಯಯನ ಕ್ಷೇತ್ರದ ಸಂದರ್ಶಿತ ಕುಟುಂಬಗಳಲ್ಲಿ ಕೇವಲ ೯ ಜನರಿದ್ದು (ಶೇಕಡ ೨ರಷ್ಟು) ಇದರಲ್ಲಿ ೮ ಜನ ಪುರುಷರು ಮತ್ತು ಒಬ್ಬರು ಮಹಿಳೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದಲ್ಲಿರುವ ಇಬ್ಬರು (ಶೇಕಡ ೦.೭೨ರಷ್ಟು) ಸರ್ಕಾರಿ ಉದ್ಯೋಗಿಗಳಲ್ಲಿ ಒಬ್ಬರು ಗಂಡುಮಕ್ಕಳು, ಇನ್ನೊಬ್ಬರು ಹೆಣ್ಣುಮಕ್ಕಳು ಆಗಿದ್ದಾರೆ. ಅದೇ ರೀತಿಯಾಗಿ ಆಲೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿರುವ ಒಟ್ಟು ಏಳು ಜನ ಸರ್ಕಾರಿ ಉದ್ಯೋಗಿಗಳು ಪುರಷರಾಗಿದ್ದು, ಮಹಿಳಾ ಸರ್ಕಾರಿ ಉದ್ಯೋಗಿಗಳಿರುವುದಿಲ್ಲ. ಇನ್ನೂ ಖಾಸಗಿ ನೌಕರಿ ಮಾಡುವವರ ಪ್ರಮಾಣ ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೫ ಜನರಿದ್ದು, (ಶೇಕಡ ೧ರಷ್ಟು) ಪುರುಷರಾಗಿದ್ದಾರೆ. ಇವರಲ್ಲಿ ನಾಲ್ಕು ಜನ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಮತ್ತು ಒಬ್ಬರು ಮಾತ್ರ ಆಲೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿದ್ದಾರೆ.

ಅಧ್ಯಯನ ಕ್ಷೇತ್ರದಲ್ಲಿ ಸಣ್ಣ ವ್ಯಾಪಾರ ಮಾಡುವವರು ಇಬ್ಬರಿದ್ದು, ಒಬ್ಬರು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದಲ್ಲಿದ್ದರೆ ಉಳಿದ ಇನ್ನೊಬ್ಬರು ಆಲೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿದ್ದಾರೆ. ಇನ್ನಿತರೆ ಕಸುಬುಗಳನ್ನು ಮಾಡುವವರು ಅಧ್ಯಯನ ಕ್ಷೇತ್ರದ ಸಂದರ್ಶಿತ ಕುಟುಂಬಗಳಲ್ಲಿ ಒಟ್ಟು ೨೫ ಜನ ದಲಿತರಿದ್ದು (ಶೇಕಡ ೫ರಷ್ಟು), ಇದರಲ್ಲಿ ೨೩ ಜನ ಪುರುಷರು ಮತ್ತು ಉಳಿದ ಇಬ್ಬರು ಮಹಿಳೆಯರಾಗಿದ್ದಾರೆ. ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಒಟ್ಟು ೧೫

ಜನರು (ಶೇಕಡ ೫.೪೧ರಷ್ಟು) ಇತರೆ ಕೆಲಸಗಳನ್ನು ಮಾಡುವವರಿದ್ದು, ೧೩ ಜನ ಪುರುಷರು ಮತ್ತು ಇಬ್ಬರು ಮಹಿಳೆಯರಾಗಿದ್ದಾರೆ. ಆಲೂರು ಗ್ರಾಮಪಂಚಾಯಿತಿಯಲ್ಲಿ ಒಟ್ಟು ೧೦ ಜನ ದಲಿತರು (ಶೇಕಡ ೪.೨ರಷ್ಟು) ಇತರೆ ಕಸುಬುಗಳನ್ನು ಮಾಡುತ್ತಿದ್ದು, ಪುರುಷರು ಮತ್ತು ಮಹಿಳೆಯರು ಸಮಪ್ರಮಾಣದಲ್ಲಿದ್ದಾರೆ.

೩.೫. ಆದಾಯ

ಅಧ್ಯಯನ ಕ್ಷೇತ್ರದಲ್ಲಿ ಸಂದರ್ಶನ ಮಾಡಿದ ದಲಿತ ಕುಟುಂಬಗಳಲ್ಲಿ ಅಲ್ಪಸ್ವಲ್ಪ ಜಮೀನನ್ನು ಹೊಂದಿ, ಬೇರೆಯವರ ಜಮೀನನ್ನು ಸಾಗುವಳಿ ಮಾಡುವುದರ ಮೂಲಕ ಆರು ಜನ ದಲಿತರು ವಾರ್ಷಿಕವಾಗಿ ೫,೦೦೦ ರೂಪಾಯಿಗಳಿಗಿಂತ ಕಡಿಮೆ ಆದಾಯವನ್ನು ಪಡೆಯುತ್ತಾರೆ. ಇವರೆಲ್ಲರೂ ಆಲೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿ ಇದ್ದು, ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಪ್ರದೇಶದಲ್ಲಿ ಇರುವುದಿಲ್ಲ. ಕೃಷಿಯಿಂದ ವಾರ್ಷಿಕ ೫,೦೦೦ ರೂಪಾಯಿಗಳಿಂದ ೧೦,೦೦೦ ರೂಪಾಯಿಗಳ ಆದಾಯ ಹೊಂದಿದ ಒಟ್ಟು ೩೭ ಜನ ದಲಿತರು ಅಧ್ಯಯನ ಕ್ಷೇತ್ರದಲ್ಲಿದ್ದಾರೆ. ಇದರಲ್ಲಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಪ್ರದೇಶದಲ್ಲಿ ಐದು ಜನ ಮತ್ತು ಉಳಿದಂತೆ ೩೨ ಜನ ಆಲೂರು ಗ್ರಾಮಪಂಚಾಯಿತಿಯಲ್ಲಿದ್ದಾರೆ. ಅದೇ ರೀತಿಯಾಗಿ ಕೃಷಿ ಮೂಲದಿಂದಲೇ ವಾರ್ಷಿಕವಾಗಿ ೧೦,೦೦೦ ರೂಪಾಯಿಗಳ ಮೇಲ್ಪಟ್ಟು ಆದಾಯ ಪಡೆಯುವ ದಲಿತರು ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೧೫ ಜನರಿದ್ದಾರೆ. ಇದರಲ್ಲಿ ೩ ಜನ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯವರಾದರೆ, ಇನ್ನುಳಿದ ೧೨ ಜನ ದಲಿತರು ಆಲೂರು ಗ್ರಾಮಪಂಚಾಯಿತಿಯವರಾಗಿದ್ದಾರೆ.

ಸ್ವಂತ ಜಮೀನುಹೊಂದದೆ ಬೇರೆಯವರ ಭೂಮಿಯಲ್ಲಿನ ಕೃಷಿ ಕೆಲಸ ಮಾಡುವುದರ ಮೂಲಕ ವಾರ್ಷಿಕ ಆದಾಯ ೫,೦೦೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಹೊಂದಿದ ದಲಿತರ ಪ್ರಮಾಣ ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೧೧೦ ಜನರಾಗಿದ್ದಾರೆ. ಇದರಲ್ಲಿ ೫೮ ಜನ ದಲಿತರು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಮತ್ತು ಉಳಿದ ೫೨ ಜನ ದಲಿತರು ಆಲೂರು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿದ್ದಾರೆ. ಇದೇ ರೀತಿಯಾಗಿ ಕೃಷಿ ಕೂಲಿಯ ಮೂಲಕವೇ ವಾರ್ಷಿಕವಾಗಿ ೫ ರಿಂದ ೧೦ ಸಾವಿರ ರೂಪಾಯಿಗಳ ಆದಾಯ ಪಡೆಯುವ ದಲಿತರು ಅಧ್ಯಯನ ಕ್ಷೇತ್ರದಲ್ಲಿ ಒಟ್ಟು ೨೯೧ ಜನರಿದ್ದಾರೆ. ಇವರ ಪೈಕಿ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ೧೧೭ ಜನರಿದ್ದಾರೆ. ವಾರ್ಷಿಕವಾಗಿ ೧೦,೦೦೦ ರೂಪಾಯಿಗಳಿಂತ ಹೆಚ್ಚಿನ ಆದಾಯವನ್ನು ಕೃಷಿ ಕೂಲಿಯಿಂದಲೇ ಪಡೆದುಕೊಳ್ಳುವ ಒಟ್ಟು ೧೫ ಜನ ದಲಿತರು ಅಧ್ಯಯನ ಕ್ಷೇತ್ರದಲ್ಲಿದ್ದಾರೆ. ಇದರಲ್ಲಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಗೆ ಸೇರಿದವರು ೧೪ ಜನರಾದರೆ ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿದವರು ಒಬ್ಬರು ಮಾತ್ರ.

ಸಣ್ಣ ವ್ಯಾಪಾರದ ಮೂಲಕ ವಾರ್ಷಿಕ ೫,೦೦೦ ರೂಪಾಯಿಗಳಿಗಿಂತ ಕಡಿಮೆ ಆದಾಯ ಪಡೆಯುವ ಇಬ್ಬರು ದಲಿತರು ಅಧ್ಯಯನ ಕ್ಷೇತ್ರದಲ್ಲಿದ್ದು, ಒಬ್ಬರು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯವರು ಇನ್ನೊಬ್ಬರು ಆಲೂರು ಗ್ರಾಮಪಂಚಾಯಿತಿಯವರು. ಆದರೆ ಸಣ್ಣ ವ್ಯಾಪಾರದಿಂದಲೇ ೫,೦೦೦ ದಿಂದ ೧೦,೦೦೦ ಮತ್ತು ಇದಕ್ಕಿಂತ ಮೇಲ್ಪಟ್ಟ ಆದಾಯ ಪಡೆಯುವ ದಲಿತರು ಅಧ್ಯಯನ ಕ್ಷೇತ್ರದ ಸಂದರ್ಶಿತ ಕುಟುಂಬಗಳಲ್ಲಿ ಕಂಡುಬಂದಿರುವುದಿಲ್ಲ ಎಂಬುದು ಗಮನಿಸುವ ಅಂಶವಾಗಿರುತ್ತದೆ. ಅದೇ ರೀತಿಯಾಗಿ ೧೦,೦೦೦ ರೂಪಾಯಿಗಳಿಗಿಂತ ಹೆಚ್ಚಿನ ಆದಾಯವನ್ನು ಸಣ್ಣ ವ್ಯಾಪಾರದಿಂದಲೇ ಗಳಿಸಿಕೊಳ್ಳುವ ಜನರು ಅಧ್ಯಯನ ಕ್ಷೇತ್ರದ ಎರಡೂ ಪಂಚಾಯಿತಿಗಳಲ್ಲಿ ಇರುವುದಿಲ್ಲ.

ಸರ್ಕಾರಿ ಉದ್ಯೋಗದಿಂದ ವಾರ್ಷಿಕ ೫,೦೦೦ ರೂಪಾಯಿಗಿಂತ ಕಡಿಮೆ ಆದಾಯ ಪಡೆಯುವ ದಲಿತರು ಅಧ್ಯಯನ ಕ್ಷೇತ್ರದ ಸಂದರ್ಶಿತ ಎರಡು ಗ್ರಾಮಪಂಚಾಯಿತಿಗಳಲ್ಲಿ ಕಂಡುಬಂದಿಲ್ಲ. ವಾರ್ಷಿಕ ೫,೦೦೦ ದಿಂದ ೧೦,೦೦೦ ರೂಪಾಯಿಗಳವರೆಗಿನ ಆದಾಯವನ್ನು ಸರ್ಕಾರಿ ಉದ್ಯೋಗದಿಂದ ಪಡೆಯುವ ಒಟ್ಟು ೩ ಜನ ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿದ್ದಾರೆ. ಇದರಲ್ಲಿ ಇಬ್ಬರು ಆಲೂರು ಗ್ರಾಮಪಂಚಾಯಿತಿಯಲ್ಲಿದ್ದು, ಇನ್ನೊಬ್ಬರು ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿದ್ದಾರೆ. ಅದರಂತೆಯೇ ಇದೇ ಸರ್ಕಾರಿ ಉದ್ಯೋಗ ಮೂಲದಿಂದ ವಾರ್ಷಿಕವಾಗಿ ೧೦,೦೦೦ ರೂಪಾಯಿಗಿಂತ ಹೆಚ್ಚಿನ ಆದಾಯ ಪಡೆಯುವ ಅಧ್ಯಯನ ಕ್ಷೇತ್ರದ ದಲಿತರ ಒಟ್ಟು ಸಂಖ್ಯೆ ಐದು ಜನ. ಅದರಲ್ಲಿ ಒಬ್ಬರು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿದ್ದು, ಉಳಿದ ನಾಲ್ಕು ಜನ ಆಲೂರು ಗ್ರಾಮಪಂಚಾಯಿತಿಯಲ್ಲಿನ ಗ್ರಾಮಗಳಲ್ಲಿದ್ದಾರೆ.

ಖಾಸಗಿ ಉದ್ಯೋಗದಿಂದ ವಾರ್ಷಿಕ ೫,೦೦೦ ರೂಪಾಯಿಗಿಂತ ಕಡಿಮೆ ಆದಾಯ ಪಡೆದು ಕೊಳ್ಳುವವರು ಅಧ್ಯಯನ ಕ್ಷೇತ್ರದಲ್ಲಿ ಮೂರು ಜನ. ಎಲ್ಲರೂ ನಂ.೧೦ ಮುದ್ದಾಪುರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ದಲಿತ ಕುಟುಂಬಗಳಲ್ಲಿ ಕಂಡುಬರುತ್ತಿದ್ದು, ಆಲೂರು ಗ್ರಾಮಪಂಚಾಯಿತಿ ಯಲ್ಲಿರುವುದಿಲ್ಲ. ಅದರಂತೆ ಸರ್ಕಾರಿ ಉದ್ಯೋಗದಿಂದ ವಾರ್ಷಿಕ ೫,೦೦೦ ದಿಂದ ೧೦,೦೦೦ ರೂಪಾಯಿ ಆದಾಯ ಪಡೆಯುವವರು ಅಧ್ಯಯನ ಕ್ಷೇತ್ರದ ಸಂದರ್ಶಿತ ಎರಡು ಗ್ರಾಮಪಂಚಾಯಿತಿಗಳಲ್ಲಿ ತಲಾ ಒಬ್ಬರಂತೆ ಒಟ್ಟು ಇಬ್ಬರಿದ್ದಾರೆ. ಅದೇ ರೀತಿಯಾಗಿ ವಾರ್ಷಿಕ ೧೦,೦೦೦ ರೂಪಾಯಿ ಮೇಲ್ಪಟ್ಟು ಆದಾಯವನ್ನು ಖಾಸಗಿ ಉದ್ಯೋದಿಂದ ಪಡೆದುಕೊಳ್ಳುವವರೂ ಕೂಡ ಅಧ್ಯಯನ ಕ್ಷೇತ್ರದ ಎರಡೂ ಗ್ರಾಮಪಂಚಾಯಿತಿಗಳಲ್ಲಿ ತಲಾ ಒಬ್ಬರಂತೆ ಸೇರಿ ಒಟ್ಟು ಇಬ್ಬರು ದಲಿತರಿದ್ದಾರೆ.

ಇತರೆ ಉದ್ಯೋಗಗಳಿಂದ ವಾರ್ಷಿಕ ೫,೦೦೦ ರೂಪಾಯಿಗಿಂತ ಕಡಿಮೆ ಆದಾಯವನ್ನು ಅಧ್ಯಯನ ಕ್ಷೇತ್ರದ ನಾಲ್ಕು ಜನ ದಲಿತರು ಪಡೆದುಕೊಳ್ಳುತ್ತಿದ್ದಾರೆ. ಇವರೆಲ್ಲರೂ ಮುದ್ದಾಪುರ ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತಾರೆ. ಆದರೆ ಆಲೂರು ಗ್ರಾಮಪಂಚಾಯಿತಿ ಪ್ರದೇಶದಲ್ಲಿಲ್ಲ.

೫,೦೦೦ ದಿಂದ ೧೦,೦೦೦ ರೂಪಾಯಿಗಳನ್ನು ಇತರೆ ಉದ್ಯೋಗದಿಂದ ಪಡೆಯುವ ಒಟ್ಟು ೧೬ ಜನರಲ್ಲಿ ೯ ಜನ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಮತ್ತು ೭ ಜನ ಆಲೂರು ಗ್ರಾಮಪಂಚಾಯಿತಿಯಲ್ಲಿದ್ದಾರೆ. ೧೦,೦೦೦ ಮೇಲ್ಪಟ್ಟು ಆದಾಯ ಪಡೆಯುವವರು ಎರಡೂ ಗ್ರಾಮಪಂಚಾಯಿತಿಗಳಲ್ಲಿ ತಲಾ ಇಬ್ಬರಂತೆ ನಾಲ್ಕು ಜನರಿದ್ದಾರೆ.

ಒಟ್ಟಾರೆಯಾಗಿ ಅಧ್ಯಯನ ಕ್ಷೇತ್ರದ ದಲಿತರ ಆದಾಯದ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಮುಖವಾಗಿ ಕೃಷಿ ಮತ್ತು ಕೃಷಿ ಕೂಲಿಯೇ ಆದಾಯದ ಮೂಲಗಳಾಗಿವೆ. ಅಲ್ಪಸ್ವಲ್ಪ ಜಮೀನು ಹೊಂದಿದ್ದು ಬೇರೆಯವರ ಜಮೀನನ್ನು ಸಾಗುವಳಿ ಮಾಡುವುದರ ಮೂಲಕ ೫,೦೦೦ ರೂಪಾಯಿಗಳಿಂದ ೧೦,೦೦೦ ರೂಪಾಯಿಗೆ ಮೇಲ್ಪಟ್ಟು ಆದಾಯ ಪಡೆಯುವ ಪ್ರಮಾಣ, ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಸಾಪೇಕ್ಷವಾಗಿ ಆಲೂರು ಗ್ರಾಮಪಂಚಾಯಿತಿಗಿಂತ ಕಡಿಮೆ ಇದೆ. ಆದರೆ ಕೃಷಿ ಕೂಲಿಯನ್ನು ಮಾಡುವುದರ ಮೂಲಕ ೫,೦೦೦ ರೂಪಾಯಿಗಳಿಂದ ೧೦,೦೦೦ ರೂಪಾಯಿಗಳ ಮೇಲ್ಪಟ್ಟು ಆದಾಯ ಪಡೆಯುವ, ದಲಿತರ ಪ್ರಮಾಣ ಸಾಪೇಕ್ಷವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಅಧಿಕವಾಗಿದೆ. ಆದರೂ ಆಲೂರು ಗ್ರಾಮಪಂಚಾಯಿತಿಯಲ್ಲಿ ಕೃಷಿಯೇ ಪ್ರಮುಖ ಆದಾಯದ ಮೂಲವಾಗಿರದೆ, ಕೃಷಿ ಕೂಲಿಯು ಪ್ರಧಾನವಾಗಿದ್ದರೂ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಗಿಂತ ಸಾಪೇಕ್ಷವಾಗಿ ಕಡಿಮೆ ಪ್ರಮಾಣದಲ್ಲಿದೆ. ಇನ್ನುಳಿದಂತೆ ಸಣ್ಣ ವ್ಯಾಪಾರ ಮತ್ತು ಇತರೆ ಉದ್ಯೋಗಗಳ ಮೂಲಕ ಆದಾಯ ಪಡೆಯುವ ದಲಿತರ ಪ್ರಮಾಣ ಅಧ್ಯಯನ ಕ್ಷೇತ್ರದ ಎರಡೂ ಗ್ರಾಮಪಂಚಾಯತಿಗಳಲ್ಲಿ ಹೆಚ್ಚೂ ಕಡಿಮೆ ಸಮವಿದೆ.

ಒಟ್ಟಾರೆಯಾಗಿ ಆದಾಯದ ಮೂಲಕ ಅಧ್ಯಯನ ಕ್ಷೇತ್ರದ ಎರಡು ಗ್ರಾಮಪಂಚಾಯತಿಗಳ ಆರ್ಥಿಕ ಸ್ಥಿತಿಯನ್ನು ತುಲನಾತ್ಮಕವಾಗಿ ನೋಡಿದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಪ್ರದೇಶದ ದಲಿತರ ಆರ್ಥಿಕ ಸ್ಥಿತಿ, ಆಲೂರು ಗ್ರಾಮಪಂಚಾಯಿತಿಯ ದಲಿತರಿಗಿಂತ ಉತ್ತಮವಾಗಿದೆ. ಅದರಂತೆ ಆಲೂರು ಗ್ರಾಮಪಂಚಾಯಿತಿಯ ವ್ಯಾಪ್ತಿಯಲ್ಲಿನ ದಲಿತರ ಆರ್ಥಿಕ ಸ್ಥಿತಿಯು ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯ ದಲಿತರಿಗಿಂತ ಅಷ್ಟೇನು ಉತ್ತಮವಾಗಿರುವುದಿಲ್ಲ. ಹೀಗೆ ಒಂದೇ ಜಿಲ್ಲೆಯಲ್ಲಿನ ಅಧ್ಯಯನ ಕ್ಷೇತ್ರದ ದಲಿತರ ಆರ್ಥಿಕ ಸ್ಥಿತಿಗಳು ಸಾಪೇಕ್ಷವಾಗಿ ಭಿನ್ನವಾಗಿರುವುದು ದಲಿತರ ಶಿಕ್ಷಣದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವ ಅಗತ್ಯ ಎದ್ದುಕಾಣುತ್ತದೆ.

ಗ್ರಂಥಸೂಚಿ

೧. ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿ (೨೦೦೫), ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೨. ಜನಾರ್ದನ (೨೦೦೩), *ಕರ್ನಾಟಕ ತಾಲೂಕುವಾರು ಜನಸಂಖ್ಯೆ, ಅಕ್ಷರಸ್ಥರು ಮತ್ತು ಸಾಕ್ಷರತೆ,* ಅಭಿವೃದ್ಧಿ ಅಧ್ಯಯನ ಸಮಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೩. ಪ್ರಶಾಂತ್ ಎಚ್.ಡಿ. (೨೦೦೫), *ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೪. ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ (೨೦೦೨-೦೩), ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.

೫. ಮಕ್ಕಳ ಸಮೀಕ್ಷೆ, (೨೦೦೩), (ಸಿ.ಪಿ.ಇ) ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೬. ಮಕ್ಕಳ ಜನಗಣತಿ (೨೦೦೫), ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೭. ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ (೨೦೦೨-೦೩), ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೮. ಸವಿತ ಕೆ. (೨೦೦೭), *ಬಳ್ಳಾರಿ ಜಿಲ್ಲಾ ಗ್ರಾಮವಾರು ಸಾಕ್ಷರತೆ,* ಅಭಿವೃದ್ಧಿ ಅಧ್ಯಯನ ಸಮಾಜವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

೯. ಸೆನ್ಸಸ್ ಆಫ್ ಇಂಡಿಯಾ (೨೦೦೧), ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.

• • •

ಅಧ್ಯಾಯ-೪

ದಲಿತರ ಶೈಕ್ಷಣಿಕ ಪರಿಸರ

೪.೧. ದಲಿತರ ಸಾಕ್ಷರತೆ

೪.೨. ಶಿಕ್ಷಣದ ಸೌಲಭ್ಯಗಳು-ಯೋಜನೆಗಳು

೧. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ)

೨. ಶಿಕ್ಷಕರ್ಮಿ ಕಾರ್ಯಕ್ರಮ

೩. ಲೋಕಜಂಬಿಷ್

೪. ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ

೫. ಪ್ರಾಥಮಿಕ ಶಿಕ್ಷಣದ ಉನ್ನತೀಕರಣ

೬. ಶಿಕ್ಷಣ ಗ್ಯಾರಂಟಿ ಯೋಜನೆ

೭. ಮಧ್ಯಾಹ್ನದ ಬಿಸಿಯೂಟ ಯೋಜನೆ

೮. ವಿದ್ಯಾರ್ಥಿ ವೇತನ

೯. ಉಚಿತ ಪಠ್ಯಪುಸ್ತಕಗಳ ಸರಬರಾಜು

೧೦. ಉಚಿತ ಸಮವಸ್ತ್ರ, ನೋಟ್‌ಪುಸ್ತಕ ಮತ್ತು ಶಾಲಾಬ್ಯಾಗಗಳ ವಿತರಣೆ

೧೧. ಸರ್ವಶಿಕ್ಷಣ ಅಭಿಯಾನ

೧೨. ಸೇತುಬಂಧ ಶಿಕ್ಷಣ

೪.೩. ದಲಿತ ಪೋಷಕರ ತಿಳುವಳಿಕೆ

೪.೪. ತೃಪ್ತಿಯೇ ಅಥವಾ ಇಲ್ಲವೇ?

೪.೫. ಸಾಮಾಜಿಕ ಅಭಿಪ್ರಾಯ

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅವಕಾಶ ವಂಚಿತರಾಗಿರುವ ದಲಿತರ ಶೈಕ್ಷಣಿಕ ಸ್ಥಿತಿ, ಶೈಕ್ಷಣಿಕ ಸೌಲಭ್ಯಗಳು ಮತ್ತು ದಲಿತರ ತಿಳುವಳಿಕೆ ಹಾಗೂ ಸಾಮಾಜಿಕ ಅಭಿಪ್ರಾಯಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ. ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯಗಳ ಸಾಮಾಜಿಕ ಅಭಿವೃದ್ಧಿ ಮತ್ತು ಅವರ ಶಾಲಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ-ಅಂಶಗಳು, ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ವಿವಿಧ ಸಂಶೋಧನಾ ಸಂಸ್ಥೆಗಳು (NCERT, NIEPP & DSERT), ವಿವಿಧ ರಾಜ್ಯಗಳ ವಾರ್ಷಿಕ ವರದಿಗಳು (ಕರ್ನಾಟಕವೂ ಸೇರಿದಂತೆ), ಶಿಕ್ಷಣ ಕ್ಷೇತ್ರದ ಸಮಾಜ ವಿಜ್ಞಾನಗಳ ಸಂಶೋಧನಾ ಪುಸ್ತಕಗಳು ಮತ್ತು ಲೇಖನಗಳು ದಲಿತರ ಸಾಕ್ಷರತೆ ಹಿಂದುಳಿದಿರುವುದನ್ನು ತಿಳಿಸುತ್ತವೆ. ಇದು ಹೇಗೆ ಎಂಬುದನ್ನು ಸ್ಥಳೀಯ ಸಾಮಾಜಿಕ ಸಾಂಸ್ಕೃತಿಕ ನೆಲೆಗಳಲ್ಲಿ ಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

೪.೧. ದಲಿತರ ಸಾಕ್ಷರತೆ

೨೦೦೧ರ ಭಾರತದ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ೮,೪೩,೨೬,೨೪೦ ಜನರು (ಶೇಕಡ ೧೬.೨೧ರಷ್ಟು) ದಲಿತರಿದ್ದಾರೆ. ಭಾರತದ ಒಟ್ಟು ದಲಿತರಲ್ಲಿ ಶೇಕಡ ೪೧.೫ರಷ್ಟು ಮಾತ್ರ ಸಾಕ್ಷರರಾಗಿರುವುದು ದಲಿತರ ಶೈಕ್ಷಣಿಕ ಸ್ಥಿತಿಯನ್ನು ಸೂಚಿಸುತ್ತದೆ. ಕರ್ನಾಟಕದಲ್ಲಿಯೂ ಶೇಕಡ ೪೭.೩ರಷ್ಟಿರುವ ದಲಿತರ ಸಾಕ್ಷರತಾ ಪ್ರಮಾಣವು ಭಾರತದ ದಲಿತರ ಸಾಕ್ಷರತಾ ಸ್ಥಿತಿಗಿಂತ ಭಿನ್ನವೆನಿಸುವುದಿಲ್ಲ. ಕರ್ನಾಟಕದ ದಲಿತರ ಸಾಕ್ಷರತಾ ಪ್ರಮಾಣವನ್ನು ಲಿಂಗವಾರು ನೋಡಿದರೆ ಶೇಕಡ ೫೮.೭೦ರಷ್ಟು ಪುರುಷರು ಮತ್ತು ಶೇಕಡ ೩೫.೬ರಷ್ಟು ಮಹಿಳೆಯರು ಸಾಕ್ಷರರಾಗಿರುವುದು ಕಂಡುಬರುತ್ತದೆ. ನಿರ್ದಿಷ್ಟವಾಗಿ ೦೬-೧೪ ವಯೋಮಾನದ ಶೇಕಡ ೬೨.೫ರಷ್ಟು ದಲಿತ ಮಕ್ಕಳು ಮಾತ್ರ ಔಪಚಾರಿಕವಾಗಿ ಶಾಲೆಗೆ ದಾಖಲಾಗಿದ್ದಾರೆ. ಆದರೆ ಉಳಿದ ಶೇಕಡ ೩೭.೫ರಷ್ಟು ದಲಿತ ಮಕ್ಕಳು ಶಾಲೆಗೆ ದಾಖಲಾಗದೆ ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆ. ಶಾಲೆಗೆ ದಾಖಲಾಗದ ಮತ್ತು ಮಧ್ಯದಲ್ಲಿಯೇ ಶಾಲೆ ಬಿಡುವ ೦೬-೧೪ ವಯೋಮಾನದ ದಲಿತ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಅಧಿಕವಾಗಿರುವುದು ಆತಂಕದ ವಿಷಯವಾಗಿದೆ. ಈ ಎಲ್ಲಾ ಅಂಶಗಳನ್ನು ವಿವರವಾಗಿ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕೋಷ್ಟಕ-೪.೧

ಶಾಲೆಗೆ ದಾಖಲಾದ ಮಕ್ಕಳ ಪ್ರಮಾಣ (%)

ವಿವರ	೨೦೦೨-೦೩	೨೦೦೩-೦೪
೧ ರಿಂದ ೪ನೇ ತರಗತಿ	೯೯.೦೮	೯೦.೮೮
೫ ರಿಂದ ೭ನೇ ತರಗತಿ	೭೭.೬೫	—

ಮೂಲ : ಕರ್ನಾಟಕ ಆರ್ಥಿಕ ಸಮೀಕ್ಷೆ ೨೦೦೩-೦೪.

ಈ ಕೋಷ್ಟಕದ ಮಾಹಿತಿ ಪ್ರಕಾರ ಕರ್ನಾಟಕದಲ್ಲಿ ೨೦೦೨-೦೩ರಲ್ಲಿ ಶೇಕಡ ೯೯.೦೮ರಷ್ಟು ಮಕ್ಕಳು ೧ ರಿಂದ ೪ನೇ ತರಗತಿಗೆ ದಾಖಲಾಗಿದ್ದರೆ, ೨೦೦೩-೦೪ರ ಅವಧಿಯಲ್ಲಿ ೧ ರಂದ ೪ನೇ ತರಗತಿಗೆ ದಾಖಲಾದ ಮಕ್ಕಳ ಪ್ರಮಾಣ ಶೇಕಡ ೯೦.೮೮ಕ್ಕೆ ಕಡಿಮೆಯಾಗಿರುವುದು ಒಂದು ವಿಪರ್ಯಾಸವೆನಿಸುತ್ತದೆ. ೨೦೦೧ರಲ್ಲಿ ಆರು ಲಕ್ಷ ಮಕ್ಕಳನ್ನು ಮರಳಿ ಶಾಲೆಗೆ ಕರೆತಂದರೂ ೧೦,೫೩,೭೪೪ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿರುವುದು ಮಕ್ಕಳ ಸಮೀಕ್ಷೆಯಿಂದ ತಿಳಿದಿದೆ. ಆದರೆ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ೨೦೦೩ರಲ್ಲಿ ೪.೦೫ ಲಕ್ಷಕ್ಕೆ ಇಳಿಕೆಯಾಗಿದ್ದರೂ, ನಿರೀಕ್ಷೆಯ ಮಟ್ಟಕ್ಕೆ ಸಫಲವಾಗಿಲ್ಲ (ಮಕ್ಕಳ ಸಮೀಕ್ಷೆ ೨೦೦೩, ಸಿ.ಪಿ.ಐ. ಕರ್ನಾಟಕ).

ಕೋಷ್ಟಕ ೪.೨

ಪ್ರದೇಶವಾರು ಶಾಲೆಯಿಂದ (೧ ರಿಂದ ೭ನೇತರಗತಿ) ಹೊರಗುಳಿದ ಮಕ್ಕಳು

ಪ್ರದೇಶ	೧೯೯೯-೨೦೦೦			೨೦೦೩-೦೪		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ದಕ್ಷಿಣ ಕರ್ನಾಟಕ	೨೭.೬	೨೫.೮	೨೬.೭	೨೦.೧	೨೦.೮	೨೦.೪
ಉತ್ತರ ಕರ್ನಾಟಕ	೪೨.೩	೫೦.೪	೪೬.೦	೩೪.೯	೪೦.೫	೩೭.೫
ಹೈದ್ರಾಬಾದ್ ಕರ್ನಾಟಕ	೫೪.೫	೫೮.೫	೫೬.೫	೪೨.೮	೫೧.೧	೪೬.೭
ಕರ್ನಾಟಕ ರಾಜ್ಯ	೩೪.೬	೩೬.೭	೩೫.೬	೨೭.೬	೩೦.೪	೨೯.೦

ಮೂಲ : ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫.

ಈ ಕೋಷ್ಟಕದ ಪ್ರಕಾರವಾಗಿ ೨೦೦೩-೦೪ರಲ್ಲಿ ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಕರ್ನಾಟಕ ರಾಜ್ಯದ ಸರಾಸರಿ ಮತ್ತು ಉತ್ತರ ಕರ್ನಾಟಕದ ಪ್ರಮಾಣಕ್ಕಿಂತ ಕಡಿಮೆ ಇದೆ. ಹೈದ್ರಾಬಾದ್ ಕರ್ನಾಟಕದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ

ಪ್ರಮಾಣವು ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ರಾಜ್ಯದ ಸರಾಸರಿಗಿಂತಲೂ ಅಧಿಕವಾಗಿದೆ. ಆದರೆ ಈ ಪ್ರಮಾಣವು ೧೯೯೯-೨೦೦೦ರಲ್ಲಿ ಶೇಕಡ ೫೬.೫ರಷ್ಟರಿಂದ ೨೦೦೩-೦೪ರಲ್ಲಿ ಶೇಕಡ ೪೬.೭ರಷ್ಟಕ್ಕೆ ಕಡಿಮೆಯಾಗಿದೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿ, ಶಾಲೆಯಲ್ಲಿರುವಂತೆ ಮಾಡುವಲ್ಲಿ ರಾಜ್ಯ ಸರ್ಕಾರವು ಅವಿರತವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳ ಕಡೆಗೆ ಹೆಚ್ಚಿನ ಗಮನಹರಿಸಲಾಗಿದೆ.

ಕೋಷ್ಟಕ-೪.೩

ತರಗತಿವಾರು ಶಾಲೆಯಿಂದ ಹೊರಗುಳಿದ ಮಕ್ಕಳು

ಪ್ರದೇಶ	೧ ರಿಂದ ೫ನೇ ತರಗತಿ		೧ ರಿಂದ ೮ನೇ ತರಗತಿ	
	ಗಂಡು	ಹೆಣ್ಣು	ಗಂಡು	ಹೆಣ್ಣು
ದಕ್ಷಿಣ ಕರ್ನಾಟಕ	೩೦.೩೮	೩೪.೪೧	೪೨.೨೯	೪೭.೭೧
ಉತ್ತರ ಕರ್ಾಟಕ	೩೭.೮೧	೪೧.೨೦	೪೮.೩೩	೫೪.೭೧
ಹೈದ್ರಾಬಾದ್ ಕರ್ನಾಟಕ	೪೧.೬೨	೪೭.೩೧	೪೯.೬೨	೫೮.೫೩
ಕರ್ನಾಟಕ ರಾಜ್ಯ	೩೩.೬೨	೩೮.೬೮	೪೬.೨೮	೫೧.೫೧

ಮೂಲ : ಅಂಕಿ-ಅಂಶಗಳ ನೋಟ ೨೦೦೨-೦೩.

ಈ ಕೋಷ್ಟಕವು ಸೂಚಿಸುವಂತೆ ೧ ರಿಂದ ೫ನೇ ತರಗತಿ ಮತ್ತು ೧ ರಿಂದ ೮ನೇ ತರಗತಿಗಳೆರಡರಲ್ಲೂ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇತರೆ ಪ್ರದೇಶಗಳಿಗಿಂತಲೂ ಅಧಿಕವಾಗಿದೆ. ಈ ಎಲ್ಲಾ ಪ್ರದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ಶಾಲೆಯಿಂದ ಹೊರಗಿರುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹೆಚ್ಚಾಗಿದ್ದಾರೆ. ಶಾಲೆಯಿಂದ ಹೊರಗುಳಿದ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹೆಚ್ಚಾಗಿರುವ ವಿಷಯದಲ್ಲಿಯೂ ಕೂಡ ಹೈದ್ರಾಬಾದ್ ಕರ್ನಾಟಕ ಅಗ್ರಸ್ಥಾನದಲ್ಲಿದೆ. ಈ ಭಾಗದಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಪ್ರಮಾಣ ಮತ್ತು ಗಂಡು ಮಕ್ಕಳಿಗಿಂತ ಹೆಣ್ಣುಮಕ್ಕಳು ಹೆಚ್ಚಾಗಿರಲು ಬಡತನ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಮುಖ್ಯವಾಗುತ್ತವೆ. ಇದರ ಜೊತೆಗೆ ವಲಸೆ, ಅಂಗವಿಕಲತೆ, ಪೋಷಕರ ಅಸಹಕಾರ ಮತ್ತು ವಿರೋಧ, ದಲಿತ ಮಕ್ಕಳ ಆತ್ಮಹತ್ಯೆ ಬೆದರಿಕೆ, ಕೀಳರಿಮೆ ಹಾಗೂ ಇತರೆ ಅಂಶಗಳೂ ಕಾರಣವಾಗಿವೆ.

ಕೋಷ್ಟಕ-೪.೪

ಮಧ್ಯದಲ್ಲಿಯೇ ಶಾಲೆ ಬಿಟ್ಟ ಮಕ್ಕಳ ಪ್ರಮಾಣ (ಶೇಕಡವಾರು)

ವರ್ಷ	ಬಾಲಕರು	ಬಾಲಕಿಯರು	ಒಟ್ಟು
೧೯೫೦-೫೧	೭೯.೨೫	೬೫.೭೫	೬೭.೩೭
೧೯೬೩-೬೪	೬೭.೮೦	೫೯.೬೦	೫೮.೦೦
೧೯೭೩-೭೪	೬೭.೨೦	೫೦.೨೦	೫೯.೧೨
೧೯೮೩-೮೪	೫೨.೧೯	೩೬.೦೦	೪೩.೮೦
೧೯೯೬-೯೭	೩೨.೦೮	೨೨.೭೦	೨೭.೭೦
೨೦೦೪-೦೫	೧೪.೩೪	೧೪.೫೯	೧೪.೪೯

ಮೂಲ : ಸರ್ಕಾರಿ ವರದಿಗಳು ಮತ್ತು ಅಂಕಿ-ಅಂಶಗಳು, ಕರ್ನಾಟಕ ಸರ್ಕಾರ.

ಈ ಕೋಷ್ಟಕದಲ್ಲಿ ಕಂಡುಬರುವಂತೆ, ೧೯೫೦-೫೧ ರಿಂದ ೨೦೦೪-೦೫ರ ವರೆಗೆ ಮಧ್ಯದಲ್ಲಿಯೇ ಶಾಲೆ ಬಿಟ್ಟ ಮಕ್ಕಳಲ್ಲಿ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳು ಅಧಿಕವಾಗಿದ್ದಾರೆ. ಮಧ್ಯದಲ್ಲಿಯೇ ಶಾಲೆ ಬಿಡುವ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳ ನಡುವಣ ಅಂತರವೂ ೧೯೫೦-೫೧ ರಿಂದ ೨೦೦೪-೦೫ರ ಅವಧಿಯಲ್ಲಿ ಕ್ರಮೇಣವಾಗಿ ಕಡಿಮೆಯಾಗಿದೆ. ಅದರಂತೆಯೇ ಮಧ್ಯದಲ್ಲಿಯೇ ಶಾಲೆ ಬಿಡುವ ಒಟ್ಟು ಮಕ್ಕಳ ಪ್ರಮಾಣ ಕೂಡ ಶೇಕಡ ೬೭.೩೭ ರಿಂದ ಶೇಕಡ ೧೪.೪೭ರವರೆಗೆ ಕಡಿಮೆಯಾಗಿದೆ. ೨೦೦೩-೦೪ರಲ್ಲಿ ಬಾಲಕಿಯರ ಸರಾಸರಿ ಶಾಲಾ ಭಾಗವಹಿಸುವಿಕೆ ಹೈದ್ರಾಬಾದ್ ಕರ್ನಾಟಕದ ಐದು ಜಿಲ್ಲೆಗಳು ಮತ್ತು ಚಾಮರಾಜನಗರ, ದಾವಣಗೆರೆ, ಬಿಜಾಪುರ, ಬಾಗಲಕೋಟೆ ಹಾಗೂ ಬೆಳಗಾಂ ಜಿಲ್ಲೆಗಳಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಇರುತ್ತದೆ (ಎಚ್.ಡಿ. ಪ್ರಶಾಂತ್, ೨೦೦೭).

ಕೋಷ್ಟಕ-೪.೫

ಮಧ್ಯದಲ್ಲಿಯೇ ಶಾಲೆ ಬಿಟ್ಟ (೧ ರಿಂದ ೭ನೇ ತರಗತಿ) ಪ್ರದೇಶವಾರು ಮಕ್ಕಳ ಪ್ರಮಾಣ (ಶೇಕಡವಾರು)

ಪ್ರದೇಶ	೧೯೯೦-೨೦೦೦			೨೦೦೩-೦೪		
	ಬಾಲಕ	ಬಾಲಕಿ	ಒಟ್ಟು	ಬಾಲಕ	ಬಾಲಕಿ	ಒಟ್ಟು
ದಕ್ಷಿಣ ಕರ್ನಾಟಕ	೨೭.೬	೨೫.೮	೨೬.೭	೨೦.೧	೨೦.೮	೨೦.೪
ಬಾಂಬೆ ಕರ್ನಾಟಕ	೩೧.೪	೪೩.೧೩	೩೬.೮	೨೮.೧	೩೧.೫	೨೯.೭
ಹೈದ್ರಾಬಾದ್ ಕರ್ನಾಟಕ	೫೪.೫	೫೮.೯	೫೬.೫	೪೨.೮	೫೧.೧	೪೬.೭
ಉತ್ತರ ಕರ್ನಾಟಕ	೪೨.೩	೫೦.೪	೪೬.೦	೩೪.೯	೪೦.೫	೩೭.೫
ರಾಜ್ಯದ ಒಟ್ಟು	೩೪.೬	೩೬.೭	೩೫.೬	೨೭.೬	೩೦.೪	೨೯.೦

ಮೂಲ : ಇ.ಎಂ.ಐ.ಎಸ್., ಕರ್ನಾಟಕ ಸರ್ಕಾರ, ೨೦೦೫-೦೬.

ಈ ಕೋಷ್ಟಕದ ಮಾಹಿತಿಯಂತೆ ಮಧ್ಯದಲ್ಲಿಯೇ ಶಾಲೆಬಿಟ್ಟ ಮಕ್ಕಳ (೧ ರಿಂದ ೭ನೇ ತರಗತಿ) ಪ್ರಮಾಣವು ದಕ್ಷಿಣ ಕರ್ನಾಟಕ, ಬಾಂಬೆ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಪ್ರದೇಶ ಗಳಿಗಿಂತ ಮತ್ತು ರಾಜ್ಯದ ಸರಾಸರಿಗಿಂತಲೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಧಿಕವಾಗಿವೆ. ೧೯೯೦-೨೦೦೦ದಲ್ಲಿ ಶೇಕಡ ೫೬.೫ರಷ್ಟಿದ್ದ ಮಧ್ಯದಲ್ಲಿಯೇ ಶಾಲೆಬಿಟ್ಟ ಮಕ್ಕಳ ಪ್ರಮಾಣವು ೨೦೦೩-೦೪ರಲ್ಲಿ ಶೇಕಡ ೪೩.೭ರಷ್ಟಾಗಿದೆ. ಈ ಅವಧಿಯಲ್ಲಿ ದಕ್ಷಿಣ ಕರ್ನಾಟಕ ಹೊರತುಪಡಿಸಿ ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿಯೂ ಮಧ್ಯದಲ್ಲಿಯೇ ಶಾಲೆ ಬಿಟ್ಟ ಗಂಡುಮಕ್ಕಳ ಪ್ರಮಾಣಕ್ಕಿಂತ ಹೆಣ್ಣುಮಕ್ಕಳ ಪ್ರಮಾಣವು ಅಧಿಕವಾಗಿರುತ್ತದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಧ್ಯದಲ್ಲಿಯೇ ಶಾಲೆ ಬಿಟ್ಟ ಹೆಣ್ಣುಮಕ್ಕಳ ಪ್ರಮಾಣವು ಅಧಿಕವಾಗಿರುತ್ತವೆ.

ಕೋಷ್ಟಕ-೪.೬

ಮಧ್ಯದಲ್ಲಿಯೇ ಶಾಲೆ ಬಿಟ್ಟ (೦೭-೧೪ ವಯೋಮಾನದ) ವರ್ಗವಾರು ಮಕ್ಕಳ ಪ್ರಮಾಣ (ಶೇಕಡವಾರು)

ಕ್ರ.ಸಂ	ವರ್ಗ	ಬಾಲಕರು	ಬಾಲಕಿಯರು	ಒಟ್ಟು
೦೧.	ಎಲ್ಲಾ ವರ್ಗಗಳು	೧.೪೭%	೧.೬೨%	೧.೫೪%
೦೨.	ಪರಿಶಿಷ್ಟ ಜಾತಿ	೧.೯೯%	೨.೪೭%	೨.೨೨%
೦೩.	ಪರಿಶಿಷ್ಟ ಪಂಗಡ	೨.೧೧%	೨.೬೭%	೨.೪೨%
೦೪.	ಮುಸ್ಲಿಂ ಜನಾಂಗ	೧.೩%	೧.೨೪%	೧.೨೭%

ಮೂಲ : ಇ.ಎಂ.ಐ.ಎಸ್., ಕರ್ನಾಟಕ ಸರ್ಕಾರ, ೨೦೦೫.

ಈ ಕೋಷ್ಟಕದ ಪ್ರಕಾರ ಮಧ್ಯದಲ್ಲಿಯೇ ಶಾಲೆ ಬಿಟ್ಟ (೦೭-೧೪ ವಯೋಮಾನದ) ದಲಿತ ಮಕ್ಕಳ ಪ್ರಮಾಣ (ಶೇಕಡ ೨.೨೨ರಷ್ಟು) ಎಲ್ಲಾ ವರ್ಗಗಳ ಮಕ್ಕಳ ಪ್ರಮಾಣ (ಶೇಕಡ. ೧.೫೪ರಷ್ಟು)ಕ್ಕಿಂತ ಅಧಿಕವಾಗಿದೆ. ಮಧ್ಯದಲ್ಲಿಯೇ ಶಾಲೆ ಬಿಡುವ (೦೭-೧೪ ವಯೋಮಾನದ) ದಲಿತ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ (ಶೇಕಡ. ೧.೯೯ರಷ್ಟು) ಹೆಣ್ಣುಮಕ್ಕಳೇ (ಶೇಕಡ. ೨.೪೭ರಷ್ಟು) ಹೆಚ್ಚಾಗಿದ್ದಾರೆ. ಇದು ಮಧ್ಯದಲ್ಲಿಯೇ ಶಾಲೆ ಬಿಡುವ ದಲಿತ ಮಕ್ಕಳ ಸರಾಸರಿ (ಶೇಕಡ ೨.೨೨ರಷ್ಟು) ಪ್ರಮಾಣಕ್ಕಿಂತಲೂ ಜಾಸ್ತಿಯಾಗಿದೆ.

ಮುಂದಿನ ಕೋಷ್ಟಕ-೪.೭. ಬಳ್ಳಾರಿ ಜಿಲ್ಲೆಯ ದಲಿತರ ಸಾಕ್ಷರತೆ ಪ್ರಮಾಣದ ಮಾಹಿತಿಗಳನ್ನು ಒದಗಿಸುತ್ತದೆ. ಜಿಲ್ಲೆಯ ಒಟ್ಟು ಸರಾಸರಿ ಸಾಕ್ಷರತಾ ಪ್ರಮಾಣಕ್ಕಿಂತ (ಶೇಕಡ ೫೭.೪) ಜಿಲ್ಲೆಯ ದಲಿತರ ಸಾಕ್ಷರತಾ ಪ್ರಮಾಣ (ಶೇಕಡ ೪೨.೩) ಕಡಿಮೆ ಇದೆ. ಜಿಲ್ಲೆಯ ದಲಿತರ ಪುರುಷ ಸಾಕ್ಷರತೆ ಮತ್ತು ಮಹಿಳಾ ಸಾಕ್ಷರತೆಗಳು ಕ್ರಮವಾಗಿ ಶೇಕಡ ೫೫.೫ ಮತ್ತು ಶೇಕಡ ೨೯.೦೦ರಷ್ಟಿದ್ದು, ಜಿಲ್ಲೆಯ ಒಟ್ಟು ಸರಾಸರಿ ಪುರುಷರ ಸಾಕ್ಷರತೆ (ಶೇಕಡ ೬೯.೨) ಮತ್ತು ಮಹಿಳಾ ಸಾಕ್ಷರತೆ (ಶೇಕಡ

ಕೋಷ್ಟಕ-೪.೭

ಜಿಲ್ಲೆಯ ಪರಿಶಿಷ್ಟ ಜಾತಿಯ ಗ್ರಾಮೀಣ ಮತ್ತು ನಗರ ಸಾಕ್ಷರತೆ ಪ್ರಮಾಣ (ಶೇಕಡವಾರು)

ಕ್ರ.ಸಂ.	ಪ್ರದೇಶ	ಸಾಕ್ಷರತಾ ಪ್ರಮಾಣ		
		ಒಟ್ಟು	ಪುರುಷ	ಮಹಿಳೆ
೧.	ಜಿಲ್ಲಾ ಗ್ರಾಮೀಣ	೫೦.೩	೬೩.೫	೩೬.೮
	ನಗರ	೭೦.೨	೭೯.೪	೬೦.೭
	ಒಟ್ಟು	೫೭.೪	೬೯.೨	೪೫.೩
೨.	ಪ.ಜಾ. ಗ್ರಾಮೀಣ	೩೬.೯	೫೦.೪	೨೩.೪
	ನಗರ	೫೫.೮	೬೮.೦	೪೩.೪
	ಒಟ್ಟು	೪೨.೩	೫೫.೫	೨೯.೦

ಮೂಲ : ಬಳ್ಳಾರಿ ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಸೆನ್ಸಸ್ ಆಫ್ ಇಂಡಿಯಾ ೨೦೦೧, ಅಭಿವೃದ್ಧಿ ಅಧ್ಯಯನ ಪತ್ರಿಕೆ, ಸಂ. ೩, ಸಂಚಿಕೆ ೨, ೨೦೦೫.

೪೫.೩) ಗಳಿಗಿಂತ ಕಡಿಮೆ ಇವೆ. ಜಿಲ್ಲೆಯ ಪರಿಶಿಷ್ಟ ಜಾತಿಯ ಗ್ರಾಮೀಣ ಸಾಕ್ಷರತೆ ಪ್ರಮಾಣವೂ ಕೂಡ (ಶೇಕಡ ೩೬.೯) ಜಿಲ್ಲೆಯ ಸರಾಸರಿ ಗ್ರಾಮೀಣ ಸಾಕ್ಷರತೆಗಿಂತ (ಶೇಕಡ ೫೦.೩) ಕಡಿಮೆಯಾಗಿದೆ. ಜಿಲ್ಲೆಯ ಗ್ರಾಮೀಣ ದಲಿತರ ಪುರುಷ ಸಾಕ್ಷರತೆ ಮತ್ತು ಮಹಿಳಾ ಸಾಕ್ಷರತೆಗಳು ಕ್ರಮವಾಗಿ ಶೇಕಡ ೫೦.೪ ಮತ್ತು ಶೇಕಡ ೨೩.೪ರಷ್ಟಿದ್ದು, ಜಿಲ್ಲೆಯ ಗ್ರಾಮೀಣ ಪುರುಷರ ಸಾಕ್ಷರತೆ (ಶೇಕಡ ೬೩.೫) ಮತ್ತು ಮಹಿಳಾ ಸಾಕ್ಷರತೆಗಳಿಗಿಂತ (ಶೇಕಡ ೩೬.೮) ಕಡಿಮೆಯಾಗಿರುತ್ತದೆ. ಜಿಲ್ಲೆಯ ನಗರವಾಸಿ ದಲಿತರ ಒಟ್ಟು ಸಾಕ್ಷರತೆಯು ಶೇಕಡ ೫೫.೮ ಆಗಿದ್ದು, ಜಿಲ್ಲೆಯ ಸರಾಸರಿ ನಗರವಾಸಿ ಸಾಕ್ಷರತಾ ಪ್ರಮಾಣ (ಶೇಕಡ ೭೦.೨) ಕ್ಕಿಂತಲೂ ಕಡಿಮೆಯಾಗಿದೆ. ಜಿಲ್ಲೆಯ ನಗರವಾಸಿ ದಲಿತರ ಪುರುಷರ ಸಾಕ್ಷರತೆ ಮತ್ತು ಮಹಿಳೆಯರ ಸಾಕ್ಷರತೆ ಪ್ರಮಾಣಗಳು ಕೂಡ ಕ್ರಮವಾಗಿ ಶೇಕಡ ೬೮.೦ ಮತ್ತು ಶೇಕಡ ೪೩.೪ರಷ್ಟಿದ್ದು, ಜಿಲ್ಲೆಯ ಸರಾಸರಿ ನಗರವಾಸಿ ಪುರುಷರ ಸಾಕ್ಷರತೆ (ಶೇಕಡ ೭೯.೪) ಮತ್ತು ಮಹಿಳಾ ಸಾಕ್ಷರತೆ (ಶೇಕಡ ೬೦.೭) ಪ್ರಮಾಣಕ್ಕಿಂತ ಕಡಿಮೆಯಾಗಿವೆ. ಒಟ್ಟಾರೆ ಬಳ್ಳಾರಿ ಜಿಲ್ಲೆಯ ದಲಿತರ ಸಾಕ್ಷರತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜಿಲ್ಲೆಯ ಸರಾಸರಿ ನಗರ ಮತ್ತು ಗ್ರಾಮೀಣ ಸಾಕ್ಷರತಾ ಪ್ರಮಾಣಗಳಿಗಿಂತ ಕಡಿಮೆಯಾಗಿರುವುದಲ್ಲದೇ ಜಿಲ್ಲೆಯ ದಲಿತ ಪುರುಷರ ಸಾಕ್ಷರತೆ ಮತ್ತು ಮಹಿಳಾ ಸಾಕ್ಷರತೆಗಳೂ ಕೂಡ ಜಿಲ್ಲೆಯ ಸರಾಸರಿ ಪುರುಷರ ಸಾಕ್ಷರತೆ ಮತ್ತು ಮಹಿಳಾ ಸಾಕ್ಷರತೆಗಳಿಗಿಂತ ಕಡಿಮೆಯಾಗಿವೆ. ಅದರಂತೆಯೇ ಬಳ್ಳಾರಿ

ಜಿಲ್ಲೆಯ ದಲಿತರ ಸಾಕ್ಷರತೆ ಪ್ರಮಾಣದಲ್ಲಿ ನಗರದ ದಲಿತರ ಸಾಕ್ಷರತಾ ಪ್ರಮಾಣ ಮತ್ತು ದಲಿತರ ಪುರುಷರ ಸಾಕ್ಷರತಾ ಪ್ರಮಾಣಗಳು ಕ್ರಮವಾಗಿ ಗ್ರಾಮೀಣ ದಲಿತರ ಸಾಕ್ಷರತೆ ಮತ್ತು ದಲಿತರ ಮಹಿಳಾ ಸಾಕ್ಷರತೆ ಪ್ರಮಾಣಗಳಿಗಿಂತ ಹೆಚ್ಚಾಗಿರುತ್ತವೆ. ಜಿಲ್ಲೆಯ ಗ್ರಾಮೀಣ ಮತ್ತು ನಗರವಾಸಿ ದಲಿತರ ಸಾಕ್ಷರತೆಯಲ್ಲಿ ಪುರುಷ ಸಾಕ್ಷರತೆಗಿಂತ ಮಹಿಳಾ ಸಾಕ್ಷರತೆ ಕಡಿಮೆಯಾಗಿದೆ.

ಕೋಷ್ಟಕ-೪.೮

ಜಿಲ್ಲೆಯ ಸಾಮಾಜಿಕ ವರ್ಗವಾರು ಸಾಕ್ಷರತೆ

ಕ್ರ.ಸಂ.	ಸಾಮಾಜಿಕ ವರ್ಗ	ಗಂಡು	ಹೆಣ್ಣು	ಒಟ್ಟು
೦೧.	ಪರಿಶಿಷ್ಟ ಜಾತಿ	೧.೯೯	೨.೪೭	೨.೨೨
೦೨.	ಪರಿಶಿಷ್ಟ ಪಂಗಡ	೨.೧೧	೨.೬೭	೨.೪೨
೦೩.	ಮುಸ್ಲಿಮರು	೧.೩	೧.೨೪	೧.೨೭
೦೪.	ಎಲ್ಲಾ ವರ್ಗಗಳು	೧.೪೭	೧.೬೨	೧.೫೪

ಮೂಲ : ಮಕ್ಕಳ ಜನಗಣತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ೨೦೦೫.

ಈ ಕೋಷ್ಟಕವು ತಿಳಿಸುವಂತೆ ಶಾಲೆಯಿಂದ ಹೊರಗುಳಿದ ೦೬ ರಿಂದ ೧೪ ವರ್ಷದ ಮಕ್ಕಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳೇ ಅಧಿಕವಾಗಿದ್ದಾರೆ. ಶಾಲೆಯಿಂದ ಹೊರಗುಳಿದ ಪರಿಶಿಷ್ಟ ಜಾತಿಯ ಮಕ್ಕಳು ಶೇ. ೨.೨೨ ರಷ್ಟು ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಶೇಕಡ ೨.೪೨ರಷ್ಟಿರುವುದು ಇತರೆ ವರ್ಗದ ಮಕ್ಕಳಿಗಿಂತ ಜಾಸ್ತಿಯಾಗಿದೆ. ಶಾಲೆಯಿಂದ ಹೊರಗಿರುವ ಎಲ್ಲಾ ವರ್ಗದ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹೆಚ್ಚಾಗಿರುತ್ತಾರೆ. ಶಾಲೆ ಬಿಡುವ ಲಿಂಗ ಆಧಾರಿತ ಮಕ್ಕಳ ವಿಷಯದಲ್ಲಿಯೂ ಕೂಡ ಇತರೆ ಎಲ್ಲಾ ವರ್ಗಗಳಿಗಿಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳೇ ಬಹಳವಾಗಿದ್ದಾರೆ. ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿಯ ಮಕ್ಕಳು ಹೆಚ್ಚಾಗಿ ಶಾಲೆಯಿಂದ ಹೊರಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ನಿರ್ದಿಷ್ಟವಾಗಿ ಅಧ್ಯಯನ ಕ್ಷೇತ್ರದ ಎರಡೂ ಗ್ರಾಮಪಂಚಾಯತಿಗಳಲ್ಲಿಯೂ ಕೂಡ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಪದವಿವರೆಗಿನ ದಲಿತರ ಸಾಕ್ಷರತೆ ಹಿಂದುಳಿದಿದ್ದು, ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತಾ ಪ್ರಮಾಣ ಕಡಿಮೆ ಇದೆ ಎಂಬುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿರುತ್ತದೆ. ಹೀಗೆ ದಲಿತರ ಸಾಕ್ಷರತೆಯು ಅಖಿಲ ಭಾರತ ಮಟ್ಟದಿಂದ ಗ್ರಾಮ ಪಂಚಾಯತಿ ಮಟ್ಟದವರೆಗೂ ದುಸ್ಥಿತಿಯಲ್ಲಿದ್ದು, ಲಿಂಗ ತಾರತಮ್ಯದಿಂದ ಕೂಡಿರುತ್ತದೆ. ಹೀಗೆ ತಾರತಮ್ಯದಿಂದ ಕೂಡಿದ ಶೈಕ್ಷಣಿಕ ವ್ಯವಸ್ಥೆಯ ಸಮಾನತೆಯನ್ನು ವಿಶೇಷವಾಗಿ ಲಿಂಗ ಸಮಾನತೆ

ಮತ್ತು ಜಾತಿ ಆಧಾರಿತ ಸಮಾನತೆಗಳನ್ನು ಸಾಧಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಬಗೆಯ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಅಂತರರಾಷ್ಟ್ರೀಯ ಮಟ್ಟದ ಸಹಯೋಗದೊಂದಿಗೆ ಮಾಡುತ್ತಿರುವುದು ತಿಳಿಯುತ್ತದೆ.

೪.೨. ಶಿಕ್ಷಣದ ಸೌಲಭ್ಯಗಳು-ಯೋಜನೆಗಳು

ಹಿಂದುಳಿದ ಮತ್ತು ಲಿಂಗ ತಾರತಮ್ಯದಿಂದ ಕೂಡಿದ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಾಡುತ್ತಲೇ ಬಂದಿವೆ. ಈ ಹಿನ್ನೆಲೆಯಲ್ಲಿ ಇದುವರೆಗೆ ಜಾರಿಗೆ ಬಂದಿರುವ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಹೇಗೆ ದಲಿತರ ಮಕ್ಕಳನ್ನು ಶೈಕ್ಷಣಿಕವಾಗಿ ಒಳಮಾಡಿಕೊಂಡಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಮುಂದೆ ಪ್ರಯತ್ನಿಸಲಾಗಿದೆ.

೧. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ)

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪುನಃ ಪರಿಶೀಲನೆ ಮಾಡಿ ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚಿನ ಗಮನಕೊಡುವ ಅಗತ್ಯವನ್ನು ಕೇಂದ್ರೀಯ ಶಿಕ್ಷಣ ಮಂಡಳಿ ಒತ್ತಾಯಪೂರ್ವಕವಾಗಿ ಸಲಹೆ ಮಾಡಿದೆ. ಇದರ ಪರಿಣಾಮವಾಗಿ ಕೇಂದ್ರ ಸರ್ಕಾರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(ಡಿ.ಪಿ.ಇ.ಪಿ)ವನ್ನು ಜಾರಿಗೊಳಿಸಿದೆ. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಮಕ್ಕಳು ಶಾಲೆಯಲ್ಲಿ ಉಳಿಯುವಿಕೆ ಮತ್ತು ಶಿಕ್ಷಣದ ಗುಣಮಟ್ಟಗಳನ್ನು ಹೆಚ್ಚಿಸುವ ಗುರಿಹೊಂದಿ, ಕಡಿಮೆ ಸಾಕ್ಷರತೆ ಇರುವ ಜಿಲ್ಲೆಗಳಲ್ಲಿ ಜನತೆಯ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು ಈ ಯೋಜನೆಯ ಸಾರಾಂಶವಾಗಿದೆ.

ಇದರಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಮಕ್ಕಳಿಗಾಗಿ ಶಿಕ್ಷಣದ ಸೌಲಭ್ಯ ಒದಗಿಸುವುದು ಈ ಯೋಜನೆಯ ಅಂತರ್ಗತವಾದ ಅಂಶ. ವಿವಿಧ ಸಾಮಾಜಿಕ ವರ್ಗಗಳ ನಡುವೆ ಇರುವ ಮತ್ತು ಲಿಂಗಸಂಬಂಧವಾದ ಶೈಕ್ಷಣಿಕ ಅಸಮಾನತೆಯನ್ನು ಶೇಕಡ ಮೂರಕ್ಕೆ ಕಡಿಮೆ ಮಾಡುವುದೇ ಈ ಯೋಜನೆಯ ಮುಖ್ಯಗುರಿಯಾಗಿರುತ್ತದೆ. ಈ ಹಿನ್ನೆಲೆಯಿಂದ ಸಣ್ಣಪುಟ್ಟ ಜನವಸತಿ ಪ್ರದೇಶಗಳಿಗೆ ಅದರಲ್ಲಿಯೂ ವಿಶೇಷವಾಗಿ ಪರಿಶಿಷ್ಟ ಜನಸಮುದಾಯದ ಪ್ರದೇಶಗಳಿಗೆ ಶಿಕ್ಷಣದ ಮೂಲಸೌಲಭ್ಯಗಳನ್ನು ಒದಗಿಸುವುದರ ಮೂಲಕ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಾಗುತ್ತದೆ. ವಿಶೇಷವಾಗಿ ಬಾಲಕಾರ್ಮಿಕರು ಮತ್ತು ದೈಹಿಕವಾಗಿ ದುರ್ಬಲರಾದ ಮಕ್ಕಳಿಗೆ ಪ್ರತ್ಯೇಕ ಯೋಜನೆಯನ್ನು ರಚಿಸಿ, ಅದೇ ಪ್ರಕಾರವಾಗಿ ಶಿಕ್ಷಕರಿಗೆ ತರಬೇತಿ ನೀಡುವ ಪ್ರಯತ್ನ ಮಾಡಲಾಗುತ್ತದೆ. ಶೈಕ್ಷಣಿಕ ಸಂವಾದಗಳ್ನು ನಡೆಸುವುದು, ಸ್ಥಳೀಯವಾಗಿ ವಿವಿಧ ಜನಸಮುದಾಯಗಳ ನಡುವೆ ಅನುಕೂಲಕರವಾದಂತಹ ರೀತಿಯಲ್ಲಿ ಆಗಾಗ ಸಭೆ ನಡೆಸುವುದಕ್ಕಾಗಿ ಗ್ರಾಮಶಿಕ್ಷಣ ಸಮಿತಿ, ಮಹಿಳಾ ಸಂಘಟನೆಗೆ ಮತ್ತು ಇತರೆ ಸಂಘ-ಸಂಸ್ಥೆಗಳ ಸ್ಥಾಪನೆಯ ಮೂಲಕ

ಶಾಲಾ ಶಿಕ್ಷಣಕ್ಕೆ ಪ್ರವೇಶಿಸಿದ ಪ್ರಥಮ ತಲೆಮಾರಿನ ಕುಟುಂಬದ ಸದಸ್ಯರಿಗೆ ಶಿಕ್ಷಣದ ಆಸಕ್ತಿ ಹೆಚ್ಚಿಸುವ ಪ್ರಯತ್ನ ಮಾಡಲಾಗಿದೆ.

ಶ್ರೀ ವಾಸ್ತವ (೧೯೯೯) ಮತ್ತು ಅಗರವಾಲ್ (೨೦೦೦) ಇವರುಗಳು ಡಿ.ಪಿ.ಇ.ಪಿ. ಕುರಿತಾಗಿ ನಡೆಸಿದ ಅಧ್ಯಯನದಂತೆ, ಈ ಯೋಜನೆಯನ್ನು ಪ್ರಥಮ ಹಂತದಲ್ಲಿ ಅನುಷ್ಠಾನಗೊಳಿಸಿದ ೪೦ ಜಿಲ್ಲೆಗಳಲ್ಲಿ ಶೈಕ್ಷಣಿಕ ಅಂತರದ ಮತ್ತು ಲಿಂಗಸಂಬಂಧಿಯಾದ ಶೈಕ್ಷಣಿಕ ಅಂತರಗಳು ಸ್ವಲ್ಪ ಕಡಿಮೆಯಾಗಿವೆ. ಈ ಯೋಜನೆಯು ಪ್ರಥಮ ಹಂತದಲ್ಲಿ ಅನುಷ್ಠಾನಗೊಂಡ ೪೦ ಜಿಲ್ಲೆಗಳ ಪೈಕಿ ೨೪ ಜಿಲ್ಲೆಗಳಲ್ಲಿ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಕಲಿಕಾ ಸಾಮರ್ಥ್ಯವು ಶೇಕಡ ೩ಕ್ಕಿಂತ ಕಡಿಮೆಯಾಗಿದೆ. ಆದರೆ ೧೪ ಜಿಲ್ಲೆಗಳಲ್ಲಿನ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆ ಮತ್ತು ಕಲಿಕಾ ಸಾಮರ್ಥ್ಯಗಳು ಗಂಡುಮಕ್ಕಳಿಗಿಂತ ಬಹಳ ಕಡಿಮೆಯಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ. ಪ್ರಥಮವಾಗಿ ಈ ಯೋಜನೆ ಜಾರಿಗೆ ಬಂದ ಒಟ್ಟು ೪೦ ಜಿಲ್ಲೆಗಳ ೨೫ ಜಿಲ್ಲೆಗಳಲ್ಲಿ ಶಾಲೆ ಬಿಡುವ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿ, ೫ ಜಿಲ್ಲೆಗಳಲ್ಲಿ ಸಮಾನವಾಗಿ ಮತ್ತು ಉಳಿದಂತಹ ೧೦ ಜಿಲ್ಲೆಗಳಲ್ಲಿ ಕಡಿಮೆಯಾಗಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಈ ೪೦ ಜಿಲ್ಲೆಗಳ ೧೧ ಜಿಲ್ಲೆಗಳಲ್ಲಿ ಮಾತ್ರ ಮಧ್ಯದಲ್ಲಿಯೇ ಶಾಲೆ ಬಿಡುವ ಹೆಣ್ಣುಮಕ್ಕಳ ಪ್ರಮಾಣವು ಶೇಕಡ ೫ ಅಥವಾ ಅದಕ್ಕಿಂತ ಹೆಚ್ಚಾಗಿರುವುದು ಅಧ್ಯಯನಗಳಿಂದ ಗುರುತಿಸಲ್ಪಟ್ಟಿದೆ.

ಮಕ್ಕಳ ಶಾಲಾ ಭಾಗವಹಿಸುವಿಕೆಯ ಹೆಚ್ಚಳ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧನೆಯ ದೃಷ್ಟಿಯಿಂದ ರಾಷ್ಟ್ರದ ವಿವಿಧ ರಾಜ್ಯಗಳಂತೆ ಕರ್ನಾಟಕ ರಾಜ್ಯವೂ ಕೂಡ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದೆ. ೧೯೯೫ರ ಜನವರಿ ೨೬ರಂದು ಪ್ರಥಮವಾಗಿ ಕೋಲಾರ, ಮಂಡ್ಯ, ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಔಪಚಾರಿಕವಾಗಿ ಡಿ.ಪಿ.ಇ.ಪಿ. ಯೋಜನೆಯನ್ನು ಜಾರಿಗೊಳಿಸಲಾಯಿತು. ಅನಂತರ ೧೯೯೬-೯೭ರಲ್ಲಿ ಬೆಂಗಳೂರು, ಬೀದರ್, ಬಳ್ಳಾರಿ, ಧಾರವಾಡ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು ೧೬ ಜಿಲ್ಲೆಗಳಲ್ಲಿ ಈ ಯೋಜನೆ ಚಾಲ್ತಿಯಲ್ಲಿದೆ. ಕಡಿಮೆ ಸಾಕ್ಷರತೆ, ಶಾಲಾ ಭಾಗವಹಿಸುವಿಕೆಯ ಆಧಾರದ ಮೇಲೆಯೇ ಡಿ.ಪಿ.ಇ.ಪಿ. ಯೋಜನೆಗಾಗಿ ಈ ಜಿಲ್ಲೆಗಳನ್ನು ಆಯ್ಕೆ ಮಾಡಿ ಯೋಜನೆಯ ಅಂತ್ಯದ ವೇಳೆಗೆ ವಿವಿಧ ಸಾಮಾಜಿಕ ವರ್ಗಗಳ ನಡುವೆ ಮತ್ತು ಲಿಂಗ ಸಂಬಂಧಿಯಾಗಿ ಇರುವ ಶಿಕ್ಷಣದ ಅಂತರಗಳನ್ನು ಶೇಕಡ ೩ಕ್ಕಿಂತ ಕಡಿಮೆಗೊಳಿಸುವಂತಹ ಪ್ರಮುಖ ಗುರಿಯನ್ನು ಹೊಂದಲಾಗಿತ್ತು. ಆದರೆ ಯೋಜನೆಯ ಅನುಷ್ಠಾನದಿಂದಾಗಿ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವುದರೊಂದಿಗೆ ಮಧ್ಯದಲ್ಲಿಯೇ ಶಾಲೆ ಬಿಡದಂತೆ ನೋಡಿಕೊಳ್ಳಲು ಸಾಮಾಜಿಕ ಮತ್ತು ಆರ್ಥಿಕ ಸ್ವಭಾವದ ತೊಡಕುಗಳು ಅಡ್ಡಿಯಾಗಿವೆ.

ಸಾಮಾಜಿಕ ವರ್ಗ ಮತ್ತು ಲಿಂಗಸಂಬಂದಿ ಅಂತರಗಳನ್ನು ಮಿತಿಗೊಳಿಸುವ ಡಿ.ಪಿ.ಇ.ಪಿ. ಯೋಜನೆಯ ಗುರಿ ಮತ್ತು ಉದ್ದೇಶಗಳು ನಿರ್ದಿಷ್ಟವಾಗಿ ದಲಿತರಿಗೆ ಗೊತ್ತಾಗದಿರುವ ಸ್ಥಿತಿ ಇದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂಬುದು ಬಹುತೇಕ ದಲಿತರಿಗೆ ತಿಳಿದಿಲ್ಲ. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿಯೂ ಕೂಡ ಮರೆಮಾಚಿದ ಸಾಮಾಜಿಕ ತಾರತಮ್ಯವು ಕಂಡುಬರುತ್ತದೆ. ಅದೇನೆಂದರೆ ಈ ಯೋಜನೆಯ ಅನುಷ್ಠಾನ ಸಂದರ್ಭದಲ್ಲಿ ಕೀಳರಿಮೆಯಿಂದ ಮುಂದೆ ಬರಲಾಗದ ದಲಿತ ಮಕ್ಕಳನ್ನು ಗುರುತಿಸುವುದೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಯೋಜನೆಯ ಪ್ರಯೋಜನ ದಲಿತರಿಗಿಂತ ಹೆಚ್ಚಾಗಿ ಇತರ ಜಾತಿ ಮಕ್ಕಳಿಗೆ ಲಭ್ಯವಾಗುತ್ತವೆ. ಈ ದೃಷ್ಟಿಯಿಂದ ದಲಿತ ಮಕ್ಕಳನ್ನು ಜಾಗೃತಗೊಳಿಸುವ ಅಗತ್ಯವಿರುವುದನ್ನು ನಮ್ಮ ಅಧ್ಯಯನ ಗುರುತಿಸುತ್ತದೆ.

ಲಿಂಗಾಧಾರಿತ ಮತ್ತು ಸಾಮಾಜಿಕ ಶೈಕ್ಷಣಿಕ ಅಸಮಾನತೆಯಲ್ಲಿರುವ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಯಿತು. ಆದರೆ ಈ ಕಾರ್ಯಕ್ರಮವು ಅಂತರರಾಷ್ಟ್ರೀಯ ಮಟ್ಟದಲ್ಲಿ ರೂಪಿತವಾದ ಕಾರ್ಯಕ್ರಮವಾದ್ದರಿಂದ ಸ್ಥಳೀಯಮಟ್ಟದಲ್ಲಿ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇರುವ ಸವಾಲುಗಳನ್ನು ಅರ್ಥಮಾಡಿಕೊಳ್ಳದಿರುವುದೇ ಡಿ.ಪಿ.ಇ.ಪಿ. ಕಾರ್ಯಕ್ರಮದ ಪ್ರಮುಖ ದೋಷ. ಅಷ್ಟೇ ಅಲ್ಲದೆ ಐರೋಪ್ಯ ರಾಷ್ಟ್ರಗಳು ನೀಡಿದ ಸಾಲಕ್ಕೆ ಮರುಹೊಂದಾಣಿಕೆಯನ್ನು ಸಲ್ಲಿಸುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಈ ಕುರಿತಾಗಿ ನಮ್ಮಲ್ಲಿ ಸಾಕಷ್ಟು ಅಧ್ಯಯನಗಳು ಕಾಣಸಿಗುತ್ತವೆ. ಆದ್ದರಿಂದ ಈ ಕಾರ್ಯಕ್ರಮವನ್ನು ಒಂದು ಜನಾಂದೋಲನವಾಗಿ ರೂಪಿಸಬೇಕಾಗಿದೆ.

೨. ಶಿಕ್ಷಕರ್ಮಿ ಕಾರ್ಯಕ್ರಮ

೧೯೮೭ರಲ್ಲಿ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ರಾಜಸ್ಥಾನ ಸರ್ಕಾರದಿಂದ ಪ್ರಾರಂಭಿಸಲ್ಪಟ್ಟ ಶೈಕ್ಷಣಿಕ ಯೋಜನೆಯೇ ಈ ಶಿಕ್ಷಕರ್ಮಿ ಕಾರ್ಯಕ್ರಮ. ದೂರದ ಗ್ರಾಮಪ್ರದೇಶಗಳಲ್ಲಿ ನಿರ್ದಿಷ್ಟ ಶೈಕ್ಷಣಿಕ ಅವಧಿಯ ದಿನಗಳಲ್ಲಿ ಕಾರ್ಯಚರಣೆಯಲ್ಲಿರದ, ಪದೇ ಪದೇ ಗೈರುಹಾಜರಾಗುವ ಮತ್ತು ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಸಂಬಂಧಿಸಿದ ಸಮುದಾಯ ಆಧಾರಿತ ಯೋಜನೆಯಾಗಿರುತ್ತದೆ. ಈ ಯೋಜನೆಯ ಅಡಿಯಲ್ಲಿ ಪೂರ್ಣಪ್ರಮಾಣದ ತರಬೇತಿ ಹೊಂದಿದ ಶಿಕ್ಷಕರ ಕೊರತೆಯಿರುವ ಪ್ರದೇಶಗಳಲ್ಲಿ ಸ್ಥಳೀಯ ಶಿಕ್ಷಕರನ್ನು ನೇಮಕಮಾಡಿ, ಪೂರ್ವತರಬೇತಿ ಮತ್ತು ನಂತರದ ಪುನರ್ಮನನ ತರಬೇತಿಗಳನ್ನು ಕೊಡುವುದರ ಮೂಲಕ ಶಿಕ್ಷಕರ ಶೈಕ್ಷಣಿಕ ಮಟ್ಟವನ್ನು ಉತ್ತಮಗೊಳಿಸಲಾಗುತ್ತದೆ. ಈ ತರಬೇತಿಗಳು ಪ್ರಾಥಮಿಕ ಶಾಲೆ ಮತ್ತು ಸಂಜೆಯ ಕಲಿಕಾ ಕೇಂದ್ರಗಳನ್ನು ನೋಡಿಕೊಂಡು ಹೋಗುವಂತಹ ಕೌಶಲ್ಯವನ್ನು ಒದಗಿಸುತ್ತವೆ. ತರಬೇತಿ ಪಡೆದ ಶಿಕ್ಷಕರ್ಮಿ ಕಾರ್ಯಕರ್ತರು

ತಳಮಟ್ಟದ ಪಂಚಾಯಿತಿ ಸಮಿತಿ ಸದಸ್ಯರ ಸಹಯೋಗದೊಂದಿಗೆ, ಸಂಘ-ಸಂಸ್ಥೆಗಳನ್ನು ತೊಡಗಿಸಿಕೊಂಡು ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಈ ಯೋಜನೆಯ ಪ್ರಕಾರ ಯಾವುದೇ ಕಾರಣ ಅಥವಾ ಉದ್ದೇಶದಿಂದ ಶಾಲೆಗೆ ಬಾರದಂತಹ ಮಕ್ಕಳಿಗೆ ಪ್ರತ್ಯೇಕವಾದ ಪಠ್ಯಕ್ರಮವಿರುವ ಸಂಜೆ ಶಾಲೆಯನ್ನು ಪ್ರಾರಂಭಿಸಲಾಗುತ್ತದೆ.

ಶಿಕ್ಷಕರ್ಮಿ ಕಾರ್ಯಕ್ರಮದ ಶಿಕ್ಷಕರ ನೇಮಕಾತಿಯಿಂದ ಬೋಧನೆ ಮತ್ತು ಕಲಿಕೆಯ ಗುಣಮಟ್ಟಕ್ಕೆ ಪೆಟ್ಟುಬೀಳುತ್ತದೆ ಎಂಬ ಅಭಿಪ್ರಾಯದ ನಡುವೆಯೂ ಗ್ರಾಮೀಣ ಭಾಗದ ಜನರಲ್ಲಿ ಶಿಕ್ಷಣದ ಆಸಕ್ತಿ ಮೂಡಿಸುವಲ್ಲಿ ಪ್ರಗತಿದಾಯಕವಾಗಿದೆ. ಇದಕ್ಕೆ ನಿದರ್ಶನವೆಂಬಂತೆ ಶಿಕ್ಷಕರ್ಮಿ ಕಾರ್ಯಕ್ರಮ ಜಾರಿಯಲ್ಲಿರುವ ಗ್ರಾಮದಲ್ಲಿ ೫ನೇ ತರಗತಿಯಲ್ಲಿ ಉತ್ತೀರ್ಣವಾದ ಹೆಣ್ಣುಮಕ್ಕಳ ಗುಂಪುಗಳ ಮಾರ್ಗದರ್ಶನದ ಅಡಿಯಲ್ಲಿ ಮಾಧ್ಯಮಿಕ ಶಾಲೆಗಳನ್ನು ಪ್ರಾರಂಭಿಸುವ ಪ್ರಯತ್ನ ಮಾಡಲಾಗಿದೆ. ಈ ಯೋಜನೆಯ ಮೂಲಕ ಶಿಕ್ಷಣದ ಮುಖ್ಯವಾಹಿನಿಗೆ ಸೇರಿದ ಬಹುತೇಕ ಮಕ್ಕಳು ಅವರ ಕುಟುಂಬದಲ್ಲಿ ಶಿಕ್ಷಣ ಕಲಿತ ಮೊದಲ ತಲೆಮಾರಿನವರೆಂಬುದು ವಿಶೇಷ.

ಶಿಕ್ಷಕಕರ್ಮಿ ಕಾರ್ಯಕ್ರಮವನ್ನು ಸ್ಥಳೀಯ ಮಟ್ಟದಲ್ಲಿ ರೂಪಿಸಿ, ಆಚರಣೆಗೆ ತರಲು ಪ್ರಯತ್ನಿಸಲಾಯಿತು. ಈ ಕಾರ್ಯಕ್ರಮದ ಉದ್ದೇಶವನ್ನು ಗಮನಿಸಿದರೆ, ಸ್ಥಳೀಯ ಸಂಸ್ಥೆಗಳು ಸೇರಿದಂತೆ ಸಮುದಾಯವನ್ನು ಶಾಲಾ ಶಿಕ್ಷಣದ ನಿರ್ವಹಣೆಗೆ ವಿಶೇಷವಾಗಿ ಸ್ಥಳೀಯ ವಿದ್ಯಾವಂತ ಯುವಕರನ್ನು ತಾತ್ಕಾಲಿಕವಾಗಿ ಶಿಕ್ಷಕರನ್ನಾಗಿ ನೇಮಿಸಿಕೊಳ್ಳುವ ಉದ್ದೇಶವಿದೆ. ಇದು ಮೇಲ್ನೋಟಕ್ಕೆ ಅಭಿವೃದ್ಧಿ ಸೂಚಕವೆಂದು ಕಂಡುಬಂದರೂ, ತಾತ್ವಿಕವಾಗಿ ಅಸಮಾನತೆಯನ್ನು ಅನುಭವಿಸಿದ ಅವಕಾಶ ವಂಚಿತ ಜನಸಮುದಾಯ ಅದರಲ್ಲಿಯೂ ದಲಿತ ಮಕ್ಕಳನ್ನು ವೈಜ್ಞಾನಿಕವಾಗಿ ಸಂವಿಧಾನ ಬದ್ಧವಾಗಿ ಸಮಾನತೆಯತ್ತ ನಡೆಸುವ ಪ್ರಯತ್ನದಂತೆ ಕಾಣುವುದಿಲ್ಲ. ಏಕೆಂದರೆ ಶಿಕ್ಷಕರ್ಮಿ ಕಾರ್ಯಕ್ರಮದ ಮೂಲಕ ಯಾವುದೇ ಬಗೆಯ ತರಬೇತಿ ಹೊಂದಿರದ, ಮಕ್ಕಳ ನಡುವೆ ಒಡನಾಟವಿರದ, ಕುಶಲತೆ ಇರದ, ಎಸ್.ಎಸ್.ಎಲ್.ಸಿ. ಪಾಸಾದ ಮತ್ತು ಪಿ.ಯು.ಸಿ ಫೇಲಾದ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಲಾಗುತ್ತದೆ. ಈ ಮೂಲಕ ಒಂದು ಬಗೆಯಲ್ಲಿ ದಲಿತರು ಶೈಕ್ಷಣಿಕ ಮುಖ್ಯವಾಹಿನಿಗೆ ಬರದಂತೆ ತಡೆಯುವಂತಹ ವ್ಯವಸ್ಥಿತವಾದ ಪ್ರಯತ್ನ ಮಾಡಿದಂತೆ ಈ ಕಾರ್ಯಕ್ರಮವು ಭಾಸವಾಗುತ್ತದೆ.

೩. ಲೋಕಜಂಬಿಷ್

ಶಾಲಾ ಶಿಕ್ಷಣದಲ್ಲಿ ಜನರ ಭಾಗಹಿಸುವಿಕೆ, ಶಿಕ್ಷಣದ ವಿಕೇಂದ್ರೀಕರಣ, ಲಿಂಗ ಸಮಾನತೆಯ ಶಿಕ್ಷಣ, ಶಿಕ್ಷಕರ ಸಾಮರ್ಥ್ಯದ ವಿಸ್ತರಣೆ, ಶಿಕ್ಷಣದ ಗುಣಮಟ್ಟ, ತರಗತಿಯ ಚಟುವಟಿಕೆಗಳು ಮೌಲ್ಯಮಾಪನ ಮತ್ತು ಅವಲೋಕನಗಳನ್ನೊಳಗೊಂಡ ಜನಾಂದೋಲನ ಕಾರ್ಯಕ್ರಮದಂತಿರುವುದೇ ಲೋಕಜಂಬಿಸ್. ಹೆಣ್ಣುಮಕ್ಕಳಿಗೆ ಶಿಕ್ಷಣ ಒದಗಿಸುವುದು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣುಮಕ್ಕಳು ಭಾಗವಹಿಸುವಿಕೆಯನ್ನು ಹೆಚ್ಚಿಸುವುದರ ಮೂಲಕವಾಗಿ ಮಹಿಳೆಯರ ಸಬಲೀಕರಣ ಸಾಧಿಸುವುದು ಈ

ಲೋಕಜಂಬಿಷ್ ಕಾರ್ಯಕ್ರಮದ ಮೂಲ ಆಶಯವಾಗಿರುತ್ತದೆ. ಇದರಿಂದ ಶಿಕ್ಷಣದ ಪರಿಸರಕ್ಕೆ ಅನುಕೂಲವಿದೆ. ಈ ರೀತಿಯಲ್ಲಿ ಲೋಕಜಂಬಿಸ್ ಕಾರ್ಯಕ್ರಮ ಕೂಡ ಹೆಣ್ಣುಮಕ್ಕಳ ಶಾಲಾ ಶಿಕ್ಷಣವನ್ನು ವಿಸ್ತೃತಪಡಿಸಲು ಜಾರಿಗೆ ಬಂದಿರುತ್ತದೆ.

ಆದರೆ ದಲಿತ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಪರೋಕ್ಷವಾಗಿ ಸಾಮಾಜಿಕ ತಾರತಮ್ಯ ಕಂಡುಬರುತ್ತದೆ. ಈ ಯೋಜನೆಯಲ್ಲಿ ದಲಿತ ಹೆಣ್ಣುಮಕ್ಕಳಿಗೆ ನಿಗದಿತ ಪ್ರಮಾಣದ ಮೀಸಲಾತಿ ಇಲ್ಲದಿರುವುದರಿಂದ ಸಾಮಾಜಿಕವಾಗಿ ಮೇಲ್ಜಾತಿಯ ಹೆಣ್ಣುಮಕ್ಕಳೇ ಇದರ ಪ್ರಯೋಜನ ಪಡೆದುಕೊಳ್ಳುವುದು ಸಾಮಾನ್ಯವಾಗಿದೆ. ವಾಸ್ತವವಾಗಿ ದಲಿತ ಹೆಣ್ಣುಮಕ್ಕಳು ಈ ಯೋಜನೆಯ ಸೌಲಭ್ಯವನ್ನು ಸರಿಯಾಗಿ ಪಡೆಯಲಾಗದೇ ವಂಚಿತರಾಗುತ್ತಾರೆ. ಒಟ್ಟಾರೆಯಾಗಿ ಮಹಿಳಾ ಸಬಲೀಕರಣದ ಈ ಯೋಜನೆಯ ಉದ್ದೇಶವು ಸಫಲವಾಗುವುದಿಲ್ಲ. ಹಾಗಾಗಿ ಲೋಕಜಂಬಿಷ್ ಕಾರ್ಯಕ್ರಮದ ಅನುಷ್ಠಾನದಲ್ಲಿ ದಲಿತ ಹೆಣ್ಣುಮಕ್ಕಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದರೆ ಈ ಯೋಜನೆಯ ಉದ್ದೇಶ ಸಫಲವಾಗುತ್ತದೆ.

೪. ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ

೧೯೯೦ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸಿನಂತೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕಲಿಕೆಯ ಕನಿಷ್ಟ ಮಟ್ಟವನ್ನು ರೂಪಿಸಲು ಒಂದು ಸಮಿತಿ ರಚಿಸಲ್ಪಟ್ಟಿತು. ಈ ಸಮಿತಿಯು ೧೯೯೧ರಲ್ಲಿ "ಪ್ರಾಥಮಿಕ ಹಂತದಲ್ಲಿ ಕಲಿಕೆಯ ಕನಿಷ್ಟ ಮಟ್ಟಗಳು" ಎಂಬ ತಲೆಬರಹದ ಕೆಳಗೆ ೧ ರಿಂದ ೫ನೇ ತರಗತಿಯ ಮಕ್ಕಳು ಭಾಷೆ, ಗಣಿತ, ಪರಿಸರ ಅಧ್ಯಯನ ವಿಷಯಗಳಲ್ಲಿ ಗಳಿಸಬೇಕಾದ ಕನಿಷ್ಟ ಕಲಿಕಾ ಮಟ್ಟಗಳನ್ನು ಗುರುತಿಸುತ್ತದೆ. ಅದರಂತೆ

* ಮಗು ಸ್ವತಂತ್ರವಾಗಿ ಕಲಿಯುವ ಅವಕಾಶ ನೀಡುವುದು.
* ಮಕ್ಕಳ ಕಲಿಕೆಯಲ್ಲಿ ಸಮಾನತೆಗೆ ಅವಕಾಶ ಕೊಡುವುದು.
* ಪ್ರತಿಯೊಂದು ತರಗತಿಯ ವಿವಿಧ ವಿಷಯಗಳಲ್ಲಿ ಮಗು ಏನು ಕಲಿಯಬೇಕೆಂಬುದನ್ನು ನಿಗದಿಗೊಳಿಸುವುದು.
* ಪ್ರತಿ ವಿಷಯದ ವಿವಿಧ ಕಲಿಕಾ ಸಾಮರ್ಥ್ಯ ತಿಳಿಸುವುದು.
* ಶಿಕ್ಷಕರು ಕಲಿಸುವಾಗ ಏನು ಮಾಡಬೇಕು? ಮತ್ತು ಹೇಗೆ ಕಲಿಸಬೇಕೆಂಬ ಬಗ್ಗೆ ನಿರ್ದಿಷ್ಟತೆ ಒದಗಿಸುವುದು.
* ಗ್ರಾಮ ಮತ್ತು ನಗರದ ಶಾಲೆಗಳಲ್ಲಿನ ಮಕ್ಕಳ ಕಲಿಕಾ ಅಂತರವನ್ನು ಹೋಗಲಾಡಿಸುವುದು ಸೇರಿವೆ.

ಈ ಕಾರ್ಯಕ್ರಮದಲ್ಲಿ ಪ್ರತಿಯೊಂದು ಮಗು ಪ್ರತಿಯೊಂದು ವಿಷಯದಲ್ಲಿನ ಕಲಿಕಾ ಸಾಮರ್ಥ್ಯವನ್ನು ನಿರ್ದಿಷ್ಟಪಡಿಸುವಾಗ ಮಕ್ಕಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಪರಿಗಣಿಸಿರುವುದಿಲ್ಲ. ನಿರ್ದಿಷ್ಟವಾಗಿ ಹೇಳಬೇಕೆಂದರೆ ದಲಿತ ಮಕ್ಕಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳು ಇತರ ಮಕ್ಕಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳಿಗಿಂತ ಹಿಂದುಳಿದಿರುತ್ತವೆ. ಹೀಗಿರುವಾಗ ಒಂದೇ ರೀತಿಯಾದ ಕಲಿಕಾ ಸಾಮರ್ಥ್ಯವನ್ನು ಗುರುತಿಸಿದರೆ ದಲಿತ ಮಕ್ಕಳು ಇತರೆ ಮಕ್ಕಳ ಕಲಿಕಾ ಸಾಮರ್ಥ್ಯಕ್ಕಿಂತ ಕೆಳಹಂತದಲ್ಲಿರುತ್ತಾರೆ. ಹಾಗಾಗಿ ಈ ಯೋಜನೆಯ ಅನುಕೂಲ ಇತರೆ ಜಾತಿಯ ಮಕ್ಕಳಂತೆ ದಲಿತ ಮಕ್ಕಳಿಗೆ ಲಭ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಮಗುವಿನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ಕಲಿಕಾ ಸಾಮರ್ಥ್ಯವನ್ನು ನಿಗದಿಪಡಿಸಬೇಕಾಗಿದೆ.

೫. ಪ್ರಾಥಮಿಕ ಶಿಕ್ಷಣದ ಉನ್ನತೀಕರಣ

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿನ ದಾಖಲಾತಿ ಮತ್ತು ಹಾಜರಾತಿಗೆ ಸಂಬಂಧಿಸಿದಂತೆ ಈ ಯೋಜನೆಯನ್ನು ೧೯೯೭ರಲ್ಲಿಯೇ ಪ್ರಾರಂಭಿಸಲಾಗಿದೆ. ೦೬ ರಿಂದ ೧೪ ವಯೋಮಾನದ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುತ್ತಾ, ಮಕ್ಕಳು ಶಾಲೆಗೆ ಗೈರುಹಾಜರಾಗದಂತೆ ಮತ್ತು ಮಧ್ಯದಲ್ಲಿಯೇ ಶಾಲೆ ಬಿಡದಂತೆ ನೋಡಿಕೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಗೆ ಅವಶ್ಯಕವಾದ ಹಣಕಾಸಿನ ಸಹಾಯವು ಯೂನಿಸೆಫ್‌ನಿಂದ ಲಭ್ಯವಾಗುತ್ತದೆ. ಈ ಯೋಜನೆಯಂತೆ ದಲಿತ ಮಕ್ಕಳಿಗೆ ವಿಶೇಷ ಆಸಕ್ತಿ ತೋರಿಸಲಾಗುತ್ತಿಲ್ಲವೆಂಬ ಆರೋಪವಿದೆ. ಹಾಗಾಗಿ ದಲಿತ ಮಕ್ಕಳ ಕಡೆಗೆ ಹೆಚ್ಚಿನ ಗಮನ ನೀಡಿದರೆ ಪ್ರಯೋಜನವಾಗುತ್ತದೆ.

೬. ಶಿಕ್ಷಣ ಗ್ಯಾರಂಟಿ ಯೋಜನೆ

ಶಾಲಾ ಶಿಕ್ಷಣದಿಂದ ಹೊರಗೆ ಇರುವ ೦೬ ರಿಂದ ೧೪ ವಯೋಮಾನದ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣ ನೀಡುವುದಕ್ಕಾಗಿ ಸರ್ವಶಿಕ್ಷಣ ಅಭಿಯಾನದ ಒಂದು ಭಾಗವೇ ಈ ಯೋಜನೆ. ಶಿಕ್ಷಣ ಗ್ಯಾರಂಟಿ ಯೋಜನೆಯು ಶಿಕ್ಷಣದ ಸಾರ್ವತ್ರೀಕರಣದ ಸಾಧನೆಗಾಗಿ ವಾಸಸ್ಥಳಗಳಲ್ಲಿ ಶಾಲೆಗಳ ಸ್ಥಾಪನೆಗೆ ಸಹಾಯಕವಾಗುತ್ತವೆ. ಜೊತೆಗೆ ಶಾಲಾ ಶಿಕ್ಷಣದಿಂದ ಹೊರಗಿರುವ ೦೬ ರಿಂದ ೧೪ ವಯಸ್ಸಿನ ಮಕ್ಕಳನ್ನು ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ ಮುಂತಾದ ಶಿಬಿರಗಳನ್ನು ನಡೆಸುವುದರ ಮೂಲಕವಾಗಿ ಮಕ್ಕಳನ್ನು ಶಾಲೆಗೆ ಹಿಂದಿರುಗುವಂತೆ ಮಾಡುವಲ್ಲಿ ಪ್ರೋತ್ಸಾಹ ದಾಯಕವಾಗಿದೆ. ಅಲ್ಲದೇ ಈ ಸಂಬಂಧ ಸಮಸ್ಯೆಗಳಿಗೆ ನವೀನ ರೀತಿಯ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಈ ಯೋಜನೆ ಅನುಕೂಲಕಾರಿಯಾಗಿರುತ್ತದೆ.

ಮೇಲೆ ತಿಳಿಸಿದ ಕಲಿಕೆಯ ಕನಿಷ್ಟ ಕಾರ್ಯಕ್ರಮ, ಶಿಕ್ಷಣ ಗ್ಯಾರಂಟಿ ಯೋಜನೆ ಮತ್ತು ಪ್ರಾಥಮಿಕ ಶಿಕ್ಷಣದ ಉನ್ನತೀಕರಣ ಯೋಜನೆಗಳು ಯುರೋಪಿಯನ್ ಹಣಕ್ಕಾಗಿ ರೂಪಿಸಿದಂತಹ ಯೋಜನೆಗಳಾಗಿವೆ. ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ ಮತ್ತು ಶಿಕ್ಷಣ ಗ್ಯಾರಂಟಿ ಯೋಜನೆಗಳು

ಒಂದು ಬಗೆಯಲ್ಲಿ ಮಕ್ಕಳ ಕೌಶಲ್ಯವನ್ನು ಹೆಚ್ಚಿಸುವ ಅಥವಾ ಕಾಂಪಿಟೆನ್ಸಿಯನ್ನು ಹೆಚ್ಚಿಸುವ ರೀತಿಯಲ್ಲಿ ಕಂಡುಬರುತ್ತವೆ. ಈ ಕಾಂಪಿಟೆನ್ಸಿಯನ್ನು ಹೆಚ್ಚುಸುವಾಗ ಇವರು ದಲಿತ ಮಕ್ಕಳನ್ನು ಮಾಪನ ಮಾಡಲು ಬಳಸಿರುವ ಮತ್ತು ಬಳಸಲು ಪ್ರಯತ್ನಿಸುತ್ತಿರುವ ವಿಧಾನ ಮತ್ತು ಬೆಂಚ್ ಮಾರ್ಕ್‌ಗಳನ್ನು ಈಗಾಗಲೇ ಇರುವ ಸಾಂಪ್ರದಾಯಿಕ ಪರೀಕ್ಷಾ ಪದ್ಧತಿಗೆ ಹೊಂದಿಕೊಂಡಂತೆಯೇ ರೂಪಿಸಲಾಗಿದೆ. ಉದಾಹರಣೆಗೆ, ಗಣಿತದಲ್ಲಿ ಮಗುವು ಗುಣಾಕಾರ, ಭಾಗಾಕಾರ, ಕೂಡುವುದು ಮತ್ತು ಕಳೆಯುವುದನ್ನು ಈಗಾಗಲೇ ರೂಪಿಸಿರುವ ಸೂತ್ರ ಮತ್ತು ಸಿದ್ಧಾಂತಗಳ ಹಿನ್ನೆಲೆಯಲ್ಲಿ ಹಾಗೆಯೇ ಮಾಡಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ.

ಒಂದು ಪಕ್ಷ ಮಗುವು ತನ್ನ ದಿನನಿತ್ಯದ ಬದುಕಿಗಾಗಿ ಹೂವನ್ನು ಮಾರಿಯೋ, ಹಾಲನ್ನು ಮಾರಿಯೋ ಅಥವಾ ತನ್ನ ಪರಿಸರದಲ್ಲಿ ಸಿಗುವ ಸಣ್ಣ-ಪುಟ್ಟ ಹಣ್ಣುಗಳನ್ನು ಮಾರಿಯೋ, ಕೂಡಿ, ಕಳೆದು, ಭಾಗಿಸಿ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಿರುವ ಪರಿಸರದಲ್ಲಿಯೇ ಕಂಡುಕೊಂಡ ಸೂತ್ರವನ್ನು ಮತ್ತು ತನಗೆ ಗೊತ್ತಿರುವ ವಿಷಯಗಳನ್ನು ಪರೀಕ್ಷೆಯಲ್ಲಿ ಬರೆಯಲಾಗದ ಸ್ಥಿತಿ ಇದೆ. ಅಥವಾ ಮಗುವು ತನ್ನ ಬದುಕಿನ ಪರಿಸರದಲ್ಲಿ ಸೂತ್ರ ಮತ್ತು ತನಗೆ ಗೊತ್ತಿರುವಂತಹ ವಿಷಯಗಳನ್ನು ಎಲ್ಲೂ ತೋರಿಸಿಕೊಳ್ಳಲಾರದ ಸ್ಥಿತಿಯಲ್ಲಿ ಈಗಾಗಲೇ ರೂಪಿಸಿರುವ ಪರೀಕ್ಷಾ ವಿಧಾನಗಳಿವೆ. ಮಗುವಿನ ಕಲಿಕೆಯನ್ನು ಅಳತೆ ಮಾಡುವಾಗ ಮೊದಲಿನ ತಲೆಮಾರಿನ ಮಕ್ಕಳನ್ನು ಮತ್ತು ಈಗಾಗಲೇ ೩-೪ ತಲೆಮಾರುಗಳ ಮೊದಲೇ ಶಿಕ್ಷಣ ಪಡೆದ ಕುಟುಂಬದಿಂದ ಬಂದ ಮಕ್ಕಳನ್ನು ಒಂದೇ ರೀತಿಯ ಮಾನದಂಡದಲ್ಲಿ ಮತ್ತು ಸೃಜನಶೀಲ ನೆಲೆಯಲ್ಲಿ ಆ ಮಗುವಿನ ಸಾಮರ್ಥ್ಯವನ್ನು ಮತ್ತು ಕೌಶಲ್ಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳನ್ನು ಯಾವುದೇ ಪರೀಕ್ಷಾ ವಿಧಾನಗಳು ಮಾಡಿರುವುದಿಲ್ಲ.

ಅದರಲ್ಲಿಯೂ ಭಾಷೆ ಕಲಿಕೆಗೆ ಸಂಬಂಧಿಸಿದಂತೆ ಮಗು ಶಿಷ್ಟಭಾಷೆಯ ನೆಲೆಯಲ್ಲಿ ಉಚ್ಚರಿಸದಿದ್ದ ಪಕ್ಷದಲ್ಲಿ ಅಥವಾ ಶಿಕ್ಷಕರಿಗೆ ಗೊತ್ತಿರುವ ವಿಧಾನದಲ್ಲಿ ಹೇಳಿಕೊಟ್ಟಾಗ ಮಗು ಅದನ್ನು ಕಲಿಯದಿದ್ದರೆ, ಆ ಮಗುವಿಗೆ ಭಾಷೆಯೇ ಗೊತ್ತಿಲ್ಲ, ಸಾಮರ್ಥ್ಯವೇ ಇಲ್ಲ ಎಂಬಂತಹ ಮಾನದಂಡಗಳನ್ನು ನಮ್ಮ ಪರೀಕ್ಷಾ ವಿಧಾನಗಳು ರೂಪಿಸಿವೆ. ಈ ಮಾನದಂಡಗಳು ಕೇವಲ ತಮ್ಮ ಆಡಳಿತ ಸೂತ್ರಗಳನ್ನು ಸ್ಥಳೀಯ ಮಟ್ಟದಲ್ಲಿ ಇಡಿದಿಟ್ಟುಕೊಳ್ಳಲು ಬ್ರಿಟೀಷರು ರೂಪಿಸಿದ ಶಿಕ್ಷಣದಿಂದಲೇ ಬಂದಿರುತ್ತವೆ.

ಈ ವಿಧಾನ ಎಷ್ಟು ಅಪಾಯಕಾರಿ ಎಂದರೆ, ಈ ವಿಧಾನದಿಂದಾಚೆ ಕ್ರಿಯಾತ್ಮಕ ಮತ್ತು ಸೃಜನಶೀಲ ನೆಲೆಯಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳಲು ಹೋರಾಟ ನಡೆಸುತ್ತಿರುವ ದಲಿತರ ಮತ್ತು ಬಡವರ ಮಕ್ಕಳನ್ನು ಶಾಲೆಯಿಂದ ಹೊರಗಿಡುವಂತಹ ತಂತ್ರಗಾರಿಕೆಯನ್ನು ತನ್ನಲ್ಲಿಟ್ಟುಕೊಂಡಿದೆ. ತನ್ನಲ್ಲಿ ಅಡಗಿಸಿ ಇಟ್ಟುಕೊಂಡಿರುವ ಮೇಲ್ವರ್ಗದ ಆಡಳಿತಕ್ಕೆ ಪೂರಕವಾಗುವ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾಗಿರುವ ನೆಲೆಯಲ್ಲಿರುವುದರಿಂದ ಇದು ಮೊದಲ ತಲೆಮಾರಿನ ಅದರಲ್ಲಿಯೂ

ದಲಿತ ಮಕ್ಕಳು ಕೂಡ ಶಾಲೆಯ ಒಳಗೆ ರೂಪಿಸಿರುವ ಕಲಿಕಾ ವಿಧಾನವನ್ನೇ ಕಲಿಕೆ ಎಂದು ಸಾರುವ ಮತ್ತು ಅದನ್ನೇ ಗುಣಮಟ್ಟದ ಕಲಿಕೆ ಎಂದು ಒತ್ತಾಯಿಸುವಂತಿದೆ. ಇದು ದಲಿತ ಮಕ್ಕಳನ್ನು ಶಾಲೆಯಿಂದ ಹೊರಗಿಡುವ ಎಲ್ಲಾ ತಂತ್ರಗಾರಿಕೆಗಳನ್ನು ಹೊಂದಿದ್ದು, ಇನ್ನಷ್ಟು ಅಧ್ಯಯನಗಳನ್ನು ಎದುರು ನೋಡಬೇಕಾಗಿದೆ.

೭. ಮಧ್ಯಾಹ್ನದ ಬಿಸಿಯೂಟ ಯೋಜನೆ

ಗ್ರಾಮೀಣ ಪ್ರದೇಶದಲ್ಲಿ ಬಡತನ ಮತ್ತು ಮೂಢಸಂಪ್ರದಾಯದ ಪ್ರಭಾವಗಳಿಂದ ಕೂಡಿದ ಪೋಷಕರ ಮಕ್ಕಳು ಬಹುತೇಕವಾಗಿ ಊಟ ಮಾಡದೆ ಶಾಲೆಗೆ ಬರುತ್ತಾರೆ. ಊಟವಿಲ್ಲದೇ ಶಾಲೆಗೆ ಬರುವ ಮಕ್ಕಳು ಹಸಿವು ಮತ್ತು ಅನ್ನಾಂಗದ ಕೊರತೆಯಿಂದ ನರಳಿ ರೋಗ ರುಜನೆಗಳಿಗೆ ತುತ್ತಾಗುವುದನ್ನು ತಪ್ಪಿಸಲು ಹಾಗೂ ಶಾಲೆಗೆ ಗೈರುಹಾಜರಾಗದಂತೆ ನೋಡಿಕೊಳ್ಳುವ ವಿಶೇಷ ಕಾರ್ಯಯೋಜನೆ ಇದಾಗಿದೆ. ಈ ಯೋಜನೆಯ ಪ್ರಮುಖವಾದ ಉದ್ದೇಶಗಳು ಶಿಕ್ಷಣದ ಸಾರ್ವತ್ರೀಕರಣದ ಸಾಧನೆ ಮಾಡಲು ಅತ್ಯಂತ ಸಹಕಾರಿಯಾಗಿವೆ. ಅವೆಂದರೆ

* ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುತ್ತಾ, ಮಕ್ಕಳ ದೈಹಿಕ ಬೆಳವಣಿಗೆ ಮತ್ತು ಆರೋಗ್ಯವನ್ನು ಉತ್ತಮಪಡಿಸುವುದು.
* ಮಕ್ಕಳು ಶಾಲೆಗೆ ಗೈರುಹಾಜರಾಗದಂತೆ ನೋಡಿಕೊಳ್ಳುವುದು.
* ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುತ್ತಾ, ಮಧ್ಯದಲ್ಲಿ ಶಾಲೆ ಬಿಡುವುದನ್ನು ತಡೆಗಟ್ಟುವುದು.
* ಮಕ್ಕಳ ಶಿಕ್ಷಣದ ವಿಷಯದಲ್ಲಿ ಪೋಷಕರ ಆರ್ಥಿಕ ಹೊಣೆಗಾರಿಕೆಯನ್ನು ತಕ್ಕಮಟ್ಟಿಗಾದರೂ ಕಡಿಮೆ ಮಾಡುವುದು.
* ಬಾಲಕಾರ್ಮಿಕ ಸಮಸ್ಯೆಯನ್ನು ಕಡಿಮೆ ಮಾಡಲು ನಿಗಾವಹಿಸುವುದು.

ಬೇಸಿಗೆಯ ರಜಾ ಕಾಲದಲ್ಲಿಯೂ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಸೌಲಭ್ಯವನ್ನು ಒದಗಿಸಬೇಕೆಂಬ ನಿರ್ದೇಶನವನ್ನು ಭಾರತದ ಸುಪ್ರೀಂಕೋರ್ಟ್ ಇತ್ತೀಚೆಗೆ ನೀಡಿದೆ. ಇದರಿಂದಾಗಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯ ಮಹತ್ವ ಮತ್ತು ಉಪಯುಕ್ತತೆಗಳು ಅಧಿಕವಾಗಿವೆ. ಆದರೂ ಆರೋಪಗಳಿಂದ ಮುಕ್ತವಾಗದ ಶಾಲಾ ಬಿಸಿಯೂಟದಿಂದ ಅನಾದಿ ಕಾಲದಿಂದಲೂ ಇರುವ ಸಾಂಪ್ರದಾಯಿಕ ಸಾಮಾಜಿಕ ಏಣಿಶ್ರೇಣಿಗೆ ಒಂದು ಅಪಾಯವಿದೆ ಎಂದು ಭಾವಿಸಿದ ಮೇಲ್ಜಾತಿಯ ಕೆಲವು ಪೋಷಕರು ಉಪಾಯವಾಗಿ ವಿರೋಧ ವ್ಯಕ್ತಪಡಿಸಿರುತ್ತಾರೆ. ಈ ಶಾಲಾ ಬಿಸಿಯೂಟ ಕಾರ್ಯಕ್ರಮದ ಮೇಲಿರುವ ಇನ್ನೊಂದು ಸಾಮಾನ್ಯ ಆರೋಪವೆಂದರೆ ಆರೋಗ್ಯಕರವಾದ ಪರಿಸರದಲ್ಲಿ ತಯಾರಿಸಿದ ಬಿಸಿಯೂಟವು ಮಕ್ಕಳ ಆರೋಗ್ಯಕ್ಕೆ

ಅಪಾಯಕಾರಿ ಎಂಬುದಾಗಿದೆ. ಬಿಸಿಯೂಟ ಸೇವಿಸಿಗ ಮಕ್ಕಳು ಆಗಾಗ್ಗೆ ಅಸಮತೋಲನ ಆರೋಗ್ಯಕ್ಕೆ ಒಳಗಾದ ಸೂಕ್ಷ್ಮ ಅಂಶಗಳು ನಮ್ಮ ಅಧ್ಯಯನ ಸಂದರ್ಭದಲ್ಲಿ ಗಮನಕ್ಕೆ ಬಂದಿರುವುದರಿಂದ ಈ ಆರೋಪವನ್ನು ತಳ್ಳಿಹಾಕಲು ಬರುವುದಿಲ್ಲ. ಸಿ.ಇ.ಎಸ್. ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳಲ್ಲಿ ಒಂದು ಶೈಕ್ಷಣಿಕ ವರ್ಷದಲ್ಲಿ ಮಕ್ಕಳು ಕನಿಷ್ಟ ಒಂದು ಸರಿಯಾದರೂ ಶಾಲಾ ಬಿಸಿಯೂಟ ಸೇವಿಸಿ ಅಸ್ವಸ್ಥರಾಗುತ್ತಾರೆಂದು ಶೇಕಡ ೫ ರಿಂದ ೧೦ರಷ್ಟು ಪೋಷಕರು ಅಭಿಪ್ರಾಯಪಡುತ್ತಾರೆ.

ಕೆಲವು ಸಂದರ್ಭಗಳಲ್ಲಿ ಇದು ನೀಡುವ ಆಹಾರವನ್ನು ಸಹ ಅವಲಂಬಿಸಿರುತ್ತದೆ. ಉದಾಹರಣೆಗೆ ರಾಜಸ್ಥಾನದಲ್ಲಿ ಶಾಲಾ ಬಿಸಿಯೂಟ ಯೋಜನೆಯಲ್ಲಿ ಶಾಲಾ ಮಕ್ಕಳಿಗೆ ನೀಡುವ ಕೆಲವು ಬಗೆಯ ಕಾಳುಗಳನ್ನು ಮೂಲಸೌಲಭ್ಯದ ತೊಂದರೆಗಳಿಂದಾಗಿ ಸರಿಯಾಗಿ ಬೇಯಿಸದಿರುವುದು ಮಕ್ಕಳ ಅಸ್ವಸ್ಥತೆಗೆ ಕಾರಣವಾಗಬಹುದು. ಸ್ವಲ್ಪ ಹೆಚ್ಚು ಕಡಿಮೆ ಇದೇ ಸ್ಥಿತಿಯನ್ನು ನಾವು ಕರ್ನಾಟಕದಲ್ಲಿಯೂ ಕಾಣಬಹುದು. ಇದಕ್ಕೆ ಬಿಸಿಯೂಟದಲ್ಲಿ ಬಳಸಲ್ಪಡುವ ಕಳಪೆ ಮಟ್ಟದ ಆಹಾರ ಧಾನ್ಯಗಳೇ ಕಾರಣವೆಂದು ಗುರುತಿಸಲ್ಪಟ್ಟಿದೆ. ಸಿ.ಇ.ಎಸ್. ಅಧ್ಯಯನದಿಂದ ತಿಳಿದುಬಂದ ಪ್ರಕಾರ ಶೇಕಡ ೯೫ರಷ್ಟು ಮಕ್ಕಳಿಗೆ ಇದುವರೆಗೆ ಯಾವುದೇ ತೊಂದರೆಗಳಾಗದೆ, ಅಸ್ವಸ್ಥತೆಯುಂಟಾದ ಶೇಕಡ ೫ರಷ್ಟು ಮಕ್ಕಳ ಸ್ಥಿತಿ ತುಂಬಾ ಗಂಭೀರವಾಗಿರಲಿಲ್ಲವೆಂಬುದು ಸಮಾಧಾನದ ಅಂಶ. ಬಿಸಿಯೂಟ ಸೇವಿಸಿ ಮಕ್ಕಳು ಅಸ್ವಸ್ಥವಾದ ಘಟನೆಗಳು ಬಹುಶಃ ಬಿಸಿಯೂಟ ಕಾರ್ಯಕ್ರಮದ ಆರಂಭದ ಹಂತದಲ್ಲಿ ಕಂಡುಬಂದಿರುತ್ತವೆ. ಆನಂತರದಲ್ಲಿ ಆಹಾರ ತಯಾರಿಕೆ ಮತ್ತು ವಿತರಣೆಗಳಿಗೆ ಸಂಬಂಧಿಸಿದಂತೆ ಕೆಲವು ಪರಿಹಾರಾತ್ಮಕ ಕ್ರಮ ಕೈಗೊಂಡ ಮೇಲೆ ಮಕ್ಕಳ ಅಸ್ವಸ್ಥತೆಯ ಪ್ರಕರಣಗಳು ಕಡಿಮೆಯಾಗಿವೆ. ಹಾಗಾಗಿ ಅಲ್ಲಲ್ಲಿ ವಿರಳವಾಗಿ ಕಂಡುಬರುತ್ತಿರುವ ಮಕ್ಕಳ ಅಸ್ವಸ್ಥತೆಗೆ ಮಕ್ಕಳಲ್ಲಿ ಉಂಟಾಗಿರುವ ಅಜೀರ್ಣತೆಯೇ ಪ್ರಮುಖವಾಗಿರುತ್ತದೆ. ಆದ್ದರಿಂದ ಶಾಲೆಯಲ್ಲಿ ಮಕ್ಕಳಿಗೆ ಹೆಚ್ಚಿನ ಆಹಾರವನ್ನು ನೀಡುವುದರ ಬದಲಿಯಾಗಿ ಉತ್ತಮಗುಣಮಟ್ಟದ ಆಹಾರ ಮತ್ತು ವಿವಿಧ ರೀತಿಯ ಆಹಾರಗಳನ್ನು ನೀಡುವುದರಿಂದ ಮಕ್ಕಳ ಹಸಿವನ್ನು ಶಮನಗೊಳಿಸಬಹುದು.

ಶಾಲಾ ಬಿಸಿಯೂಟವು ತರಗತಿಗಳಲ್ಲಿ ಬೋಧನಾ ಪ್ರಕ್ರಿಯೆಗೆ ಅಡ್ಡಿಯುಂಟು ಮಾಡಿದೆ ಎಂಬ ಇನ್ನೊಂದು ಅಪವಾದವಿದೆ. ಶಿಕ್ಷಕರು ಅಮೂಲ್ಯವಾದ ಸಮಯವನ್ನು ತರಗತಿಯಲ್ಲಿನ ಬೋಧನೆಗೆ ಬದಲಿಯಾಗಿ ಅಡಿಗೆಯ ತಯಾರಿಕೆಯಲ್ಲಿ ಕಳೆಯುತ್ತಾರೆಂದು ಕೆಲವು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಈಗಾಗಲೇ ಎಲ್ಲಾ ಶಾಲೆಗಳಲ್ಲಿ ಅಡಿಗೆ ಮಾಡುವವರನ್ನು ಮತ್ತು ಅವರಿಗೆ ಸಹಾಯಕರನ್ನು ನೇಮಿಸಿರುವುದರಿಂದ ಯಾವುದೇ ಶಾಲೆಯಲ್ಲಿ ಶಿಕ್ಷಕರು ಅಡಿಗೆ ತಯಾರಿಕೆಯಲ್ಲಿ ತೊಡಗಿರುವುದು ನಮ್ಮ ಅಧ್ಯಯನ ಕ್ಷೇತ್ರದ ಶಾಲೆಗಳಲ್ಲಿ ಕಂಡುಬಂದಿರುವುದಿಲ್ಲ. ಆದರೆ ಶಿಕ್ಷಕರು ಬಿಸಿಯೂಟ ಕಾರ್ಯಕ್ರಮದ ಸಂಘಟನೆಗೆ ಮತ್ತು ಮೇಲುಸ್ತುವಾರಿಯಲ್ಲಿ ಸಮಯವನ್ನು ಕಳೆಯುತ್ತಿದ್ದುದು ಗಮನಕ್ಕೆ ಬಂದಿರುತ್ತದೆ. ಇದರಿಂದಾಗಿ ತರಗತಿಯಲ್ಲಿನ ಬೋಧನಾ ಕ್ರಿಯೆಗೆ ತಕ್ಕಮಟ್ಟಿನ ಅಡ್ಡಿ

ಯಾಗಿರುವುದು ಮೂಲಸೌಲಭ್ಯಗಳ ಕೊರತೆಯಾದಾಗ ಮಾತ್ರ ಎಂಬುದನ್ನು ಪರಿಗಣಿಸಬೇಕಾಗಿದೆ. ಉದಾಹರಣೆಗೆ, ಶಾಲೆಯಲ್ಲಿ ಪ್ರತ್ಯೇಕ ಅಡಿಗೆ ಮನೆ ಇಲ್ಲದೆ ಮಕ್ಕಳ ಕಲಿಕೆಯ ಕೊಠಡಿಯ ಪಕ್ಕದಲ್ಲಿ ಅಡಿಗೆ ಮಾಡಿದಾಗ ಬೋಧನೆ ಮತ್ತು ಕಲಿಕೆಗಳಿಗೆ ತೊಂದರೆಯಾಗುವುದು ಸಹಜ.

ಇದೇ ರೀತಿಯಾಗಿ ಅಡಿಗೆ ಸಹಾಯಕರಿಲ್ಲದ ಶಾಲೆಗಳಲ್ಲಿ ನೀರು ತರಲು, ತರಕಾರಿಗಳನ್ನು ತುಂಡರಿಸಲು, ಆಹಾರ ಧಾನ್ಯಗಳನ್ನು ಶುಚಿ ಮಾಡಲು ಮುಂತಾದ ಕೆಲಸಗಳಿಗಾಗಿ ಶಾಲಾ ಮಕ್ಕಳನ್ನೇ ಬಳಸುವುದರಿಂದ ನಿರ್ದಿಷ್ಟವಾಗಿ ಹೇಳಬೇಕೆಂದರೆ ಶಾಲಾ ಬಿಸಿಯೂಟ ಕಾರ್ಯಕ್ರಮದ ಆಚರಣೆಗೆ ಬೇಕಾಗುವ ಎಲ್ಲಾ ಮೂಲಸೌಲಭ್ಯಗಳು ದೊರೆತಾಗ ಮಾತ್ರವೇ ತರಗತಿಯ ಒಳಗೆ ಬೋಧನಾ ಚಟುವಟಿಕೆ ಮತ್ತು ಕಲಿಕಾ ಪ್ರಕ್ರಿಯೆಗಳು ಅಡ್ಡಿ ಆತಂಕಗಳಿಲ್ಲದೆ ಸುಗಮನವಾಗಿ ನಡೆಯಲು ಸಾಧ್ಯ (ಎಚ್.ಡಿ. ಪ್ರಶಾಂತ್, ೨೦೦೫).

ಶಾಲಾ ಬಿಸಿಯೂಟ ಕಾರ್ಯಕ್ರಮವು ಕೆಲವೊಂದು ಲೋಪ-ದೋಷಗಳಿಂದ ಕೂಡಿದ್ದರೂ ಶಾಲೆಯಲ್ಲಿನ ಮಧ್ಯಾಹ್ನದ ತರಗತಿಗಳು ಬೆಳಗಿನ ತರಗತಿಗಳಂತೆಯೇ ಇರಿಸುವಲ್ಲಿ ಸಕಾರಾತ್ಮಕವಾಗಿದೆ. ಮಧ್ಯಾಹ್ನದ ಊಟಕ್ಕಾಗಿ ಮಕ್ಕಳು ಮನೆಗೆ ಹೋಗಿ ಬೇರೆ ಬೇರೆ ಕಾರಣಗಳಿಂದ ಅವರು ಮರಳಿ ಶಾಲೆಗೆ ಬರುತ್ತಿರಲಿಲ್ಲ. ಆದರೆ ಶಾಲಾ ಬಿಸಿಯೂಟ ಪ್ರಾರಂಭವಾದ ನಂತರದ ತರಗತಿಗಳು ಬೆಳಗಿನ ತರಗತಿಗಳಂತೆ ಮಧ್ಯಾಹ್ನದ ಸಮಯದಲ್ಲಿಯೂ ಮಕ್ಕಳ ಹಾಜರಾತಿಯನ್ನು ಪಡೆಯುವುದು ಸಾಧ್ಯವಾಗಿದೆ. ನಮ್ಮ ಅಧ್ಯಯನದ ಸಂದರ್ಭದಲ್ಲಿ ಸಂದರ್ಶಿಸಿದ ಎಲ್ಲಾ ಶಿಕ್ಷಕರು ಮಧ್ಯಾಹ್ನದ ಶಾಲಾ ಬಿಸಿಯೂಟ ಆರಂಭವಾದ ನಂತರದ ದಿನಗಳಲ್ಲಿ ಮಧ್ಯಾನ್ಹದ ಶಾಲಾ ಹಾಜರಾತಿಯು ಬೆಳಗಿನ ಹಾಜರಾತಿಗೆ ಸರಿ ಸಮನಾಗಿರುತ್ತದೆ ಎಂಬ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುತ್ತಾರೆ.

ನಾವು ಅಧ್ಯಯನ ಕ್ಷೇತ್ರದಲ್ಲಿನ ಶಾಲೆಗಳಿಗೆ ಭೇಟಿ ನೀಡಿ, ಅವಲೋಕಿಸಿದಾಗ ಇದೇ ಫಲಿತಾಂಶ ಸಿಕ್ಕಿದೆ. ಎರಡನೆಯದಾಗಿ ಸಮಾಜದ ಅಂಚಿನಲ್ಲಿರುವ ಮತ್ತು ಅವಕಾಶ ವಂಚಿತ ಕುಟುಂಬದ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಶಾಲಾ ಬಿಸಿಯೂಟ ಕಾರ್ಯಕ್ರಮವು ಅಧಿಕ ಗೊಳಿಸಿರುವುದು ಆಶಾದಾಯಕ ಅಂಶ. ಮೂರನೆಯದಾಗಿ ಶಾಲಾ ಬಿಸಿಯೂಟ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಜಾರಿಗೆ ತರುವ ಮೂಲಕ ಸಮಾಜದಲ್ಲಿದ್ದ ಜಾತಿ, ಧರ್ಮ ಮತ್ತು ವರ್ಗ ಆಧಾರಿತವಾದ ಸಾಮಾಜಿಕ ಅಂತರವನ್ನು ಕಡಿಮೆ ಮಾಡುತ್ತಾ ಸಾಮಾಜೀಕರಣದ ಮೌಲ್ಯವನ್ನು ಹೆಚ್ಚಿಸಲಾಗಿದೆ. ಜೊತೆಗೆ ಸಾಮಾಜಿಕ ಸಮಾನತೆಯೂ ಕಂಡುಬಂದಿದೆ. ನಾಲ್ಕನೆಯದಾಗಿ ಶಿಕ್ಷಣ ಕ್ಷೇತ್ರದಲ್ಲಿರುವ ಲಿಂಗ ತಾರತಮ್ಯದ ಅಂತರವೂ ಶಾಲಾ ಬಿಸಿಯೂಟದಿಂದ ಕಡಿಮೆಯಾಗಿ ಲಿಂಗ ಸಮಾನತೆಯುಂಟಾಗಿದೆ ಎನ್ನಬಹುದು. ಒಟ್ಟಾರೆಯಾಗಿ ಶಾಲಾ ಬಿಸಿಯೂಟ ಕಾರ್ಯಕ್ರಮ ಸಾಮಾಜಿಕ ಅಭಿವೃದ್ಧಿಯ ಮೂಲ ಅಡಿಪಾಯವಾಗಿರುವುದರಿಂದ ಇದನ್ನು ಒಂದು ಕಾರ್ಯಕ್ರಮವೆಂದು ಪರಿಗಣಿಸಿದರೆ ಬಹಳ ಸೀಮಿತವಾದ ಅರ್ಥಬರುತ್ತದೆ. ಆದ್ದರಿಂದ ಪ್ರತಿಯೊಬ್ಬರ ಆಹಾರದ ಹಕ್ಕಿನ ದೃಷ್ಟಿಯಿಂದ

ಮಹತ್ವವಾಗಿರುವ ಶಾಲಾ ಬಿಸಿಯೂಟವು ಸರ್ಕಾರದ ಪ್ರಮುಖವಾದ ಭಾಗವಾಗುವುದರ ಜೊತೆಯಲ್ಲಿ ಇದನ್ನು ಒಂದು ಸಾಮಾಜಿಕ ಚಳುವಳಿಯನ್ನಾಗಿ ರೂಪಿಸುವ ಸಾಮಾಜಿಕ ಜವಾಬ್ದಾರಿ ಪ್ರತಿಯೊಬ್ಬರ ಮನಸ್ಸುಗಳಿಂದಾಗಬೇಕಾಗಿದೆ.

೮. ವಿದ್ಯಾರ್ಥಿ ವೇತನ

ಮಕ್ಕಳು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವಾಗ ಕಂಡುಬರುವಂತಹ ಆರ್ಥಿಕ ಸಂಕಷ್ಟಗಳ ಪರಿಹಾರಾರ್ಥವಾಗಿ ಮಕ್ಕಳಿಗೆ ಶಿಷ್ಯವೇತನವನ್ನು ಕೊಡಲಾಗುತ್ತದೆ. ಶಾಲಾಮಟ್ಟದಲ್ಲಿ ವಿತರಿಸಲಾಗುವ ಶಿಷ್ಯವೇತನ ಪದ್ಧತಿಗೆ ಕರ್ನಾಟಕ ರಾಜ್ಯದಲ್ಲಿ ಒಂದು ಇತಿಹಾಸವಿದೆ. ಮೈಸೂರು ಸಂಸ್ಥಾನದ ವಿಠ್ಠಲರಾವ್ ಗಾಯಕವಾಡ್‌ರವರ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಆದ್ಯತೆ ಮೇರೆಗೆ ಶಿಷ್ಯವೇತನಗಳನ್ನು ಒದಗಿಸಲಾಗುತ್ತಿತ್ತು. ಆದರೆ ಸ್ವಾತಂತ್ರ ನಂತರದಲ್ಲಿ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಸಮಾಜದ ಅಂಚಿನ ಸಮುದಾಯಗಳ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಶಿಷ್ಯವೇತನವನ್ನು ನೀಡಲಾಗುತ್ತಿದೆ. ಈ ಶಿಷ್ಯ ವೇತನವನ್ನು ವಿತರಿಸುವಾಗ ವಿದ್ಯಾರ್ಥಿಗಳ ಜಾತಿ, ಧರ್ಮಗಳ ಸಾಮಾಜಿಕ ಪರಿಸ್ಥಿತಿ ಮತ್ತು ಅವರು ಪಡೆದುಕೊಂಡ ಒಟ್ಟು ಅಂಕಗಳನ್ನು ಪರಿಗಣಿಸಲಾಗುತ್ತದೆ. ಈ ಶಿಷ್ಯವೇತನದ ವಿಷಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಿದರೂ, ಇತರೆ ಹಿಂದುಳಿದ ಮಕ್ಕಳನ್ನು ಕಡೆಗಣಿಸುವುದಿಲ್ಲ. ಹಾಗಾಗಿ ಶಿಷ್ಯವೇತನವು ಕಡಿಮೆ ಮೊತ್ತದ್ದಾಗಿದ್ದರೂ ವಿದ್ಯಾರ್ಥಿಗಳ ವಿದ್ಯಾಭ್ಯಾಸದಲ್ಲಿ ಮೌಲ್ಯಯುತ ಮತ್ತು ಸ್ಫೂರ್ತಿದಾಯಕವಾಗಿದೆ. ಆದರೆ ದಲಿತರ ಅಮಾಯಕತೆ ಮತ್ತು ಅಸಹಾಯಕತೆಗಳನ್ನು ದುರುಪಯೋಗ ಮಾಡಿಕೊಂಡು ಕೆಲವೊಂದು ಶಾಲೆಯ ಮುಖ್ಯಶಿಕ್ಷಕರು ದಲಿತ ಪೋಷಕರ ಸಹಿ ಪಡೆದು, ಕಡಿಮೆ ಹಣ ಕೊಡುತ್ತಾರೆ ಎಂಬುದಾಗಿ ಕೆಲವು ದಲಿತ ಪೋಷಕರು ತಿಳಿಸುತ್ತಾರೆ.

೯. ಉಚಿತ ಪಠ್ಯಪುಸ್ತಕಗಳ ಸರಬರಾಜು

ಯಾವ ವಯೋಮಾನದ ಮಕ್ಕಳಿಗೆ? ಯಾವುದನ್ನು? ಯಾವ ವಿಧಾನದಲ್ಲಿ ಮತ್ತು ಯಾವ ಪ್ರಮಾಣದಲ್ಲಿ ಕಲಿಸಿಕೊಂಡಬೇಕೆಂಬ ಅಂಶಗಳನ್ನು ತಿಳಿಸುವ ಪಠ್ಯಪುಸ್ತಕಗಳು ಶಿಕ್ಷಕರಿಗೆ ಸಹಕಾರಿ. ಅದೇ ತೆರನಾಗಿ ಮಕ್ಕಳ ಕಲಿಕೆಗೆ ಅವಶ್ಯಕವಾದ ಜ್ಞಾನ, ಕೌಶಲ್ಯ, ತಿಳುವಳಿಕೆಗಳನ್ನು ಒದಗಿಸುವಲ್ಲಿ ಪಠ್ಯಪುಸ್ತಕಗಳು ಉಪಕಾರಿಯಾಗಿವೆ. ಮಕ್ಕಳ ವಯಸ್ಸು ಮತ್ತು ತರಗತಿಗೆ ತಕ್ಕಂತೆ ಶಿಕ್ಷಣತಜ್ಞರಿಂದ ರಚಿಸಲ್ಪಡುವ ಪಠ್ಯಪುಸ್ತಕಗಳು ವಿದ್ಯಾವಂತ ಪೋಷಕರಿಗೆ ಅವರ ಮಕ್ಕಳ ಶಿಕ್ಷಣದ ವಿಷಯವಾಗಿ ಉಪಯುಕ್ತವಾಗುತ್ತವೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಉದ್ದೇಶ ಮತ್ತು ಗುರಿ ಸಾಧನೆಯ ಹಿನ್ನೆಲೆಯಲ್ಲಿ ಸರ್ಕಾರ ಪಠ್ಯಪುಸ್ತಕಗಳನ್ನು ಶಾಲಾಮಕ್ಕಳಿಗೆ ಪುಕ್ಕಟೆಯಾಗಿ ಪೂರೈಸುವಂತಹ ಯೋಜನೆ

ಜಾರಿಯಲ್ಲಿದೆ. ಈ ಯೋಜನೆಯಂತೆ ಕರ್ನಾಟಕ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದವರ್ಗ, ಅಲ್ಪಸಂಖ್ಯಾತರು ಮತ್ತು ಬಡವರ್ಗ ಮತ್ತು ಸಮುದಾಯಗಳ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಆಯಾ ಶಾಲೆಗಳಲ್ಲಿಯೇ ವಿತರಿಸುತ್ತದೆ. ಇದರಿಂದಾಗಿ ಗ್ರಾಮೀಣ ಮತ್ತು ನಗರದ ಕೊಳಗೇರಿ ಪ್ರದೇಶಗಳ ಬಡವರ್ಗದ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ವಿಷಯದಲ್ಲಿ ಆರ್ಥಿಕವಾಗಿ ನೆರವಾದಂತಾಗುತ್ತದೆ. ಒಟ್ಟಿನಲ್ಲಿ ಪಠ್ಯಪುಸ್ತಕದ ಯೋಜನೆಯು ಶಿಕ್ಷಕವರ್ಗ, ಮಕ್ಕಳು ಮತ್ತು ಪೋಷಕರಿಗೆ ಬಹುಮುಖ ಪ್ರಯೋಜನಗಳನ್ನು ಒದಗಿಸುತ್ತಾ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಕೈಜೋಡಿಸುತ್ತದೆ.

೧೦. ಉಚಿತ ಸಮವಸ್ತ್ರ, ನೋಟ್‌ಪುಸ್ತಕ ಮತ್ತು ಶಾಲಾಬ್ಯಾಗಗಳ ವಿತರಣೆ

ಬಡತನದ ಸಮಸ್ಯೆಯಿಂದ ಅನೇಕ ಸಂಖ್ಯೆಯ ಮಕ್ಕಳು ಉತ್ತಮವಾದ ಬಟ್ಟೆ ಧರಿಸದೆ, ಕೆಳದರ್ಜೆಯ ಬಟ್ಟೆ ಧರಿಸಿಕೊಂಡು ಶಾಲೆಗೆ ಬಂದರೆ ಅವರಲ್ಲಿ ಅತೃಪ್ತಿ ಮತ್ತು ಕೀಳರಿಮೆಗಳು ಕಾಡಲಾರಂಭಿಸುತ್ತವೆ. ಈ ಕಾರಣದಿಂದಲೇ ಮಕ್ಕಳು ಅರ್ಧದಲ್ಲಿಯೇ ಶಾಲೆ ಬಿಡುವಂತಹ ಅಪಾಯಗಳಿರುತ್ತವೆ. ಇದನ್ನು ಮನಗೊಂಡ ಕರ್ನಾಟಕ ಸರ್ಕಾರ ಎಲ್ಲಾ ಮಕ್ಕಳಿಗೆ ಸಮಾನತೆ ಮತ್ತು ಶಿಸ್ತು ಮೂಡಿಸುವ ಉದ್ದೇಶದಿಂದ ಸರ್ಕಾರಿ ಶಾಲೆಯಲ್ಲಿನ ಬಡಮಕ್ಕಳಿಗೆ ಉಚಿತವಾಗಿ ಸಮವಸ್ತ್ರಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಶಾಲೆಗಳಲ್ಲಿ ಬಡಮಕ್ಕಳಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಉಚಿತವಾಗಿ ಸಮವಸ್ತ್ರಗಳನ್ನು ವಿತರಿಸುವುದು ಮಕ್ಕಳಿಗೆ ಹೊಸ ಹುರುಪು ನೀಡಿದಂತಾಗುತ್ತದೆ. ಜೊತೆಗೆ ಪೋಷಕರಿಗೆ ಅವರ ಮಕ್ಕಳ ಶಿಕ್ಷಣದ ಆರ್ಥಿಕ ಭಾರವನ್ನು ಸ್ವಲ್ಪವಾದರೂ ಇಳಿಸಿದಂತಾಗುತ್ತದೆ. ಅದೇ ರೀತಿಯಾಗಿ ೨೦೦೦-೦೧ನೇ ಸಾಲಿನಲ್ಲಿ ಸರ್ಕಾರಿ ಶಾಲೆಯಲ್ಲಿನ ಪರಿಶಿಷ್ಟ ಜಾತಿ, ಪಂಗಡದ ಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಉಚಿತ ಶಾಲಾ ಬ್ಯಾಗ್ ಮತ್ತು ನೋಟ್‌ಪುಸ್ತಕಗಳ ವಿತರಣೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯಮಾಡುತ್ತಿದೆ.

ಸಾಮಾಜಿಕವಾಗಿ ಹಿಂದುಳಿದ ಮತ್ತು ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಅರ್ಹಮಕ್ಕಳಿಗೆ ವಿದ್ಯಾರ್ಥಿವೇತನ, ಬ್ಯಾಗ್, ಶಾಲಾ ಪುಸ್ತಕ ಮತ್ತು ಸಮವಸ್ತ್ರಗಳನ್ನು ಉಚಿತವಾಗಿ ತಲುಪಿಸುವ ಪ್ರಯತ್ನಗಳು ನಡೆಯುತ್ತಿವೆ. ಅದು ಎಲ್ಲಾ ಮಕ್ಕಳಿಗೆ ತಲುಪುತ್ತಿವೆ ಎಂದು ಸರ್ಕಾರದ ವರದಿಗಳಲ್ಲಿ ಮತ್ತು ಸರ್ಕಾರಗಳನ್ನು ವಿಮರ್ಶಾತ್ಮಕವಾಗಿ ನೋಡದ ಸರ್ಕಾರೇತರ ಸಂಘ-ಸಂಸ್ಥೆಗಳು ನಡೆಸಿದ ಅಧ್ಯಯನಗಳಿಂದ ತಿಳಿಯುತ್ತದೆ. ಆದರೆ ನಾವು ಅಧ್ಯಯನ ಮಾಡಿದ ಕ್ಷೇತ್ರದಲ್ಲಿ ಅರ್ಹಮಕ್ಕಳಿಗೆ ಉಚಿತ ಸೌಲಭ್ಯಗಳು ನಿಗದಿತ ಸಮಯ ಮತ್ತು ನಿಗದಿತ ಪ್ರಮಾಣದಲ್ಲಿ ದೊರಕದಿರುವುದನ್ನು ಅಥವಾ ಪೂರೈಕೆಯಾಗದಿರುವುದು ನಾವು ಸಮೀಕ್ಷೆ ಮಾಡಿದ ಪೋಷಕರು ಮತ್ತು ಶಿಕ್ಷಕರ ಅಭಿಪ್ರಾಯದಿಂದ ಸ್ಪಷ್ಟವಾಗುತ್ತದೆ. ಇದು ಕೇವಲ ಪೂರೈಕೆಗೆ ಸಂಬಂಧಿಸಿದ ಅಂಶವೆಂದು ಸರಳವಾಗಿ ಹೇಳಲು ಬರುವುದಿಲ್ಲ. ಮಕ್ಕಳ ಬದುಕಿಗೆ ಮತ್ತು ಬೌದ್ಧಿಕ ಬೆಳವಣಿಗೆಗೆ

ಅಗತ್ಯವಾದ ಸೌಕರ್ಯ ಮತ್ತು ಸೌಲಭ್ಯಗಳನ್ನು ಒದಗಿಸುವುದು ಪ್ರತಿಯೊಂದು ಸರ್ಕಾರದ ಕರ್ತವ್ಯವಾಗಿದ್ದು, ಇದು ಹಕ್ಕು ಆಧಾರಿತ ಅಭಿವೃದ್ಧಿ ಪರಿಕಲ್ಪನೆಯ ಮೂಲ ಆಶಯವಾಗಿರುತ್ತದೆ. ಈ ಆಶಯಗಳು ಮೇಲ್ನೋಟಕ್ಕೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿವೆ ಎಂದು ಕಂಡುಬರುತ್ತದೆ.

ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಈ ಸೌಲಭ್ಯದಲ್ಲಿ ಒಂದು ರೀತಿಯಾಗಿ ಸಾಂಸ್ಕೃತಿಕ ರಾಜಕಾರಣವಿರುವುದು ಕಂಡುಬರುತ್ತದೆ. ಉದಾಹರಣೆಗೆ ಶಾಲೆಯಲ್ಲಿ ಮಕ್ಕಳಿಗೆ ಕೆಲಸವನ್ನು ಹಂಚಬೇಕಾದ ಸಂದರ್ಭದಲ್ಲಿ ಒಂದು ರೀತಿಯಾಗಿ ಸಾಂಸ್ಕೃತಿಕ ರಾಜಕಾರಣವನ್ನು ಆಚರಿಸುತ್ತಾರೆ. ಬಡವರು, ದಲಿತರು ಮತ್ತು ಅವಕಾಶವಂಚಿತರ ಮಕ್ಕಳಿಗೆ ಶಾಲೆಯಲ್ಲಿ ಶ್ರಮಾಧಾರಿತ ಕೆಲಸಗಳನ್ನು ಮಾಡುವಂತೆ ಸೂಚಿಸಿ ನಿರ್ದೇಶಿಸಲಾಗುತ್ತದೆ. ಇದನ್ನು ಸಾಮಾಜಿಕ ಪರಂಪರೆಯ ಭಾಗವಾಗಿ ಗಮನಿಸಿದರೆ ತಳಜಾತಿಯ ದಲಿತ ಮಕ್ಕಳಿಗೆ ಶಾಲೆಯ ಹೊರಾಂಗಣವನ್ನು ಮತ್ತು ಆಟದ ಮೈದಾನವನ್ನು ಸ್ವಚ್ಛಗೊಳಿಸುವ ಕೆಲಸಗಳನ್ನು ಸೂಚಿಸಲಾಗುತ್ತದೆ. ಆದರೆ ಸ್ಥಳೀಯವಾಗಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜಾತಿವರ್ಗದ ಮಕ್ಕಳಿಗೆ ತರಗತಿಯಲ್ಲಿ ಶಿಕ್ಷಕರ ಗೈರುಹಾಜರಿ ಕುರಿತಾಗಿ ಗಲಾಟೆ ಮಾಡಲಾರದಂತೆ ನಿರ್ವಹಿಸಲು ನಿಯೋಜಿಸಲಾಗುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಗ್ರಾಮದ ಭೂಮಾಲಿಕರ ಮಕ್ಕಳು, ಮೇಲ್ಜಾತಿಗೆ ಸೇರಿದವರ ಮಕ್ಕಳು ಮತ್ತು ಬಲಾಢ್ಯರ ಮಕ್ಕಳು ಇರುವುದು ನಮ್ಮ ಅಧ್ಯಯನದಿಂದ ಬೆಳಕಿಗೆ ಬಂದಿದೆ. ಇದು ಒಂದು ರೀತಿಯಾಗಿ ನಮ್ಮ ಸಾಮಾಜಿಕ ಪರಂಪರೆಯ ಜಗತ್ತನ್ನು ರೂಪಿಸಲು ನಡೆಯುತ್ತಿರುವ ಪ್ರಯತ್ನದಂತೆ ಕಂಡುಬರುತ್ತದೆ. ಈ ಪ್ರಯತ್ನಗಳು ಸಾಂಸ್ಕೃತಿಕ ರಾಜಕಾರಣವನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿ ಹೊಂದಿದೆ.

ಸೌಲಭ್ಯಗಳ ಹಂಚಿಕೆಗೆ ಸಂಬಂಧಪಟ್ಟಂತೆಯೂ ಸೌಲಭ್ಯಗಳು ಎಲ್ಲಾ ಮಕ್ಕಳಿಗೆ ಸಿಗುತ್ತವೆ ಎಂಬ ರೀತಿಯಲ್ಲೇ ಬಹುತೇಕ ಅಧ್ಯಯನಗಳು ಕಂಡುಬರುತ್ತವೆ. ಆದರೆ ಸೌಲಭ್ಯ ಹಂಚುವಲ್ಲಿ ಜಾತಿ, ವರ್ಗ ಮತ್ತು ಧರ್ಮ ಆಧಾರಿತವಾದ ತಾರತಮ್ಯಗಳು ನಡೆಯುವುದನ್ನು ನಮ್ಮ ಅಧ್ಯಯನ ಗುರುತಿಸಿದೆ. ಹೇಗೆಂದರೆ, ಒಂದು ಶಾಲೆಗೆ ಅಗತ್ಯವಾಗಿ ಬರಬೇಕಾದ ಸಮವಸ್ತ್ರ, ಪುಸ್ತಕ ಮತ್ತು ಬ್ಯಾಗ್‌ಗಳು ಶಾಲೆಗೆ ಬಂದ ಸಂದರ್ಭದಲ್ಲಿ, ತಮಗೆ ಬೇಕಾದವರ ಮಕ್ಕಳಿಗೆ ನಿಖರವಾದ ಮತ್ತು ಉತ್ತಮವಾದ ಬಟ್ಟೆ ಮತ್ತು ಪುಸ್ತಕಗಳನ್ನು ಆಯ್ಕೆ ಮಾಡಿ ಆ ಮಕ್ಕಳಿಗೆ ನೀಡುತ್ತಿರುವುದನ್ನು ನಮ್ಮ ಅಧ್ಯಯನ ಗಮನಿಸಿದೆ. ಇದನ್ನು ಬಿಡಿಸಿ ನೋಡಿದರೆ ದಲಿತ ಮಕ್ಕಳಲ್ಲಿಯೇ ನಿಕೃಷ್ಟವಾದ, ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯಲ್ಲಿರುವ ದಲಿತ ಮಕ್ಕಳಿಗೆ ನಿಖರವಲ್ಲದ ಹೊಲಿಗೆ ಸರಿಯಾಗಿಲ್ಲದ ಬಟ್ಟೆಗಳನ್ನು ನೀಡಲಾಗುತ್ತದೆ.

ಮುಂದುವರಿದು ಹೇಳುವುದಾದರೆ, ಶಾಲೆಗೆ ನಿರ್ದಿಷ್ಟ ಪ್ರಮಾಣದ ಸೌಲಭ್ಯಗಳು ಪೂರೈಕೆಯಾಗದ ಸಂದರ್ಭದಲ್ಲಿ ಬಡವರ ಮತ್ತು ದಲಿತರ ಮಕ್ಕಳಿಗೆ ಮುಂದಿನ ಸಂದರ್ಭದಲ್ಲಿ ಬಂದಾಗ ನೀಡುತ್ತೇ

ವೆಂದು ಹೇಳಿರುವ ಘಟನೆಗಳು ಪೋಷಕರ ಸಮೀಕ್ಷೆಯಿಂದ ನಮಗೆ ತಿಳಿಯುತ್ತದೆ. ಇನ್ನು ಮಕ್ಕಳಿಗೆ ಅಥವಾ ಪೋಷಕರಿಗೆ ಶಿಷ್ಯವೇತನ ನೀಡುವಾಗ ಯಾವ ರೀತಿಯ ಭ್ರಷ್ಟಾಚಾರಗಳು ನಡೆಯುತ್ತಿವೆ ಎಂಬುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಇದೇ ರೀತಿಯ ಆರೋಪಗಳನ್ನು ನಮ್ಮ ಅಧ್ಯಯನ ಕ್ಷೇತ್ರದ ಪೋಷಕರು ಮಾಡುತ್ತಾರೆ. ಶಿಷ್ಯವೇತನವನ್ನು ವಿತಸುವುದಕ್ಕಾಗಿ ಪೋಷಕರನ್ನು ೨-೩ ಸಾರಿ ಶಾಲೆಗೆ ಕರೆಸಿ ಸಹಿ ಪಡೆದುಕೊಳ್ಳುತ್ತಾರೆ. ಶಿಷ್ಯವೇತನವನ್ನು ಕೊಡುವಾಗ ನಮಗೆ ಖರ್ಚಾಗಿದೆ, ಆ ಖರ್ಚನ್ನು ಮಾತ್ರ ಕೊಡಿ ಎಂದು ಕೆಲವು ಮುಖ್ಯಶಿಕ್ಷಕರು ಕೇಳುತ್ತಾರೆಂಬುದನ್ನು ಅಧ್ಯಯನಕ್ಕೆ ಒಳಪಡಿಸಿದ ಪೋಷಕರು ತಿಳಿಸುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಹೆಚ್ಚು ಪಾರದರ್ಶಕತೆಯಿಂದ ನೋಡಬೇಕಾಗಿದೆ.

೧೧. ಸರ್ವಶಿಕ್ಷಣ ಅಭಿಯಾನ

೧೯೯೮ರಲ್ಲಿ ನಡೆದ ರಾಜ್ಯ ಶಿಕ್ಷಣ ಸಚಿವರ ಸಮಾವೇಶದ ಶಿಫಾರಸ್ಸಿನ ಪ್ರಕಾರ ೨೦೦೧ರಲ್ಲಿ ಸರ್ವಶಿಕ್ಷಣ ಅಭಿಯಾನವನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮವು ಗೋವಾ ರಾಜ್ಯ ಹೊರತುಪಡಿಸಿ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿಯೂ ಅನುಷ್ಠಾನದಲ್ಲಿರುತ್ತದೆ. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ೫೦:೫೦ರ ಅನುಪಾತದಂತೆ ಹಣ ವಿನಿಯೋಗಿಸಲಾಗುತ್ತದೆ. ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ವಶಿಕ್ಷಣ ಅಭಿಯಾನಕ್ಕೆ ೧೭,೦೦೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಸಮಾಲೋಚಿಸಿ ಸಮುದಾಯ ಒಡೆತನದ ಗ್ರಾಮ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸಲಾಗುತ್ತದೆ. ಹೆಣ್ಣುಮಕ್ಕಳು, ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರ ಹಾಗೂ ಇತರೆ ಕಠಿಣ ಪರಿಸ್ಥಿತಿಯಲ್ಲಿರುವ ಮಕ್ಕಳ ಶೈಕ್ಷಣಿಕ ಅಗತ್ಯಗಳಿಗೆ ಗಮನ ನೀಡುವುದು ಈ ಯೋಜನೆಯ ಆದ್ಯತೆ. ಈ ಮಕ್ಕಳಿಗಾಗಿ ಉಚಿತ ಪಠ್ಯಪುಸ್ತಕ ವಿತರಣೆ, ಕಂಪ್ಯೂಟರ್ ಆಧಾರಿತ ಶಿಕ್ಷಣ ಒದಗಿಸುವುದು ಮತ್ತು ಇತರೆ ಕಾರ್ಯಕ್ರಮಗಳು ಸರ್ವಶಿಕ್ಷಣ ಅಭಿಯಾನದಲ್ಲಿ ಬರುತ್ತವೆ. ಶಾಲಾ ಸೌಲಭ್ಯಗಳಿಂದ ವಸತಿಯುತ ಪ್ರದೇಶಗಳಲ್ಲಿ ಹೊಸಶಾಲೆ ಆರಂಭಿಸುವುದು, ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ, ಕುಡಿಯುವ ನೀರು ಪೂರೈಕೆ, ಶೌಚಾಲಯ ನಿರ್ಮಾಣ, ಶಾಲಾ ಸುಧಾರಣಾ ಅನುದಾನ ಮತ್ತು ನಿರ್ವಹಣಾ ಅನುದಾನಗಳು ಕೂಡ ಸರ್ವಶಿಕ್ಷಣ ಅಭಿಯಾನದ ಯೋಜನಾಂಶಗಳಾಗಿವೆ. ಶಿಕ್ಷಕರಿಲ್ಲದ ಶಾಲೆಗಳಲ್ಲಿ ಹೆಚ್ಚುವರಿಯಾಗಿ ಶಿಕ್ಷಕರ ನೇಮಕ, ಶಿಕ್ಷಕರ ತರಬೇತಿ, ಕಲಿಸುವ ಮತ್ತು ಕಲಿಯುವ ಸಾಮಗ್ರಿ ಒದಗಿಸುವುದು ಇತ್ಯಾದಿ ಅಂಶಗಳಿಗೂ ಸರ್ವಶಿಕ್ಷಣ ಅಭಿಯಾನದಲ್ಲಿ ಅವಕಾಶವಿದೆ.

ಸರ್ವ ಶಿಕ್ಷಣ ಅಭಿಯಾನದ ಗುರಿಗಳು

೧. ಸಾರ್ವತ್ರಿಕ ದಾಖಲಾತಿಯನ್ನು ಸಾಧನೆ ಮಾಡುವುದು.

೨. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಶಾಲೆ ಬಿಡುವಂತಹ ಪ್ರಮಾಣವನ್ನು ಕಡಿಮೆಗೊಳಿಸುವುದು.

೩. ೨೦೧೦ರ ವೇಳೆಗೆ ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಾಲೆ ಶಿಕ್ಷಣ ಲಭ್ಯವಾಗುವಂತೆ ನೋಡಿಕೊಳ್ಳುವುದು.

೪. ೨೦೧೦ರ ವೇಳೆಗೆ ರಾಜ್ಯದಲ್ಲಿನ ಪ್ರತಿಯೊಂದು ಮಗುವಿಗೂ ಎಂಟು ವರ್ಷಗಳ ಮೂಲಭೂತ ಶಿಕ್ಷಣ ಪ್ರಾಪ್ತವಾಗುವಂತೆ ಮಾಡುವುದು ಎಂಬಂತಹ ಗುರಿಗಳ ಜೊತೆಗೆ ಇನ್ನು ಹಲವಾರು ಗುರಿಗಳನ್ನು ಇಟ್ಟುಕೊಂಡೇ ಅನುಷ್ಠಾನದಲ್ಲಿರುವ ಸರ್ವಶಿಕ್ಷಣ ಅಭಿಯಾನ ಫಲಪ್ರದವೆಂದು ಹೇಳಲಾಗುತ್ತಿದೆ.

ಶಾಲಾ ಶಿಕ್ಷಣದಿಂದ ಹೊರಗಡೆ ಇರುವ ೬-೧೪ ವಯೋಮಾನದ ಮಕ್ಕಳನ್ನು ಪುನಃ ಶಾಲೆಗೆ ಕರೆದುತರಲು ಕರ್ನಾಟಕ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಶ್ರಮಿಸುತ್ತಿದೆ. ಇಲಾಖೆಯಿಂದ ನಡೆಸಲ್ಪಡುವ ಪ್ರಯತ್ನಗಳೆಂದರೆ

೧. ಪ್ರತಿ ವರ್ಷವೂ ೬-೧೪ ವರ್ಷದ ವಯೋಮಾನದ 'ಮಕ್ಕಳ ಗಣತಿಕಾರ್ಯ' ಕೈಗೊಂಡು, ಶಾಲಾ ಶಿಕ್ಷಣದಿಂದ ಹೊರಗಿರುವ ಮಕ್ಕಳನ್ನು ಗುರುತಿಸಿ, ಅವರನ್ನು ಶಾಲೆಗೆ ಕರೆದು ತರಲಾಗುತ್ತದೆ.

೨. ಶಾಲೆ ಪ್ರಾರಂಭವಾದ ಒಂದು ತಿಂಗಳವರೆಗೆ ಶಾಲೆಗೆ ಬರದಿರುವ ಮಕ್ಕಳ ಪೋಷಕರನ್ನು ಸಂಪರ್ಕಮಾಡಿ, ಅವರ ಮನವೊಲಿಸಿ, ಆ ಮಕ್ಕಳನ್ನು ಶಾಲೆಗೆ ಕರೆದುತರುವ 'ದಾಖಲಾತಿ ಆಂದೋಲನ' ಉತ್ತಮ ಯೋಜನೆಯಾಗಿದೆ.

೩. ಶಾಲೆಯಿಂದ ಹೊರಗಿದ್ದು, ದುಡಿಮೆಯಲ್ಲಿ ನಿರತರಾದ ೬-೧೪ ವಯೋಮಾನದ ಮಕ್ಕಳ ಪೋಷಕರು ಮತ್ತು ಮಾಲಿಕರ ವಿಶ್ವಾಸದಿಂದ ಮಕ್ಕಳನ್ನು 'ಕೂಲಿಂದ ಶಾಲೆಗೆ' ಸೇರಿಸುವುದು ಸಮಂಜಸವಾಗಿದೆ.

೪. ಶಾಲೆಯಿಂದ ಹೊರಗಿರುವ ೬-೧೪ ವರ್ಷವಯಸ್ಸಿನ ಮಕ್ಕಳ ಆರಂಭಿಕ ಸಾಮರ್ಥ್ಯವನ್ನು ಗುರುತಿಸಿ, ಶಾಲೆಯಲ್ಲಿ ಆನಂದವಾಗಿ ಕಲಿಯುವ ಆಸಕ್ತಿ ಮೂಡಿಸಲು ಎರಡು ತಿಂಗಳ ಬೇಸಿಗೆ ರಜೆಯಲ್ಲಿ ನಡೆಸುವ 'ಚಿಣ್ಣರ ಅಂಗಳದ' ಮೂಲಕ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸಲಾಗುವುದು.

೫. ಶಾಲಾ ಶಿಕ್ಷಣದಿಂದ ವಂಚಿತರಾದ ೬-೧೪ ವರ್ಷದ ಹೆಣ್ಣುಮಕ್ಕಳನ್ನು ಶಾಲೆಗೆ ಕರೆದು ತಂದು, ಕನಿಷ್ಠ ೮ ವರ್ಷಗಳ ಶಾಲಾ ಶಿಕ್ಷಣ ಲಭಿಸುವಂತೆ ಮಾಡುತ್ತಾ, ಲಿಂಗ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ 'ಬಾ ಬಾಲೆ ಶಾಲೆಗೆ' ಎಂಬ ಯೋಜನೆಯನ್ನು ಜಾರಿಗೊಳಿಸಲಾಗಿದೆ.

೬. ಶಿಕ್ಷಕರು, ಮಕ್ಕಳು, ಎಸ್.ಡಿ.ಎಂ.ಸಿ. ಸದಸ್ಯರು ಮತ್ತು ಸಮುದಾಯದ ಮುಖಂಡರು ಒಟ್ಟಿಗೆ ಸೇರಿಕೊಂಡು ಶಾಲೆ ಬಿಟ್ಟ ಮಕ್ಕಳ ಪೋಷಕರ ಮನೆಗಳಿಗೆ ಭೇಟಿ ನೀಡಿ, ಅವರಿಗೆ ತಿಳುವಳಿಕೆ ಹೇಳುತ್ತಾ ಮಕ್ಕಳನ್ನು ಶಾಲೆಗೆ ಕರೆದು ತರಲು ನವೆಂಬರ್-ಡಿಸೆಂಬರ್ ೨೦೦೨ರಲ್ಲಿ ಅನುಷ್ಠಾನಕ್ಕೆ ತಂದ 'ಬಾ ಮರಳಿ ಶಾಲೆಗೆ' ಎಂಬ ಯೋಜನೆ ಇದೆ.

೭. ಶಾಲಾ ಶಿಕ್ಷಣದಿಂದ ಹೊರಗಿದ್ದು, ಅನಿವಾರ್ಯದ ಕಾರಣಗಳಿಗಾಗಿ ದುಡಿಯುತ್ತಿರುವ ೬-೧೪ ವಯಸ್ಸಿನ ಮಕ್ಕಳ ಸಮಯಕ್ಕೆ ಹೊಂದಾಣಿಕೆಯಾಗುವಂತೆ ಶಾಲೆಯನ್ನು ತೆರೆದು ಮಕ್ಕಳಲ್ಲಿ ಕಲಿಕೆಯ ಆಸಕ್ತಿಯನ್ನುಂಟು ಮಾಡಿ ಅವರನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರುವಂತಹ ಯೋಜನೆಯೇ 'ಸದಾ ಶಾಲೆಯಾಗಿದೆ'.

೮. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ತಂದೆ ತಾಯಿಗಳ ಆಶ್ರಯದಿಂದ ವಂಚಿತರಾಗಿ ಭಿಕ್ಷಾಟನೆಯಲ್ಲಿ ತೊಡಗಿಕೊಂಡಿರುವುದರ ಮೂಲಕ ಶಾಲೆಯಿಂದ ಹೊರಗಿರುವ ೬-೧೪ ವರ್ಷದ ಮಕ್ಕಳನ್ನು ಸಂಘ-ಸಂಸ್ಥೆಗಳ ಸಹಕಾರದಿಂದ ಶಾಲಾ ಶಿಕ್ಷಣಕ್ಕೆ ಸೇರಿಸುವ "ಬೀದಿಯಿಂದ ಶಾಲೆಗೆ" ಎಂಬ ಯೋಜನೆಯು ಮಹತ್ವದ್ದಾಗಿದೆ.

೯. ಮಹಿಳಾ ಸಾಕ್ಷರತೆಯ ಹೆಚ್ಚಳ ಮತ್ತು ಲಿಂಗ ತಾರತಮ್ಯ ನಿವಾರಿಸಲು ಹೊಸದಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು ಕೂಡ ರೂಪಿಸಲಾಗಿದೆ. ಇದಕ್ಕೆ ಪೂರಕವಾದಂತೆ ಬಾಲಿಕಾ ಶಾಲೆಗಳನ್ನು ತೆರೆಯುವುದು, ಬಾಲಕಿಯರ ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮಾಡುವುದು, ಬಾಲಕಿಯರಿಗಾಗಿ ಪ್ರತ್ಯೇಕವಾಗಿ ಶಿಷ್ಯವೇತನ ನೀಡುವುದು, ಶಾಲೆಗಳಲ್ಲಿ ಶುಲ್ಕ ವಿನಾಯಿತಿ ಸೌಲಭ್ಯ ಒದಗಿಸುವುದು, ಶಾಲಾ ಕಟ್ಟಡಗಳಲ್ಲಿ ಬಾಲಕಿಯರಿಗೆ ಮೂಲಭೂತ ಸೌಲಭ್ಯಗಳನ್ನು ಪೂರೈಸುವುದು, ಹೊಲಿಗೆ, ಕಸೂತಿ ಕಲೆ ಇತ್ಯಾದಿಗಳ ತರಬೇತಿ ಕೊಡುವುದು, ಲಿಂಗ ಸಮಾನತೆಯ ಪಠ್ಯಪುಸ್ತಕ ಮತ್ತು ಪಠ್ಯಕ್ರಮಗಳನ್ನು ರಚನೆ ಮಾಡುವುದು, ಉಚಿತವಾಗಿ ಪಠ್ಯಪುಸ್ತಕ, ಸಮವಸ್ತ್ರ, ಶಾಲಾಬ್ಯಾಗ್, ಸೈಕಲ್, ಬಿಸಿಯೂಟ ಇತ್ಯಾದಿಗಳನ್ನು ವಿತರಿಸುವುದು, ಶಿಕ್ಷಕರ ನೇಮಕಾತಿಯಲ್ಲಿ ಮಹಿಳೆಯರಿಗೆ ಆದ್ಯತೆ ಕೊಡುವುದು ಮುಂತಾದ ರೀತಿಯ ಪ್ರೋತ್ಸಾಹದಾಯಕ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

೧೦. ಸೇತುಬಂಧ ಶಿಕ್ಷಣ

ವಿವಿಧ ಕಾರಣಗಳಿಂದ ಶಾಲೆಯಿಂದ ಹೊರಗುಳಿದ ೦೬-೧೪ ವರ್ಷದ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಕರೆತರುವುದಕ್ಕಾಗಿ ರೂಪಿಸಿ, ಅನುಷ್ಠಾನಗೊಂಡಿರುವ ಸರ್ವ ಶಿಕ್ಷಣ ಅಭಿಯಾನದ ಉಪಯೋಜನೆಯೇ ಸೇತುಬಂಧ ಶಿಕ್ಷಣವಾಗಿದೆ. ಇದರಲ್ಲಿ ೧೨ ತಿಂಗಳ ಅವಧಿಯ (ಆಶಾಕಿರಣ) ೦೬ ತಿಂಗಳ ಅವಧಿಯ ಮತ್ತು ೦೪ ತಿಂಗಳ ಅವಧಿಯ ವಸತಿಯುತ ಸೇತುಬಂಧ ಶಿಕ್ಷಣ ಕೇಂದ್ರ (ಆರ್.ಬಿ.ಸಿ) ಹಾಗೂ ೧೨ ತಿಂಗಳ ಅವಧಿಯ ವಸತಿರಹಿತ ಸೇತುಬಂಧ ಶಿಕ್ಷಣ ಕೇಂದ್ರ (ಎನ್.ಆರ್.ಬಿ.ಸಿ) ಗಳಿರುತ್ತವೆ.

ಅನಿವಾರ್ಯ ಕಾರಣದಿಂದ ಶಾಲೆಯಿಂದ ಹೊರಗುಳಿದ ೦೬-೧೪ ವರ್ಷದ ಮಕ್ಕಳಲ್ಲಿ ಅತ್ಯಂತ ಸಂಕಷ್ಟದಲ್ಲಿರುವ ಕೊನೆಯ ಸ್ಥರದ ಮಗುವಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು, ಸಂಕಷ್ಟದಲ್ಲಿರುವ ಮಗುವಿಗೆ ಪ್ರಸಾದ ನಿಲಯದ ಸೌಲಭ್ಯ ನೀಡುವುದು, ಮಗುವಿನ ಭಾವಿ ಜೀವನಕ್ಕೆ ಅನುಕೂಲವಾಗುವ ಕೆಲವು ವೃತ್ತಿ ಸೌಲಭ್ಯಗಳನ್ನು ಕಲಿಸಿಕೊಡುವುದು, ಆರೈಕೆ ವಂಚಿತ ಮಕ್ಕಳಿಗೆ

ಆಶ್ರಯದೊಂದಿಗೆ ಆರೈಕೆ ಮಾಡುತ್ತಾ, ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಯಶಸ್ವಿಗೊಳಿಸುವುದು ೧೨ ತಿಂಗಳ ವಸತಿಯುತ ಸೇತುಬಂಧ ಶಿಕ್ಷಣ (ಆಶಾಕಿರಣ)ದ ಉದ್ದೇಶಗಳಾಗಿವೆ. ಈ ಸೇತುಬಂಧ ಶಿಕ್ಷಣ ಕೇಂದ್ರದಲ್ಲಿನ ಪ್ರತಿಯೊಂದು ಮಗುವಿಗೆ ಒಂದು ವರ್ಷಕ್ಕೆ ಹತ್ತು ಸಾವಿರ ರೂ.ಗಳಂತೆ ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಹಣವನ್ನು ಒದಗಿಸಲಾಗುತ್ತದೆ. ಈ ಕೇಂದ್ರಗಳನ್ನು ಶಿಕ್ಷಣ ಇಲಾಖೆಯಿಂದ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳಿಂದ ನಡೆಸಲಾಗುತ್ತದೆ. ಈ ರೀತಿಯ ಸೇತುಬಂಧ ಶಿಕ್ಷಣ ಕೇಂದ್ರಗಳು ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ೧೩೧ ಇವೆ. ಇವುಗಳನ್ನು ಹೆಚ್ಚಾಗಿ ಸರ್ಕಾರೇತರ ಸಂಘ ಸಂಸ್ಥೆಗಳೇ ನಡೆಸುತ್ತಿದ್ದು, ಒಂದು ಕೇಂದ್ರವು ಮಾತ್ರ ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುತ್ತವೆ. ಚಿಣ್ಣರ ಅಂಗಳ ಕಾರ್ಯಕ್ರಮದಲ್ಲಿ ಕಲಿತ ಅಥವಾ ಚಿಣ್ಣರ ಅಂಗಳಕ್ಕೆ ಸೇರದ ೦೬-೧೪ ವರ್ಷದ ಯಾವುದೇ ಮಗುವನ್ನು ಈ ಕೇಂದ್ರಕ್ಕೆ ಸೇರಿಸಬಹುದಾಗಿದೆ.

ಯಾವುದೇ ಕಾರಣದಿಂದ ಶಾಲೆಯಿಂದ ಹೊರಗುಳಿದ ೦೬-೧೪ ವಯೋಮಾನದ ಮಗುವು ಪುನಃ ಶಾಲೆಗೆ ಹೋದರೆ, ಬೇರೆ ಮಕ್ಕಳಂತೆ ಕಲಿಯಲಾಗುವುದಿಲ್ಲ ಎಂಬ ಮಕ್ಕಳ ಹಿಂಜರಿಕೆಯನ್ನು ಹೋಗಲಾಡಿಸುವುದು, ಶಾಲೆಗೆ ದಾಖಲಾಗಿಲ್ಲದ ಮಕ್ಕಳನ್ನು ಶಾಲೆಗೆ ಸೇರಿಸುವ ಮೊದಲು ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸಿ, ಇತರೆ ಮಕ್ಕಳಂತೆ ನಾನು ಕಲಿಯಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿಸುವುದು, ಮಕ್ಕಳ ಕಲಿಕೆಯಲ್ಲಿನ ಕೊರತೆಯನ್ನು (Learning Gap) ತುಂಬುವುದು ಇನ್ನು ಮುಂತಾದ ಉದ್ದೇಶಗಳಿಂದ ಆರು ತಿಂಗಳ ವಸತಿಯುತ ಸೇತುಬಂಧ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಈ ಸೇತುಬಂಧ ಶಿಕ್ಷಣ ಕೇಂದ್ರದಲ್ಲಿ ಮಗುವಿಗೆ ಬೇಕಾಗುವ ಎಲ್ಲಾ ಸೌಲಭ್ಯ ಗಳನ್ನು ಒದಗಿಸುವುದರ ಮೂಲಕ ಮಕ್ಕಳ ಕಲಿಕೆಯ ಸಾಮರ್ಥ್ಯವನ್ನು ಸರಿಪಡಿಸಿ ಅವರನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಸೇರಿಸುವ ಮಹತ್ವದ ಕೆಲಸವನ್ನು ಮಾಡಲಾಗುತ್ತದೆ.

ಪೋಷಕರು ವಲಸೆ ಹೋಗುವುದರಿಂದಾಗಿ ೦೬-೧೪ ವಯೋಮಾನದ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ತಪ್ಪಿಸುವ ಮತ್ತು ವ್ಯಾಸಂಗದ ಅವಧಿಯಲ್ಲಿ ಮಕ್ಕಳು ನಿರಂತರವಾಗಿ ಹಾಜರಾಗುವಂತೆ ಮಾಡಿ, ಮಕ್ಕಳ ಕಲಿಕೆಯ ಮಟ್ಟವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ನಾಲ್ಕು ತಿಂಗಳ ಅವಧಿಯ ವಸತಿಯುತ ಸೇತುಬಂಧ ಶಿಕ್ಷಣ ಕೇಂದ್ರ (ಋತುಮಾನ ಸೇತುಬಂಧ ಕೋರ್ಸ್) ವನ್ನು ಆರಂಭಿಸಲಾಗಿದೆ. ಈ ಕೇಂದ್ರಗಳ ಅವಧಿ ನಾಲ್ಕು ತಿಂಗಳಾಗಿದ್ದರೂ ಅನಿವಾರ್ಯದ ಸಂದರ್ಭ ಗಳಲ್ಲಿ ಅವಧಿಯನ್ನು ಹೆಚ್ಚಿಸಲು ಮತ್ತು ಕಡಿಮೆ ಮಾಡಲು ಅವಕಾಶಗಳಿವೆ. ಈ ಕೇಂದ್ರಗಳನ್ನು ಆದ್ಯತೆ ಮೇರೆಗೆ ಸರ್ಕಾರೇತರ ಸಂಘಟನೆಗಳು ನಡೆಸಬಹುದಾಗಿದೆ. ಒಂದುವೇಳೆ ಸರ್ಕಾರೇತರ ಸಂಘಟನೆಗಳು ನಡೆಸಲಾಗದಿದ್ದರೆ, ಸರ್ಕಾರದ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಈ ಕೇಂದ್ರಗಳನ್ನು ನಡೆಸಲು ಅವಕಾಶವಿದೆ. ನಾಲ್ಕು ತಿಂಗಳಿಗೆ ಪ್ರತಿಯೊಂದು ಮಗುವಿಗೆ ೨,೨೬೬ ರೂಪಾಯಿಗಳು ಘಟಕ ವೆಚ್ಚ ಸಂದಾಯವಾಗುತ್ತದೆ.

ಶಾಲೆ ದೂರ ಇರುವ ಕಾರಣದಿಂದ ಶಾಲೆಯಿಂದ ಹೊರಗಿರುವ ೬-೧೪ ವಯೋಮಾನದ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಒದಗಿಸುವುದು, ಶಿಕ್ಷಣ ವಂಚಿತ ಮತ್ತು ಸಂಕಷ್ಟದಲ್ಲಿರುವ ಶಾಲಾ ವಯೋಮಾನದ ಮಕ್ಕಳಿಗೆ ನೆರವು ನೀಡುವುದು, ಶಿಕ್ಷಣ ಮಗುವಿನ ಮೂಲಭೂತ ಹಕ್ಕು ಎಂಬ ಸಂವಿಧಾನ ಬದ್ಧತೆಗೆ ಅನುಸಾರವಾಗಿ ಕಾರ್ಯತಂತ್ರಗಳನ್ನು ರಚಿಸಿ, ಅನುಷ್ಠಾನಗೊಳಿಸುವುದರ ಮೂಲಕ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಬರುವಂತೆ ಮಾಡುವುದೇ ಹನ್ನೆರಡು ತಿಂಗಳ ಅವಧಿಯ ವಸತಿರಹಿತ ಸೇತುಬಂಧ ಶಿಕ್ಷಣ ಕೇಂದ್ರ (ಎನ್.ಆರ್.ಬಿ.ಸಿ.) ವಾಗಿದೆ. ಹತ್ತಿರದ ಶಾಲೆಯಿಂದ ಒಂದು ಕಿಲೋಮೀಟರಿಗಿಂತ ಹೆಚ್ಚಿನ ದೂರವಿರುವ ಜನವಸತಿ ಪ್ರದೇಶಗಳಲ್ಲಿನ ಐದು ಅಥವಾ ಐದಕ್ಕಿಂತ ಕಡಿಮೆ ಸಂಖ್ಯೆಯ ಮಕ್ಕಳಿಗಾಗಿ ಒಂದು ಪೂರಕವಾದ ಶಾಲೆಯನ್ನು ಆರಂಭಿಸ ಲಾಗುತ್ತದೆ. ಒಂದುವೇಳೆ ಜನವಸತಿಯ ಸಮುದಾಯವು ಪೂರಕ ಶಾಲೆಯನ್ನು ಪಡೆಯಲು ಅರ್ಹವಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳು ಹತ್ತಿರದ ಶಾಲೆಗೆ ಬರಲು ಒಪ್ಪಿದರೆ ಅಂತಹ ಮಕ್ಕಳಿಗೆ ಸಾರಿಗೆ ಸೌಲಭ್ಯ ನೀಡುವ ಅವಕಾಶವಿದೆ. ಇದರ ಶೈಕ್ಷಣಿಕ ಅವಧಿ ಜೂನ್ ೧ ರಿಂದ ಮಾರ್ಚ್ ೩೧ರವರೆಗೆ ಆಗಿರುತ್ತದೆ.

ಸರ್ವಶಿಕ್ಷಣ ಅಭಿಯಾನದ ಕಾರ್ಯಕ್ರಮ ಮುಗಿಯುತ್ತಿದ್ದರೂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಶಾಲೆಯಿಂದ ಹೊರಗಿರುವುದು ಕಂಡುಬರುತ್ತದೆ. ಸರ್ವಶಿಕ್ಷಣ ಅಭಿಯಾನವು ಮಕ್ಕಳ ಕಲಿಕಾ ಚಟುವಟಿಕೆಗಳಿಗೆ ಬೇಕಾಗುವ ಸಂಪನ್ಮೂಲಗಳನ್ನು ಸ್ಥಳೀಯ ಮಟ್ಟದಲ್ಲಿ ರೂಪಿಸದೆ, ಮೇಲ್ಮಟ್ಟದ ಕೆಲವೇ ವ್ಯಕ್ತಿಗಳಿಂದ ರೂಪಿತವಾದ ಕಾರ್ಯಕ್ರಮವಾಗಿದೆಯೇ ವಿನಃ ಇದು ಅಭಿಯಾನವಾಗಿ ಕಂಡುಬರುತ್ತಿಲ್ಲ. ಮತ್ತೊಂದು ಅಂಶವೆಂದರೆ, ಇಡೀ ಕಾರ್ಯಕ್ರಮವನ್ನು ಯುರೋಪಿನ ಹಣಕ್ಕೆ ಮರುಹೊಂದಾಣಿಕೆ ಸಲ್ಲಿಸುವಂತೆ ಲೆಕ್ಕಪತ್ರಗಳನ್ನು ಇಡುವ ಮತ್ತು ಅವುಗಳನ್ನು ಪರಿಶೀಲಿಸುವ, ಮಾಹಿತಿ ದಾಖಲಿಸಲು ತನ್ನನ್ನು ತಾನು ಮಿತಿ ಗೊಳಿಸಿಕೊಂಡಿದೆ. ಸರ್ವಶಿಕ್ಷಣ ಅಭಿಯಾನಕ್ಕೆ ಬೇಕಾಗುವ ಪರಿಸರವನ್ನು ನಿರ್ಮಾಣ ಮಾಡುವ ಚರ್ಚೆ, ಸಂವಾದಗಳು ಕೇವಲ ಜಿಲ್ಲಾ ಮಟ್ಟಕ್ಕೆ ಸೀಮಿತಗೊಂಡಿವೆ. ಹೀಗೆ ಸೀಮಿತವಾಗಿರುವ ಕಾರ್ಯಕ್ರಮ ದಲಿತ ಮಕ್ಕಳನ್ನು ಔಪಚಾರಿಕ ಶಾಲೆಯಿಂದ ಅನೌಪಚಾರಿಕ ಶಾಲೆಗಳಲ್ಲಿಯೇ ಉಳಿಸುವ ಹುನ್ನಾರವನ್ನು ತನ್ನೊಳಗೆ ರೂಪಿಸಿಕೊಂಡಿವೆ. ಉದಾಹರಣೆಗೆ ಸೇತುಬಂಧ (ಬ್ರಿಡ್ಜ್ ಕೋರ್ಸ್) ಶಿಕ್ಷಣ ಕಾರ್ಯಕ್ರಮ ಗಳನ್ನು ರೂಪಿಸಿ, ಟೆಂಟ್ ಶಾಲೆ ರಚಿಸಿ, ನಿಮಗೆ ಶಾಲೆಗೆ ಬರಲಾಗದಿದ್ದ ಪಕ್ಷದಲ್ಲಿ ನೀವು ದಿನದಲ್ಲಿ ೧-೨ ಗಂಟೆ ಕಲಿತರೆ ಸಾಕು ಎಂದು ಆ ಮಕ್ಕಳಲ್ಲಿರುವ ಕಾಂಪಿಟೆನ್ಸಿಗಳನ್ನು ಗುರುತಿಸುವುದಿಲ್ಲ. ಪ್ರತಿಯಾಗಿ ಸರ್ಕಾರಿ ಅಧಿಕಾರಿಗಳಿಗೆ ಹತ್ತಿರವಿರುವ ಸರ್ಕಾರೇತರ ಸಂಘ-ಸಂಸ್ಥೆಗಳ ಮೂಲಕ ಸೇತುಬಂಧ ಶಿಕ್ಷಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಕಾರ್ಯಕ್ರಮ ಒಂದು ರೀತಿಯಲ್ಲಿ ದಂದೆಯಂತೆ ನಡೆಯುತ್ತಿದೆ. ಇದಲ್ಲದೆ ಸರ್ವಶಿಕ್ಷಣ ಅಭಿಯಾನವು ಅವಕಾಶವಂಚಿತ ದಲಿತಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ರೂಪಿಸಿರುವ ಬಹುತೇಕ ಕಾರ್ಯಕ್ರಮಗಳಂತೆ,

ತಳಮಟ್ಟದಲ್ಲಿ ದುಡ್ಡು ಮಾಡುವ ಅಡ್ಡೆಯಾಗಿ ಪರಿವರ್ತನೆಗೊಂಡಿದೆ. ಈ ಅಡ್ಡೆಗಳಲ್ಲಿ ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕುರಿತಾಗಿ ಯೋಚಿಸುವ, ಚಿಂತಿಸುವ ಮನಸ್ಸುಗಳು ನಮ್ಮ ಕಣ್ಣಿಗೆ ಕಾಣಿಸುವುದು ತುಂಬಾ ವಿರಳವಾಗಿದೆ.

೪.೩. ದಲಿತ ಪೋಷಕರ ತಿಳುವಳಿಕೆ

ಶಿಕ್ಷಣದ ಸೌಲಭ್ಯ ಕುರಿತಾದ ದಲಿತ ಪೋಷಕರ ಜ್ಞಾನ-ತಿಳುವಳಿಕೆಗಳು ದಲಿತರ ಸಾಕ್ಷರತೆಯ ಪ್ರಮಾಣದ ಮೇಲೆ ಎಷ್ಟರಮಟ್ಟಿಗೆ ಪ್ರಭಾವಿತವಾಗಿವೆ ಎಂಬುದನ್ನು ತಿಳಿಯಬೇಕಾಗುತ್ತದೆ. ಅಧ್ಯಯನ ಕ್ಷೇತ್ರದಲ್ಲಿ ಕೈಗೊಂಡ ಕ್ಷೇತ್ರ ಕಾರ್ಯದ ಪ್ರಕಾರ ಶೇಕಡ ೯೮ರಷ್ಟು ದಲಿತ ಪೋಷಕರು ಶಿಕ್ಷಣದ ಸೌಲಭ್ಯಗಳು ಸರಿಯಾಗಿ ಲಭ್ಯವಾಗುತ್ತವೆ ಎಂದು ಪ್ರತಿಕ್ರಿಯಿಸುತ್ತಾರೆ. ಇನ್ನುಳಿದ ಶೇಕಡ ೨ರಷ್ಟು ದಲಿತ ಪೋಷಕರು ಮಾತ್ರ ಶಿಕ್ಷಣದ ಸೌಲಭ್ಯಗಳು ಸರಿಯಾಗಿ ಲಭ್ಯವಾಗುತ್ತಿಲ್ಲವೆಂದು ಪ್ರತಿಕ್ರಿಯಿಸುತ್ತಾರೆ. ಈ ಶಿಕ್ಷಣದ ಸೌಲಭ್ಯಗಳಿಂದ ತಮ್ಮ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮವಾಗಿರುವುದನ್ನು ಶೇಕಡ ೯೦ರಷ್ಟು ದಲಿತ ಪೋಷಕರು ಒಪ್ಪಿಕೊಂಡರೆ, ಉಳಿದ ಶೇಕಡ ೪ರಷ್ಟು ದಲಿತ ಪೋಷಕರು ಒಪ್ಪುವುದಿಲ್ಲ.

ಸರ್ಕಾರದ ಕಡೆಯಿಂದ ದೊರೆಯುವ ಶಿಕ್ಷಣ ಸೌಲಭ್ಯಗಳ ಜೊತೆಯಲ್ಲಿ ಶೇಕಡ ೯೦ರಷ್ಟು ದಲಿತ ಪೋಷಕರು ಅವರ ಆದಾಯದ ಮಟ್ಟಕ್ಕೆ ಅನುಸಾರವಾಗಿಯೇ ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವೈಯಕ್ತಿಕವಾಗಿ ಹಣ ಖರ್ಚು ಮಾಡುತ್ತಾರೆ. ಆದರೆ ಉಳಿದಂತಹ ಶೇಕಡ ೪ರಷ್ಟು ದಲಿತ ಪೋಷಕರು ಮಾತ್ರ ಸರ್ಕಾರಿ ಸೌಲಭ್ಯಗಳನ್ನಷ್ಟೇ ನಂಬಿಕೊಂಡು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಒಂದು ಮಹತ್ವದ ಅಂಶವೆಂದರೆ ಶಿಕ್ಷಣದ ಸರ್ಕಾರಿ ಸೌಲಭ್ಯಗಳು ಸರಿಯಾಗಿ ಸಿಗದಿದ್ದರಿಂದ ತಮ್ಮ ಮಕ್ಕಳ ಶಿಕ್ಷಣವು ಹಿನ್ನಡೆಯಾಗುವುದನ್ನು ಶೇಕಡ ೯ರಷ್ಟು ದಲಿತ ಪೋಷಕರು ಒಪ್ಪಿಕೊಳ್ಳುತ್ತಾರೆ. ಆದರೆ ಶೇಕಡ ೯೧ರಷ್ಟು ದಲಿತ ಪೋಷಕರು ಹಿನ್ನಡೆಯಾಗುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದ ಶಿಕ್ಷಣದ ಸೌಲಭ್ಯ ಕುರಿತಂತೆ ದಲಿತ ಪೋಷಕರ ತಿಳುವಳಿಕೆಗಳು ಅಧ್ಯಯನ ಕ್ಷೇತ್ರದ ನಂ. ೧೦ ಮುದ್ದಾಪುರ ಮತ್ತು ಆಲೂರು ಗ್ರಾಮ ಪಂಚಾಯಿತಿಗಳೆರಡರಲ್ಲಿಯೂ ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ಪ್ರಮಾಣದಲ್ಲಿವೆ. ಈ ಎರಡು ಗ್ರಾಮಪಂಚಾಯತಿಗಳ ಪೈಕಿ ಒಂದು ನೀರಾವರಿ ಪ್ರದೇಶ ಮತ್ತು ಇನ್ನೊಂದು ಮಳೆಯಾಶ್ರಿತ ಪ್ರದೇಶವಾಗಿದ್ದರೂ, ಲಭ್ಯವಾಗುವ ಶಿಕ್ಷಣದ ಸೌಲಭ್ಯಗಳ ವಿಷಯದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸಮಪ್ರಮಾಣದ ತಿಳುವಳಿಕೆ ಇರುವುದು ಕಂಡುಬರುತ್ತದೆ. ಶಿಕ್ಷಣದ ಸೌಲಭ್ಯಗಳ ವಿಷಯದಲ್ಲಿ ಕಂಡುಬರುವ ಸೂಕ್ಷ್ಮ ಸಂಗತಿ ಎಂದರೆ, ಸರಿಯಾಗಿ ಲಭ್ಯವಾಗುವ ಶಿಕ್ಷಣದ ಸೌಲಭ್ಯಗಳು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಸತ್ಪರಿಣಾಮವನ್ನುಂಟು ಮಾಡುತ್ತಿದ್ದರೂ, ದಲಿತ ಪೋಷಕರು ವೈಯಕ್ತಿಕವಾಗಿ ಹಣ ಖರ್ಚು ಮಾಡಲು ಹಿಂಜರಿಯುವುದಿಲ್ಲ ಮತ್ತು ಸರ್ಕಾರಿ ಸೌಲಭ್ಯಗಳು ಸಿಗದಿದ್ದರೂ ಖಿನ್ನರಾಗುವುದಿಲ್ಲವೆಂಬ ದೃಢವಿಶ್ವಾಸ ವ್ಯಕ್ತವಾಗುತ್ತದೆ.

೪.೪. ತೃಪ್ತಿಯೇ ಅಥವಾ ಇಲ್ಲವೇ?

ಶಿಕ್ಷಣದ ಸೌಲಭ್ಯಗಳು ಲಭ್ಯವಾಗುವಿಕೆಯ ಬಗ್ಗೆ ದಲಿತ ಪೋಷಕರಿಗೆ ತೃಪ್ತಿ ಇದೆಯೇ ಅಥವಾ ಇಲ್ಲವೆ? ಎಂಬುದು ದಲಿತರ ಶಿಕ್ಷಣದ ಪರಿಸರವನ್ನು ತಿಳಿಯಲು ಸಹಕಾರಿಯಾಗುತ್ತದೆ. ಶಿಕ್ಷಣ ಸೌಲಭ್ಯಗಳ ತೃಪ್ತಿಯ ಪ್ರಶ್ನೆ ಬಂದಾಗ ನಿರ್ದಿಷ್ಟವಾಗಿ ಶಿಕ್ಷಣದ ಭೌತಿಕ ಮೂಲಸೌಲಭ್ಯಗಳು, ಬೌದ್ಧಿಕ ಪರಿಸರದ ಸೌಲಭ್ಯಗಳು ಮತ್ತು ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗುತ್ತದೆ. ಬಹುತೇಕವಾಗಿ ಶಿಕ್ಷಣದ ಭೌತಿಕ ಮೂಲಸೌಲಭ್ಯಗಳಾದ ಶಾಲಾ ಕೊಠಡಿ, ಶಿಕ್ಷಕರ ನೇಮಕ, ಕುಡಿಯುವ ನೀರಿನ ವ್ಯವಸ್ಥೆಗಳ ಬಗ್ಗೆ ತೃಪ್ತಿ ಇದ್ದರೂ ಶೌಚಾಲಯ ಸೌಲಭ್ಯದ ಬಗ್ಗೆ ತೃಪ್ತಿ ಕಡಿಮೆ ಎಂಬುದಾಗಿ ಕಂಡುಬರುತ್ತದೆ.

ಶಿಕ್ಷಣದ ಬೌದ್ಧಿಕ ಪರಿಸರದ ಸೌಲಭ್ಯ ಕುರಿತಂತೆ ವಸ್ತುನಿಷ್ಠವಾಗಿ ಹೇಳಲಾಗದಿದ್ದರೂ ಶಿಕ್ಷಕರು ಮಕ್ಕಳಿಗೆ ಉತ್ತಮವಾಗಿ ವಿದ್ಯೆ ಕಲಿಸುತ್ತಾರೆ ಎಂಬುದರ ಮಧ್ಯೆ ಸ್ವಲ್ಪಮಟ್ಟಿನ ಅಪಸ್ವರವೂ ಕೇಳಿಬರುತ್ತಿದೆ. ಅಂದರೆ ಶಿಕ್ಷಕರು ಶಾಲೆಗೆ ತಡವಾಗಿ ಬರುವುದು, ನಿಗದಿ ಅವಧಿಗಿಂತ ಮುಂಚೆಯೇ ಮನೆಗೆ ಹೋಗುವುದು, ಮಧ್ಯಾಹ್ನದ ಬಿಸಿಯೂಟದ ಕಡೆಗೆ ಹೆಚ್ಚಿನ ಗಮನ ಕೊಡುವುದು, ತರಗತಿಯಲ್ಲಿ ಪಾಠ ಹೇಳುವಾಗ ದಲಿತ ಮಕ್ಕಳಿಗೆ ಸಮಾನವಾದ ಗಮನ ಕೊಡದಿರುವುದು, ಆಗಾಗ್ಗೆ ಮೀಟಿಂಗ್‌ಗೆ ಹೋಗುವುದು, ತರಬೇತಿಗೆ ಹೋಗುವುದು, ವಿವಿಧ ಗಣತಿ ಕಾರ್ಯಗಳಿಗೆ ಹೋಗುವುದು ಮತ್ತು ವೈಯಕ್ತಿಕ ಕೆಲಸಗಳಿಗೆ ರಜೆ ಹಾಕುವುದು ಇತ್ಯಾದಿಗಳಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದು ಶಿಕ್ಷಕರಿಂದ ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಶಿಕ್ಷಣದ ಪ್ರೋತ್ಸಾಹದಾಯಕ ಸೌಲಭ್ಯಗಳಾದ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶಾಲಾ ಬ್ಯಾಗ್, ಮಧ್ಯಾಹ್ನದ ಬಿಸಿಯೂಟ, ಆಹಾರ ಧಾನ್ಯ, ವಿದ್ಯಾರ್ಥಿ ವೇತನ ಇತ್ಯಾದಿಗಳ ವಿತರಣೆಯ ಬಗ್ಗೆ ದಲಿತ ಪೋಷಕರಲ್ಲಿ ತೃಪ್ತಿಯ ಭಾವನೆ ವ್ಯಕ್ತವಾಗುತ್ತದೆ. ಆದರೂ ಸ್ವಲ್ಪವೇ ಪ್ರಮಾಣದ ಅಸಮಾಧಾನವಿರುವುದೂ ತಿಳಿದುಬರುತ್ತದೆ. ಅಂದರೆ ಈ ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ಕೊಡುವಾಗ ದಲಿತ ಮಕ್ಕಳಿಗೆ ಹರಿದ ಪುಸ್ತಕ, ಸಮವಸ್ತ್ರ ಮತ್ತು ಬ್ಯಾಗ್‌ಗಳನ್ನು ನೀಡುವುದು, ಹಣ ಕೇಳುವುದು, ತಡವಾಗಿ ಕೊಡುವುದು ಕೇಳಿಬರುತ್ತಿದೆ. ಶಾಲಾ ಬಿಸಿಯೂಟದ ಸಂದರ್ಭದಲ್ಲಿ ಪರೋಕ್ಷವಾಗಿ ದಲಿತ ಮಕ್ಕಳಲ್ಲಿ ಜಾತಿಯ ಭಾವನೆ ಬರುವಂತೆ ಮಾಡುವುದು ಮತ್ತು ದಲಿತ ಮಕ್ಕಳಿಗೆ ಸಕಾಲದಲ್ಲಿ ವಿದ್ಯಾರ್ಥಿ ವೇತನಗಳನ್ನು ನೀಡದೆ ವಿಳಂಬ ಮಾಡುವುದು ಕೇಳಿಬರುತ್ತಿದೆ.

೪.೫. ಸಾಮಾಜಿಕ ಅಭಿಪ್ರಾಯ

ಶಿಕ್ಷಣದ ಸೌಲಭ್ಯಗಳ ಲಭ್ಯತೆಯ ತಿಳುವಳಿಕೆ ಬಗ್ಗೆ ಸಾಮಾಜಿಕವಾಗಿ ವಿಭಿನ್ನವಾದ ಅಭಿಪ್ರಾಯಗಳಿವೆ. ದಲಿತ ಮಕ್ಕಳಿಗೆ ಲಭ್ಯವಾಗುವ ಶಿಕ್ಷಣದ ಸೌಲಭ್ಯಗಳು ಸರಿಯಾದರೂ

ಅವುಗಳನ್ನು ಪಡೆದುಕೊಳ್ಳುವಲ್ಲಿ ದಲಿತರಲ್ಲಿ ಸ್ವಲ್ಪಮಟ್ಟಿನ ಹಿಂಜರಿಯುವಿಕೆ ಕೇಳಿಬರುತ್ತಿದೆ. ಇನ್ನೊಂದು ಕಡೆ ದಲಿತ ಮಕ್ಕಳಿಗೆ ಲಭ್ಯವಾಗುವ ಶಿಕ್ಷಣದ ಎಲ್ಲಾ ಸೌಲಭ್ಯಗಳು ಆರ್ಥಿಕವಾಗಿ ಹಿಂದುಳಿದ ಇತರೆ ವರ್ಗದ ಮಕ್ಕಳಿಗೂ ಲಭ್ಯವಾಗಬೇಕು ಎಂಬ ಅಭಿಪ್ರಾಯವೂ ಇದೆ. ಅಲ್ಲದೇ ಆರ್ಥಿಕವಾಗಿ ಸಬಲರಾದ ಕೆಲವು ದಲಿತರಿಗೆ ಈ ಸೌಲಭ್ಯಗಳನ್ನು ಒದಗಿಸುವುದಕ್ಕಿಂತ ಆರ್ಥಿಕ ದುರ್ಬಲ ವರ್ಗದ ದಲಿತ ಮಕ್ಕಳಿಗೆ ಒದಗಿಸುವುದು ಸೂಕ್ತವೆಂಬ ವಾದವೂ ಕೂಡ ವ್ಯಕ್ತವಾಗುತ್ತಿದೆ. ಆದರೆ ತಲೆ ತಲಾಂತರದಿಂದಲೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ವಂಚಿತರಾದ ದಲಿತರ ಶೈಕ್ಷಣಿಕ ಪರಿಸ್ಥಿತಿಯನ್ನು ಸುಧಾರಿಸುವಂತಹ ದೃಷ್ಟಿಯಿಂದ ಅವರ ಮಕ್ಕಳಿಗೆ ಶಿಕ್ಷಣದ ಎಲ್ಲಾ ಸೌಲಭ್ಯಗಳನ್ನು ವಿಸ್ತರಣೆ ಮಾಡುವುದು ಸಾಮಾಜಿಕ ನ್ಯಾಯವೆನಿಸುತ್ತದೆ. ಇದೇ ಸಂದರ್ಭದಲ್ಲಿ ಆರ್ಥಿಕವಾಗಿ ದುರ್ಬಲವಾದ ಇತರೆ ಜಾತಿಯ ಮಕ್ಕಳನ್ನು ಕಡೆಗಣಿಸದಿರುವುದು ಸಾಮಾಜಿಕ ನ್ಯಾಯದ ಇನ್ನೊಂದು ಆಯಾಮವೆನಿಸುತ್ತದೆ.

ಉಪಸಂಹಾರ

ಈ ಅಧ್ಯಾಯದಲ್ಲಿ ನಾವು ಚರ್ಚಿಸಿರುವ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ದಲಿತರ ಶೈಕ್ಷಣಿಕ ಅಭಿವೃದ್ಧಿಗಾಗಿ ರೂಪಿತವಾಗಿವೆ ಎಂಬ ಆಶಯದಿಂದ ಜಾರಿಗೆ ತರಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ದಲಿತರನ್ನು ಶೈಕ್ಷಣಿಕವಾಗಿ ಒಳಮಾಡಿಕೊಂಡಿವೆ ಎಂಬಂತೆಯೇ ಕಂಡುಬರುತ್ತವೆ. ಆದರೆ ಇವುಗಳು ಸಂಪೂರ್ಣವಾಗಿ ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಮಾಡದೆ, ತನ್ನೊಳಗೆ ಇರುವ ಮೇಲ್ಜಾತಿಯ ಅಭಿವೃದ್ಧಿ ರಾಜಕಾರಣದಿಂದ ಪ್ರೇರಿತರಾಗಿ ರೂಪಗೊಂಡಿವೆ ಎಂಬುದು ತಳಮಟ್ಟದಲ್ಲಿ ಅಧ್ಯಯನ ಮಾಡುವಾಗ ನಮಗೆ ತಿಳಿದುಬಂದಿದೆ. ಇವು ದಲಿತರನ್ನು ಶೈಕ್ಷಣಿಕ ಮುಖ್ಯವಾಹಿನಿಗೆ ಬರದಂತೆ ತಡೆಯುತ್ತಿವೆ ಎಂಬುದು ನಮಗೆ ಅಧಿಕವಾಗಿ ಕಂಡುಬರುತ್ತದೆ. ಉದಾಹರಣೆಗೆ ಶಿಕ್ಷಕರ್ಮಿ ಕಾರ್ಯಕ್ರಮ, ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ, ಶಿಕ್ಷಣ ಗ್ಯಾರಂಟಿ ಯೋಜನೆ ಇವುಗಳು ನಿಗದಿತ ಸಮಯದವರೆಗೆ, ಮಕ್ಕಳು ಶಾಲೆಯಲ್ಲಿ ಇರದಿದ್ದ ಪಕ್ಷದಲ್ಲಿ ಅವರನ್ನು ಶಾಲೆಯಿಂದ ಹೊರಗಿರುವ ಶಿಕ್ಷಣದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳಾಗಿವೆ. ಆ ಮೂಲಕ ಸಂವಿಧಾನಬದ್ಧವಾದ ನಿಗದಿತವಾದ ಶಿಕ್ಷಣದಿಂದಲೇ ದಲಿತ ಮಕ್ಕಳು ಹೊರಗುಳಿಯುವಂತೆ ಮಾಡುವ ಹುನ್ನಾರವನ್ನು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ವಿಶೇಷವಾಗಿ ಬೋಧನೆ ಮತ್ತು ಕಲಿಕೆಗೆ ರೂಪಿಸಿದ ಕಾರ್ಯಕ್ರಮಗಳು ಒಳಮಾಡಿಕೊಂಡಿವೆ. ಇನ್ನು ಮಕ್ಕಳಿಗೆ ಕೊಡುತ್ತಿರುವ ಪ್ರೇರಕ ಸೌಲಭ್ಯಗಳಲ್ಲಿ ಸಮಾನ ಹಂಚಿಕೆ ಇಲ್ಲದಿರುವುದು ಕಂಡುಬಂದಿರುತ್ತದೆ. ಈ ನಿಟ್ಟಿನಲ್ಲಿ ಇನ್ನಷ್ಟು ಅಧ್ಯಯನಗಳು, ಚರ್ಚೆ ಮತ್ತು ಸಂವಾದಗಳು ತಳಮಟ್ಟದಲ್ಲಿ ನಡೆಯಬೇಕಾಗಿರುವುದು ಅಗತ್ಯ ಎಂಬುದು ನಮ್ಮ ಅಧ್ಯಯನ ಅಭಿಮತವಾಗಿದೆ.

ಗ್ರಂಥಸೂಚಿ

೧. ಅಗರವಾಲ್, (೨೦೦೦), *ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಅಂಡ್ ರಿಟೆನ್ಷನ್*, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್, ನ್ಯೂಡೆಲ್ಲಿ.

೨. *ಕರ್ನಾಟಕ ಮಾನವ ಅಭಿವೃದ್ಧಿ ವರದಿ* (೨೦೦೫), ಯೋಜನಾ ಇಲಾಖೆ, ಕರ್ನಾಟಕ, ಬೆಂಗಳೂರು.

೩. ಕುಲಕರ್ಣಿ ಕೆ.ಜಿ., (೨೦೦೬), ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪ್ರದೀಪ ಪ್ರಕಾಶನ, ಜೆ.ಟಿ. ಕಾಲೇಜು ಹತ್ತಿರ, ಗದಗ.

೪. ಗಂಗಾಧರಪ್ಪ ಎನ್.ಆರ್., (೨೦೦೬), ಶಿಕ್ಷಣದ ಮೂಲತತ್ವಗಳು, ರೇಖಾ ಪ್ರಕಾಶನ, ತರಳಬಾಳು ಬಡಾವಣೆ, ದಾವಣಗೆರೆ.

೫. ಪ್ರಶಾಂತ್ ಎಚ್.ಡಿ., (೨೦೦೪), ಶಾಲಾ ಬಿಸಿಯೂಟ ಅಧ್ಯಯನ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೬. ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೭. ಮಕ್ಕಳ ಸಮೀಕ್ಷೆ, (೨೦೦೩), (ಸಿ.ಪಿ.ಇ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರೂ, ಕರ್ನಾಟಕ ಸರ್ಕಾರ.

೮. ಮಕ್ಕಳ ಜನಗಣತಿ (೨೦೦೫), ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

೯. ಮಹಬಲೇಶ್ವರ ರಾವ್, (೧೯೮೫), ಅಸಮಾನತೆ ನಾಡಿನಲ್ಲಿ ಶಿಕ್ಷಣ, ಜನವಾದಿ ಪ್ರಕಾಶನ, ದಕ್ಷಿಣ ಕನ್ನಡ ಜಿಲ್ಲೆ.

೧೦. ರುಕ್ಮಿಣಿ ಬ್ಯಾನರ್ಜಿ, (೧೯೯೭), *ವೈಡೋಂಟ್ ಚಿಲ್ಡ್ರನ್ ಕಂಪ್ಲೀಟ್ ಪ್ರೈಮರಿ ಸ್ಕೂಲ್? ಎ ಕೇಸ್ ಸ್ಟಡಿ ಆಫ್ ಲೋ ಇನ್‌ಕಂ ನೈಬರ್‌ಹುಡ್ ಇನ್ ದೆಹಲಿ*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೧. ಲೈಟನ್ ಜಿ.ಕೆ., (೨೦೦೦), *ಚಿಲ್ಡ್ರನ್ ವರ್ಕ್ ಅಂಡ್ ಎಜ್ಯುಕೇಷನ್-೧ ಜನರಲ್ ಫ್ಯಾರ್ ಮೀಟರ್ಸ್*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೨. ಶ್ರೀ ವಾಸ್ತವ, (೧೯೯೭), *ಆಸೆಸ್ ಟು ಬೇಸಿಗ್ ಎಜ್ಯುಕೇಷನ್ ಇನ್ ಉತ್ತರ ಪ್ರದೇಶ ರಿಜಲ್ಟ್ ಫ್ರಮ್ ಫೀಲ್ಡ್ ಸರ್ವೇ, ಪ್ರಾಜೆಕ್ಟ್ ಆನ್ ಸ್ಟ್ರೆಟಜೀಸ್ ಅಂಡ್ ಫೈನಾನ್‌ಸಿಂಗ್ ಫಾರ್ ಹ್ಯೂಮನ್ ಡೆವಲಪ್‌ಮೆಂಟ್,* ಯು.ಎನ್.ಡಿ.ಪಿ., ನ್ಯೂಡೆಲ್ಲಿ.

೧೩. ಸವಿತಾ ಕೆ., (೨೦೦೭), *ಬಳ್ಳಾರಿ ಜಿಲ್ಲಾ ಗ್ರಾಮವಾರು ಸಾಕ್ಷರತೆ ೨೦೦೫,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೪. ಸವಿತಾ ಕೆ., (೨೦೦೮), **ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು : ಸಮಾಜೋ ಆರ್ಥಿಕ ಅಂಶಗಳು,** ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೫. ಸಂಜಯ್ ಕುಮಾರ್, ಬಿ.ಜೆ. ಕೊಪ್ಪರ್, ಎಸ್. ಬಾಲಸುಬ್ರಮಣಿಯನ್, (೨೦೦೩), ಪ್ರೈಮರಿ *ಎಜ್ಯುಕೇಶನ್ ಇನ್ ರೂರಲ್ ಏರಿಯಾಸ್,* ಎನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.


• • •

ಅಧ್ಯಾಯ-೫

ದಲಿತರ ಶೈಕ್ಷಣಿಕ ಮನೋಪ್ರವೃತ್ತಿ ಮತ್ತು ಶಾಲಾ ಭಾಗವಹಿಸುವಿಕೆ

ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಯಾವ ರೀತಿಯ ಮನೋಪ್ರವೃತ್ತಿಯನ್ನು ಹೊಂದಿದ್ದಾರೆಂಬುದನ್ನು ಅರ್ಥಮಾಡಿಕೊಳ್ಳುವುದು ಈ ಅಧ್ಯಾಯದ ಮೂಲ ಆಶಯವಾಗಿರುತ್ತದೆ. ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹೊಂದಿರುವ ಮನೋಪ್ರವೃತ್ತಿ ಕುರಿತು ಎರಡು ರೀತಿಯ ವಾದಗಳು ಚಾಲ್ತಿಯಲ್ಲಿವೆ. ಒಂದು, ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ಸಂಶೋಧನೆಗಳು ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅಸಕ್ತಿ ಹೊಂದಿದ್ದಾರೆ ಎಂದು ವಾದಿಸುತ್ತಿವೆ. ಎರಡನೆಯದಾಗಿ ಮತ್ತೆ ಕೆಲವು ಸಂಶೋಧನೆಗಳು ಸೇರಿದಂತೆ ದಿನಪತ್ರಿಕೆ ಮತ್ತು ಇತರೆ ಮಾಧ್ಯಮಗಳು, ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ವಿಶೇಷ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂಬಂತಹ ಅಭಿಪ್ರಾಯಗಳನ್ನು ಪ್ರಕಟಿಸುತ್ತಿವೆ; ಅಲ್ಲದೆ ಅಧಿಕಾರಶಾಹಿ ಮತ್ತು ಅಧಿಕಾರದಲ್ಲಿರುವವರಲ್ಲಿ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿಲ್ಲ ಎಂಬ ಬಹಳ ಸಾಮಾನ್ಯವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ಈ ಅಂಶವನ್ನು ಅಧಿಕಾರಶಾಹಿ ವರ್ಗದವರು ನಮ್ಮಲ್ಲಿ ಸಾಕ್ಷರತೆ ಶಾಲಾಭಾಗವಹಿಸುವಿಕೆ ಮಟ್ಟ ಬಹಳ ಕಡಿಮೆಯಾಗಿರುವುದಕ್ಕೆ ಪೂರಕವಾಗಿ ಒದಗಿಸುತ್ತಾರೆ. ಈ ಅಭಿಪ್ರಾಯಗಳೆಲ್ಲಾ ಎಷ್ಟರಮಟ್ಟಿಗೆ ಸರಿ ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ (ಹೆಚ್.ಡಿ. ಪ್ರಶಾಂತ್ ೨೦೦೫).


ರೇಖಾಚಿತ್ರ ೫.೧. : ಮಕ್ಕಳಿಗೆ ಶಿಕ್ಷಣ ಕೊಡಿಸಲು ಬಯಸುವ ಪ್ರಮಾಣ (ಶೇಕಡವಾರು)



ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಭಾರತವು ತನ್ನ ಗುರಿಯನ್ನು ಸಾಧಿಸದಿರುವುದಕ್ಕೆ ಅಧಿಕಾರದಲ್ಲಿ ಇರುವವರು ಆಡಳಿತಶಾಹಿ ಮತ್ತು ಯೋಜನಾಕಾರರ ನಂಬಿಕೆಗೆ ವಿರುದ್ಧವಾದ ಅಂಶವನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ಉದಾಸೀನ ಭಾವನೆಯನ್ನು ಹೊಂದಿದ್ದರೂ ಹೆಚ್ಚಿನ ಪ್ರಮಾಣದ ಪೋಷಕರು ತಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ಉದಾಹರಣೆಗೆ ನಮ್ಮ ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಬಯಸುವಿರಾ? ಎಂಬ ಪ್ರಶ್ನೆಗೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದವರಲ್ಲಿ ಶೇಕಡ ೯೯ರಷ್ಟು ಪೋಷಕರು 'ಹೌದು' ಎಂಬ ಉತ್ತರ ನೀಡಿದ್ದಾರೆ. ಉಳಿದ ಶೇಕಡ ೧ರಷ್ಟು ಪೋಷಕರು ಮಾತ್ರ 'ಇಲ್ಲ' ಎಂಬ ಉತ್ತರ ನೀಡುತ್ತಾ ಅದಕ್ಕೆ ಬಡತನವೇ ಪ್ರಮುಖ ಕಾರಣವೆನ್ನುತ್ತಾರೆ.

ಆದರೆ ಆಲೂರು ಗ್ರಾಮಪಂಚಾಯಿತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ ನೂರಕ್ಕೆ ನೂರರಷ್ಟು ಪೋಷಕರು 'ಹೌದು' ಎಂಬ ಉತ್ತರವನ್ನು ಮಾತ್ರ ನೀಡುತ್ತಿದ್ದು, 'ಇಲ್ಲ' ಎಂಬ ಉತ್ತರವಿಲ್ಲ. ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದಲ್ಲಿನ ದಲಿತ ಪೋಷಕರು ಮಕ್ಕಳ ಶಿಕ್ಷಣದ ನಿರಾಸಕ್ತಿಗೆ ಆರ್ಥಿಕ ದುಸ್ಥಿತಿ ಕಾರಣವಾಗಿದೆ ಎಂಬ ಅಂಶ ತಿಳಿಯುತ್ತದೆ. ಆದರೆ, ನೀರಾವರಿಯಿಲ್ಲದ ಆಲೂರು ಗ್ರಾಮಪಂಚಾಯಿತಿ ಪ್ರದೇಶದ ದಲಿತ ಪೋಷಕರು ಮಕ್ಕಳ ಶಿಕ್ಷಣಕ್ಕೆ ಆಸಕ್ತಿ ತೋರಿಸಲು ಬಡತನ ಅರ್ಥಿಕ ದುಸ್ಥಿತಿ ಅಡ್ಡಿಯಾಗುವುದಿಲ್ಲವೆಂಬ ವ್ಯತಿ-ರಿಕ್ತವಾದಂತಹ ಅಂಶವು ಕಂಡುಬಂದಿದೆ. ಇದರಿಂದ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಆಸಕ್ತಿ ಮತ್ತು ನಿರಾಸಕ್ತಿಗಳಿಗೆ ಆರ್ಥಿಕ ಅಂಶವು ಕಾರಣವಾಗಿರದೆ ಸಾಮಾಜಿಕ ಅಂಶ ಮತ್ತು ಸಾಂಸ್ಕೃತಿಕ ಅಂಶಗಳು ಹಾಗೂ ಪ್ರಾದೇಶಿಕ ಅಂಶಗಳು ಕಾರಣವಾಗುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ರೇಖಾಚಿತ್ರ ೫.೨. : ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವ ಪ್ರಮಾಣ (ಶೇಕಡವಾರು)



ಮಕ್ಕಳಿಗೆ ಶಿಕ್ಷಣ ಕೊಡಿಸುವುದರಲ್ಲಿ ಗಂಡುಮಕ್ಕಳಿಗೆ ಆದ್ಯತೆ ಕೊಡುವಿರಾ ಅಥವಾ ಹೆಣ್ಣುಮಕ್ಕಳಿಗೆ ಆದ್ಯತೆ ಕೊಡುವಿರಾ? ಎಂಬ ಪ್ರಶ್ನೆಗೆ ಶೇಕಡ ೨೯ರಷ್ಟು ದಲಿತ ಪೋಷಕರು 'ಗಂಡುಮಕ್ಕಳೆಂದು' ಉತ್ತರಿಸಿದ್ದಾರೆ. ಇದೇ ಭಾವನೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೪೪.೪೪ರಷ್ಟು ದಲಿತರ ಪೋಷಕರಲ್ಲಿದ್ದರೆ, ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೧೩.೧೩ರಷ್ಟು ದಲಿತ ಪೋಷಕರಲ್ಲಿದೆ. ಮಕ್ಕಳ ಶಿಕ್ಷಣದ ಆದ್ಯತೆಯ ವಿಷಯದಲ್ಲಿ ಶೇಕಡ ೧೨ರಷ್ಟು ದಲಿತ ಪೋಷಕರು 'ಹೆಣ್ಣುಮಕ್ಕಳೆಂದು' ಉತ್ತರ ನೀಡಿದ್ದಾರೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೨೦.೨ರಷ್ಟು ದಲಿತ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆಯನ್ನು ವ್ಯಕ್ತಪಡಿಸಿದರೆ, ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೪.೦೪ರಷ್ಟು ದಲಿತ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆಯನ್ನು ಕೊಟ್ಟಿದ್ದಾರೆ. ತಮ್ಮ ಮಕ್ಕಳ ಶಿಕ್ಷಣದ ಆದ್ಯತೆಯ ವಿಷಯವಾಗಿ ಶೇಕಡ ೫೯ರಷ್ಟು ದಲಿತ ಪೋಷಕರು 'ಇಬ್ಬರಿಗೂ' ಎಂಬ ಉತ್ತರ ನೀಡುವುದರ ಮೂಲಕ ಸಮಾನ ಆದ್ಯತೆಯನ್ನು ಸೂಚಿಸುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಶೇಕಡ ೩೫.೩೫ರಷ್ಟು ದಲಿತ ಪೋಷಕರು ಮತ್ತು ಆಲೂರು ಪಂಚಾಯಿತಿಯ ಶೇಕಡ ೮೨.೮೨ರಷ್ಟು ದಲಿತ ಪೋಷಕರು ಮಕ್ಕಳ ಶಿಕ್ಷಣಕ್ಕೆ ಸಮಾನ ಆದ್ಯತೆ(ಇಬ್ಬರಿಗೂ)ಯನ್ನು ತೋರಿಸಿದ್ದಾರೆ.

ಈ ವಿಷಯವನ್ನು ಇನ್ನಷ್ಟು ಸೂಕ್ಷ್ಮವಾಗಿ ನೋಡಿದರೆ ಗಂಡುಮಕ್ಕಳಿಗೆ ಆದ್ಯತೆ ಕೊಡುವ ಮನೋಪ್ರವೃತ್ತಿ ಅಧ್ಯಯನಕ್ಕೊಳಪಡಿಸಿದ ನಂ.೧೦ ಮುದ್ದಾಪುರದ ದಲಿತ ಪೋಷಕರಲ್ಲಿ ಹೆಚ್ಚಾಗಿ (ಶೇಕಡ ೪೪.೪೪)ದ್ದು, ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರಿಗೂ ಆದ್ಯತೆ (ಸಮಾನವಾಗಿ) ಕೊಡುವ ಮನೋಪ್ರವೃತ್ತಿಯು ಆಲೂರು ಗ್ರಾಮಪಂಚಾಯಿತಿಯಲ್ಲಿ ಹೆಚ್ಚಾಗಿ(ಶೇಕಡ ೮೨.೮೨)ರುತ್ತದೆ. ಇದನ್ನು ನಾವು ವಿಮರ್ಶಾತ್ಮಕವಾಗಿ ನೋಡಿದಾಗ ಶೈಕ್ಷಣಿಕವಾಗಿ ಹಿಂದುಳಿದ ನೀರಾವರಿ ಪ್ರದೇಶವಾದರೂ ನಂ.೧೦ ಮುದ್ದಾಪುರ ಗ್ರಾಮಪಂಚಾಯಿಯಲ್ಲಿ ಸಾಂಪ್ರದಾಯಿಕವಾಗಿ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ಇದೆ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನೀರಾವರಿಯಲ್ಲದ ಪ್ರದೇಶವಾದರೂ ಆಲೂರು ಗ್ರಾಮಪಂಚಾಯಿತಿಯಲ್ಲಿ ಗಂಡು-ಹೆಣ್ಣು ಇಬ್ಬರಿಗೂ ಆದ್ಯತೆ ನೀಡುವ ಅಂಶವಿರುವುದು ಸ್ಪಷ್ಟವಾಗುತ್ತದೆ.

ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣ ಕುರಿತಂತೆ ಹೊಂದಿರುವ ಮನೋಪ್ರವೃತ್ತಿಯಲ್ಲಿ ಕಂಡುಬರುವ ಲಿಂಗ ತಾರತಮ್ಯದ ಅಂತರವಿದೆ. ಬಹುತೇಕ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ದಲಿತ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಸರ್ಕಾರಿ ನೌಕರಿ ಸಿಗದಿದ್ದರೂ, ದಿನನಿತ್ಯದ ವ್ಯವಹಾರ ಮತ್ತು ಕುಟುಂಬದ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂಬುದಾಗಿ ಪ್ರತಿಕ್ರಿಯಿಸುತ್ತಾರೆ. ಒಟ್ಟಿನಲ್ಲಿ ಪ್ರಸ್ತುತ ದಿನ-ಮಾನಗಳಲ್ಲಿ ಶಿಕ್ಷಣವಿಲ್ಲದೆ ಏನನ್ನು ಮಾಡಲಾಗುವುದಿಲ್ಲ ಎಂಬ ಭಾವನೆ

ದಲಿತ ಪೋಷಕರಲ್ಲಿ ವ್ಯಕ್ತವಾಗುತ್ತಿರುವುದು ಪ್ರಾಥಮಿಕ ಶಿಕ್ಷಣದ ಅಥವಾ ಶಿಕ್ಷಣದ ಅವಶ್ಯಕತೆಯನ್ನು ತೋರಿಸುತ್ತದೆ.

ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ಸಾಮಾನ್ಯವಾಗಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆಂಬುದು ಈಗಾಗಲೆ ನಮಗೆ ತಿಳಿದಿದೆ. ಅದರಲ್ಲಿಯೂ ಶೈಕ್ಷಣಿಕವಾಗಿ ನಿಧಾನವಾದ ಪ್ರಗತಿಯನ್ನು ಸಾಧಿಸುತ್ತಿರುವ ಪ್ರದೇಶ ಮತ್ತು ರಾಜ್ಯಗಳಲ್ಲಿ ಪೋಷಕರ ಶಿಕ್ಷಣದ ಆಸಕ್ತಿ ಹೆಚ್ಚಾಗಿಯೇ ಇದೆ. ಆಧುನಿಕ ಸಮಾಜದಲ್ಲಿ ಶಿಕ್ಷಣವನ್ನು ಯಾರೊಬ್ಬರೂ ಕಡೆಗಣಿಸುವುದಿಲ್ಲ ಎಂಬುದನ್ನು ಅನೇಕ ಪೋಷಕರು ಸ್ಪಷ್ಟವಾಗಿ ಹೇಳುತ್ತಾರೆ (ಹೆಚ್.ಡಿ. ಪ್ರಶಾಂತ್ ೨೦೦೫). ಪ್ರಸ್ತುತ ಅಧ್ಯಯನದಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಒಬ್ಬ ಅನಕ್ಷರಸ್ಥ ದಲಿತ ಪೋಷಕರ ಪ್ರಕಾರ "ನಾವು ದಡ್ಡರಾಗಿದ್ದೇವೆ, ನಮ್ಮ ಮಕ್ಕಳು ದಡ್ಡರಾಗದೆ ಬುದ್ಧಿವಂತರಾಗಬೇಕು" ಎಂಬ ದಿಟ್ಟತನದ ಮಾತುಗಳು ಕೇಳಿ ಬರುತ್ತವೆ. "ಅನಕ್ಷರಸ್ಥರಾಗಿದ್ದರೆ ದೈನಂದಿನ ಬದುಕಿನಲ್ಲಿ ತೊಂದರೆ ಅನುಭವಿಸಬೇಕಾಗುವುದರೊಂದಿಗೆ ಅನೇಕ ಮೋಸ, ವಂಚನೆಗಳಿಗೆ ಗುರಿಯಾಗಬೇಕಾಗುತ್ತದೆ, ಅನಕ್ಷರಸ್ಥರ ಜೀವನ ಪ್ರಾಣಿಗಳ ಜೀವನದಂತಾಗುತ್ತದೆ. ಹೊರಗಿನ ಪ್ರಪಂಚದೊಡನೆ ಸಂಪರ್ಕ ಸಾಧಿಸಿ ವ್ಯವಹಾರ ಮಾಡಲು ಕನಿಷ್ಟ ಪಕ್ಷ ಪ್ರಾಥಮಿಕ ಶಿಕ್ಷಣವಾದರೂ ಬೇಕು" ಎಂಬಂತಹ ಅಭಿಪ್ರಾಯಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬಹುತೇಕ ದಲಿತ ಪೋಷಕರು ತಿಳಿಸಿದ್ದಾರೆ.

ರಾಷ್ಟ್ರೀಯ ಮಾದರಿ ಸಮೀಕ್ಷೆ (ಎನ್.ಎಸ್.ಎಸ್.)ಯ ವರದಿಗಳು, ಶೈಕ್ಷಣಿಕ ವರದಿಗಳು ಮತ್ತು ಪ್ರತಿ ವರ್ಷವೂ ನಡೆಸಲ್ಪಡುವ ಮಕ್ಕಳ ಗಣತಿ ಪ್ರಕಾರ ಮಕ್ಕಳನ್ನು ಶಾಲೆಗೆ ಕಳಿಸುವ ಆಸಕ್ತಿ ಪೋಷಕರಲ್ಲಿ ಹೆಚ್ಚಾಗಿರುವುದರಿಂದ ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆ ಅತ್ಯಂತ ವೇಗವಾಗಿ ಕಡಿಮೆಯಾಗುತ್ತಿದೆ. ೧೯೮೦-೯೦ರ ದಶಕದಲ್ಲಿ ಬಿಮಾರು ರಾಜ್ಯ (ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ರಾಜಸ್ಥಾನ)ಗಳಲ್ಲಿ ೬-೧೪ ವಯೋಮಾನದ ಸುಮಾರು ಅರ್ಧದಷ್ಟು ಮಕ್ಕಳು ಶಾಲೆಗೆ ಹಾಜರಾಗುತ್ತಿರಲಿಲ್ಲ (ಆರ್. ಗೋವಿಂದ, ೧೯೯೭). ೧೯೯೬ರ ಸೆಪ್ಟಂಬರ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಬಿಮಾರು ರಾಜ್ಯಗಳ ೬-೧೪ ವಯೋಮಾನದ ಮಕ್ಕಳು ಶಾಲೆಗೆ ದಾಖಲಾಗದಿರುವ ಪ್ರಮಾಣ ಶೇಕಡ ೧೯ಕ್ಕಿಂತಲೂ ಕಡಿಮೆಯಾಗಿದೆ (ಪ್ರೊಬ್, ೧೯೯೯). ೧೯೫೯-೬೦ರಲ್ಲಿ ಕರ್ನಾಟಕದಲ್ಲಿ ೧ರಿಂದ ೪ನೇ ತರಗತಿಗೆ ೨.೩ ಮಿಲಿಯನ್ ಮಕ್ಕಳು ಶಾಲೆಗೆ ದಾಖಲಾಗಿದ್ದರೆ. ೨೦೦೧-೦೨ರಲ್ಲಿ ೮.೫ ಮಿಲಿಯನ್‌ಗೆ ಏರಿಕೆಯಾಗಿದೆ. ೨೦೦೪ರ ಫೆಬ್ರವರಿ ತಿಂಗಳಲ್ಲಿ ನಡೆಸಿದ ಮಕ್ಕಳ ಗಣತಿ ಪ್ರಕಾರ ೬-೧೪ ವಯೋಮಾನದ ಶಾಲೆಗೆ ದಾಖಲಾಗದಿರುವ ಮಕ್ಕಳ ಪ್ರಮಾಣ ಶೇಕಡ ೩.೧೨ರಷ್ಟಿದೆ. ಈ ಸಂಗತಿಯು ಶಾಲೆಗೆ ದಾಖಲಾಗದೆ ಇರುವ ೬-೧೪ ವಯೋಮಾನದ ಮಕ್ಕಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುವುದನ್ನು ಸೂಚಿಸುತ್ತದೆ. ಇದರ ಅರ್ಥವನ್ನು ಇಂದು ಬಹುತೇಕ ಪೋಷಕರು ತಮ್ಮ ಮಕ್ಕಳಿಗೆ ಶಾಲೆಗೆ ದಾಖಲಾಗುವ

ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದಾರೆ ಎಂಬುದಾಗಿಯೂ ಗ್ರಹಿಸಬಹುದು (ಹೆಚ್.ಡಿ. ಪ್ರಶಾಂತ್ ೨೦೦೫).

ಹೀಗೆ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿರುವ ಅಂಶಗಳು ನಮ್ಮ ಗಮನಕ್ಕೆ ಬಂದಿರುತ್ತವೆ. ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರಲ್ಲಿರುವ ಆಸಕ್ತಿಯು ವಿವಿಧ ಸಾಮಾಜಿಕ ವರ್ಗಗಳ ನಡುವೆ ಹೆಚ್ಚಿನ ವ್ಯತ್ಯಾಸದಿಂದ ಕೂಡಿರುವುದಿಲ್ಲ. ಆದರೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಿಕ್ಷಣದ ವಿಷಯದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸವು ಸಾಮಾಜಿಕ ವಿವಿಧ ವರ್ಗಗಳಲ್ಲಿ ಕಂಡುಬರುತ್ತದೆ. ಇದೇ ರೀತಿಯಾದ ಮನೋಪ್ರವೃತ್ತಿ ದಲಿತ ಪೋಷಕರಲ್ಲಿಯೂ ಇರುವುದು ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನುಭವಕ್ಕೆ ಬಂದಿರುತ್ತದೆ. ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆಸಕ್ತಿಗಳನ್ನು ತೋರಿಸುವ ದಲಿತ ಪೋಷಕರು ಅಷ್ಟೇ ಪ್ರಮಾಣದ ಆಸಕ್ತಿಗಳನ್ನು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ತೋರಿಸುವುದಿಲ್ಲ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಗಂಡುಮಕ್ಕಳಿಗೆ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಶಿಕ್ಷಣ ನೀಡಬಯಸುವ ಪೋಷಕರು ಹೆಣ್ಣುಮಕ್ಕಳ ಶಿಕ್ಷಣವನ್ನು ೧೦ನೇ ತರಗತಿಯವರೆಗೆ ಮಾತ್ರ ಸೀಮಿತಗೊಳಿಸಲು ಇಚ್ಛಿಸುತ್ತಾರೆ. ಒಟ್ಟಿನಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರು ತಾರತಮ್ಯದ ಮನೋಭಾವ ಹೊಂದಿದ್ದಾರೆ.

೫.೧. ಗಂಡು ಮಕ್ಕಳಿಗೆ ಶಿಕ್ಷಣದ ಅಗತ್ಯತೆ ಯಾಕೆ ?

ಗಂಡು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡಲು ಕಾರಣವೇನು? ಎಂಬ ಪ್ರಶ್ನೆಗೆ ದಲಿತ ಪೋಷಕರಿಂದ ವಿವಿಧ ಅಂಶಗಳು ಹೊರಬಿದ್ದಿವೆ. ಅದರಲ್ಲಿ ಪ್ರಮುಖವಾದದು ವೃದ್ಧಾಪ್ಯದಲ್ಲಿ ಪೋಷಕರನ್ನು ಉತ್ತಮವಾಗಿ ನೋಡಿಕೊಳ್ಳುತ್ತಾರೆ ಎಂಬುದಾಗಿದೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಶೇಕಡ ೫೪ರಷ್ಟು ಪೋಷಕರು ವೃದ್ಧಾಪ್ಯದಲ್ಲಿ ತಮ್ಮನ್ನು ಗಂಡು ಮಕ್ಕಳು ನೋಡಿಕೊಳ್ಳುತ್ತಾರೆಂಬ ಕಾರಣಕ್ಕಾಗಿ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವುದಾಗಿ ಹೇಳುತ್ತಾರೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿ ಅಧ್ಯಯನಕ್ಕೊಳಪಡಿಸಿದ ಶೇಕಡ ೫೨.೬ರಷ್ಟು ದಲಿತ ಪೋಷಕರು ಮತ್ತು ಆಲೂರು ಗ್ರಾಮಪಂಚಾಯಿತಿಯಲ್ಲಿನ ಶೇಕಡಾ ೫೭.೮ರಷ್ಟು ದಲಿತ ಪೋಷಕರು ವೃದ್ಧಾಪ್ಯದಲ್ಲಿ ತಮ್ಮ ಮಕ್ಕಳು ಉತ್ತಮವಾಗಿ ನೋಡಿಕೊಳ್ಳುತ್ತಾರೆಂಬ ಕಾರಣಕ್ಕಾಗಿ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವುದನ್ನು ಒಪ್ಪುತ್ತಾರೆ. ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೧೮ರಷ್ಟು ದಲಿತ ಪೋಷಕರು ತಮ್ಮ ಗಂಡುಮಕ್ಕಳು ಮನೆತನ ಕಾಪಾಡುತ್ತಾರೆಂಬ ಕಾರಣದಿಂದಲೇ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ಕೊಡುವ ಅಂಶವನ್ನು ಒತ್ತಿ ಹೇಳುತ್ತಾರೆ.

ನಿರ್ದಿಷ್ಟವಾಗಿ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿನ ಅಧ್ಯಯನಕ್ಕೊಳಪಡಿಸಿದ ಶೇಕಡ ೧೭.೪೬ರಷ್ಟು ದಲಿತ ಪೋಷಕರು ಮತ್ತು ಆಲೂರು ಗ್ರಾಮಪಂಚಾಯಿತಿ ಪ್ರದೇಶ

ವ್ಯಾಪ್ತಿಯಲ್ಲಿನ ಶೇಕಡ ೨೧.೦೫ರಷ್ಟು ದಲಿತ ಪೋಷಕರು ತಮ್ಮ ಗಂಡು ಮಕ್ಕಳು ಮನೆತನ ಕಾಪಾಡುವುದಕ್ಕಾಗಿ, ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವುದಾಗಿ ಹೇಳುತ್ತಾರೆ. ಅಧ್ಯಯನ ಕ್ಕೊಳಪಡಿಸಿದ ಶೇಕಡ ೧೧ರಷ್ಟು ದಲಿತ ಪೋಷಕರು ಸರ್ಕಾರಿ ನೌಕರಿಯನ್ನು ನಿರೀಕ್ಷಿಸಿ ತಮ್ಮ ಮಕ್ಕಳಿಗೆ ಆದ್ಯತಾ ಕ್ರಮದಲ್ಲಿ ಶಿಕ್ಷಣ ನೀಡುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿಖರವಾಗಿ ನಂ. ೧೦ ಮುದ್ದಾಪುರದಲ್ಲಿನ ಶೇಕಡ ೧೧.೧೧ರಷ್ಟು ಮತ್ತು ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೧೦.೫೨ರಷ್ಟು ಅಧ್ಯಯನಕ್ಕೊಳಪಡಿಸಿದ ದಲಿತ ಪೋಷಕರು ತಮ್ಮ ಗಂಡುಮಕ್ಕಳಿಗೆ ಸರ್ಕಾರಿ ನೌಕರಿ ನಿರೀಕ್ಷಿಸಿ ಅವರ ಶಿಕ್ಷಣಕ್ಕೆ ಆದ್ಯತೆಯನ್ನು ತೋರಿಸುವುದಾಗಿ ತಿಳಿಸುತ್ತಾರೆ. ಉತ್ತಮ ಜೀವನ ನಿರ್ವಹಣೆಯ ಕಾರಣದಿಂದ ಗಂಡುಮಕ್ಕಳಿಗೆ ಆದ್ಯತೆಯಾಗಿ ಶಿಕ್ಷಣ ಕೊಡಿಸಬೇಕೆಂಬುದನ್ನು ನಮ್ಮ ಅಧ್ಯಯನಕ್ಕೊಳಪಡಿಸಿದ ಶೇಕಡ ೭ರಷ್ಟು ದಲಿತ ಪೋಷಕರು ನಂಬಿದ್ದಾರೆ. ಈ ಕಾರಣಕ್ಕಾಗಿ ಅಧ್ಯಯನಕ್ಕೊಳಪಡಿಸಿದ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಶೇಕಡ ೬.೩೪ರಷ್ಟು ದಲಿತ ಪೋಷಕರು ಮತ್ತು ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೧೦.೫೨ರಷ್ಟು ದಲಿತ ಪೋಷಕರು ತಮ್ಮ ಗಂಡುಮಕ್ಕಳಿಗೆ ಆದ್ಯತೆಯ ಶಿಕ್ಷಣ ಒದಗಿಸಬೇಕೆನ್ನುತ್ತಾರೆ. ಅಧ್ಯಯನಕ್ಕೆ ಒಳಪಡಿಸಿದ ಶೇಕಡ ೬ರಷ್ಟು ದಲಿತ ಪೋಷಕರು ತಮ್ಮ ಜೀವನದ ಅಂತಿಮ ಘಟ್ಟವಾದ 'ಅಂತ್ಯ ಸಂಸ್ಕಾರ' ಮಾಡವುದಕ್ಕಾಗಿ ತಮ್ಮ ಗಂಡುಮಕ್ಕಳಿಗೆ ಆದ್ಯತೆಯಾಗಿ ಶಿಕ್ಷಣವನ್ನು ಕೊಡಿಸಲೇಬೇಕಾಗುತ್ತದೆ ಎಂಬ ಅನಿವಾರ್ಯತೆಯನ್ನು ತೋರಿಸುತ್ತಾರೆ.

ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶ ಮತ್ತು ಆಲೂರು ಗ್ರಾಮಪಂಚಾಯಿತಿ ಪ್ರದೇಶಗಳಲ್ಲಿ ಅಧ್ಯಯನಕ್ಕೊಳಪಡಿಸಿದ ಕ್ರಮವಾಗಿ ೭.೯೩% ಮತ್ತು ೧.೭೧% ರಷ್ಟು ದಲಿತ ಪೋಷಕರು ಅಂತ್ಯ ಸಂಸ್ಕಾರದ ಕಾರಣಕ್ಕಾಗಿ ತಮ್ಮ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆಯನ್ನು ಕೊಡಬೇಕಾದ ಅನಿವಾರ್ಯತೆಯನ್ನು ತೋರಿಸುತ್ತಾರೆ. ಇನ್ನುಳಿದಂತೆ ಅಧ್ಯಯನಕ್ಕೊಳಪಡಿಸಿದ ಶೇಕಡ ೪ರಷ್ಟು ದಲಿತ ಪೋಷಕರು ಸ್ವಂತ ಉದ್ಯೋಗ ನಿರ್ವಹಣೆಗಾಗಿ ತಮ್ಮ ಗಂಡು ಮಕ್ಕಳಿಗೆ ಆದ್ಯತಾ ಕ್ರಮದಲ್ಲಿ ಶಿಕ್ಷಣ ಕೊಡಿಸಬೇಕು ಎಂಬ ಅನಿಸಿಕೆಯನ್ನು ಹೇಳುತ್ತಾರೆ. ಈ ಸಂಗತಿಯು ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಅಧ್ಯಯನಕ್ಕೊಳಪಡಿಸಿದ ದಲಿತ ಪೋಷಕರಲ್ಲಿ ಮಾತ್ರ ವ್ಯಕ್ತವಾಗಿದ್ದು, ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕಂಡುಬಂದಿರುವುದಿಲ್ಲ. ಹೀಗೆ ಅಧ್ಯಯನ ಕ್ಷೇತ್ರದ ದಲಿತ ಪೋಷಕರು ತಮ್ಮ ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಇರುವಂತಹ ವಿವಿಧ ಕಾರಣಗಳನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಾರೆ. ಅಧ್ಯಯನ ಕ್ಷೇತ್ರದ ನಂ. ೧೦ ಮುದ್ದಾಪುರ ಮತ್ತು ಆಲೂರು ಗ್ರಾಮಪಂಚಾಯಿತಿಗಳೆರಡು ಪ್ರದೇಶದಲ್ಲಿನ ಅಧ್ಯಯನಕ್ಕೊಳಪಡಿಸಿದ ದಲಿತ ಪೋಷಕರಲ್ಲಿ ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ರೀತಿಯ ಅಭಿಪ್ರಾಯಗಳು ವ್ಯಕ್ತವಾಗಿವೆ. ಆದರೂ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಯಲ್ಲಿನ ದಲಿತ ಪೋಷಕರಲ್ಲಿ ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿ ಪ್ರದೇಶದ ದಲಿತ ಪೋಷಕರಿಗಿಂತ ಅಧಿಕ

ಪ್ರಮಾಣದಲ್ಲಿ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದನ್ನು ವೈಜ್ಞಾನಿಕತೆಗೆ ಹೋಲಿಸಿ ನೋಡಿದಾಗ ತಿಳಿದು ಬರುತ್ತದೆ.

೫.೨. ಹೆಣ್ಣು ಮಕ್ಕಳಿಗೆ ಶಿಕ್ಷಣ ಯಾಕೆ ?

ಅಧ್ಯಯನದ ಕ್ಷೇತ್ರದ ದಲಿತ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಅಧ್ಯಯನಕ್ಕೊಳಪಡಿಸಿದ ಶೇಕಡ ೭೦ರಷ್ಟು ದಲಿತ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದು ಒಂದು ಅವಶ್ಯಕತೆಯಾಗಿದೆ ಎಂಬ ಅಭಿಪ್ರಾಯ ಹೊಂದಿದ್ದಾರೆ. ಈ ವಿಷಯವಾಗಿ ಎರಡು ಗ್ರಾಮಪಂಚಾಯಿತಿಗಳಲ್ಲಿ ಭಿನ್ನತೆ ಇದೆ. ಅಧ್ಯಯನಕ್ಕೊಳಪಡಿಸಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೨೦ರಷ್ಟು ದಲಿತ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಅವಶ್ಯಕ ಎಂದರೆ, ಆಲೂರು ಗ್ರಾಮಪಂಚಾಯಿತಿಯ ಶೇಕಡ ೪೧.೪೧ರಷ್ಟು ದಲಿತ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಅವಶ್ಯಕ ಎನ್ನುತ್ತಾರೆ. ಗಂಡನ ಮನೆಯಲ್ಲಿ ಚೆನ್ನಾಗಿದ್ದು ಉತ್ತಮ ಜೀವನ ನಡೆಸಲು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಅಭಿಪ್ರಾಯವನ್ನು ಅಧ್ಯಯನಕ್ಕೊಳಪಡಿಸಿದ ಶೇಕಡ ೪೮ರಷ್ಟು ದಲಿತ ಪೋಷಕರು ವ್ಯಕ್ತಪಡಿಸುತ್ತಾರೆ.

ವಿದ್ಯಾವಂತರಾಗಲು ಮತ್ತು ತಿಳುವಳಿಕೆ ಪಡೆದುಕೊಳ್ಳುವುದಕ್ಕಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಮನೋಭಾವನೆ ಅಧ್ಯಯನಕ್ಕೊಳಪಡಿಸಿದ ಶೇಕಡ ೭ರಷ್ಟು ದಲಿತ ಪೋಷಕರಲ್ಲಿದೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೮ರಷ್ಟು ದಲಿತ ಪೋಷಕರು ಮತ್ತು ಆಲೂರು ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೫.೦೫ರಷ್ಟು ದಲಿತ ಪೋಷಕರು ಇದೇ ಅಭಿಪ್ರಾಯವನ್ನು ಹೇಳುತ್ತಾರೆ. ಸಮಾನತೆಯ ಉದ್ದೇಶಕ್ಕಾಗಿ ಗಂಡು ಮಕ್ಕಳಂತೆ ಹೆಣ್ಣುಮಕ್ಕಳಿಗೂ ಶಿಕ್ಷಣ ಕೊಡಿಸಬೇಕೆಂಬ ಮನೋವೃತ್ತಿಯು ಅಧ್ಯಯನಕ್ಕೊಳಪಡಿಸಿದ ಶೇಕಡ ೭ರಷ್ಟು ದಲಿತರದ್ದಾಗಿದೆ.

ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಶೇಕಡ ೧ರಷ್ಟು ದಲಿತ ಪೋಷಕರು ಮತ್ತು ಆಲೂರು ಗ್ರಾಮಪಂಚಾಯಿತಿಯ ಶೇಕಡ ೧೦.೧ರಷ್ಟು ದಲಿತ ಪೋಷಕರಲ್ಲಿ ಇದೇ ಭಾವನೆ ಇದೆ. ಅಧ್ಯಯನಕ್ಕೊಳಪಡಿಸಿದ ಶೇಕಡ ೨ರಷ್ಟು ದಲಿತ ಪೋಷಕರು ಹೆಣ್ಣುಮಕ್ಕಳ ವಿವಾಹ ಸಂದರ್ಭದಲ್ಲಿ ವರದಕ್ಷಿಣೆಯನ್ನು ಕೊಡದಿರುವುದಕ್ಕಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಭಾವನೆ ಹೊಂದಿದ್ದಾರೆ. ಈ ಭಾವನೆ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೧ರಷ್ಟು ದಲಿತ ಪೋಷಕರಲ್ಲಿ ಮತ್ತು ಆಲೂರು ಗ್ರಾಮಪಂಚಾಯಿತಿಯ ಶೇಕಡ ೩.೦೩ರಷ್ಟು ದಲಿತ ಪೋಷಕರಲ್ಲಿದೆ. ಅಧ್ಯಯನಕ್ಕೊಳಪಡಿಸಿದ ಶೇಕಡ ೩ರಷ್ಟು ದಲಿತ ಪೋಷಕರು ಸರ್ಕಾರಿ ನೌಕರಿಗಾಗಿ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದು ಸರಿ ಎಂಬ ಸಮರ್ಥನೆಯನ್ನು ವ್ಯಕ್ತಪಡಿಸುತ್ತಾರೆ. ಸ್ವಂತ ಉದ್ಯೋಗ ಮಾಡುವ ಉದ್ದೇಶದಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಬೇಕೆಂಬಂತಹ ಭಾವನೆ

ಅಧ್ಯಯನಕ್ಕೊಳಪಡಿಸಿದ ಶೇಕಡ ೫ರಷ್ಟು ದಲಿತ ಪೋಷಕರದ್ದಾಗಿದೆ. ಆದರೆ ಹೆಣ್ಣುಮಕ್ಕಳು ಬೇರೆಯವರ ಮನೆಗೆ ಹೋಗುವುದರಿಂದ ಮತ್ತು ಮನೆಯಲ್ಲಿ ಕೆಲಸ ಮಾಡುವುದರಿಂದ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದು ಬೇಡವೆಂಬ ಮನೋಭಾವನೆ ಅಧ್ಯಯನಕ್ಕೊಳಪಡಿಸಿದ ಶೇಕಡ ೩ರಷ್ಟು ದಲಿತ ಪೋಷಕರಲ್ಲಿದೆ.

ಹೀಗೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ದಲಿತ ಪೋಷಕರು ಗಂಡು ಮಕ್ಕಳ ಶಿಕ್ಷಣಕ್ಕಿಂತ ಭಿನ್ನವಾದ ಮನೋಭಾವನೆಗಳನ್ನು ಹೊಂದಿರುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಧಿಕ ಸಂಖ್ಯೆಯ ದಲಿತ ಪೋಷಕರು ತಮ್ಮ ಗಂಡು ಮಕ್ಕಳು ಎಲ್ಲಿಯವರೆಗೆ ಓದುತ್ತಾರೋ ಅಲ್ಲಿಯವರೆಗೆ ಓದಿಸಲು ಸಿದ್ದರಿರುತ್ತಾರೆ. ಆದರೆ ತಮ್ಮ ಹೆಣ್ಣುಮಕ್ಕಳನ್ನು ೧೦ನೇ ತರಗತಿಯವರೆಗೆ ಮಾತ್ರ ಓದಿಸಲು ಬಯಸುತ್ತಾರೆ. ಮುಂದುವರಿದು ಹೆಣ್ಣುಮಕ್ಕಳು ಓದುತ್ತೇನೆಂದರೂ ಓದಿಸುವಂತಹ ಪೋಷಕರು ಕಡಿಮೆ ಪ್ರಮಾಣದಲ್ಲಿದ್ದಾರೆ. ಇನ್ನು ಕೆಲವು ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ಶಿಕ್ಷಣವನ್ನು ಕೊಡಿಸುವುದನ್ನು ಒಪ್ಪಿಕೊಳ್ಳದ ಸ್ಥಿತಿಯಲ್ಲಿದ್ದಾರೆ. ಇದಕ್ಕೆ ಸೂಕ್ತವಾದ ಕಾರಣವೂ ಇದೆ. ಅದೇನೆಂದರೆ, ತಮ್ಮ ಗ್ರಾಮದಿಂದ ಸ್ವಲ್ಪ ದೂರದಲ್ಲಿದಲ್ಲಿರುವ ಮತ್ತೊಂದು ಗ್ರಾಮದ ಶಾಲೆಗೆ ತಮ್ಮ ಹೆಣ್ಣುಮಕ್ಕಳನ್ನು ಕಳುಹಿಸುವುದು ಪೋಷಕರಿಗೆ ಇಷ್ಟವಾಗು ವುದಿಲ್ಲ. ಇದರೊಂದಿಗೆ ತಮ್ಮ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸೆ, ಆಕಾಂಕ್ಷೆ ಮತ್ತು ಆಶೋತ್ತರಗಳು ಇಲ್ಲದಿರುವುದೂ ಕೂಡ ಕಾರಣವಾಗುತ್ತದೆ. ಇದೆಲ್ಲಕ್ಕಿಂತ ಮಿಗಿಲಾಗಿ ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳಿಸುವುದರ ಬದಲಾಗಿ ಅವರಿಗೆ ವಿವಾಹ ಮಾಡುವುದ ರಿಂದಾಗಿ ಹೆಣ್ಣುಮಕ್ಕಳಿಗೆ ಉತ್ತಮವಾದ ಶಿಕ್ಷಣವು ದೊರೆಯುವುದಿಲ್ಲ. ಈ ವಿಚಾರದಲ್ಲಿ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕಿಂತ ಗಂಡುಮಕ್ಕಳ ಶಿಕ್ಷಣಕ್ಕೆ ಒತ್ತುಕೊಡುತ್ತಾರೆಂಬುದು ವಾಸ್ತವ.

೫.೩. ವಿವಿಧ ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧ

ವಿದ್ಯಾವಂತ ಹೆಣ್ಣುಮಕ್ಕಳಿಗೆ ಸಾಮಾನ್ಯವಾಗಿ ಉತ್ತಮ ವಿದ್ಯಾವಂತ ಗಂಡನ ನಿರೀಕ್ಷೆ ಇರುತ್ತದೆ. ಜೊತೆಗೆ ಕೆಲವು ಸಾಮಾಜಿಕ ನಿಯಮಗಳು ಕೂಡ ವಿದ್ಯಾವಂತ ಹೆಣ್ಣುಮಕ್ಕಳಿಗೆ ಸುಶಿಕ್ಷಿತ ಗಂಡು ಹುಡುಗರನ್ನು ಹುಡುಕುವಂತಹ ಒತ್ತಾಯಗಳನ್ನು ಮಾಡುತ್ತವೆ. ಇಂತಹ ಸನ್ನಿವೇಶದಲ್ಲಿ ವೈವಾಹಿಕ ಖರ್ಚು ವೆಚ್ಚಗಳು ಕೂಡ ಅಧಿಕವಾಗಿರುತ್ತವೆ. ಇದನ್ನು ನಿಭಾಯಿಸುವುದು ಪೋಷಕರ ಹಣಕಾಸಿನ ಸಂಪನ್ಮೂಲ ಮತ್ತು ಹೆಣ್ಣುಮಕ್ಕಳ ಯೋಗಕ್ಷೇಮದ ಚಿಂತನೆಗಳನ್ನು ಅವಲಂಬಿಸಿರುತ್ತದೆ. ಇದರೊಂದಿಗೆ ಹೆಣ್ಣುಮಕ್ಕಳ ಶಿಕ್ಷಣದ ಮಟ್ಟವು ಕೂಡ ಹೆಣ್ಣು ಮಕ್ಕಳ ವೈವಾಹಿಕ ಖರ್ಚು ವೆಚ್ಚಗಳನ್ನು ನಿರ್ಧರಿಸುತ್ತದೆ. ಹೆಣ್ಣುಮಕ್ಕಳ ಶಿಕ್ಷಣ ವೆಚ್ಚವು ಅಧಿಕವಾದಂತೆ ಅದಕ್ಕೆ ತಕ್ಕಂತೆ ಅವಳ ವೈವಾಹಿಕ ವೆಚ್ಚವನ್ನು ಹೆಚ್ಚಿಗೆ ಮಾಡಬೇಕಾಗುತ್ತದೆ ಎಂಬಂತಹ ನಿರೀಕ್ಷೆಗಳನ್ನು ಪೋಷಕರು ಹೊಂದಿರುತ್ತಾರೆ. ಇಲ್ಲಿ ನಿರೀಕ್ಷೆಯ ನಿಯಮವು ಕೆಲಸ ಮಾಡುತ್ತದೆ. ಈ ಸಂಗತಿಯು ಆಯಾ

ಜಾತಿ ಅಥವಾ ಜನ ಸಮುದಾಯದ ಸಾಮಾನ್ಯ ಶಿಕ್ಷಣದ ಮಟ್ಟವನ್ನು ಅವಲಂಬಿಸಿರುತ್ತದೆ. ಅದರಲ್ಲಿಯೂ ಆಯಾ ಜಾತಿ-ಜನಸಮುದಾಯದ ಪುರುಷರ ಶಿಕ್ಷಣದ ಮಟ್ಟ ಪ್ರಮುಖವಾಗಿರುತ್ತದೆ.

ಒಂದು ಜನಸಮುದಾಯದಲ್ಲಿ ಶಿಕ್ಷಣವಂತ ಪುರುಷರ ಪ್ರಮಾಣ ಹೆಚ್ಚಾಗಿದ್ದರೆ ಹೆಣ್ಣುಮಕ್ಕಳನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದವರೆಗೆ ಓದಿಸುವುದು ಸಾಧ್ಯವಾಗುತ್ತದೆ ಹಾಗೂ ಅವಳ ವಿವಾಹದ ವೆಚ್ಚವನ್ನು ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸುವುದಿಲ್ಲ. ಆದರೆ ಪುರುಷರ ಶಿಕ್ಷಣದ ಮಟ್ಟ ಅತಿ ಕಡಿಮೆ ಇರುವ ಜನಸಮುದಾಯಗಳಲ್ಲಿ ಪೋಷಕರು ತಮ್ಮ ಹೆಣ್ಣುಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡಲು ಭಯಪಡುತ್ತಾರೆ. ಏಕೆಂದರೆ ತಮ್ಮ ಹೆಣ್ಣುಮಕ್ಕಳಿಗೆ ಸಮಂಜಸವಾದ ಹಾಗೂ ತಮ್ಮ ಖರ್ಚುವೆಚ್ಚಗಳಿಗೆ ತಕ್ಕಂತೆ ಹೊಂದಿಕೊಳ್ಳುವ ವರ ಸಿಗುವುದು ಬಹಳ ಕಷ್ಟವಾಗುತ್ತದೆ ಎಂಬಂತಹ ಆತಂಕವು ಪೋಷಕರನ್ನು ಕಾಡುತ್ತದೆ. ತಮ್ಮ ಆದಾಯದ ಮಿತಿಯೊಳಗೆ ತಮ್ಮ ವಿದ್ಯಾವಂತ ಮಗಳಿಗೆ ತಕ್ಕಂತಹ ಸಮಂಜಸವಾದ ವರ ಸಿಗುವುದಿಲ್ಲ ಎಂಬ ಅಪನಂಬಿಕೆಯೂ ಪೋಷಕರಿಗೆ ಇರುತ್ತದೆ. ಅತಿಯಾದ ಬಡತನದಿಂದ ಬಂದ ಹೆಣ್ಣುಮಕ್ಕಳು ಉತ್ತಮ ವಿದ್ಯಾಭ್ಯಾಸ ಮಾಡುವುದೂ ಕೂಡ ಬಹಳ ಕಷ್ಟಕರ. ಏಕೆಂದರೆ ಅದು ಬಹಳ ವೆಚ್ಚದಾಯಕವಾಗಿರುತ್ತದೆ. ಅಲ್ಲದೆ ವಿದ್ಯಾವಂತ ಹೆಣ್ಣುಮಕ್ಕಳನ್ನು ವಿವಾಹ ಮಾಡುವಾಗ ವರದಕ್ಷಣೆ ಸಮಸ್ಯೆಯೂ ಕಾಡುತ್ತದೆ (ಹೆಚ್.ಡಿ. ಪ್ರಶಾಂತ್ ೨೦೦೫).

ಇಂತಹ ಪರಿಸ್ಥಿತಿಯು ಪ್ರಸ್ತುತ ಅಧ್ಯಯನದ ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ಅಧ್ಯಯನ ಕ್ಷೇತ್ರದ ಗ್ರಾಮಗಳ ದಲಿತ ಪೋಷಕರಲ್ಲಿಯೂ ಕಂಡುಬರುತ್ತದೆ. ಅಲ್ಲದೆ ಸ್ವಲ್ಪ ಭಿನ್ನವಾದ ಪರಿಸ್ಥಿತಿ ದಲಿತ ಪೋಷಕರಲ್ಲಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗೊತ್ತಾಗಿದೆ. ಕೆಲವು ದಲಿತ ಪೋಷಕರ ಪ್ರಕಾರ ಇತ್ತೀಚಿನ ದಿನಮಾನಗಳಲ್ಲಿ ದಲಿತ ಸಮುದಾಯದ ವಿದ್ಯಾವಂತ ಹೆಣ್ಣುಮಕ್ಕಳಿಗೆ ಸರ್ಕಾರಿ ಕೆಲಸಗಳು ದೊರಕುವ ಸಂಭವನೀಯತೆಗಳು ಹೆಚ್ಚಾಗಿರುವುದರಿಂದ ದಲಿತ ವಿದ್ಯಾವಂತ ಹೆಣ್ಣುಮಕ್ಕಳ ವಿವಾಹಕ್ಕೆ ಬೇಡಿಕೆ ಇದೆ.

ಆದರೂ ಈ ಸಮುದಾಯದ ವಿದ್ಯಾವಂತ ಹೆಣ್ಣುಮಕ್ಕಳನ್ನು ವಿವಾಹ ಮಾಡುವುದು ವಾಸ್ತವವಾಗಿ ಕಷ್ಟದಾಯಕವಾಗಿದೆ. ಏಕೆಂದರೆ ಈ ಸಮುದಾಯದ ವಿದ್ಯಾವಂತ ಹೆಣ್ಣುಮಗಳ ವಿವಾಹದ ಸಂದರ್ಭದಲ್ಲಿ ಅವಳಿಗೆ ತಕ್ಕಂತಹ ವರನನ್ನೇ ಹುಡುಕಬೇಕು ಮತ್ತು ಆ ಸಮಯದಲ್ಲಿ ವರನ ಕುಟುಂಬದ ಸದಸ್ಯರು ಹೆಚ್ಚಿನ ಪ್ರಮಾಣದ ವರದಕ್ಷಣೆಯನ್ನು ಕೇಳುತ್ತಾರೆ. ಇನ್ನೊಂದು ವಿಚಿತ್ರ ಸಂಗತಿ ಎಂದರೆ ವಿದ್ಯಾವಂತ ವರನ ಕುಟುಂಬದ ಪೋಷಕರು ಅಥವಾ ಸದಸ್ಯರು ವಿದ್ಯಾವಂತ ಹೆಣ್ಣುಮಕ್ಕಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುವಂತಹ ಆಸಕ್ತಿ ಹೊಂದಿರುವುದಿಲ್ಲ. ತಮ್ಮ ಮನೆಗಳಿಗೆ ಸೊಸೆಯಾಗಿ ಬರುವ ಹುಡುಗಿಯರು ಕೇವಲ ಮನೆ ಕೆಲಸ ಮತ್ತು ತಾವು ಹೇಳಿದ ಕೆಲಸಗಳನ್ನಷ್ಟೇ ಮಾಡಬೇಕೆಂಬ ಭಾವನೆ ದಲಿತ ಪೋಷಕರಲ್ಲಿದೆ.

ಇದಕ್ಕೆ ಪೂರಕವಾಗಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ ಹೆಣ್ಣುಮಕ್ಕಳು ತಮ್ಮ ಮನೆಯ ಕೆಲಸವನ್ನು ಸರಿಯಾಗಿ ಮಾಡುವುದಿಲ್ಲ ಮತ್ತು ತಮ್ಮ ಕುಟುಂಬದ ಸದಸ್ಯರನ್ನು ಕೂಡ ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂಬ ಭಾವನೆಯೂ ದಲಿತ ಪೋಷಕರ ಮನಸ್ಸಿನಲ್ಲಿ ಮನೆ ಮಾಡಿದೆ. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ ಹೆಣ್ಣುಮಕ್ಕಳನ್ನು ತಮ್ಮ ಮನೆಯ ಸೊಸೆಯರನ್ನಾಗಿ ಸ್ವೀಕರಿಸಲು ಹಿಂಜರಿಯುತ್ತಾರೆ. ಇದರೊಂದಿಗೆ ದಲಿತ ವಿದ್ಯಾವಂತ ಹೆಣ್ಣುಮಕ್ಕಳಿಗೆ ತಕ್ಕಂತಹ ವಿದ್ಯಾವಂತನಾದ ವರನನ್ನು ಹುಡುಕಲು ಬಹಳ ದೂರದ ಸ್ಥಳಗಳಿಗೆ ಹೋಗಬೇಕಾದಂತಹ ಕಷ್ಟದ ಸ್ಥಿತಿಯನ್ನು ದಲಿತ ಪೋಷಕರು ವಿವರಿಸುತ್ತಾರೆ. ಕೆಲವು ಸಾರಿ ದೂರದ ಊರುಗಳಿಗೆ ಹೋದರೂ ಆ ಊರಿನಲ್ಲಿ ದಲಿತ ಜಾತಿಯ ವರಗಳು ಸಿಗುವುದೂ ಕಡಿಮೆ ಎಂಬ ಸಂಪ್ರದಾಯಿಕ ಅಂಶವನ್ನು ಕೂಡ ದಲಿತ ಪೋಷಕರು ವ್ಯಕ್ತಪಡಿಸುತ್ತಾರೆ. ಒಟ್ಟಿನಲ್ಲಿ ದಲಿತ ಸಮುದಾಯದಲ್ಲಿ ಶಿಕ್ಷಣಕ್ಕೂ ಮತ್ತು ವಿವಾಹಕ್ಕೂ ಸಂಬಂಧವಿದ್ದು, ಈ ಸಮುದಾಯದ ವಿದ್ಯಾವಂತ ಹೆಣ್ಣುಮಕ್ಕಳ ಶಿಕ್ಷಣ ಮತ್ತು ವಿವಾಹದ ಸಂಬಂಧ ಗಂಭೀರವಾಗಿದೆ.

೫.೪. ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು

ಇದುವರೆಗೆ ಚರ್ಚಿಸಿದ ದಲಿತ ಪೋಷಕರ ಮನೋಪ್ರವೃತ್ತಿಯ ಅಂಶಗಳು ವಾಸ್ತವವಾಗಿ ಒಂದನ್ನೊಂದು ಅವಲಂಭಿಸಿರುವ ಸಾಧ್ಯತೆಗಳೇ ಹೆಚ್ಚಾಗಿ ಕಂಡುಬರುತ್ತವೆ. ಶಿಕ್ಷಣದ ಮಹತ್ವ ಮತ್ತು ಮೌಲ್ಯಗಳಿಗೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಗೆ ಇರುವ ಆಲೋಚನೆ ಅಥವಾ ಮನೋಭಾವನೆಯು ಇನ್ನೊಬ್ಬರಿಂದ ಪ್ರಭಾವಿತವಾದದ್ದಾಗಿರಬಹುದು. ಈ ರೀತಿಯಾದ ಪ್ರಭಾವಗಳು ಅವನ/ಅವಳ ಸಮುದಾಯದಿಂದ ಆಗಿರಬಹುದು. ಅಥವಾ ನೆರೆಹೊರೆಯವರಿಂದ ಉಂಟಾಗಿರಬಹುದು. ಈ ದೃಷ್ಟಿಯಿಂದ ಶಿಕ್ಷಣಕ್ಕಿರುವ ಪ್ರೇರಣಾ ಶಕ್ತಿಯು ಪ್ರಮುಖವಾಗಿ ಸಾಮಾಜಿಕ ಆಯಾಮ ಹೊಂದಿರುತ್ತದೆ ಎಂದೇ ಹೇಳಬಹುದು (ಹೆಚ್.ಡಿ. ಪ್ರಶಾಂತ್ ೨೦೦೫).

ಇದೇ ರೀತಿಯಾದ ಮನೋಪ್ರವೃತ್ತಿ ದಲಿತ ಪೋಷಕರಲ್ಲಿರುವುದನ್ನು ಅಧ್ಯಯನ ಕ್ಷೇತ್ರದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಅವಿದ್ಯಾವಂತರಾದಂತಹ ಕೆಲವು ದಲಿತ ಪೋಷಕರನ್ನು ನಿಮ್ಮ ಹೆಣ್ಣುಮಕ್ಕಳನ್ನು ಏಕೆ ಶಾಲೆಗೆ ಕಳಿಸುತ್ತೀರೆಂದು ಕೇಳಿದರೆ, ಬೇರೆಯವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ನಾವೂ ಕಳುಹಿಸುತ್ತೇವೆ ಎಂಬಂತಹ ಉತ್ತರ ನೀಡುತ್ತಾರೆ. ಮತ್ತೆ ಕೆಲವು ದಲಿತ ಪೋಷಕರು ತಮ್ಮ ಜಾತಿಯಲ್ಲಿ ಹೆಣ್ಣುಮಕ್ಕಳನ್ನು ಓದಿಸುವ ಪದ್ಧತಿಯೇ ಇಲ್ಲವೆಂಬ ಉತ್ತರ ನೀಡುತ್ತಾರೆ. ಅಂದರೆ ಇದನ್ನು ಒಂದು ಸಾಮಾಜಿಕ ನೀತಿ ಎಂಬಂತೆ ದಲಿತ ಪೋಷಕರು ಭಾವಿಸಿ ಕೊಂಡಿರುವುದನ್ನು ಗಮನಿಸಬಹುದು.

ಈ ಮೇಲಿನ ಎರಡು ವಿಭಿನ್ನವಾದ ಹೇಳಿಕೆಗಳಲ್ಲಿ ಶಿಕ್ಷಣದ ಬಗ್ಗೆ ಸಾಮಾಜಿಕ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳಿರುವುದು ಸ್ಪಷ್ಟವಾಗುತ್ತದೆ. ಈ ಅಂಶಗಳು ಶಿಕ್ಷಣದ ಮೇಲೆ ತಮ್ಮದೇ

ಆದಂತಹ ಪ್ರಭಾವವನ್ನು ಬೀರುತ್ತವೆ ಎಂಬುದು ಒಂದು ಸಾಮಾಜಿಕ ಆಯಾಮ. ಮುಂದುವರಿದಂತೆ ದಲಿತ ಹೆಣ್ಣುಮಕ್ಕಳ ಶಿಕ್ಷಣ ಕುರಿತಾಗಿ ಒಬ್ಬ ದಲಿತ ಮಹಿಳೆಯನ್ನು ಪ್ರಶ್ನೆ ಮಾಡಿದಾಗ, ಕೀಳು ಜಾತಿಯ ನಾವು, ಸೇವೆ ಮಾಡುವುದು ಮಾತ್ರ ನಮ್ಮ ಕೆಲಸವಾಗಿದೆ, ನಮಗೇಕೆ ಶಿಕ್ಷಣ? ಎಂಬ ಮರು ಪ್ರಶ್ನೆಯೇ ಹುಟ್ಟಿಕೊಂಡಿತು. ಇದರ ಅರ್ಥ ಶಿಕ್ಷಣವು ಮೇಲ್ಜಾತಿಯವರಿಗೆ ಮಾತ್ರ ಸೀಮಿತ ಮತ್ತು ದಲಿತರಿಗೂ ಶಿಕ್ಷಣಕ್ಕೂ ಸಂಬಂಧವಿಲ್ಲ, ದಲಿತರು ಕೇವಲ ಇತರರ ಸೇವೆಗೆ ಮಾತ್ರ ಸೀಮಿತ ಎಂಬುದಾಗಿರುತ್ತದೆ. ಇಲ್ಲಿಯೂ ಕೂಡ ಒಂದು ಸಮುದಾಯದ ಒಟ್ಟು ಅಭಿಪ್ರಾಯವೆಂಬಂತೆ ದಲಿತ ಮಹಿಳೆ ಹೇಳಿದ್ದು ಸಾಮಾಜಿಕ ಅಂಶವೆನಿಸುತ್ತದೆ.

ಇತ್ತೀಚೆಗೆ ಶಿಕ್ಷಕಿಯಾದ ದಲಿತ ಹೆಣ್ಣು ಮಗಳ ಉದಾಹರಣೆಯನ್ನು ನೀಡುತ್ತಾ ತನ್ನ ಮಗಳನ್ನು ಶಿಕ್ಷಕಿ ಆಗುವ ತನಕ ಓದಿಸಬೇಕು, ಅದಕ್ಕಾಗಿ ಎಷ್ಟು ಹಣ ಖರ್ಚಾಗುತ್ತದೆ? ಅದಕ್ಕೇನು ಮಾಡಬೇಕು? ಎಂಬ ಸರಣಿ ರೀತಿಯಾದ ಪ್ರಶ್ನೆಗಳನ್ನು ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಒಬ್ಬ ದಲಿತ ಮಹಿಳೆ ಪ್ರತಿಕ್ರಿಯಿಸಿದ್ದು ವಿಶೇಷವಾಗಿತ್ತು. ಇಲ್ಲಿ ದಲಿತ ಮಹಿಳೆಯು ತನ್ನ ಮಗಳನ್ನು ಒಬ್ಬ ಶಿಕ್ಷಕಿಯಾಗುವ ತನಕ ಓದಿಸುವ ಬಯಕೆ ಬರಲು ಶಿಕ್ಷಕ ವೃತ್ತಿಯು ಆಕರ್ಷಣೀಯವಾಗುತ್ತದೆ. ಇದೂ ಕೂಡ ಪ್ರಭಾವ ಬೀರುವ ಸಾಮಾಜಿಕ ಅಂಶವಾಗಿದೆ.

ಮತ್ತೊಬ್ಬ ದಲಿತ ಯುವಕನು ತನ್ನ ಮಗಳನ್ನು ಅಂಗನವಾಡಿ ಕಾರ್ಯಕರ್ತೆಯನ್ನಾಗಿ ಮಾಡಲು ಎಲ್ಲಿಯ ತನಕ ಓದಿಸಬೇಕು. ನಮ್ಮ ಜಾತಿಯವರಿಗೆ ಅಂಗನವಾಡಿ ಕಾರ್ಯಕರ್ತೆಯ ಕೆಲಸ ಕೊಡುತ್ತಾರೆಯೆ? ಎಂಬ ಪ್ರಶ್ನೆಗಳನ್ನು ಕೇಳಿದ್ದು ಕ್ಷೇತ್ರಕಾರ್ಯದಲ್ಲಿ ನಮ್ಮ ಅನುಭವಕ್ಕೆ ಬಂದಿದೆ. ಇಲ್ಲಿಯೂ ಕೂಡ ಅಂಗನವಾಡಿ ಕಾರ್ಯಕರ್ತೆಯನ್ನಾಗಿ ತನ್ನ ಮಗಳನ್ನು ನೇಮಕ ಮಾಡುವ ಬಯಕೆ ಬರಲು ದಲಿತ ಯುವಕ ದಿನನಿತ್ಯ ನೋಡುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಕೆಲಸ ಕಾರ್ಯಗಳು ಕಾರಣವೆನಿಸುತ್ತವೆ. ಇದೂ ಕೂಡ ಸಾಮಾಜಿಕವಾಗಿ ಪ್ರಭಾವಬೀರುವ ಅಂಶವಾಗಿದೆ. ಈ ರೀತಿಯ ಸಾಮಾಜಿಕ ಪ್ರಭಾವಗಳನ್ನು ಜನರು ಹೇಗೆ ನೋಡುತ್ತಾರೆ ಎಂಬುದು ಮುಖ್ಯವಾಗುತ್ತದೆ. ಇದನ್ನೇ ಒಂದು ಉದಾಹರಣೆಯ ಮೂಲಕವಾಗಿ ಗ್ರಹಿಸಬಹುದು. ಒಂದು ಕುಗ್ರಾಮದ ಮೇಲ್ಜಾತಿಯ ಹುಡುಗನಿಗೆ ವಿದ್ಯಾಭ್ಯಾಸದ ನಂತರ ಒಂದು ಒಳ್ಳೆಯ ಕೆಲಸ ಸಿಕ್ಕಿದಾಗ, ಅದೇ ಜಾತಿಯ ಹುಡುಗರಲ್ಲಿ ಶಿಕ್ಷಣದ ಆಸಕ್ತಿಯನ್ನು ಹೆಚ್ಚಿಸುತ್ತದೆ. ಇದೇ ರೀತಿಯಾಗಿ ದಲಿತ ಸಮುದಾಯದಲ್ಲಿಯೂ ಕೂಡ ಶಿಕ್ಷಣದ ಆಸಕ್ತಿಯನ್ನು ಕಾಣಲು ಸಾಧ್ಯವಿದೆ.

೬-೧೪ ವಯೋಮಾನದ ಎಲ್ಲಾ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಬೇಕೆಂಬುದರ ಬಗ್ಗೆ ದಲಿತ ಪೋಷಕರಿಗೆ ಸ್ಪಷ್ಟವಾದ ಕಲ್ಪನೆ ಇಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಕ್ಕೆ ಬಂದಿರುತ್ತದೆ. ಕಡ್ಡಾಯ ಶಿಕ್ಷಣ ಎಂಬ ಪರಿಕಲ್ಪನೆಗಿಂತ ಇತರೆ ಜಾತಿಯ ಮಕ್ಕಳು ಶಾಲೆಗೆ ಹೋಗುವುದರಿಂದ ನಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂಬ ಸಾಮಾನ್ಯವಾದ ತಿಳುವಳಿಕೆ ದಲಿತ

ಪೋಷಕರಲ್ಲಿ ಸ್ಪಷ್ಟವಾಗಿದೆ. ಹೀಗೆ ದಲಿತ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕೆಂಬ ಸಕಾರಾತ್ಮಕ ಮನೋಭಾವನೆಯು ಸಾಮಾಜಿಕ ಆಯಾಮವನ್ನು ಸೂಚಿಸುತ್ತಿದ್ದು, ಇದನ್ನೇ ಸಾಮಾಜಿಕ ಒಪ್ಪಿಗೆಯನ್ನಾಗಿಸಬೇಕಾಗಿದೆ.

೫.೫. ಪ್ರೇರಕಾಂಶಗಳ ಪರಿಣಾಮ

ಕಳೆದ ೧೫-೨೦ ವರ್ಷಗಳ ಹಿಂದಕ್ಕೆ ಹೋಲಿಸಿ ನೋಡಿದಾಗ, ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ಮತ್ತು ಜವಾಬ್ದಾರಿಗಳನ್ನು ಹೊಂದಿರುವುದನ್ನು ಒಬ್ಬ ದಲಿತ ಶಿಕ್ಷಕರು ನಮ್ಮ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಿವರಿಸಿದ್ದಾರೆ. ಜೊತೆಗೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆಯೂ ದಲಿತ ಪೋಷಕರಲ್ಲಿ ಉತ್ತಮ ಸಕಾರಾತ್ಮಕ ಮನೋಭಾವನೆ ಹೊಂದಿರುವುದನ್ನು ಅದೇ ಶಿಕ್ಷಕರು ತಿಳಿಸುತ್ತಾರೆ. ಈ ಸಂಗತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇಂದಿನ ದಿನಮಾನಗಳಲ್ಲಿ ಎಲ್ಲಾ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಇದೇ ಮನೋಪ್ರವೃತ್ತಿಯು ದಲಿತ ಪೋಷಕರಲ್ಲಿಯೂ ಕಂಡುಬರುತ್ತದೆ. ಮಿಗಿಲಾಗಿ ದಲಿತ ಪೋಷಕರ ಮನೋಪ್ರವೃತ್ತಿಯು ಮತ್ತಷ್ಟು ವಿಸ್ತರಣೆಯಾಗುತ್ತಾ ಅಭಿವೃದ್ಧಿಯಾಗುವ ಸೂಚನೆಗಳು ಕಂಡುಬರುತ್ತಿವೆ.

ಈ ರೀತಿಯಾಗಿ ಪೋಷಕರಲ್ಲಿ ಮತ್ತು ನಿರ್ದಿಷ್ಟವಾಗಿ ದಲಿತ ಪೋಷಕರಲ್ಲಿ ತಮ್ಮ ಮಕ್ಕಳ ಮತ್ತು ಹೆಣ್ಣುಮಕ್ಕಳ ಶಿಕ್ಷಣ ಕುರಿತಂತೆ ಕಂಡುಬರುತ್ತಿರುವ ಹೆಚ್ಚಿನ ಆಸಕ್ತಿ ಮತ್ತು ಜವಾಬ್ದಾರಿಗಳಿಗೆ ಯಾವ ಪ್ರೇರಕಾಂಶಗಳ ಪ್ರಭಾವವಿದೆ ಎಂಬುದನ್ನು ಆಲೋಚಿಸಬೇಕಾಗಿದೆ. ನಿಜವಾಗಿ ಶಾಲಾ ಬಿಸಿಯೂಟ, ಉಚಿತ ಪಠ್ಯಪುಸ್ತಕ, ಉಚಿತ ಸಮವಸ್ತ್ರ, ವಿದ್ಯಾರ್ಥಿವೇತನ ಮತ್ತು ಶಾಲಾಬ್ಯಾಗ್‌ಗಳ ವಿತರಣೆಗಳು, ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ತಮ್ಮದೇ ಆದ ರೀತಿಯಲ್ಲಿ ಸ್ವಲ್ಪ ಮಟ್ಟಿನ ಯಶಸ್ಸಿಯನ್ನು ಕಂಡಿವೆ. ಇದಕ್ಕಿಂತಲೂ ಮುಖ್ಯವಾಗಿ ಮಹಿಳಾ ಉದ್ಯೋಗದ ಮೀಸಲಾತಿಯು ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತಮವಾದ ಪ್ರಭಾವವನ್ನು ಬೀರಿರುವುದರಲ್ಲಿ ಅನುಮಾನವೇ ಇಲ್ಲ.

ಈ ಅಂಶಗಳ ಜೊತೆಗೆ ಮಕ್ಕಳ ಶಿಕ್ಷಣದ ವಿಷಯದಲ್ಲಿ ಸಮುದಾಯದ ಸಹಭಾಗಿತ್ವವೂ ಕೂಡ ತಕ್ಕಮಟ್ಟಿನ ಪ್ರಭಾವ ಬೀರಿರುವುದನ್ನು ಗಮನಿಸಬೇಕಾಗಿದೆ. ಇದಕ್ಕೆ ನಿದರ್ಶನವೆಂಬಂತೆ ಸಂಪೂರ್ಣ ಸಾಕ್ಷರತಾ ಆಂದೋಲನ ಜಾರಿಯಾದ ಜಿಲ್ಲೆಗಳಲ್ಲಿ ಪ್ರದರ್ಶಿಸಲಾದ ಬೀದಿ ನಾಟಕಗಳಿಗೆ ಸಾರ್ವಜನಿಕರ ಮತ್ತು ಸ್ಥಳೀಯ ನಾಯಕರ ಸಂಪೂರ್ಣವಾದ ಬೆಂಬಲ ದೊರೆತಿರುವುದು. ಇನ್ನುಳಿದಂತೆ ಶಾಲಾ ಮೂಲಸೌಲಭ್ಯಗಳು ಕೂಡ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸುವಲ್ಲಿ ನೆರವಾಗುತ್ತವೆ.

೫.೬. ಗುಣಮಟ್ಟದ ಶಿಕ್ಷಣ ಮತ್ತು ಶಿಕ್ಷಣದಲ್ಲಿ ಆಸಕ್ತಿ

ಪೋಷಕರಿಗೆ ಶಿಕ್ಷಣದ ಬಗ್ಗೆ ಇರುವ ಆಸಕ್ತಿ ಮತ್ತು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿಗಳ ನಡುವೆ ಅಂತರವಿದೆ. ಬಹುತೇಕ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣಬೇಕು ಎಂದು ಕೇಳುತ್ತಾರೆ. ಹೀಗೆ ಪೋಷಕರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಬೇಕೆಂಬುದರಲ್ಲಿ ಸಕಾರಾತ್ಮಕ ಮತ್ತು ನಕಾರಾತ್ಮಕವಾದ ಎರಡೂ ಅಂಶಗಳಿರುತ್ತವೆ. ಈ ಉತ್ತಮ ಗುಣಮಟ್ಟದ ಶಿಕ್ಷಣದ ಬಗ್ಗೆ ವಿವಿಧ ಸಾಮಾಜಿಕ ವರ್ಗಗಳ ನಡುವೆ ಸ್ವಲ್ಪ ಮಟ್ಟಿನ ಭಿನ್ನತೆಗಳಿವೆ. ಉತ್ತಮ ಸ್ಥಿತಿವಂತ ಕುಟುಂಬಗಳು ಒಂದು ರೀತಿಯಾದ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸಿದರೆ ಬಡಕುಟುಂಬಗಳ ಪೋಷಕರು ಮತ್ತೊಂದು ರೀತಿಯಾದ ಗುಣಮಟ್ಟದ ಶಿಕ್ಷಣವನ್ನು ಬಯಸುತ್ತಾರೆ. ಬಡತನದ ಕುಟುಂಬದ ಪೋಷಕರು ತಮ್ಮ ಮಕ್ಕಳು ಶಾಲೆಯಲ್ಲಿ ಬುದ್ಧಿವಂತಿಕೆ ಆಧಾರಿತವಾದ ಜ್ಞಾನಕ್ಕಿಂತ ಕರಕುಶಲತೆಯನ್ನು ಕಲಿಯಬೇಕೆಂದು ಬಯಸುತ್ತಾರೆ. ಇದಕ್ಕೆ ಕಾರಣ ಅವರು ಮಕ್ಕಳಿಗೆ ಓದು, ಬರಹ, ಗಣಿತ, ಇತ್ಯಾದಿ ಪಠ್ಯಪುಸ್ತಕದ ಜ್ಞಾನಕ್ಕಿಂತ ಕರಕುಶಲತೆ ಆಧಾರಿತವಾದ ತಿಳುವಳಿಕೆ ಅತ್ಯಂತ ಉಪಯುಕ್ತವೆಂದು ನಂಬಿರುವುದಾಗಿದೆ. ಆದರೂ ಪೋಷಕರಿಗೆ ತಮ್ಮ ಮಕ್ಕಳು ಶಾಲೆಯಲ್ಲಿ ಶ್ರಮದಾಯಕವಾದ ಕೆಲಸ ಕಾರ್ಯಗಳನ್ನು ಮಾಡುವ ಬಗ್ಗೆ ವಿರೋಧವಿದೆ. ಇದರ ಅರ್ಥವೇನೆಂದರೆ ಬಡಕುಟುಂಬದ ಪೋಷಕರಿಗೆ ತಮ್ಮ ಆರ್ಥಿಕಸ್ಥಿತಿಗೆ ಪೂರಕವಾಗುವಂತಹ ಕರಕುಶಲತೆಯು ಮುಖ್ಯವಾದರೂ ಜ್ಞಾನ ಆಧಾರಿತ ಬುದ್ಧಿವಂತಿಕೆಯನ್ನು ಕಲಿಯುವುದನ್ನು ವಿರೋಧಿಸದೆ ಇಷ್ಟಪಡುತ್ತಾರೆ ಎಂಬುದಾಗಿದೆ. ಇದಕ್ಕೆ ಬಡತನ ಕುಟುಂಬದ ಪೋಷಕರು ತಮ್ಮ ಮಕ್ಕಳು ಶಾಲೆಯಲ್ಲಿ ಶ್ರಮದಾಯಕ ಕೆಲಸಗಳನ್ನು ಮಾಡಿದರೆ ಜ್ಞಾನ ಆಧಾರಿತ ಬುದ್ಧಿವಂತಿಕೆಯಿಂದ ವಿಮುಖರಾಗುತ್ತಾರೆ ಎಂದು ನಂಬಿರುವುದೇ ಕಾರಣ.

ಒಟ್ಟಿನಲ್ಲಿ ಬಡತನದ ಕುಟುಂಬದ ಪೋಷಕರು ತಮ್ಮ ಮಕ್ಕಳು ಶಾಲೆಯಲ್ಲಿ ಜ್ಞಾನ ಆಧಾರಿತ ಬುದ್ಧಿವಂತಿಕೆಯ ಶಿಕ್ಷಣವನ್ನು ಕಲಿತು, ನಂತರದಲ್ಲಿ ಕರಕುಶಲತೆಗೆ ಅನ್ವಯಿಸುವಂತಹ ಶಿಕ್ಷಣದ ಗುಣಮಟ್ಟ ಬೇಕೆಂಬ ಇಂಗಿತವನ್ನು ಹೊಂದಿರುವುದು ತಿಳಿಯುತ್ತದೆ. ಈ ಕುರಿತು ಇನ್ನೊಂದು ಸಂಗತಿ ಏನೆಂದರೆ, ಬಡತನದ ಪೋಷಕರಿಗೆ ಶಿಕ್ಷಣವು ತಮ್ಮ ಮಕ್ಕಳನ್ನು ಸರ್ಕಾರಿ ನೌಕರರನ್ನಾಗಿಸುವ ಒಂದು ಸಾಧನವಾಗಿದೆ. ಅಥವಾ ಅವರಿಗೆ ಸರ್ಕಾರಿ ನೌಕರಿ ಒದಗಿಸುವ ಅವಕಾಶದ ಒಂದು ಅಂಶವಾಗಿದೆ. ಆದರೆ ಸ್ಥಿತಿವಂತ ಶ್ರೀಮಂತ ಕುಟುಂಬದ ಪೋಷಕರಲ್ಲಿ ಜ್ಞಾನ ಆಧಾರಿತ ಬುದ್ಧಿವಂತಿಕೆಯೇ ಗುಣಮಟ್ಟದ ಶಿಕ್ಷಣವೆಂಬ ಪ್ರಬಲವಾದ ನಂಬಿಕೆ ಇದೆ. ನಿರ್ದಿಷ್ಟವಾಗಿ ದಲಿತ ಪೋಷಕರು ಭಾವಿಸಿಕೊಂಡಂತೆ ಗುಣಮಟ್ಟದ ಶಿಕ್ಷಣವನ್ನು ಅರ್ಥಮಾಡಿಕೊಳ್ಳಲು ಕ್ಷೇತ್ರಕಾರ್ಯದ ಅನುಭವ ಹೀಗಿದೆ.

ನಂ.೧೧ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಹರಿಜನ ಹನುಮಂತಪ್ಪ ಎಂಬ ದಲಿತ ಪೋಷಕರೊಡನೆ ಮಾಡಿದ ಸಂಭಾಷಣೆಯನ್ನು ಹೇಳಬೇಕಾಗಿದೆ. ಹರಿಜನ ಹನುಮಂತಪ್ಪ ಇವರನ್ನು ತನ್ನ ಮಕ್ಕಳ ಶಿಕ್ಷಣದ ಗುಣಮಟ್ಟದ ಬಗ್ಗೆ ಕೇಳಿದಾಗ, ಈಗಿನ ಮಕ್ಕಳಿಗೆ ಸರಿಯಾಗಿ ಓದಲು,

[illegible]

ಬರೆಯಲು ಬರುವುದಿಲ್ಲ. ೭ನೇ ತರಗತಿ ಓದುವ ಮಕ್ಕಳಿಗೆ ಸರಿಯಾಗಿ ಲೆಕ್ಕಮಾಡಲು ಬರುವುದಿಲ್ಲ. ತಮ್ಮ ಕೂಲಿಯ ಲೆಕ್ಕಗಳನ್ನು ಕೇಳಿದರೆ ತಪ್ಪು ಹೇಳುತ್ತಾರೆ. ಅದೇನು ಓದುತ್ತಾರೋ, ಶಾಲೆಯಲ್ಲಿ ಶಿಕ್ಷಕರು ಅದೇನು ಮಾಡುತ್ತಾರೋ, ದೇವರಿಗೇ ಗೊತ್ತು ಎಂಬುದಾಗಿ ಗುಣಮಟ್ಟದ ಶಿಕ್ಷಣದ ಬಗ್ಗೆ ಅಸಮದಾನ ಮತ್ತು ಅತೃಪ್ತಿಗಳನ್ನು ವ್ಯಕ್ತಪಡಿಸಿದ್ದಾರೆ. ಇದಷ್ಟಕ್ಕೆ ಸುಮ್ಮನಾಗದ ಹನುಮಂತಪ್ಪ, ಮೇಷ್ಟ್ರು ಸರಿಯಾಗಿ ಶಾಲೆಗೆ ಬರಲು ಆ ಮೀಟಿಂಗ್, ಈ ಮೀಟಿಂಗ್, ಟ್ರೈನಿಂಗ್, ಗಣತಿಕಾರ್ಯ, ಪಠ್ಯಪುಸ್ತಕ, ಸಮವಸ್ತ್ರಗಳನ್ನು ಮತ್ತು ಶಾಲಾ ಬ್ಯಾಗುಗಳನ್ನು ತರಲು, ಹಾಗೂ ಮೇಲಿನ ಅಧಿಕಾರಿಗಳನ್ನು ಕಾಣಲು ಹೋಗುವುದು ಇತ್ಯಾದಿಗಳು ಅಡ್ಡಿಯಾಗುತ್ತವೆ. ಇದರ ಜೊತೆಗೆ ಮೇಷ್ಟ್ರುಗಳು ತಮ್ಮ ಸ್ವಂತ ಕೆಲಸಗಳ ಒತ್ತಡಕ್ಕೆ ಒಳಗಾಗುವುದರಿಂದ ತಮ್ಮ ಶಾಲೆಯಲ್ಲಿನ ಮಕ್ಕಳಿಗೆ ಹೇಗೆ ಗುಣಮಟ್ಟದ ಶಿಕ್ಷಣ ಕಲಿಸಲು ಸಾಧ್ಯ? ಎಂಬ ಪ್ರಶ್ನೆ ಕೇಳುತ್ತಾರೆ. ಈ ಸಂಗತಿಯು ಶಿಕ್ಷಕರು ತಮ್ಮನ್ನು ಗುಣಮಟ್ಟದ ಶಿಕ್ಷಣದಲ್ಲಿ ತೊಡಗಿಸಿಕೊಳ್ಳಲು ಶೈಕ್ಷಣಿಕ ಆಡಳಿತವೇ ಅವಕಾಶ ಮಾಡಿಕೊಡುತ್ತಿಲ್ಲ ಎಂಬುದಾಗಿ ಆರೋಪಿಸುವುದರ ಜೊತೆಗೆ ಶಿಕ್ಷಕರನ್ನು ಸಮರ್ಥಿಸಿಕೊಂಡದ್ದನ್ನು ತಿಳಿಸುತ್ತದೆ. ಅಂದರೆ ದಲಿತ ಪೋಷಕರ ಪ್ರಕಾರ ತಮ್ಮ ಮಕ್ಕಳು ಓದುವುದು. ಬರೆಯುವುದು, ಲೆಕ್ಕಮಾಡುವುದನ್ನು ಸರಿಯಾಗಿ ಮಾಡುವುದೇ ಗುಣಮಟ್ಟದ ಶಿಕ್ಷಣವೆಂದು ಪರಿಭಾವಿಸಿಕೊಂಡಿದ್ದಾರೆ. ಈ ಅಂಶಗಳ ಜೊತೆಗೆ ಜ್ಞಾನ ಆಧಾರಿತ ಬುದ್ಧಿವಂತಿಕೆಯನ್ನಾಗಲಿ ಅಥವಾ ಕರಕುಶಲ ಕಲೆ ಮತ್ತು ಬುದ್ಧಿವಂತಿಕೆಗಳನ್ನಾಗಲಿ ಸೇರಿಸಿ ಹೇಳುವುದಿಲ್ಲ. ಅಂದ ಮೇಲೆ ಗುಣಮಟ್ಟದ ಶಿಕ್ಷಣದ ಬಗ್ಗೆ ಸಾಮಾಜಿಕ ವಿವಿಧ ವರ್ಗಗಳಲ್ಲಿ ವಿಭಿನ್ನ ಭಾವನೆಗಳಿದ್ದು, ದಲಿತ ಪೋಷಕರ ನೆಲೆಯಂತೆ ಉತ್ತಮ ಗುಣಮಟ್ಟದ ಶಿಕ್ಷಣ ಲಭ್ಯವಾಗುತ್ತಿಲ್ಲವೆಂಬ ಅಸಮಧಾನವಿದೆ.

ಹೀಗೆ ಉತ್ತಮ ಗುಣಮಟ್ಟದ ಶಿಕ್ಷಣದ ಬಗ್ಗೆ ಸಾಮಾಜಿಕವಾಗಿ ವಿವಿಧ ವರ್ಗದ ಪೋಷಕರಿಂದ ಪೋಷಕರಿಗೆ ಇರುವ ದೃಷ್ಟಿಕೋನಗಳು ಬೇರೆ ಬೇರೆಯಾಗಿರುತ್ತವೆ. ಅದರಂತೆಯೇ ಗುಣಮಟ್ಟದ ಶಿಕ್ಷಣದ ಪರಿಕಲ್ಪನೆ ವಿವಿಧ ಕಾಲಘಟ್ಟಗಳಲ್ಲಿಯೂ ಬದಲಾಗುತ್ತಾ ಇಡೀ ಶೈಕ್ಷಣಿಕ ವ್ಯವಸ್ಥೆಯನ್ನೇ ಬದಲಾವಣೆಯತ್ತ ಸಾಗಿಸುವ ಒಂದು ದೀರ್ಘಾವಧಿ ಕಾರ್ಯಸೂಚಿಯನ್ನಾಗಿ ನೋಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಇಂದಿನ ದಿನಮಾನದಲ್ಲಿ ಶಿಕ್ಷಣದ ಗುಣಮಟ್ಟವನ್ನು ತಕ್ಷಣವೇ ಮರು ವ್ಯಾಖ್ಯಾನಿಸುವ ಅಗತ್ಯವು ಕಾಣಿಸುತ್ತದೆ. ಶಿಕ್ಷಣದ ಗುಣಮಟ್ಟವನ್ನು ಪುನರ್‌ವ್ಯಾಖ್ಯಾನ ಮಾಡುವಾಗ ಶಾಲೆಗಳಲ್ಲಿ ಅಗತ್ಯ ಪ್ರಮಾಣದ ಮೂಲಸೌಲಭ್ಯಗಳಿಲ್ಲದಿರುವುದು, ಶಿಕ್ಷಕರು ಕಲಿಕೆ ಕಾರ್ಯ ಮತ್ತು ಪಠ್ಯ ಚಟುವಟಿಕೆಗಳಲ್ಲಿ ಜವಾಬ್ದಾರಿಯಿಂದ ಭಾಗವಹಿಸದಿರುವುದು ಇತ್ಯಾದಿ ಕೆಲವು ಸಾಮಾನ್ಯ ಅಗತ್ಯಗಳನ್ನು ಇನ್ನೂ ಕೂಡ ಒದಗಿಸಲಾಗದ ಸ್ಥಿತಿಯು ಕಂಡುಬರುತ್ತದೆ. ಹೀಗಿರುವ ಶಾಲೆಗಳಲ್ಲಿನ ನಿರುತ್ಸಾಹದಾಯಕ ಪರಿಸ್ಥಿತಿಯು ಯಾವುದೇ ರೀತಿಯಲ್ಲಾದರೂ ಗುಣಮಟ್ಟದ ಶಿಕ್ಷಣವನ್ನು ಹೊರಹಾಕುವ ಸಾಧ್ಯತೆಗಳಿವೆ. ಈ ಕಾರಣದಿಂದ ಈಗಿರುವ ಶಾಲಾವ್ಯವಸ್ಥೆಯ ಬಗ್ಗೆ ಪೋಷಕರಲ್ಲಿ ತಾತ್ಸಾರದ ಭಾವನೆ ಹೆಚ್ಚಿನ ಪ್ರಮಾಣದಲ್ಲಿದೆ.

ಪರಿಸ್ಥಿತಿ ಹೀಗಿದ್ದರೂ ಕೂಡ ಪೋಷಕರು ಇನ್ನೂ ಶಾಲಾ ವ್ಯವಸ್ಥೆಯ ಬಗ್ಗೆ ಸ್ವಲ್ಪಮಟ್ಟಿನ ಆಸಕ್ತಿಯನ್ನು ಮತ್ತು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆಯೂ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿರುವುದೇಕೆ? ಎಂಬ ಪ್ರಶ್ನೆ ಕಾಡುವುದು ಸಹಜ. ಇದಕ್ಕೆ ಉತ್ತರವೆಂದರೆ, ಶಿಕ್ಷಣದ ಮೌಲ್ಯ ಮತ್ತು ಶಿಕ್ಷಣದ ಬಗೆಗಿನ ಗೌರವ ಭಾವನೆಗಳಾಗಿವೆ. ಆದರೆ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣಕೊಡಿಸುವುದೇ ಒಂದು ಸಾಧನೆ ಎಂಬುದಾಗಿ ಭಾವಿಸಿಲ್ಲ. ಪ್ರತಿಯಾಗಿ ಒಂದು ಹಂತದವರೆಗೆ ಶಿಕ್ಷಣದಿಂದ ಇರುವ ಅನುಕೂಲ ಮತ್ತು ಪ್ರಾಮುಖ್ಯತೆಗಳಿಗೆ ಆದ್ಯತೆ ನೀಡಬಯಸುತ್ತಾರೆ. ಆದ್ದರಿಂದ ಪೋಷಕರಿಗೆ ಶಿಕ್ಷಣದ ಮೇಲಿನ ಆಸಕ್ತಿ ಮತ್ತು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಆಸಕ್ತಿಗಳು ಜೀವಂತವಾಗಿ ರುವುದರ ಜೊತೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚಾದಂತೆಯೇ ಕಂಡುಬರುತ್ತಿವೆ. ಈ ಅಂಶಗಳು ನಿರ್ದಿಷ್ಟವಾಗಿ ದಲಿತರ ಪೋಷಕರ ಶಿಕ್ಷಣಾಸಕ್ತಿ ಮತ್ತು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸುವುದರ ಮೇಲೆಯೂ ಪ್ರಭಾವ ಬೀರಿರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ.

ಶಾಲಾ ವ್ಯವಸ್ಥೆ ಕುರಿತಾದ ನಿರುತ್ಸಾಹದಾಯಕ ಅಂಶಗಳು ಪೋಷಕರಲ್ಲಿ ಅಲ್ಲದೆ ಮಕ್ಕಳಲ್ಲಿಯೂ ಕಂಡುಬರುತ್ತದೆ. ಶಾಲೆಯ ಚಟುವಟಿಕೆಗಳು ಮಕ್ಕಳ ಮನೋಭಾವನೆಯನ್ನು ಸರಳವಾಗಿ ಉಳಿಸಿಕೊಳ್ಳುವ ಪ್ರಯತ್ನ ಮಾಡುವ ಪ್ರಾರಂಭದ ಹಂತದಲ್ಲಿ ಮಾತ್ರ, ಮಕ್ಕಳು ಶಾಲೆಗೆ ಸಜ್ಜುಗೊಳ್ಳುವುದು ಸಕಾರಾತ್ಮಕವಾಗಿರುತ್ತದೆ. ಅಲ್ಲದೆ ತರಗತಿಗಳು ಸರಿಯಾಗಿ ನಡೆಯದಿರುವ ಶಾಲೆಗಳಿಗೂ ಮಕ್ಕಳು ಹೋಗುವ ಆಸಕ್ತಿಯನ್ನು ತೋರಿಸಲು ಇತರೆ ಮಕ್ಕಳೊಡನೆ ಬೆರೆತು ಆಟವಾಡುವ ಅವಕಾಶ ಕಲ್ಪಿತವಾಗುವುದೇ ಕಾರಣ. ಇದು ಮಕ್ಕಳ ದೈಹಿಕ ಬೆಳವಣಿಗೆಯ ಮೊದಲೇ ಕುಟುಂಬದ ಕೆಲಸಗಳಿಂದ ಅವರನ್ನು ಮುಕ್ತಗೊಳಿಸುವ ಅವಕಾಶವನ್ನು ಒದಗಿಸುತ್ತದೆ. ಇನ್ನೊಂದು ಕಡೆ ಕೆಲವು ಮಕ್ಕಳು ಶಾಲೆಗೆ ಹಾಜರಾಗುವ ವಿಷಯದಲ್ಲಿ ನಿಧಾನವಾಗಿ ನಿರಾಸಕ್ತಿಯನ್ನು ತೋರಿಸುತ್ತಾರೆ. ಇದಕ್ಕೆ ಕಾರಣವೆಂದರೆ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಕೊಡುವ ದೈಹಿಕ ಶಿಕ್ಷೆ, ಅಥವಾ ಮಕ್ಕಳ ತೇಜೋವದೆ ಅಥವಾ ಮಕ್ಕಳ ಬಗ್ಗೆ ತಾತ್ಸಾರ ಭಾವನೆ ತೋರಿಸುವುದು ಆಗಿರುತ್ತದೆ. ಇದರ ನಡುವೆ ಶಾಲೆಯಲ್ಲಿ ಶಿಕ್ಷಕರು ಹೊಡೆದು ಬಡಿದು, ಶಿಕ್ಷೆ ನೀಡದಿದ್ದರೆ ಉತ್ತಮವಾಗಿ ಕಲಿಯಲಾಗುತ್ತಿರ ಲಿಲ್ಲವೆಂದು ಹೇಳುವವರೂ ಇದ್ದಾರೆ. ಆದ್ದರಿಂದ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡಲು ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ನೀಡುವ ದೈಹಿಕ ಶಿಕ್ಷೆಯೇ ಪ್ರಮುಖ ಕಾರಣವೆಂಬುದು ಸರಿಯಲ್ಲ. ಅಂದಮಾತ್ರಕ್ಕೆ ತರಗತಿಯಲ್ಲಿ ಶಿಕ್ಷಕರು ಮಕ್ಕಳನ್ನು ಹೊಡೆಯುವುದರಿಂದ ತರಗತಿಯಲ್ಲಿ ಮಕ್ಕಳಿಗೆ ಬೇಸರವಾದಾಗ, ಶಿಕ್ಷಕರು ಹೇಳುವ ಪಾಠ ಅರ್ಥವಾಗದಿದ್ದಾಗ ಮಕ್ಕಳಿಗೆ ಶಾಲೆಯ ಬಗ್ಗೆ ನಿರುತ್ಸಾಹ ಮೂಡಿ ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ಅಲ್ಲಗಳೆಯಲಾಗದು. ನಿರ್ದಿಷ್ಟವಾಗಿ ದಲಿತ ಜಾತಿಯ ಮಕ್ಕಳನ್ನು ಶಾಲೆಯಲ್ಲಿ ಶಿಕ್ಷಕರು ತಾತ್ಸಾರದ ಭಾವನೆಯಿಂದ ನೋಡಿದಾಗಲೂ ಆ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವ ಮಟ್ಟಕ್ಕೆ ಹೋಗುತ್ತಾರೆ.

ಈ ರೀತಿಯಾದ ಶಾಲಾ ವ್ಯವಸ್ಥೆ ಕುರಿತಾದ ನಿರುತ್ಸಾಹಗಳು ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಪೋಷಕರು ಅಥವಾ ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಒಂದು ನಿರ್ದಿಷ್ಟ ಪ್ರಮಾಣದ ಕಲಿಕಾ ಚಟುವಟಿಕೆಗಳು ನಡೆಯದಿರುವ ಶಾಲೆಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ತಮ್ಮ ಮಕ್ಕಳನ್ನು ಖಾಸಗಿಯಾಗಿ ಮನೆ ಪಾಠಕ್ಕೆ ಕಳುಹಿಸಲಾಗದ ಮತ್ತು ತಮ್ಮ ಮನೆಯಲ್ಲಿಯೇ ಮಕ್ಕಳ ಕಲಿಕೆಗೆ ಪೂರಕವಾದ ಪರಿಸರವನ್ನು ಒದಗಿಸಲಾಗದ ಸ್ಥಿತಿ ಇರುವ ಕುಟುಂಬದ ಪೋಷಕರಲ್ಲಿ ಶಾಲೆ-ಶಿಕ್ಷಣ ಮತ್ತು ಸಾಕ್ಷರತೆಯ ಬಗ್ಗೆ ನಿರಾಸಕ್ತಿ ಅಥವಾ ತಾತ್ಸಾರ ಮನೋಭಾವನೆ ಹೆಚ್ಚಾಗಿರುತ್ತದೆ. ಇನ್ನು ಅನಕ್ಷರಸ್ಥ ಪೋಷಕರು ಶಾಲೆಯ ತರಗತಿಗಳಲ್ಲಿ ಕಲಿಕೆಯ ಪ್ರಕ್ರಿಯೆಗಳು ಹೇಗೆ ನಡೆಯುತ್ತವೆ ಎಂಬುದರ ಬಗ್ಗೆ ಆಗಿಂದಾಗ್ಗೆ ಶಿಕ್ಷಕರಿಂದ ವಿವರಣೆ ಪಡೆಯುವುದು ಮತ್ತು ಅದನ್ನು ಪುನರ್ ಪರಿಶೀಲನೆ ಮಾಡಿ ನಿರ್ಧಾರಗಳನ್ನು ವ್ಯಕ್ತಪಡಿಸುವುದು ಹಾಗೂ ಅವರ ಮಕ್ಕಳ ಕಲಿಕೆಗೆ ಸಹಕರಿಸುವುದು ಅವರಿಗೆ ತುಂಬಾ ಕಷ್ಟದಾಯಕ. ಹಾಗಾಗಿ ಪೋಷಕರು ಆಗಿಂದಾಗ್ಗೆ ತಮ್ಮನ್ನು ತಾವೇ ದೂಷಿಸಿಕೊಳ್ಳುವುದು, ಜೊತೆಗೆ ತಮ್ಮಮಕ್ಕಳನ್ನು ದೂಷಿಸುವುದು ಅನಿವಾರ್ಯ ವಾಗಿರುತ್ತದೆ. ಈ ಮೂಲಕವಾಗಿ ಪೋಷಕರು ಶಾಲಾ ವ್ಯವಸ್ಥೆಯಲ್ಲಿರುವ ನ್ಯೂನತೆಗಳನ್ನು ಪರೋಕ್ಷವಾಗಿ ಗುರುತಿಸುವ ಕೆಲಸವನ್ನು ಮಾಡುತ್ತಾರೆ.

೫.೭. ಪ್ರಾಥಮಿಕ ಶಿಕ್ಷಣದ ಖಾಸಗಿ ವೆಚ್ಚ

ಪೋಷಕರು ತಮ್ಮ ಒಂದು ಮಗುವನ್ನು ಸರ್ಕಾರಿ ಪ್ರಾಥಮಿಕ ಶಾಲೆಗೆ ಕಳುಹಿಸಲು ಒಂದು ವರ್ಷದ ಅವಧಿಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಎನ್.ಎಸ್.ಎಸ್. (೧೯೮೬-೮೭); ಎನ್.ಸಿ.ಎ.ಇ.ಆರ್. (೧೯೯೪) ಸಂಸ್ಥೆಗಳು ಮತ್ತು ಪ್ರೋಬ್ ತಂಡಗಳು (೧೯೯೯) ಸಮೀಕ್ಷೆ ನಡೆಸಿವೆ. ಈ ಸಮೀಕ್ಷೆಗಳ ಪ್ರಕಾರ ಒಂದು ಮಗುವಿಗೆ ಒಂದು ವರ್ಷದ ಅವಧಿಗೆ ಕ್ರಮವಾಗಿ ೨೧೨ ರೂಪಾಯಿಗಳು ೪೭೮ರೂಪಾಯಿಗಳು ಮತ್ತು ೩೧೮ರೂಪಾಯಿಗಳಷ್ಟು ಖಾಸಗಿ ಖರ್ಚು ಬರುತ್ತದೆ ಎಂದು ಅಂದಾಜಿಸಲಾಗಿದೆ. ಈ ಖಾಸಗಿ ಖರ್ಚು ಮುಖ್ಯವಾಗಿ ಶಾಲಾ ಶುಲ್ಕ, ಸ್ಲೇಟ್, ಬಳಪ, ನೋಟ್‌ಬುಕ್, ಪೆನ್, ಸೀಸಿದಕಡ್ಡಿ, ಮನೆಪಾಠ, ಶಾಲಾ ಸಾಂಸ್ಕೃತಿಕ ಚಟುವಟಿಕೆಗಳು ಪ್ರವಾಸದ ಖರ್ಚು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇದೇ ರೀತಿಯಲ್ಲಿಯೇ ಪ್ರಸ್ತುತ ಅಧ್ಯಯನದಲ್ಲಿ ಸರ್ಕಾರಿ ಶಾಲೆಗೆ ಹೋಗುವಂತಹ ಪ್ರತಿಯೊಂದು ಮಗುವಿಗೆ ಒಂದು ವರ್ಷದ ಅವಧಿಗೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಅಂದಾಜು ಮಾಡಲು ಪ್ರಯತ್ನಿಸಲಾಗಿದೆ (ತಿಲಕ್, ೧೯೯೬; ೨೦೦೦ಎ; ೨೦೦೦ಬಿ; ಹೆಚ್.ಡಿ. ಪ್ರಶಾಂತ್, ೨೦೦೫).

ಪ್ರಸ್ತುತ ಅಧ್ಯಯನದಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದು ಮಗುವಿಗೆ ಒಂದು ವರ್ಷದ ಅವಧಿಗೆ ಎಷ್ಟು ಹಣ ಖರ್ಚಾಗುತ್ತದೆ ಎಂಬುದನ್ನು ಸಮೀಕ್ಷೆ ಮಾಡಿದ ದಲಿತ ಜಾತಿ ಕುಟುಂಬದ ಪೋಷಕರಿಂದ ಪಡೆದುಕೊಳ್ಳಲಾಗಿದೆ. ಎರಡು ಗ್ರಾಮಪಂಚಾಯಿತಿ ಪ್ರದೇಶಗಳಲ್ಲಿ ತಲಾ ೧೦೦ ದಲಿತ

ಪೋಷಕರಂತೆ ಒಟ್ಟು ೨೦೦ ದಲಿತ ಪೋಷಕರನ್ನು ಸಮೀಕ್ಷಿಸಿ ಮಾಹಿತಿ ಪಡೆಯಲಾಗಿದೆ. ಅಧ್ಯಯನಕ್ಕೆ ಕ್ಷೇತ್ರದ ಒಟ್ಟು ೨೦೦ ದಲಿತ ಪೋಷಕರಲ್ಲಿ ಶೇಕಡ ೬೨ರಷ್ಟು ದಲಿತ ಪೋಷಕರು ಪ್ರತಿ ಮಗುವಿಗೆ ಒಂದು ವರ್ಷದ ಅವಧಿಯಲ್ಲಿ ೧೦೦ ರೂಪಾಯಿಂದ ೫೦೦೦ ರೂಪಾಯಿಗಳಷ್ಟು ಹಣವನ್ನು ಖಾಸಗಿಯಾಗಿ ಖರ್ಚುಮಾಡುವುದಾಗಿ ಹೇಳಿದ್ದಾರೆ. ಶೇಕಡ ೨೯ರಷ್ಟು ದಲಿತ ಪೋಷಕರು ತಮ್ಮ ಒಂದು ಮಗುವಿಗೆ ಒಂದು ವರ್ಷಕ್ಕೆ ೫೦೦೧ ರೂಪಾಯಿಯಿಂದ ೧೦,೦೦೦ರೂಪಾಯಿಗಳಷ್ಟು ಖರ್ಚು ಬರುತ್ತದೆ ಎಂದು ಹೇಳಿದ್ದಾರೆ. ಉಳಿದ ಶೇಕಡ ೯ ರಷ್ಟು ದಲಿತ ಪೋಷಕರು ತಮ್ಮ ಒಂದು ಮಗುವಿನ ಒಂದು ವರ್ಷದ ಶಿಕ್ಷಣಕ್ಕೆ ೧೦,೦೦೦ ರೂಪಾಯಿಗಳ ಮೇಲ್ಪಟ್ಟು ಹಣವನ್ನು ಖಾಸಗಿಯಾಗಿ ಖರ್ಚುಮಾಡುವುದಾಗಿ ಹೇಳುತ್ತಾರೆ.

ಕೋಷ್ಟಕ-೫.೧

ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ಮಗುವಿಗೆ ತಗುಲಬಹುದಾದ ಖಾಸಗಿ ವೆಚ್ಚ (ರೂಪಾಯಿಗಳಲ್ಲಿ)

ಕ್ರ.ಸಂ.	ಅಂದಾಜು ಮೊತ್ತ	ಶೇಕಡವಾರು ಪ್ರಮಾಣ
೦೧.	೧೦೦ ರಿಂದ ೫೦೦೦ ರೂ.	೬೨%
೦೨.	೫೦೦೧ ರಿಂದ ೧೦೦೦೦ ರೂ.	೨೯%
೦೩.	೧೦೦೦೦ ರೂಪಾಯಿ ಮೇಲ್ಪಟ್ಟು	೦೯%

ಮೂಲ : ಕ್ಷೇತ್ರಕಾರ್ಯದ ಮಾಹಿತಿ.

ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಮಾಡುವ ಅಧಿಕ ಪ್ರಮಾಣದ ಖಾಸಗಿ ವೆಚ್ಚವನ್ನು ಅಂದಾಜು ರೀತಿಯಲ್ಲಿ ಸಮರ್ಥಿಸುತ್ತಾರೆ. ಅವರ ಪ್ರಕಾರ ಸರ್ಕಾರದಿಂದ ಪಠ್ಯಪುಸ್ತಕವು ಉಚಿತವಾಗಿ ದೊರೆತರೂ ಶಿಕ್ಷಕರು ಪಠ್ಯಪುಸ್ತಕವನ್ನು ನೀಡುವಾಗ ಅಲ್ಪಸ್ವಲ್ಪ ಹಣ ಕೇಳುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿಯಾಗಿ ಸರ್ಕಾರದಿಂದ ಉಚಿತವಾಗಿ ಒಂದು ಮಗುವಿಗೆ ಒಂದು ವರ್ಷಕ್ಕೆ ಒಂದು ಜೊತೆ ಸಮವಸ್ತ್ರವನ್ನು ಮಾತ್ರ ಒದಗಿಸಲಾಗುತ್ತಿದ್ದು, ಅದೂ ಕೂಡ ಸ್ವಲ್ಪ ಉದ್ದ ಅಥವಾ ಚಿಕ್ಕದಾಗಿರುತ್ತದೆ. ಇದನ್ನು ಮಗುವಿನ ದೇಹದ ಅಳತೆಯ ಪ್ರಕಾರವಾಗಿ ಮತ್ತೊಮ್ಮೆ ಹೊಲಿಗೆ ಮಾಡಿಯೇ ತೊಟ್ಟುಕೊಳ್ಳಬೇಕಾಗಿದೆ. ಅಲ್ಲದೆ ಒಂದು ಮಗು ವರ್ಷ ಪೂರ್ತಿ ಶಾಲೆಗೆ ಹೋಗಲು ಬರೀ ಒಂದೇ ಜೊತೆ ಬಟ್ಟೆಯ ಸಾಕಾಗದೆ ಪೋಷಕರು ಖಾಸಗಿಯಾಗಿ ಇನ್ನೆರಡು ಜೊತೆ ಬಟ್ಟೆಯನ್ನು ಖರೀದಿಸಲು ಹಣಬೇಕಾಗುತ್ತದೆ. ಸರ್ಕಾರದಿಂದ ಶಾಲಾಬ್ಯಾಗು ನೀಡಿದರೂ ಅದರ ಜೊತೆಗೆ ಇನ್ನೊಂದು ಅಥವಾ ಎರಡು ಶಾಲಾಬ್ಯಾಗುಗಳನ್ನು ಕೊಡಿಸಬೇಕಾಗುತ್ತದೆ. ಪುಸ್ತಕ ಕಳೆದು

ಹೋದಾಗ ಅಥವಾ ಹರಿದು ಹೋದಾಗ ಹೊಸ ಪುಸ್ತಕ ನೋಟ್‌ಪುಸ್ತಕ ಕಾಪಿ-ಪುಸ್ತಕ, ಪೆನ್, ಸೀಸದಕಡ್ಡಿ ಇತ್ಯಾದಿಯಾದ ಅವಶ್ಯಕತೆಗಳನ್ನು ಪೂರೈಸಲು ಹಣ ಖರ್ಚಾಗುತ್ತದೆ. ಮನೆಯಲ್ಲಿ ತಮ್ಮ ಮಕ್ಕಳಿಗೆ ಓದಿಕೊಡಲು ಸಾಧ್ಯವಾಗದಿರುವುದರಿಂದ ಮನೆ ಪಾಠಕ್ಕೆ ಕಳುಹಿಸಲು ಹಣ ಖರ್ಚಾಗುತ್ತದೆ. ರಾಷ್ಟ್ರೀಯ ಹಬ್ಬ ಮತ್ತು ಸಾಂಸ್ಕೃತಿಕ ಹಬ್ಬಗಳ ಆಚರಣೆಯ ಸಂದರ್ಭಗಳಲ್ಲಿ ತಮ್ಮ ಮಕ್ಕಳಿಗಾಗಿ ಹಣವನ್ನು ಖಾಸಗಿಯಾಗಿ ಖರ್ಚು ಮಾಡಲಾಗುತ್ತದೆ. ಶಾಲಾ ಪ್ರವಾಸದ ಉದ್ದೇಶಕ್ಕಾಗಿ ಮತ್ತು ವೈದ್ಯಕೀಯ ವೆಚ್ಚವು ಕೂಡ ತಮ್ಮ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ಹೆಚ್ಚಿಸುತ್ತವೆ. ಕೆಲವೊಮ್ಮೆ ತಮ್ಮ ಮಕ್ಕಳಿಗೆ ಆಟೋಪಕರಣಗಳನ್ನು ತಂದುಕೊಡಲು ಹಣಖರ್ಚುಮಾಡಬೇಕಾಗುತ್ತದೆ. ಕೆಲವು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸಿದಾಗ ಡೋನೇಷನ್ ಕೊಡಲು ಹಣ ಖರ್ಚು ಮಾಡುವುದನ್ನು ಹೇಳುತ್ತಾರೆ. ಹೀಗೆ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ತಗುಲುವ ಖಾಸಗಿ ವೆಚ್ಚವು ಹೆಚ್ಚಾಗುವುದಕ್ಕೆ ಅನೇಕ ಸಮರ್ಥನೀಯ ಕಾರಣಗಳನ್ನು ತಿಳಿಸುತ್ತಾರೆ.

ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಂದಿನ ಬೆಲೆ ಏರಿಕೆಯ ದಿನಮಾನಗಳಲ್ಲಿ ಮೇಲೆ ಹೇಳಿದ ಕಾರಣಗಳಿಗಾಗಿ ತಮ್ಮಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವಾಗಿ ದಲಿತ ಪೋಷಕರು ಅಧಿಕ ಪ್ರಮಾಣದ ಹಣ ಖರ್ಚುಮಾಡುವುದನ್ನು ನಂಬಬೇಕಾಗುತ್ತದೆ. ಇನ್ನೊಂದು ವಿಧದಲ್ಲಿ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ವೈಜ್ಞಾನಿಕ ಮತ್ತು ಲೆಕ್ಕಚಾರವಾಗಿ ಅಂದಾಜು ಮಾಡದೆ, ಸ್ವಲ್ಪಮಟ್ಟಿನ ಉತ್ಪ್ರೇಕ್ಷೆಯಿಂದ ಹೇಳಿದ್ದಾರೆ ಎನಿಸುತ್ತದೆ. ಅಲ್ಲದೆ ದಲಿತ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ವೈಜ್ಞಾನಿಕವಾಗಿ ಮತ್ತು ಲೆಕ್ಕಚಾರವಾಗಿ ಅಂದಾಜು ಮಾಡುವ ಜ್ಞಾನವಿಲ್ಲ ಎಂಬ ಅಂಶವನ್ನು ಅಲ್ಲಗಳೆಯಲಾಗದು. ಇದೇನೇ ಇದ್ದರೂ, ದಲಿತ ಪೋಷಕರು ನೀಡಿದ ತಮ್ಮಮಕ್ಕಳ ಶಿಕ್ಷಣದ ಖಾಸಗಿ ವೆಚ್ಚದ ಮಾಹಿತಿಗಳು ಸತ್ಯಕ್ಕೆ ಅತ್ಯಂತ ಸಮೀಪವಾಗಿವೆ ಎನಿಸುತ್ತದೆ. ಮಕ್ಕಳ ಶಿಕ್ಷಣದ ಈ ಖಾಸಗಿ ವೆಚ್ಚವನ್ನು ನಗರ ಪ್ರದೇಶದ ಮಕ್ಕಳ ಶಿಕ್ಷಣದ ಖರ್ಚುವೆಚ್ಚಗಳಿಗೆ ಹೋಲಿಸಿದಾಗ ಇದು ಕಡಿಮೆಯಾಗಿ ಕಾಣುತ್ತದೆ. ಈ ಖಾಸಗಿ ವೆಚ್ಚವು ಬಡತನ ರೇಖೆಗಿಂತ ಕೆಳಗಿನ ಕುಟುಂಬದ ಪೋಷಕರಿಗೆ ಪ್ರಮುಖವಾಗಿ ಹೊರೆಯಾಗುತ್ತದೆ.

ದಲಿತ ಪೋಷಕರು ತಮ್ಮಮಕ್ಕಳ ಶಾಲಾ ಶಿಕ್ಷಣದ ಖಾಸಗಿ ವೆಚ್ಚವನ್ನು ಅಧಿಕ ಪ್ರಮಾಣದಲ್ಲಿ ಮಾಡುವುದಾಗಿ ಹೇಳುತ್ತಿದ್ದರೂ, ದಲಿತ ಮಕ್ಕಳ ಶಾಲಾ ಶಿಕ್ಷಣದಲ್ಲಿ ಮಹತ್ತರವಾದ ಬದಲಾವಣೆಗಳು ಕಂಡುಬರುತ್ತಿಲ್ಲ, ಈ ಸಂಗತಿಯನ್ನು ಅಧ್ಯಯನ ಕ್ಷೇತ್ರದ ಶಾಲಾ ಶಿಕ್ಷಕರ ಸಂದರ್ಶನ ಮಾಡುವ ಸಂದರ್ಭದಲ್ಲಿ ಶಾಲಾ ಮಕ್ಕಳನ್ನು ಅವಲೋಕಿಸಿ ತಿಳಿದುಕೊಳ್ಳಲಾಗಿದೆ. ಅಂದ ಮಾತ್ರಕ್ಕೆ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಮಾಡುವ ಖಾಸಗಿ ವೆಚ್ಚದ ಮಾಹಿತಿಗಳು ಸಂಪೂರ್ಣವಾಗಿ ಸುಳ್ಳೆಂದು ಅರ್ಥವಲ್ಲ. ದಲಿತ ಪೋಷಕರು ಮತ್ತು ಮಕ್ಕಳು ವಾಸಿಸುವ ಅವರ ನೆಲೆಗಳಲ್ಲಿ ಒಂದು ರೀತಿಯಾಗಿ ಉತ್ತಮ ಶೈಕ್ಷಣಿಕ ಪರಿಸರದ ಕೊರತೆಯು ಕಾಣುತ್ತದೆ. ದಲಿತ ಪೋಷಕರು ತಮ್ಮ

ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ಗಂಭೀರವಾಗಿ ಪರಿಗಣಿಸಿದಂತೆ ತಮ್ಮ ಮನೆಗಳಲ್ಲಿ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಮನೆಪಾಠ, ಶುಚಿತ್ವ, ಆರೋಗ್ಯ, ಬಟ್ಟೆ, ಪುಸ್ತಕ ಇತ್ಯಾದಿಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಬದಲಿಯಾಗಿ ಆರ್ಥಿಕ ಸಶಕ್ತರಲ್ಲದ ಬಹುತೇಕ ದಲಿತ ಪೋಷಕರು ತಮ್ಮ ಜೀವನದ ಕೆಲಸ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ತಮ್ಮ ಮಕ್ಕಳನ್ನು ತಮ್ಮ ಜೊತೆ ಕೂಲಿ ಕೆಲಸ ಅಥವಾ ಹೊಲಗದ್ದೆಗಳಿಗೆ ಕರೆದುಕೊಂಡು ಹೋಗದೆ, ಅವರನ್ನು ಶಾಲೆಗೆ ಕಳುಹಿಸುವುದು ಮಾತ್ರ ಅವರ ಕೆಲಸವಾಗಿರುತ್ತದೆ. ಕೆಲವು ಸಾರಿ ದಲಿತ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಕೆಲಸವನ್ನು ಮಾಡಲಾಗದೆ ತಮ್ಮ ಕೆಲಸಗಳಿಗೆ ಹೋಗುವುದರಿಂದ ದಲಿತ ಮಕ್ಕಳು ಶಾಲೆಗೆ ಬರುವಾಗ ತಮ್ಮ ಇಷ್ಟದಂತೆ ಬರುವುದು ತಿಳಿದಿದೆ. ಅದಕ್ಕಾಗಿ ದಲಿತ ಮಕ್ಕಳು ಇತರೆ ಮಕ್ಕಳು ಇದ್ದಂತೆ ಇರುವುದಿಲ್ಲ ಎಂಬ ಸತ್ಯಾಂಶವನ್ನು ಕಂಡುಕೊಳ್ಳಲಾಗಿದೆ. ಒಂದರ್ಥದಲ್ಲಿ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಈ ರೀತಿಯ ಸಹಕಾರ ನೀಡುವುದರ ಜೊತೆಯಲ್ಲಿ ಇನ್ನಷ್ಟು ಜಾಗೃತರಾದರೆ ಸರಿಯಾಗುತ್ತದೆ.

೫.೮. ದಲಿತರಿಗೆ ಶಾಲಾ ಸೌಲಭ್ಯಗಳು ಲಭ್ಯವಾಗುತ್ತವೆಯೆ ?

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸುದಾರಿಸಲು ಅನೇಕ ಪ್ರಗತಿದಾಯಕ ಯೋಜನೆಗಳನ್ನು ರೂಪಿಸಲಾಗಿದೆ. ಇದರ ಫಲವಾಗಿ ಬಹುತೇಕವಾಗಿ ಗ್ರಾಮೀಣ ಜನತೆ ತಾವು ವಾಸಿಸುವ ನೆಲೆಯಿಂದ ಒಂದು ಕಿಲೋಮೀಟರ್ ದೂರದೊಳಗೆ ಪ್ರಾಥಮಿಕ ಶಾಲೆಗಳನ್ನು ಪಡೆಯುತ್ತಿದ್ದಾರೆ. ಹಾಗಾಗಿ ಗ್ರಾಮೀಣ ಜನತೆ ತಮ್ಮ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ಬಹಳ ದೂರ ಹೋಗಬೇಕಾದ ಸಮಸ್ಯೆ ಬಹಳಷ್ಟು ಮಟ್ಟಿಗೆ ಪರಿಹಾರವಾದಂತಾಗಿದೆ. ಈ ಸಮಸ್ಯೆ ಪರಿಹಾರವಾದಂತೆ ಕಂಡರೂ ೧೯೯೭-೯೮ರ ಶಿಕ್ಷಣ ಇಲಾಖೆಯ ವರದಿಯಂತೆ, ಗ್ರಾಮೀಣ ಜನತೆಗೆ ಶಾಲಾ ಸೌಲಭ್ಯ ದೊರೆಯುವುದಕ್ಕಿಂತ ವಿವಿಧ ಕಾರಣಗಳಿಂದ ಸರಳವಾಗಿ ದೊರಕುತ್ತಿಲ್ಲ ಎಂಬುದೇ ಸಮಸ್ಯೆಯಾಗಿದೆ. ಪ್ರಾಥಮಿಕವಾಗಿ ಶಾಲೆಯು ದೊರೆಯುವಿಕೆಯನ್ನು ಬೌದ್ಧಿಕ ಅಂತರದಿಂದ ಗಮನಿಸುವುದರ ಬದಲಿಯಾಗಿ ಸಾಮಾಜಿಕ ಅಂತರದಿಂದ ನೋಡಿದಾಗ ಅದು ತಿಳಿಯುತ್ತದೆ.

ಗ್ರಾಮೀಣ ಪ್ರದೇಶಗಳು ಸರ್ವೆಸಾಮಾನ್ಯವಾಗಿ ಬೇರೆ ಬೇರೆ ಜನವಸತಿ ಪ್ರದೇಶಗಳಾಗಿ ವಿಂಗಡಣೆಯಾದಂತೆ ನೆಲೆಗೊಂಡಿರುತ್ತವೆ. ನಿರ್ದಿಷ್ಟವಾಗಿ ದಲಿತ ಜಾತಿಗೆ ಸೇರಿದ ಪ್ರಮುಖರಾದ ಹರಿಜನ, ಚಲವಾದಿ, ಮತ್ತು ಭೋವಿ ಜನಾಂಗದ ವಸತಿಗಳು ಊರಿನ ಕೊನೆಯ ಭಾಗದಲ್ಲಿ ಪ್ರತ್ಯೇಕವಾಗಿ ಒಂದು ಕಡೆ ನೆಲೆಗೊಂಡಿರುತ್ತವೆ. ಈ ಸಂಗತಿಯು ಪ್ರಸ್ತುತ ಅಧ್ಯಯನ ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳಲಾಗಿದೆ. ಹೀಗಿದ್ದಾಗ ಒಂದು ಜನವಸತಿಯಲ್ಲಿನ ದಲಿತ ಮಕ್ಕಳು ಇನ್ನೊಂದು ಪ್ರದೇಶದಲ್ಲಿನ ಶಾಲೆಗೆ ಹೋಗಲು ಜಾತಿಯ ಒತ್ತಡದಿಂದ ಸಾಮಾಜಿಕವಾಗಿ ಸಾಧ್ಯವಾಗದಿರುವ ಸನ್ನಿವೇಶಗಳು ಸೃಷ್ಟಿಯಾಗುತ್ತವೆ.

ಉದಾಹರಣೆಗೆ ಆಲೂರು ಗ್ರಾಮದ ಭೋವಿ (ವಡ್ಡರಹಟ್ಟಿ) ಜನಾಂಗದವರು ವಾಸಿಸುವ ಪ್ರದೇಶದ ಶಾಲೆಗೆ ಆಲೂರಿನ ಬೇರೆ ಜನಾಂಗದ ಮಕ್ಕಳು ದಾಖಲಾಗುವುದಿಲ್ಲ ಮತ್ತು ಹರಿಜನ ಜಾತಿಯ ಮಕ್ಕಳು ಕೂಡ ವಡ್ಡರಟ್ಟಿ ಶಾಲೆಗೆ ಹೋಗುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆಲೂರಿನ ವಡ್ಡರಹಟ್ಟಿ ಪ್ರಾಥಮಿಕ ಶಾಲೆ ಮತ್ತು ಹರಿಜನರ ವಾಸಸ್ಥಳಗಳು ಅಕ್ಕಪಕ್ಕ ಇದ್ದರೂ ಆಲೂರಿನ ಹರಿಜನ ಮಕ್ಕಳು ಆಲೂರು ವಡ್ಡರಹಟ್ಟಿ ಶಾಲೆಗೆ ಹೋಗುವುದಿಲ್ಲ. ಬದಲಿಯಾಗಿ ಹರಿಜನರ ಮಕ್ಕಳು ಆಲೂರು ವಡ್ಡರಹಟ್ಟಿಯ ಶಾಲೆಗಿಂತ ಸ್ವಲ್ಪ ದೂರದಲ್ಲಿರುವ ಇನ್ನೊಂದು ಶಾಲೆಗೆ ಹೋಗುತ್ತಾರೆ. ಈ ಪರಿಸ್ಥಿತಿ ಸಾಮಾನ್ಯವಾಗಿ ಕಂಡುಬರುತ್ತದೆ. ಆದ್ದರಿಂದ ಶಾಲಾ ಸೌಲಭ್ಯವು ಸಾಮಾಜಿಕವಾಗಿ ಅಂತರದಿಂದ ಕೂಡಿದೆ ಎಂದೇ ಹೇಳಬಹುದಾಗಿದೆ.

ದ್ವಿತೀಯವಾಗಿ, ನಮ್ಮ ಸಂವಿಧಾನದ ನಿರ್ದೇಶಕ ತತ್ವದ ಪ್ರಕಾರ ೧೪ ವರ್ಷದ ಎಲ್ಲಾ ಮಕ್ಕಳಿಗೂ ಶಿಕ್ಷಣ ಒದಗಿಸಬೇಕೆಂಬುದರ ಹಿನ್ನೆಲೆಯಲ್ಲಿ ದೊರಕುವ ಶಾಲಾ ಸೌಲಭ್ಯಗಳನ್ನು ಭೌತಿಕ ಅಥವಾ ಭೌಗೋಳಿಕ ಅಂತರದಿಂದಲೂ ನೋಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡುವಾಗ ಶಾಲಾ ಸೌಲಭ್ಯಗಳು ಲಭ್ಯವಾಗುವಿಕೆಯನ್ನು ಕೇವಲ ಪ್ರಾಥಮಿಕ ಶಾಲೆಗೆ ಮಾತ್ರ ಸೀಮಿತಗೊಳಿಸದೆ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಯ ಹಂತದವರೆಗೆ ಅನ್ವಯಿಸುವಂತೆ ಪರಿಗಣಿಸಬೇಕಾಗುತ್ತದೆ. ಈ ರೀತಿಯಾಗಿ ಪರಿಗಣಿಸಿ ನೋಡಿದಾಗ, ಪ್ರಾಥಮಿಕ ಶಾಲೆಗಳು ಸ್ಥಾಪಿತವಾಗಿರುವ ಪ್ರಮಾಣ ಮತ್ತು ಸಮೀಪದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳು ಲಭ್ಯವಾಗುತ್ತಿಲ್ಲ. ಉದಾಹರಣೆಗೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ 'ಯಲ್ಲಮ್ಮ ಕ್ಯಾಂಪ್' ಎಂಬ ಜನವಸತಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆ ಮಾತ್ರ ಲಭ್ಯವಿದೆ. ಹೆಚ್ಚಾಗಿ ದಲಿತರೇ ವಾಸವಾಗಿರುವ ಈ ಪ್ರದೇಶದ ದಲಿತ ಮಕ್ಕಳು ಮಾಧ್ಯಮಿಕ ಶಾಲೆಗೆ ೨ ಕಿಲೋಮೀಟರ್ ದೂರದ ನಂ ೧೦ ಮುದ್ದಾಪುರ ಗ್ರಾಮಕ್ಕೆ ಅಥವಾ ಅಷ್ಟೇ ದೂರದ ಕಂಪ್ಲಿ ಪಟ್ಟಣಕ್ಕೆ ಹೋಗಬೇಕಾಗಿದೆ. ಅದರಂತೆ ಯಲ್ಲಮ್ಮಕ್ಯಾಂಪಿನ ದಲಿತ ಮಕ್ಕಳು ಪ್ರೌಢಶಾಲೆಗಾಗಿ ಕಂಪ್ಲಿಗೇ ಹೋಗಬೇಕಾಗಿದೆ. ಇಂತಹ ಸ್ಥಿತಿಯಲ್ಲಿ ದಲಿತ ಮಕ್ಕಳಿಗೆ ಶಾಲಾ ಸೌಲಭ್ಯವು ಸಾಮಾಜಿಕ ಅಂತರವಿಲ್ಲದೆ ಭೌತಿಕ ಅಥವಾ ಭೌಗೋಳಿಕವಾಗಿಯೂ ಸರಿಯಾಗಿ ಲಭ್ಯವಾಗುತ್ತಿಲ್ಲವೆಂದು ತೀರ್ಮಾನಿಸಬಹುದು.

ತೃತೀಯವಾಗಿ ನೈಸರ್ಗಿಕ ಹಿನ್ನೆಲೆಯಲ್ಲಿ ದಲಿತರಿಗೆ ಶಾಲಾ ಸೌಲಭ್ಯಗಳು ಲಭ್ಯವಾಗುವಿಕೆಯನ್ನು ಗಮನಿಸಬೇಕಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಶಾಲೆಗಳಿದ್ದರೂ, ಗುಡ್ಡಗಾಡು ಪ್ರದೇಶಗಳಲ್ಲಿ ಪ್ರತ್ಯೇಕ ಜನವಸತಿ ನೆಲೆಗಳಿಂದ ಮಕ್ಕಳು ಗುಡ್ಡ ಹತ್ತಿ, ಇಳಿದು, ಹಳ್ಳದಾಟಿ ಶಾಲೆಗೆ ಹೋಗಬೇಕಾಗುತ್ತದೆ. ರಸ್ತೆಗಳಿಲ್ಲದ ಜನವಸತಿ ನೆಲೆಗಳಿಂದ ಮಕ್ಕಳು ಮಳೆಗಾಲದಲ್ಲಿ ಶಾಲೆಗೆ ಹೋಗುವುದು, ಮತ್ತು ರಸ್ತೆಗಳಿದ್ದರೂ, ಬಸ್‌ಸೌಲಭ್ಯಗಳಿಲ್ಲದ ಪ್ರದೇಶದ ಮಕ್ಕಳು ಶಾಲೆಗೆ ಹೋಗಿ ಬರುವುದು ಒಂದು ಸಾಹಸವಾಗುತ್ತದೆ. ವಿಶೇಷವಾಗಿ ಅಧ್ಯಯನ ಕ್ಷೇತ್ರದ ಪ್ರದೇಶದಲ್ಲಿ ಬೇಸಿಗೆ ಕಾಲದಲ್ಲಿ ವಿಪರೀತ

ಬಿಸಿಲಿನ ತಾಪಮಾನದ ಕಾರಣದಿಂದ ದಲಿತ ಮಕ್ಕಳು ಶಾಲೆಗೆ ಹೋಗುವುದು ಕಷ್ಟದಾಯಕ. ಈ ರೀತಿಯಾದ ಅಡಚಣೆಗಳು ಕಣಿವೆ ತಿಮ್ಮಲಾಪುರ ಗ್ರಾಮದಲ್ಲಿ ಕಂಡುಬರುತ್ತವೆ. ಸುತ್ತಲೂ ಸಣ್ಣಪುಟ್ಟ ಗುಡ್ಡಗಳಿಂದ ಕೂಡಿದ ಈ ಗ್ರಾಮದ ದಲಿತ ಮಕ್ಕಳು ಪ್ರೌಢ ಶಾಲೆಯ ಶಿಕ್ಷಣ ಪಡೆಯಲು ಅನಿವಾರ್ಯವಾಗಿ ೫ ಕಿ.ಲೋ. ಮೀಟರ್ ದೂರದ ರಾಮಸಾಗರ ಗ್ರಾಮಕ್ಕೆ ಬರದೆ ಅನ್ಯ ಮಾರ್ಗವೇ ಇಲ್ಲ. ಅಲ್ಲದೆ ಈ ಕಣಿವೆ ತಿಮ್ಮಲಾಪುರದಿಂದ ರಾಮಸಾಗರಕ್ಕೆ ಹೋಗುವ ತಿಮ್ಮಲಾಪುರದ ಕೆರೆಯ ಏರಿಯ ಮೇಲಿನ ಕಚ್ಚಾರಸ್ತೆಯನ್ನು ಅವಲಂಬಿಸಬೇಕಾಗಿದೆ. ಜೊತೆಗೆ ಬಸ್‌ಸೌಲಭ್ಯವೂ ಕಡಿಮೆ ಇರುವ ಈ ಗ್ರಾಮದ ಮಕ್ಕಳು ಒಟ್ಟಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ಪಡೆದುಕೊಳ್ಳುವುದು ಹರ ಸಾಹಸವೇ ಸರಿ.

ನಾಲ್ಕನೇಯದಾಗಿ ಶಾಲಾ ಶಿಕ್ಷಣಕ್ಕೆ ಪೂರಕವಾದಂತೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ನೋಟ್ ಪುಸ್ತಕ, ಶಾಲಾಬ್ಯಾಗ್, ಮಧ್ಯಾನ್ನದ ಬಿಸಿಯೂಟ, ವಿದ್ಯಾರ್ಥಿವೇತನ ಇತ್ಯಾದಿಗಳು ದಲಿತ ಮಕ್ಕಳಿಗೆ ಲಭ್ಯವಾಗುತ್ತವೆಯೇ ಎಂಬುದನ್ನು ಕೂಡ ಪರಿಶೀಲಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರದ ದಲಿತ ಪೋಷಕರಿಗೆ ಶಿಕ್ಷಣ ಕ್ಷೇತ್ರದ ಸರ್ಕಾರಿ ಉಚಿತ ಸೌಲಭ್ಯಗಳು ಸರಿಯಾಗಿ ಸಿಗುತ್ತವೆಯೇ? ಎಂಬ ಪ್ರಶ್ನೆ ಕೇಳಿ ಸಂದರ್ಶನ ಮಾಡಿದಾಗ ಶೇಕಡ ೯೮ರಷ್ಟು ಪೋಷಕರು 'ಹೌದು' ಎಂದು ಉತ್ತರಿಸಿದ್ದಾರೆ. ಉಳಿದಂತೆ ಶೇಕಡ ೨ರಷ್ಟು ದಲಿತ ಪೋಷಕರು ಮಾತ್ರ ಸರಿಯಾಗಿ ಸಿಗುವುದಿಲ್ಲ, ಸೌಲಭ್ಯಗಳು ಸಿಕ್ಕರೂ ತಡವಾಗಿ ಸಿಗುತ್ತವೆ, ಕಳಪೆ ಮಟ್ಟದಲ್ಲಿ ಸಿಗುತ್ತವೆ, ಅಲ್ಲದೆ ಅದಕ್ಕಾಗಿ ಸ್ವಲ್ಪ ಹಣ ಖರ್ಚಾಗುತ್ತದೆ ಎಂಬಂತಹ ಉತ್ತರಗಳನ್ನು ನೀಡಿದ್ದಾರೆ. ಇದನ್ನು ಗಮನಿಸಿದಾಗ ಉಚಿತ ಸೌಲಭ್ಯಗಳನ್ನೊಳಗೊಂಡಂತೆ ಶಾಲಾ ಸೌಲಭ್ಯಗಳು ಸಂಪೂರ್ಣವಾಗಿ ಎಲ್ಲಾ ದಲಿತರಿಗೆ ಲಭ್ಯವಾಗುತ್ತಿಲ್ಲವೆಂಬುದು ತಿಳಿಯುತ್ತದೆ.

ಒಂದು ಉತ್ತಮ ಮಟ್ಟದಲ್ಲಿ ಶಾಲಾ ಸೌಲಭ್ಯಗಳು ದಲಿತರಿಗೆ ಲಭ್ಯವಾಗುವಂತೆ ಕಂಡುಬಂದರೂ ಅವುಗಳೂ ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿವೆಯೇ ಎಂಬುದು ಅಷ್ಟೇ ಮುಖ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಪರಿಮಾಣಾತ್ಮಕ ಅಂಶಕ್ಕಿಂತ ಗುಣಾತ್ಮಕ ಶಿಕ್ಷಣದ ಅಂಶವೇ ಹೆಚ್ಚಾಗಿ ಚರ್ಚಿಸಲ್ಪಡುತ್ತಿದೆ. ಈ ಗುಣಾತ್ಮಕ ಶಿಕ್ಷಣದ ಪರಿಕಲ್ಪನೆ ಬಹಳ ವ್ಯಾಪಕವಾದದ್ದು ಮತ್ತು ವಿವಿಧ ದೃಷ್ಟಿಕೋನ ಹಾಗೂ ವಿವಿಧ ಕಾಲಘಟ್ಟಗಳಲ್ಲಿ ಇದು ಮರುವ್ಯಾಖ್ಯಾನಕ್ಕೆ ಒಳಗಾಗುತ್ತದೆ. ಹಾಗಾಗಿ ಪ್ರಸ್ತುತ ಅಧ್ಯಯನದಲ್ಲಿ ಗುಣಾತ್ಮಕ ಶಿಕ್ಷಣ ಕುರಿತಂತೆ ಹೆಚ್ಚಿನ ಚರ್ಚೆಗಳನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ಅಲ್ಲದೆ ಈ ಕುರಿತ ಹೆಚ್ಚಿನ ಅಧ್ಯಯನಗಳನ್ನು ನಿರೀಕ್ಷಿಸಬಹುದಾಗಿದೆ.

ಉಪಸಂಹಾರ

ಪ್ರಸ್ತುತ ಅಧ್ಯಯನದಿಂದ ಆಡಳಿತಶಾಹಿ ಮತ್ತು ಶೈಕ್ಷಣಿಕ ಯೋಜನಾಕಾರರ ನಿಲುವುಗಳಿಗೆ ವಿರುದ್ಧವಾಗಿ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದಾರೆ ಎಂಬ ಅಂಶ

ಸ್ಪಷ್ಟವಾಗುತ್ತದೆ. ಅಲ್ಲದೆ ಇಂದಿನ ಆಧುನಿಕ ದಿನಮಾನದಲ್ಲಿ ಯಾರೊಬ್ಬರೂ ಶಿಕ್ಷಣವನ್ನು ಕಡೆಗಣಿಸುವುದಿಲ್ಲ ಎಂಬುದನ್ನು ಬಹುತೇಕ ಪೋಷಕರು ಸ್ಪಷ್ಟಪಡಿಸುತ್ತಾರೆ. ಈ ರೀತಿಯ ಭಾವನೆ ಸಾಮಾಜಿಕ ವಿವಿಧ ವರ್ಗಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಒಂದೇ ರೀತಿಯಾಗಿದೆ. ದಲಿತ ಪೋಷಕರಲ್ಲಿಯೂ ಇದೇ ಮನೋಭಾವನೆಯನ್ನು ಕಾಣುತ್ತಿದ್ದರೂ, ಇತರೆ ಜಾತಿಯವರಲ್ಲಿರುವಂತೆಯೇ ಗಂಡುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಾರೆ. ಇದರ ಅರ್ಥ ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಕಡೆಗಣಿಸುತ್ತಾರೆಂದಲ್ಲ. ಸಮಾಜದ ಬಹುತೇಕ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಿರುವ ಆರ್ಥಿಕ ಮೌಲ್ಯವನ್ನು ಪರಿಗಣಿಸಿ ಶಿಕ್ಷಣವನ್ನು ಉಪಕರಣವಾದಿ ನೆಲೆಯಲ್ಲಿ ನೋಡುವಂತೆ ದಲಿತ ಪೋಷಕರೂ ಕೂಡ ಅದೇ ನೆಲೆಯಲ್ಲಿ ನೋಡುತ್ತಿದ್ದಾರೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದರಿಂದ ಬರೀ ಹಣದ ವ್ಯಯವಾಗುತ್ತದೆಯೇ ವಿನಃ ಪ್ರಯೋಜನವಾಗುವುದಿಲ್ಲ. ಹೆಣ್ಣುಮಕ್ಕಳ ವಿವಾಹದ ಸಂದರ್ಭದಲ್ಲಿ ವರದಕ್ಷಣೆಯನ್ನು ಕೊಡದಿರಲಿಕ್ಕಾಗಿ ಅವರಿಗೆ ಕನಿಷ್ಟ ಶಿಕ್ಷಣ ನೀಡಬೇಕು, ಹೆಣ್ಣುಮಕ್ಕಳು ಬೇರೆಯವರ ಮನೆಗೆ ಹೋಗುವುದರಿಂದ ಅವರಿಗೆ ಶಿಕ್ಷಣವೇ ಬೇಡ, ಹೆಣ್ಣುಮಕ್ಕಳಿಗೆ ನೌಕರಿ ಅವಕಾಶಗಳು ಕಡಿಮೆಯಾಗಿರುವುದರಿಂದ ಅವರಿಗೆ ಶಿಕ್ಷಣದ ಅವಶ್ಯಕತೆ ಇಲ್ಲವೆಂಬ ಅನೇಕ ಸಾಮಾಜಿಕ ಅಂಶಗಳು ಪೋಷಕರಲ್ಲಿವೆ. ಇದರ ಮಧ್ಯದಲ್ಲಿಯೂ ಸಾಮಾಜಿಕ ಪರಿವರ್ತನೆಯ ಪರಿಣಾಮವಾಗಿ ಹೆಣ್ಣುಮಕ್ಕಳು ಗಂಡನ ಮನೆಯಲ್ಲಿ ಉತ್ತಮ ಜೀವನ ಮಾಡಲು, ಗಂಡುಮಕ್ಕಳಂತೆ ಅವರೂ ಕೂಡ ಸಮಾನವಾದ ಜೀವನ ಮಾಡಲು, ಅಲ್ಲದೆ ಅವರು ಕೂಡ ನೌಕರಿ ಪಡೆಯಲು ಹೆಣ್ಣುಮಕ್ಕಳಿಗೂ ಶಿಕ್ಷಣ ಅವಶ್ಯಕವಾಗಿದೆ ಎಂಬ ಭಾವನೆಗಳನ್ನು ಪೋಷಕರು ವ್ಯಕ್ತಪಡಿಸುತ್ತಾರೆ. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಪೋಷಕರಲ್ಲಿರುವ ಸಕಾರತ್ಮಕ ಧೋರಣೆಗಳು ಇನ್ನಷ್ಟು ವ್ಯಾಪಕವಾಗಿ ಗಟ್ಟಿಗೊಳ್ಳಬೇಕಾಗಿದೆ.

ಶಾಲಾ ವ್ಯವಸ್ಥೆ ಮತ್ತು ಶಿಕ್ಷಣದ ಭರವಸೆಗಳಿಗೆ ಸಂಬಂಧಿಸಿದಂತೆ ಗುಣಮಟ್ಟದ ಶಿಕ್ಷಣವನ್ನು ಸಮಾಜೋ-ಆರ್ಥಿಕ ಅಂಶಗಳು ಪ್ರಭಾವಿಸುತ್ತವೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ. ಆದರೆ ಈ ಕುರಿತಂತೆ ಇರುವ ಮನೋಭಾವ ಪೋಷಕರಿಂದ ಪೋಷಕರಿಗೆ ಭಿನ್ನ ವಾಗಿರುತ್ತದೆ. ಅಲ್ಲದೆ ಗುಣಮಟ್ಟದ ಶಿಕ್ಷಣವು ವಿವಿಧ ಕಾಲಘಟ್ಟಗಳಲ್ಲಿಯೂ ಮರುವ್ಯಾಖ್ಯಾನಕ್ಕೆ ಒಳಪಡುವ ವಿಷಯವೂ ಆಗಿದೆ. ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ನಿರುತ್ಸಾಹಕ ಅಂಶವು ಪೋಷಕರು ಅಥವಾ ಮಕ್ಕಳ ಮೇಲೆ ಪ್ರಭಾವ ಬೀರಿದರೂ, ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ನಿರ್ದಿಷ್ಟ ಪ್ರಮಾಣದ ಕಲಿಕೆಯ ಶಾಲಾ ಚಟುವಟಿಕೆಗಳು ಇರದ ಶಾಲೆಗಳಲ್ಲಿ, ಇದು ಇನ್ನೂ ಹೆಚ್ಚಾಗಿ ಕಂಡುಬರುತ್ತದೆ. ಈ ರೀತಿಯ ಸನ್ನಿವೇಶಗಳಲ್ಲಿ ಅನಕ್ಷರಸ್ಥ ಪೋಷಕರು ಆಗಿಂದಾಗ್ಗೆ ತಮ್ಮನ್ನು ತಾವೇ ದೂಷಿಸಿಕೊಳ್ಳುವ ಮೂಲಕ ಶಾಲಾ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ಗುರುತಿಸುತ್ತಾರೆ. ಈ ನಿಟ್ಟಿನಲ್ಲಿ ಪೋಷಕರೇ ಸ್ಥಳೀಯವಾಗಿ ಸಮಸ್ಯೆಗಳಿಗೆ ಪರಿಹಾರ ಗಳನ್ನು ಕಂಡುಕೊಳ್ಳುವ ಪ್ರಯತ್ನಗಳನ್ನು ಮಾಡುವ ಅವಶ್ಯಕತೆ ಇದೆ.

ಒಂದು ಮಗುವಿನ ಶಿಕ್ಷಣದ ಖಾಸಗಿ ವೆಚ್ಚವು ೧೦೦೦ದಿಂದ ೫೦೦೦ ರೂಪಾಯಿಗಳಾಗಿರುತ್ತವೆ ಎಂಬ ನಿರ್ಧಾರವು ಪ್ರಸ್ತುತ ಅಧ್ಯಯನದ್ದಾಗಿದೆ. ಈ ರೀತಿಯಾಗಿ ಖಾಸಗಿ ಖರ್ಚುಗಳನ್ನು ಮಾಡಿದರೂ, ದಲಿತ ಮಕ್ಕಳ ಶಿಕ್ಷಣದಲ್ಲಿ ಹೆಚ್ಚಿನ ಬದಲಾವಣೆಗಳಾಗಿರುವುದಿಲ್ಲ ಎಂಬ ಅಂಶವನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ. ದಲಿತ ಪೋಷಕರು ಉತ್ತಮವಾದ ಶೈಕ್ಷಣಿಕ ಪರಿಸರ ಹೊಂದಿಲ್ಲ. ದಲಿತ ಪೋಷಕರು ತಮ್ಮ ಜೀವನದ ಕೆಲಸಕಾರ್ಯಗಳಿಗೆ ಮಹತ್ವಕೊಟ್ಟಷ್ಟು ತಮ್ಮ ಮಕ್ಕಳ ಶಿಕ್ಷಣವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ತಮ್ಮ ಮಕ್ಕಳನ್ನು ತಮ್ಮ ಜೊತೆ ಹೊಲ-ಗದ್ದೆಗಳಿಗೆ ಕರೆದುಕೊಂಡು ಹೋಗದೆ ಶಾಲೆಗೆ ಕಳುಹಿಸುವುದು ಮಾತ್ರ ತಮ್ಮ ಕೆಲಸವೆಂದು ಭಾವಿಸಿರುವುದು ಇನ್ನು ಮುಂತಾದವುಗಳೇ ಇದಕ್ಕೆಲ್ಲಾ ಕಾರಣ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಲಿತ ಪೋಷಕರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಸಮರೋಪಾದಿಯಲ್ಲಿ ಮಾಡುವ ಅಗತ್ಯವಿದೆ.

ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ಇರುವ ಅನೇಕ ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮಗಳಲ್ಲಿ ಕೆಲವು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿ, ಬಹುತೇಕ ಕಾರ್ಯಕ್ರಮಗಳು ವಿಫಲವಾಗಿವೆ. ಸ್ಥಳೀಯವಾಗಿರುವ ಸಮಸ್ಯೆಗಳನ್ನು ತಿಳಿದುಕೊಳ್ಳದೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದೇ ವಿಫಲತೆಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯರ ಸಹಭಾಗಿತ್ವದ ಮೂಲಕ ಶಾಲೆಯಿಂದ ಹೊರಗಿರುವಂತಹ ೬-೧೪ ವಯೋಮಾನದ ಮಕ್ಕಳು ನಿಗದಿತ ಅವಧಿಯಲ್ಲಿ ಶಾಲೆಗೆ ಬರುವಂತೆ ಮತ್ತು ಕಲಿಯುವಂತೆ ಮಾಡುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ರೂಪಿಸಿ ಜಾರಿಗೆ ತರಬೇಕಾಗಿದೆ. ಈ ಹಂತದಲ್ಲಿ ಇಡೀ ಸಮಾಜ, ಸರ್ಕಾರ ಮತ್ತು ವ್ಯವಸ್ಥೆಯೇ ಸಂಪೂರ್ಣವಾಗಿ ಹೊಣೆಗಾರಿಕೆಯಿಂದ ಕಾರ್ಯೋನ್ಮುಖವಾಗಬೇಕಾಗಿದೆ.

ಸರ್ಕಾರದ ಅಂಕಿಅಂಶಗಳು, ಶೈಕ್ಷಣಿಕ ಸಮೀಕ್ಷೆಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಶೈಕ್ಷಣಿಕ ಅಧ್ಯಯನಗಳು ಎಲ್ಲರಿಗೂ ಶಾಲೆಗಳು ದೊರಕುತ್ತವೆ ಎಂಬ ಮಾಹಿತಿಯನ್ನು ಒದಗಿಸುತ್ತವೆ. ಈ ಪ್ರಕಾರ ನೋಡಿದಾಗ ಗ್ರಾಮೀಣ ಪ್ರದೇಶದಲ್ಲಿ ಅನುಕೂಲವಾದ ಅಂತರದಲ್ಲಿ ಪ್ರಾಥಮಿಕ ಶಾಲೆಗಳು ದೊರೆತರೂ ಅದೇ ಪ್ರಮಾಣದಲ್ಲಿ ಮಾಧ್ಯಮಿಕ ಶಾಲೆಗಳು ದೊರಕುತ್ತಿಲ್ಲ ಹಾಗಾಗಿ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳನ್ನು ದೂರದ ಸ್ಥಳಗಳಿಗೆ ಮಾಧ್ಯಮಿಕ ಶಾಲೆಗಳಿಗೆ ಕಳುಹಿಸಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹೆಣ್ಣುಮಕ್ಕಳಿಗೆ ಶಾಲೆಗೆ ಹೋಗುವ ಬಯಕೆ ಇದ್ದರೂ ಪೋಷಕರು ಇಷ್ಟಪಡದಿರುವುದರಿಂದ ಅಂತಿಮವಾಗಿ ಹೆಣ್ಣುಮಕ್ಕಳು ಮಾಧ್ಯಮಿಕ ಶಾಲೆಯಿಂದ ವಂಚಿತರಾಗುತ್ತಾರೆ. ಈ ಪರಿಸ್ಥಿತಿ ದಲಿತ ಪೊಷಕರಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರೂ ಮುಂಬರುವ ದಿನಮಾನಗಳಲ್ಲಿ ಸುಧಾರಣೆಗಳನ್ನು ನಿರೀಕ್ಷಿಸಬಹುದಾಗಿದೆ.

ಗ್ರಂಥಸೂಚಿ

೧. ಅರವಿಂದ ಮಾಲಗತ್ತಿ, (೨೦೦೦), *ದಲಿತ ಸಾಹಿತ್ಯದ ತಾತ್ವಿಕ ನೆಲೆ-ನಿಲುವುಗಳು*, ದಲಿತಜ್ಞ, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ ಗದಗ.

೨. ಅಧ್ಯಯನ ಕ್ಷೇತ್ರಕಾರ್ಯದಲ್ಲಿನ ಸಂದರ್ಶನ, ಅವಲೋಕನ, ಮತ್ತು ಅನುಭವಗಳ ಮಾಹಿತಿಗಳು.

೩. ಉಷಾ ರಾಮಕುಮಾರ್, (೨೦೦೭), *ಕರ್ನಾಟಕದಲ್ಲಿ ಸಾಕ್ಷರತಾ ಕಾರ್ಯಕ್ರಮಗಳ ಪ್ರಗತಿ ಒಂದು ವಿಶ್ಲೇಷಣೆ*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಅಕ್ಟೋಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೪. ಕರೂರ ಎನ್.ಜಿ., (೨೦೦೧), *ಪ್ರಾಥಮಿಕ ಶಿಕ್ಷಣ-ಸಮಸ್ಯೆಗಳು ಹಾಗೂ ಪರಿಹಾರಗಳು*, ಶಿಕ್ಷಣ ಮಾರ್ಗ, ಸ್ವಪ್ನಬುಕ್ ಹೌಸ್, ಬೆಂಗಳೂರು.

೫. ಕೃಷ್ಣಕುಮಾರ್, ಕನ್ನಡಕ್ಕೆ ರಜನೀಕಾಂತ್ ಎಂ.ಎಸ್., (೨೦೦೬), *ಹೊಸ ಶೈಕ್ಷಣಿಕ ಸವಾಲಿನಲ್ಲಿ ಗ್ರಾಮೀಣ ಮಕ್ಕಳು*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಡಿಸೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೬. ಗಣೇಶ ಭಟ್ಟ, (೨೦೦೭), *ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಶಿಕ್ಷಕರ ಪಾತ್ರ*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೭. ಗಣೇಶ ಭಟ್ಟ, (೨೦೦೭), *ಮೂಲ ಸೌಲಭ್ಯಗಳಿಲ್ಲದೆ ಸಾರ್ವತ್ರಿಕ ಶಿಕ್ಷಣ ಸಾಧ್ಯವಿಲ್ಲ.* ಟೀಚರ್ ಶೈಕ್ಷಣಿಕ ಮಾಸಪತ್ರಿಕೆ (ಮಾರ್ಚ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

೮. ತಳವಾರ ಎಂ.ಎಸ್. ಮತ್ತು ಗೋವಿಂದರಾಜು, (೨೦೦೩), *ಪರಿಶಿಷ್ಟ ವಿದ್ಯಾರ್ಥಿಗಳಲ್ಲಿ ಮೂಢನಂಬಿಕೆಗಳು ಮತ್ತು ಜಾತ್ಯಾತೀತ ಮನೋಭಾವನೆ*, ಯೋಜನಾ ಅಭ್ಯುದಯ ಮಾಸಪತ್ರಿಕೆ, (ಫೆಬ್ರವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೯. ನಾಗೂರ ಎನ್.ಎಚ್., (೨೦೦೭), *ಕೆ.ಜಿ.ಬಿ.ವಿ. ಶಾಲೆಗಳು*, ಟೀಚರ್ ಶೈಕ್ಷಣಿಕ ಮಾಸಪತ್ರಿಕೆ (ಏಪ್ರಿಲ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

೧೦. ನಂಜುಂಡ ಸ್ವಾಮಿ ಎಂ., (೨೦೦೭), *ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಏಪ್ರಿಲ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೧೧. ಪರಮೇಶ್ವರಯ್ಯ ಸೊಪ್ಪಿನ ಮಠ, (೨೦೦೬), *ಪ್ರಾಥಮಿಕ ಶಿಕ್ಷಣದತ್ತ ಹಂಪಿ ಕನ್ನಡ ವಿಶ್ವವಿದ್ಯಾಲಯ ಒಂದು ವರದಿ,* **ಟೀಚರ್** ಶೈಕ್ಷಣಿಕ ಮಾಸಪತ್ರಿಕೆ (ಅಕ್ಟೋಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

೧೨. ಪಾಂಡುರಂಗ ಬಾಬು, (೨೦೦೬), **ದಲಿತರು ಭಾಷೆ ಮತ್ತು ಶಿಕ್ಷಣ, ದಲಿತರು ಭಾಷೆ ಮತ್ತು ಸಮಾಜ.** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೩. ಪಾರ್ವತಿ ಪಿ.ಎನ್., (೨೦೦೬), *ಪರಿಸರ ಬದಲಾವಣೆಗಾಗಿ ಸ್ವಚ್ಛ ಶಾಲೆ,* **ಯೋಜನಾ** ಅಭ್ಯುದಯ ಮಾಸಪತ್ರಿಕೆ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

೧೪. ಪೂನಂ ಬಟ್ರಾ, (೨೦೦೫), *ವಾಯ್ಸ್ ಅಂಡ್ ಏಜನ್ಸಿ ಆಫ್ ಟೀಚರ್ಸ್ ಮಿಸ್‌ಲಿಂಕ್ ಇನ್ ನ್ಯಾಷನಲ್ ಕರಿಕ್ಯುಲಂ ಫ್ರೆಂ-ವರ್ಕ್ಸ್ ೨೦೦೫,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಅಕ್ಟೋಬರ್), ಹಿತಕಾರಿ ಹೌಸ್ ಶಾಹದ್ ಭಗತ್ ಸಿಂಗ್ ರೋಡ್, ಮುಂಬೈ.

೧೫. ಪ್ರಶಾಂತ್ ಎಚ್.ಡಿ., (೨೦೦೫), **ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೬. ಪ್ರಶಾಂತ್ ಎಚ್.ಡಿ., (೨೦೦೫), *ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರೊಂದಿಗೆ ಸಂವಾದ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೭. ರಿತೀಕ್ ಖೇರ, (೨೦೦೬), *ಮಿಡ್ ಡೇ ಮೀಲ್ಸ್ ಇನ್ ಪ್ರೈಮರಿ ಸ್ಕೂಲ್ ಅಚೀವ್‌ಮೆಂಟ್ಸ್ ಅಂಡ್ ಚಾಲೆಂಜಸ್,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ನವೆಂಬರ್), ಹಿತಕಾರಿ ಹೌಸ್ ಶಾಹದ್ ಭಗತ್ ಸಿಂಗ್ ರೋಡ್, ಮುಂಬೈ.

೧೮. ವಿಜಯ ಭಾಸ್ಕರ್ ತ.ಮ., (೨೦೦೭), *ಕಟ್ಟಕಡೆಯ ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು,* **ಟೀಚರ್** ಶೈಕ್ಷಣಕ ಮಾಸಪತ್ರಿಕೆ (ಡಿಸೆಂಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

೨೦. ಹಜೇಲ ಪಿ.ಡಿ., (೧೯೯೬), *ಸಾಮಾಜಿಕ ಏಳಿಗೆಗೆ ಸಾಧನವಾಗಿ ಶಿಕ್ಷಣ,* **ಯೋಜನಾ** ಅಭ್ಯುದಯ ಮಾಸಪತ್ರಿಕೆ (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

• • •

ಅಧ್ಯಾಯ-೬

ದಲಿತರ ಸಮಾಜೋ-ಆರ್ಥಿಕ ಸ್ಥಿತಿ ಮತ್ತು ಮಕ್ಕಳ ಶಿಕ್ಷಣ

ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಾರ್ವತ್ರಿಕವಾಗಿ ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೂ ನೀಡಬೇಕೆನ್ನುವ ಪ್ರಯತ್ನಗಳು ಸ್ವಾತಂತ್ರ್ಯ ಚಳುವಳಿಯ ಕಾಲಘಟ್ಟದಿಂದ ಇಂದಿನವರೆಗೆ ನಡೆದಿದ್ದರೂ ಗ್ರಾಮೀಣ ಪ್ರದೇಶದ ಬಡವರಿಗೆ, ದಲಿತರಿಗೆ, ಮಹಿಳೆಯರಿಗೆ, ಹಿಂದುಳಿದ ಜಾತಿ-ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಶಿಕ್ಷಣ ನೀಡಬೇಕೆಂಬ ಮಾತುಗಳು ಕೇಳುತ್ತಲೇ ಇವೆ. ಗ್ರಾಮೀಣ ಪ್ರದೇಶದ ಶೈಕ್ಷಣಿಕ ಅಭಿವೃದ್ಧಿಯನ್ನು ಅಸಮಾನವಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯೊಳಗೇ ಮಾಡಬೇಕಾಗಿದೆ. ಶೈಕ್ಷಣಿಕ ಅಭಿವೃದ್ಧಿ ಸಾಧಿಸುವಾಗ ಸಾಮಾಜಿಕ-ಸಾಂಸ್ಕೃತಿಕ ಚೌಕಟ್ಟಿನೊಳಗಡೆಯೇ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಆದ್ಯತೆ ನೀಡುವುದು ಅಗತ್ಯವಾಗಿದೆ. ಆದರೆ ಅದಕ್ಕೆ ಅವಶ್ಯಕವಾಗಿ ಬೇಕಾಗಿರುವ ಸಾಮಾಜಿಕ, ಸಾಂಸ್ಕೃತಿ, ಶೈಕ್ಷಣಿಕ ಪರಿಸರವು ನಮ್ಮ ಸಮಾಜದಲ್ಲಿ ಅಷ್ಟಾಗಿ ಕಂಡುಬರುತ್ತಿಲ್ಲ. ಆ ಕಾರಣದಿಂದ ನಮ್ಮಲ್ಲಿ ಬಡವರು, ದಲಿತರು, ಮಹಿಳೆಯರು, ಹಿಂದುಳಿದ ಜಾತಿ ವರ್ಗದವರು ಮತ್ತು ಅಲ್ಪಸಂಖ್ಯಾತರು ಶಾಲಾ ಶಿಕ್ಷಣದ ಸಾರ್ವತ್ರೀಕರಣದಿಂದ ವಂಚಿತರಾಗಿದ್ದಾರೆ.

ಹೀಗೆ ವಂಚಿತರಾದವರಲ್ಲಿ ದಲಿತರು ಅದರಲ್ಲಿಯೂ ಪರಿಶಿಷ್ಟ ಜಾತಿಯ ಜನರು ಮತ್ತು ಮಹಿಳೆಯರು ಪ್ರಮುಖರಾಗಿದ್ದಾರೆ. ಮಕ್ಕಳ ಶಾಲಾ ಭಾಗವಹಿಸುವಿಕೆ, ಸಾಧನೆ ಮತ್ತು ಸಾಮರ್ಥ್ಯಗಳನ್ನು ಕುರಿತು ಶಿಕ್ಷಣ ಕ್ಷೇತ್ರದಲ್ಲಿ ಈಗಾಗಲೇ ನಡೆದಿರುವ ಅಧ್ಯಯನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಸಂಗತಿಯು ಸ್ಪಷ್ಟವಾಗುತ್ತದೆ. ಆರ್ಥಿಕವಾಗಿ ಪ್ರಬಲವಾದ ಮತ್ತು ಸಾಂಸ್ಕೃತಿಕವಾಗಿ ಮೇಲುಸ್ತರದ ಜಾತಿ ವರ್ಗಕ್ಕೆ ಸೇರಿದ ಪುರುಷರ ಸಾಕ್ಷರತೆ ಮತ್ತು ಅದೇ ವರ್ಗದ ಗಂಡುಮಕ್ಕಳ ಶಾಲಾ ಭಾಗವಹಿಸುವಿಕೆಯು ಪ್ರಥಮ ಸ್ಥಾನದಲ್ಲಿದೆ. ಆರ್ಥಿಕವಾಗಿ ಮಧ್ಯಮವರ್ಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷರು ಮತ್ತು ಗಂಡುಮಕ್ಕಳು ದ್ವಿತೀಯ ಸ್ಥಾನದಲ್ಲಿ, ಮಹಿಳೆಯರು ಮತ್ತು ಹೆಣ್ಣುಮಕ್ಕಳು ತೃತೀಯ ಸ್ಥಾನದಲ್ಲಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಬಡತನದಿಂದ ಬಂದ ಕುಟುಂಬದ ಪುರುಷರು ನಾಲ್ಕನೇ ಸ್ಥಾನದಲ್ಲಿದ್ದರೆ, ಇದೇ ವರ್ಗದ ಮಹಿಳೆಯರು ಐದನೇ ಸ್ಥಾನದಲ್ಲಿದ್ದಾರೆ. ಕಡುಬತನದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಸಾಕ್ಷರತೆ ಮತ್ತು ಶಾಲಾ ಭಾಗವಹಿಸುವಿಕೆಯಲ್ಲಿ ಅಂತಿಮ ಸ್ಥಾನದಲ್ಲಿದ್ದಾರೆ. ಈ ಪರಿಸ್ಥಿತಿಯು ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಜಿಲ್ಲೆ ಮತ್ತು ತಾಲೂಕುಗಳ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶ ದಲ್ಲಂತೂ ಇದರ ತೀವ್ರತೆ ಅಧಿಕವಾಗಿರುವುದರಿಂದ ಬಹಳ ಗಂಭೀರವಾಗಿ ಪರಿಗಣಿಸಿ ನಾವೆಲ್ಲರೂ ಈ ಜನವರ್ಗದ ಶೈಕ್ಷಣಿಕ ಅಭಿವೃದ್ಧಿಗಾಗಿ ಶ್ರಮಿಸಬೇಕಾಗಿದೆ (ಎಚ್.ಡಿ. ಪ್ರಶಾಂತ್, ೨೦೦೭).

೨೦೦೧ರ ಭಾರತದ ಜನಗಣತಿ ಪ್ರಕಾರ ೮,೪೩,೨೬,೨೪೦ (ಒಟ್ಟು ಜನಸಂಖ್ಯೆಯ ಶೇಕಡ ೧೬.೨೧ರಷ್ಟು) ಜನ ದಲಿತರಲ್ಲಿ ಗ್ರಾಮೀಣ ಭಾರತದ ಶೇಕಡ ೪೧.೦೫ರಷ್ಟು ದಲಿತರು ಮಾತ್ರ ಸಾಕ್ಷರರಾಗಿದ್ದಾರೆ. ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ಶೇಕಡ ೪೭.೦೩ರಷ್ಟು ದಲಿತರು ಮಾತ್ರ ಸಾಕ್ಷರರಾಗಿದ್ದಾರೆ. ಇದರಲ್ಲಿ ಪುರುಷರು ಶೇಕಡ ೫೮.೭೦ರಷ್ಟಾದರೆ, ಮಹಿಳೆಯರು ಶೇಕಡ ೩೫.೦೬ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ೬-೧೪ ವಯೋಮಾನದ ಶೇಕಡ ೬೨.೦೫ರಷ್ಟು ಮಕ್ಕಳು ಮಾತ್ರ ಶಾಲೆಗೆ ದಾಖಲಾಗಿದ್ದರೆ, ಉಳಿದ ಶೇಕಡ ೩೭.೦೫ರಷ್ಟು ಮಕ್ಕಳು ಶಾಲೆಗೆ ದಾಖಲಾಗದ ಮತ್ತು ಮಧ್ಯದಲ್ಲಿಯೇ ಶಾಲೆ ಬಿಟ್ಟವರಾಗಿದ್ದಾರೆ. ಆದ್ದರಿಂದಲೇ ಇಂದು ಬಹುಮುಖ್ಯವಾಗಿರುವ ದಲಿತರ ಶಿಕ್ಷಣದ ಬಗ್ಗೆ ನಾವೆಲ್ಲ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನೋಡಬೇಕಾಗಿದೆ ಮತ್ತು ಪ್ರಯತ್ನಶೀಲರಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ದಲಿತರ ಶೈಕ್ಷಣಿಕ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುತ್ತಿರುವ ಸಾಮಾಜಿಕ ಸನ್ನಿವೇಶ ಯಾವುದು? ದಲಿತರ ರಾಜಕೀಯ ತಿಳುವಳಿಕೆ ಮತ್ತು ಮಕ್ಕಳ ಶಿಕ್ಷಣದ ನಡುವೆ ಇರುವ ಸಂಬಂಧವೇನು? ಎಂಬಂತಹ ಪ್ರಶ್ನೆಗಳನ್ನು ಚರ್ಚಿಸುವುದರ ಜೊತೆಗೆ ದಲಿತರು ವಾಸ್ತವವಾಗಿ ಸಾಂಸ್ಕೃತಿಕವಾಗಿ ಎದುರಿಸುತ್ತಿರುವ ಪರಿಸ್ಥಿತಿಯನ್ನು ಕೂಡ ಈ ಅಧ್ಯಾಯದಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೬.೧. ಸಾಮಾಜಿಕ ಸನ್ನಿವೇಶ

ದಲಿತರು ಶೈಕ್ಷಣಿಕವಾಗಿ ಅವಕಾಶ ವಂಚಿತರಾದುದನ್ನು ತಿಳಿಯಬೇಕಾದರೆ, ಸಾಂಪ್ರದಾಯಿಕ ಹಿಂದೂ ಸಮಾಜದ ಜಾತಿ ವ್ಯವಸ್ಥೆಯಲ್ಲಿ ಅವರು ಅನುಭವಿಸಿದ ಅಸ್ಪೃಶ್ಯತೆ ಮತ್ತು ಅದರ ಘಟನಾವಳಿಗಳ ಮೂಲಕ ಸಾಮಾಜಿಕ ಸನ್ನಿವೇಶವನ್ನು ಗಮನಿಸಬೇಕಾಗುತ್ತದೆ. ಈ ಹಿಂದೆ ತುಂಬಾ ನಿಕೃಷ್ಟವಾದ ಸಾಂಪ್ರದಾಯಿಕ ಕೆಲಸಗಳನ್ನು ಮಾಡುತ್ತಿದ್ದ ದಲಿತರಲ್ಲಿನ ಕೆಲವು ಜಾತಿಯ ಜನರಿಗೆ ನೇರವಾದ ಆದಾಯದ ಮೂಲಗಳಿಲ್ಲದೆ, ತಮ್ಮ ದಿನನಿತ್ಯದ ಬದುಕಿಗಾಗಿ ಮೇಲ್ಜಾತಿಯ ಹಿಂದೂಗಳನ್ನೇ ಅವಲಂಬಿಸಬೇಕಾದ ಅನಿವಾರ್ಯತೆ ಇತ್ತು. ಅಲ್ಲದೆ ಕೆಲವಾರು ಸಾಮಾಜಿಕ ಕಟ್ಟುಪಾಡುಗಳು. ಸಾಮಾಜಿಕ ನೀತಿ-ನಿಯಮಗಳು ದಲಿತರ ಸಾಮಾಜಿಕ ಚಲನೆಯನ್ನು ನಿಯಂತ್ರಿಸುವುದರ ಜೊತೆಯಲ್ಲಿ ಸಾಂಸ್ಕೃತಿಕವಾಗಿ ನಿಷೇಧಿಸಲ್ಪಟ್ಟ ಬಗ್ಗೆ ಮಾಹಿತಿಗಳಿವೆ. ಈ ಸ್ಥಿತಿಗೆ ದಲಿತರಿಗೆ ಅದರಲ್ಲಿಯೂ ಅಸ್ಪೃಶ್ಯರಿಗೆ ಆಧುನಿಕ ಅವಕಾಶಗಳು ದೊರಕದಂತೆ ತಮಗೆ ಬೇಕಾದ ರೀತಿಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಹುಟ್ಟುಹಾಕಿದ ಮೂಲಭೂತವಾದಿಗಳೇ ಕಾರಣ ಎಂಬ ಆರೋಪವಿದೆ. ಮೂಲಭೂತ ವಾದಿಗಳು ಆರ್ಥಿಕ ಪರಿಸ್ಥಿತಿ, ಶೈಕ್ಷಣಿಕ ಅವಕಾಶ ಮತ್ತು ಸಾಮಾಜಿಕ ಬದಲಾವಣೆಗಳಿಗೆ ನೇರವಾದ ಸಂಬಂಧವಿರುವುದನ್ನು ಗಮನಿಸದಿದ್ದರಿಂದ ಇಂದಿನ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಅವಕಾಶಗಳು ಕಡಿಮೆ.

ಈಗಲೂ ದಲಿತರು ಗ್ರಾಮೀಣ ಪ್ರದೇಶಗಳಲ್ಲಿ ಪ್ರತ್ಯೇಕವಾದ ಗುಂಪುಗಳಲ್ಲಿ ಕೇರಿಗಳಲ್ಲಿ ವಾಸಿಸುತ್ತಿದ್ದಾರೆ. ಅವರು ಸಾಮಾನ್ಯ ಜನ ಉಪಯೋಗಿಸುವ ಬಾವಿಯ ನೀರನ್ನು ಉಪಯೋಗಿಸುವಂತಿಲ್ಲ ಮತ್ತು ದೇವಸ್ಥಾನಗಳನ್ನು ಪ್ರವೇಶಿಸುವಂತಿಲ್ಲ. ಇವತ್ತಿಗೂ ಕೂಡ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕೆಲವು ಗ್ರಾಮದ ಹೋಟೆಲ್‌ಗಳಲ್ಲಿ ದಲಿತರಿಗಾಗಿ ಪ್ರತ್ಯೇಕವಾದ ವ್ಯವಸ್ಥೆಯೇ ಇದೆ. ಅಲ್ಲದೆ ದಲಿತರಿಗೆ ಹೋಟೆಲ್‌ಗಳಲ್ಲಿ ಪ್ರತ್ಯೇಕವಾದ ಲೋಟಗಳನ್ನಿಟ್ಟಿರುತ್ತಾರೆ. ಕ್ಷೌರಿಕರ ಅಂಗಡಿಗಳಲ್ಲಿಯೂ ದಲಿತರಿಗೆ ನಿಷೇಧ ಇನ್ನು ಮುಂತಾದವುಗಳಿಂದ ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಮುಕ್ತವಾಗಿ ಮತ್ತು ಸ್ವಾತಂತ್ರ್ಯವಾಗಿ ವ್ಯವಹರಿಸಲಾಗದ ಸಾಮಾಜಿಕ ಸ್ಥಿತಿಗತಿ ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿದೆ. ಇನ್ನೂ ಮುಂದುವರಿದು ಹೇಳುವುದಾದರೆ ದಲಿತರ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಜಾತಿ ನಿಂದನೆ, ಅನೇಕ ರೀತಿಯ ಸಾಮಾಜಿಕ ಅಡೆತಡೆಗಳು, ಕಡುಬಡತನ, ರಾಜಕೀಯವಾಗಿ ಶಕ್ತಿಹೀನತೆ ಇತ್ಯಾದಿಗಳಿಂದ ದಲಿತರು ಸಾಮಾಜಿಕವಾಗಿ ನೋವುಂಡವರಾಗಿದ್ದಾರೆ.

ಭಾರತದಲ್ಲಿ ದಲಿತ ಜಾತಿಯಲ್ಲಿ ಸುಮಾರು ೪೦೦ಕ್ಕೂ ಹೆಚ್ಚು ವರ್ಗಗಳಿದ್ದು, ಕರ್ನಾಟಕದಲ್ಲಿ ೧೦೧ ಜಾತಿ ಮತ್ತು ಉಪಜಾತಿಗಳು ಪರಿಶಿಷ್ಟ ಜಾತಿಗೆ (ದಲಿತ) ಸೇರಿವೆ. ಅವುಗಳಲ್ಲಿ ಆದಿಕರ್ನಾಟಕ, ಚಲವಾದಿ, ಮಾಲ, ಮಾಂಗ, ಮೋಚಿ, ಮಹಾರ, ಸಮಗಾರ, ಢೋರ, ಬಂಜಾರ ಮತ್ತು ಭೋವಿ ಜಾತಿಗಳು ಪ್ರಮುಖವಾಗಿವೆ. ಜನಸಂಖ್ಯಾ ದೃಷ್ಟಿಯಿಂದ ಆದಿಕರ್ನಾಟಕ ಜನಾಂಗವೇ (೩೪.೧೩) ದೊಡ್ಡ ಗುಂಪಾಗಿದೆ. ಬಂಜಾರರು ಶೇಕಡ ೧೦.೬೫ರಷ್ಟು, ಭೋವಿ ಜನಾಂಗದ ಶೇಕಡ ೧೦.೦೪ರಷ್ಟು ಮತ್ತು ಆದಿ ದ್ರಾವಿಡರು ಶೇಕಡ ೭.೯೪ರಷ್ಟಿದ್ದಾರೆ. ಈ ದಲಿತರ ಜನಸಂಖ್ಯೆಯು ಒಂದೇ ಪ್ರದೇಶದಲ್ಲಿ ಕೇಂದ್ರೀಕೃತವಾಗಿರದೆ, ಕೆಲವು ಜಾತಿಗಳು ಕೆಲವೇ ಜಿಲ್ಲೆಗಲ್ಲಿವೆ. ಉದಾಹರಣೆಗೆ ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ೨/೩ ಭಾಗದಷ್ಟಾದ ಆದಿದ್ರಾವಿಡರು ಬೆಂಗಳೂರು ನಗರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿದ್ದು, ಅವರ ಕಸುಬುಗಳ್ನಾಧರಿಸಿ ಜಾತಿ ವಿಂಗಡಿಸಲಾಗಿದೆ.

ಬ್ರಿಟೀಷರ ಆಡಳಿತ ಪೂರ್ವದ ಭಾರತದ ಸಾಂಪ್ರದಾಯಿಕ, ಸಾಮಾಜಿಕ ಪರಿಸರದಲ್ಲಿ ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದ ಸಾಂಪ್ರದಾಯಿಕ ಸಂಸ್ಥೆಗಳು ದಲಿತರು ಕಲಿಯುವುದನ್ನು ನಿಷೇದಿಸಿದ್ದವು. ಆದರೆ ಬ್ರಿಟಿಷರ ಆಡಳಿತದ ಕಾಲದಲ್ಲಿ ದಲಿತರಿಗೆ ಶೈಕ್ಷಣಿಕ ಅವಕಾಶಗಳು ಮತ್ತು ಸಾಂಪ್ರದಾಯಿಕ ವ್ಯವಸ್ಥೆಯಿಂದ ಪ್ರತ್ಯೇಕಿಸಲ್ಪಟ್ಟ ಹೊಸ ರೀತಿಯ ಉದ್ಯೋಗಾವಕಾಶಗಳು ತೆರೆಯಲ್ಪಟ್ಟವು. ನಿರ್ದಿಷ್ಟವಾಗಿ ಕೆಲವು ದಲಿತ ಉಪಜಾತಿಗಳು ಮಾತ್ರ ಈ ಪ್ರಯೋಜನ ಪಡೆಯಲು ಸಾಧ್ಯವಾಗಿದೆ. ಹೀಗೆ ಕಡಿಮೆ ಪ್ರಮಾಣದಲ್ಲಿ ದೊರೆತ ಶೈಕ್ಷಣಿಕ ಮತ್ತು ಉದ್ಯೋಗ ಅವಕಾಶಗಳು ಸಾಮಾಜಿಕ ರಚನೆಯಲ್ಲಿ ಅನುಕೂಲಕರವಾಗಿದ್ದ ದಲಿತರಿಗೆ ಮಾತ್ರ ಲಭಿಸಿದವೇ ವಿನಃ ದಲಿತ ಜಾತಿಯಲ್ಲಿನ ತಳವರ್ಗಕ್ಕೆ ದೊರಕಲಿಲ್ಲ.

ನಮ್ಮ ಅಧ್ಯಯನ ಕ್ಷೇತ್ರದ ದಲಿತರ ಸಾಮಾಜಿಕ ಸ್ಥಿತಿಯನ್ನು ಎರಡೂ ಗ್ರಾಮ ಪಂಚಾಯತಿಗಳ ಜನಪ್ರತಿನಿಧಿಗಳ ಸಂದರ್ಶನದ ಮೂಲಕ ತಿಳಿದುಕೊಳ್ಳಲಾಯಿತು. ಅಧ್ಯಯನ ಕ್ಷೇತ್ರದ ದಲಿತರ ಸಾಮಾಜಿಕ ಸ್ಥಿತಿ ಹೇಗಿದೆ? ಎಂಬ ಪ್ರಶ್ನೆಗೆ ಗ್ರಾಮಪಂಚಾಯತಿಯ ಸದಸ್ಯರು ಹಿಂದುಳಿದಿದೆ, ತಾರತಮ್ಯದಿಂದ ಕೂಡಿದೆ, ಸಾಧಾರಣ ಮಟ್ಟದಲ್ಲಿದೆ, ಸಮಾನತೆಯಿಂದ ಕೂಡಿದೆ ಮತ್ತು ಉತ್ತಮವಾಗಿದೆ. ಎಂಬ ವಿವಿಧ ರೀತಿಯ ಉತ್ತರಗಳನ್ನು ನೀಡಿರುತ್ತಾರೆ. ಶೇಕಡ ೩೦ರಷ್ಟು ಜನಪ್ರತಿನಿಧಿಗಳು ದಲಿತರ ಸಾಮಾಜಿಕ ಸ್ಥಿತಿ ಸಾಧಾರಣವಾಗಿದೆ ಎಂದು, ಶೇಕಡ ೧೮ರಷ್ಟು ಜನಪ್ರತಿನಿಧಿಗಳು ತಾರತಮ್ಯದಿಂದ ಕೂಡಿದೆ ಎಂದು ಮತ್ತು ಶೇಕಡ ೩ರಷ್ಟು ಜನಪ್ರತಿನಿಧಿಗಳು ಹಿಂದುಳಿದಿದೆ ಎಂಬ ಉತ್ತರಗಳನ್ನು ನೀಡಿರುವುದನ್ನು ಕ್ರೂಢೀಕರಿಸಿದಾಗ, ಅಧ್ಯಯನ ಕ್ಷೇತ್ರದ ದಲಿತರ ಸಾಮಾಜಿಕ ಸ್ಥಿತಿಯು ಉತ್ತಮವಾಗಿಲ್ಲ ಎಂಬುದನ್ನು ಶೇಕಡ ೫೧ರಷ್ಟು ಗ್ರಾಮಪಂಚಾಯತಿಯ ಸದಸ್ಯರು ಒಪ್ಪಿಕೊಂಡಿರುವುದು ತಿಳಿಯುತ್ತದೆ. ನಂ. ೧೦. ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಶೇಕಡ ೪೨.೯ರಷ್ಟು ಜನಪ್ರತಿನಿಧಿಗಳು ಮತ್ತು ಆಲೂರು ಗ್ರಾಮಪಂಚಾಯತಿಯ ಶೇಕಡ ೬೦ರಷ್ಟು ಜನಪ್ರತಿನಿಧಿಗಳು ಅಧ್ಯಯನ ಕ್ಷೇತ್ರದ ದಲಿತರ ಸಾಮಾಜಿಕ ಸ್ಥಿತಿ ಉತ್ತಮವಾಗಿಲ್ಲವೆಂದು ಹೇಳುತ್ತಾರೆ. ತುಲನಾತ್ಮಕವಾಗಿ ನೋಡಿದಾಗ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿನ ದಲಿತರ ಸಾಮಾಜಿಕ ಸ್ಥಿತಿಗಿಂತ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿಯ ಗ್ರಾಮಗಳಲ್ಲಿನ ದಲಿತರ ಸಾಮಾಜಿಕ ಸ್ಥಿತಿ ಕೆಳಮಟ್ಟದಲ್ಲಿರುವುದು ತಿಳಿಯುತ್ತದೆ. ಅಧ್ಯಯನ ಕ್ಷೇತ್ರದ ಶೇಕಡ ೨೩ರಷ್ಟು ಮತ್ತು ಶೇಕಡ ೨೬ರಷ್ಟು ಜನಪ್ರತಿನಿಧಿಗಳು ಕ್ರಮವಾಗಿ ಸಮಾನವಾಗಿದೆ ಮತ್ತು ಉತ್ತಮವಾಗಿದೆ ಎಂಬ ಉತ್ತರಗಳನ್ನು ನೀಡಿರುತ್ತಾರೆ. ಇದನ್ನು ಕ್ರೂಢೀಕರಿಸಿ ನೋಡಿದಾಗ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಸಾಮಾಜಿಕ ಸ್ಥಿತಿಯು ಇತರೆ ಜನಾಂಗಗಳ ಸಾಮಾಜಿಕ ಸ್ಥಿತಿಯಂತೆ ಸಮಾನತೆಯಿಂದ ಕೂಡಿರುವುದನ್ನು ಶೇಕಡ ೪೯ರಷ್ಟು ಜನಪ್ರತಿನಿಧಿಗಳು ಹೇಳುವುದು ತಿಳಿಯುತ್ತದೆ.

ಈ ಅಂಶವನ್ನು ಗ್ರಾಮಪಂಚಾಯತಿವಾರು ನೋಡಿದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ಶೇಕಡ ೫೭.೮ರಷ್ಟು ಜನಪ್ರತಿನಿಧಿಗಳು ಮತ್ತು ಆಲೂರು ಗ್ರಾಮಪಂಚಾಯತಿಯ ಶೇಕಡ ೪೦ರಷ್ಟು ಜನಪ್ರತಿನಿಧಿಗಳು ದಲಿತರ ಸಾಮಾಜಿಕ ಸ್ಥಿತಿ ಸಮಾನತೆಯಿಂದ ಕೂಡಿದೆ ಎಂದು ಹೇಳಿರುವುದು ತಿಳಿಯುತ್ತದೆ. ಇದನ್ನು ತುಲನಾತ್ಮಕವಾಗಿ ನೋಡಿದರೆ ನೀರಾವರಿ ಪ್ರದೇಶದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ಗ್ರಾಮಗಳ ದಲಿತರ ಸಾಮಾಜಿಕ ಸ್ಥಿತಿಯು, ಮಳೆಯಾಶ್ರಿತ ಆಲೂರು ಗ್ರಾಮಪಂಚಾಯತಿಯ ದಲಿತರ ಸಾಮಾಜಿಕ ಸ್ಥಿತಿಗಿಂತಲೂ ಉತ್ತಮವಾಗಿರುವುದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಅಧ್ಯಯನ ಕ್ಷೇತ್ರದ ನೀರಾವರಿ ಪ್ರದೇಶದ ದಲಿತರ ಸಾಮಾಜಿಕ ಸ್ಥಿತಿಯು, ಮಳೆಯಾಶ್ರಿತ ಪ್ರದೇಶದ ದಲಿತರ ಸಾಮಾಜಿಕ ಸ್ಥಿತಿಗಿಂತ ಸ್ವಲ್ಪಮಟ್ಟಿಗೆ ಉತ್ತಮವಾಗಿದ್ದರೂ ಇತರೆ ಜಾತಿ-ವರ್ಗಗಳ ಸಾಮಾಜಿಕ ಸ್ಥಿತಿ ಮತ್ತು ಸ್ಥಾನಮಾನಗಳಿಗಿಂತ ಕೆಳಮಟ್ಟದಲ್ಲಿರುವುದು ವಾಸ್ತವ ಸಂಗತಿಯಾಗಿದೆ. ಆದ್ದರಿಂದ ದಲಿತರ ಸಾಮಾಜಿಕ ಸ್ಥಿತಿಯನ್ನು ಸುಧಾರಿಸುವತ್ತ ಗಮನಹರಿಸುವ ಅಗತ್ಯವಿದೆ.

೬.೨. ಆರ್ಥಿಕ ಸ್ಥಿತಿ

ಸಾಮಾಜಿಕ ಮತ್ತು ಶೈಕ್ಷಣಿಕ ಅವಕಾಶ ವಂಚಿತರಾದ ದಲಿತರನ್ನು ರಕ್ಷಿಸಿ ಪ್ರೋತ್ಸಾಹಿಸುವುದಕ್ಕಾಗಿ ಸ್ವಾತಂತ್ರ್ಯ ಭಾರತದ ಸಂವಿಧಾನದಲ್ಲಿ ಹಲವಾರು ಅವಕಾಶಗಳನ್ನು ಕಲ್ಪಿಸಲಾಗಿದೆ. ಭಾರತ ಸಂವಿಧಾನದ ೪೬ನೇ ಪರಿಚ್ಛೇದದ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ದಲಿತ ಮತ್ತು ಹಿಂದುಳಿದ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ವಿಶೇಷ ಯೋಜನೆಗಳನ್ನು ರೂಪಿಸುವ ಅವಕಾಶಗಳಿವೆ. ಆದರೂ ಕರ್ನಾಟಕದಲ್ಲಿ ೨೦೦೩-೦೪ನೇ ಸಾಲಿನಲ್ಲಿ ಶೇಕಡ ೪೯ರಷ್ಟು ಗ್ರಾಮೀಣ ಪ್ರದೇಶದ ದಲಿತ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದರೆ, ಶೇಕಡ ೫೫.೦೪ರಷ್ಟು ನಗರ ಪ್ರದೇಶದ ದಲಿತರು ಬಡತನ ರೇಖೆಗಿಂತ ಕೆಳಗಿದ್ದಾರೆ. ಸುಮಾರು ಶೇಕಡ ೭೦ರಷ್ಟು ಗ್ರಾಮೀಣ ಭಾಗದ ದಲಿತ ಕುಟುಂಬಗಳು ಕೇವಲ ಒಂದು ಎಕರೆ ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದ ಜಮೀನು ಹೊಂದಿರುವುದರ ಮೂಲಕ ದಲಿತರಲ್ಲಿ ಕೃಷಿ ಭೂಮಿಯ ಒಡೆತನ ಬಹಳ ಕನಿಷ್ಟ ಮಟ್ಟದಲ್ಲಿದೆ. ಕರ್ನಾಟಕ ಭೂಸುಧಾರಣೆ ಕಾಯಿದೆ ಪ್ರಕಾರ ಸರ್ಕಾರ ತೆಗೆದುಕೊಂಡ ಕ್ರಮಗಳಿಂದಾಗಿ ಬಹಳಷ್ಟು ದಲಿತ ಗೇಣಿದಾರರು ಮಾಲೀಕರಾದರು. ಅದರಂತೆ ಕರ್ನಾಟಕದ ಒಟ್ಟು ೭೦.೭೯ ಲಕ್ಷ ಹಿಡುವಳಿಗಳಲ್ಲಿ ಶೇಕಡ ೧೧.೬೫ರಷ್ಟು ಹಿಡುವಳಿಗಳನ್ನು ದಲಿತರು (ಪರಿಶಿಷ್ಟ ಜಾತಿ) ಹೊಂದಿದ್ದಾರೆ. ಒಟ್ಟು ೧೨೩.೦೭ಲಕ್ಷ ಹೆಕ್ಟೇರ್ ಹಿಡುವಳಿಯಲ್ಲಿ ಸುಮಾರು ಶೇಕಡ ೮.೦೭ರಷ್ಟು ಅಂದರೆ ೧೦.೭೧ ಲಕ್ಷ ಹೆಕ್ಟೇರ್ ಹಿಡುವಳಿಗಳನ್ನು ದಲಿತರು ಹೊಂದಿರುತ್ತಾರೆ. ಇದರಿಂದ ರಾಜ್ಯದ ಜನಸಂಖ್ಯೆಯಲ್ಲಿರುವ ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಅವರ ಕೃಷಿ ಭೂಮಿಯ ಒಡೆತನವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಂದಿಗೂ ಶೇಕಡ ೬೧ರಷ್ಟು ದಲಿತ ಕುಟುಂಬಗಳು ತಮ್ಮ ಜೀವನಕ್ಕೆ ಕೂಲಿಯನ್ನೇ ಅವಲಂಬಿಸಿ, ಸಾಮಾಜಿಕ ಮತ್ತು ಆರ್ಥಿಕ ಸಂಬಂಧಗಳಲ್ಲಿ ಜಾತಿಪದ್ಧತಿ ಪ್ರಧಾನ ಪಾತ್ರವಹಿಸುತ್ತದೆ.

ಈ ಪರಿಸ್ಥಿತಿಯು ಪ್ರಾದೇಶಿಕವಾಗಿ ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬಹುಸಂಖ್ಯೆಯ ದಲಿತ ಕುಟಂಬಗಳು ಭೂಮಿಯನ್ನೇ ಹೊಂದಿರದ ಕಾರಣದಿಂದ ಆರ್ಥಿಕವಾಗಿ ಮೇಲ್ಜಾತಿಯವರನ್ನೇ ಅವಲಂಬಿಸಬೇಕಾಗಿದೆ. ಇಲ್ಲಿಯೂ ಕೂಡ ದಲಿತರು ಮೇಲ್ಜಾತಿಯವರ ದಮನಕ್ಕೊಳಗಾಗುವುದರಿಂದ ಅವರು ಸಾಮಾಜಿಕವಾಗಿ ಇನ್ನಷ್ಟು ದುರ್ಬಲರಾಗುತ್ತಾರೆ. ದೇಶದ ಇತರೆ ಭಾಗಗಳಲ್ಲಿ ಇರುವಂತೆ ಕರ್ನಾಟಕದಲ್ಲಿಯೂ ಹೆಚ್ಚಾಗಿ ಶೇಕಡ ೭೫ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ದಲಿತರಲ್ಲಿ ಬಹುತೇಕರು ತಮ್ಮ ಜೀವನಕ್ಕಾಗಿ ಕೃಷಿ ಮತ್ತು ತತ್ಸಂದಿತ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆ. ಕೃಷಿ ಚಟುವಟಿಕೆಯಲ್ಲಿನ ಬದಲಾವಣೆಗಳು ಬರಗಾಲ, ಹಳ್ಳಿಗಳಲ್ಲಿನ ನಿರಂತರ ಕೆಲಸದ ಕೊರತೆ, ಕನಿಷ್ಟ ಕೂಲಿ ಇನ್ನು ಮುಂತಾದ ಕಾರಣಗಳಿಂದ ದಲಿತ

[illegible]

ಭೂರಹಿತ ಕೃಷಿ ಕಾರ್ಮಿಕರು ದುಡಿಮೆಗಾಗಿ ನಗರಗಳಿಗೆ ವಲಸೆ ಹೋಗುತ್ತಿರುವುದು ಇತ್ತೀಚೆಗೆ ಅಧಿಕವಾಗಿದೆ. ನಮ್ಮ ಅಧ್ಯಯನ ಕ್ಷೇತ್ರ ವ್ಯಾಪ್ತಿಯ ನಂ. ೧೦ ಮುದ್ದಾಪುರ, ಬೆಳಗೋಡು ಹಾಳ್, ಎಲ್ಲಮ್ಮ ಕ್ಯಾಂಪ್, ಕಣಿವೆ ತಿಮ್ಮಲಾಪುರ, ಆಲೂರು, ಕಾನಾಮಡುಗು, ಕೆಂಚಮಲ್ಲನಹಳ್ಳಿ ಮತ್ತು ಯಂಬಳೆ ಗ್ರಾಮಗಳಲ್ಲಿಯೂ ಇದೇ ಲಕ್ಷಣಗಳು ಕಂಡುಬರುತ್ತದೆ.

ಗ್ರಾಮಗಳಿಂದ ನಗರಗಳಿಗೆ ವಲಸೆ ಬಂದ ದಲಿತರು ಹೆಚ್ಚಾಗಿ ಕಟ್ಟಡ ನಿಮಾಣ, ರಸ್ತೆ ನಿರ್ಮಾಣ, ರಸ್ತೆಗಳಲ್ಲಿ ಕಸ ಗುಡಿಸುವುದು, ಚಿಂದಿ ಆಯುವುದು ಇನ್ನು ಮುಂತಾದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಈ ಕೆಲಸಗಳಿಂದ ಬರುವ ಆದಾಯವು ಅವರ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಆದರೂ ನಗರಗಳಿಗೆ ವಲಸೆ ಬಂದ ಕೆಲವೇ ಕೆಲವು ದಲಿತರು ಮಾತ್ರ ಲಾಭದಾಯಕವಾದ ಕೆಲಸಗಳನ್ನು ಮಾಡುತ್ತಿರುವುದು ಗೌಣವಾಗಿದೆ. ನಗರಗಳಿಗೆ ವಲಸೆ ಬಂದ ಮತ್ತು ಪಟ್ಟಗಳಲ್ಲಿಯೇ ನೆಲಸಿರುವ ಹಾಗೂ ಪಟ್ಟಣಗಳಿಗೆ ಸಮೀಪವಿರುವ ಕೆಲವು ದಲಿತ ಉಪಜಾತಿಗಳು ದಲಿತರಿಗಾಗಿಯೇ ರೂಪಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದಾಗ್ಯೂ ದಲಿತರ ಆದಾಯದ ಸ್ಥಿತಿ ಇನ್ನೂ ಬದಲಾವಣೆ ಯಾಗಬೇಕಾಗಿದೆ. ಉದಾಹರಣೆಗೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಕೃಷಿಯನ್ನೇ ಆದಾಯದ ಮೂಲವನ್ನಾಗಿಸಿಕೊಂಡ ದಲಿತ ಕುಟುಂಬಗಳ ಸಂಖ್ಯೆ ಕೇವಲ ಶೇಕಡ ೧೫.೦೮ರಷ್ಟಿದ್ದರೆ, ಕೃಷಿಯೇತರ ಚಟುವಟಿಕೆಗಳನ್ನು ಆದಾಯದ ಮೂಲವನ್ನಾಗಿಸಿಕೊಂಡ ದಲಿತ ಕುಟುಂಬಗಳ ಸಂಖ್ಯೆ ಶೇಕಡ ೧೦.೯ರಷ್ಟಿದೆ. ಆದರೆ ಹಿಂದುಳಿದ ವರ್ಗಗಳು ಮತ್ತು ಇತರೆ ಕುಟುಂಬಗಳು ಕೃಷಿಯೇತರ ಚಟುವಟಿಕೆಗಳನ್ನು ಆದಾಯದ ಮೂಲವನ್ನಾಗಿಸಿಕೊಂಡ ಪ್ರಮಾಣಗಳು ಕ್ರಮವಾಗಿ ಶೇಕಡ ೪೭.೦೫ ಮತ್ತು ಶೇಕಡ ೩೮.೦೮ರಷ್ಟಿದೆ. ಇಲ್ಲಿಯೂ ಕೂಡ ದಲಿತರ ಸ್ಥಿತಿ ಉತ್ತಮವಾಗಿಲ್ಲ.

ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳು, ಆಧುನಿಕ ಉತ್ಪಾದನಾ ವಿಧಾನ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳು, ಹೊಸ ರೀತಿಯ ವೃತ್ತಿ ಕಸುಬುಗಳು, ಆಧುನಿಕ ಸಂಘ-ಸಂಸ್ಥೆಗಳು ದಲಿತರಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳನ್ನು ವಿರೋಧಿಸುವಂತೆ ಮಾಡಿವೆ. ಅನಂತರದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ದಲಿತರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಒಂದಾಗಿ ಭೂಮಿಯ ಹಕ್ಕು, ಕೂಲಿಯ ಹೆಚ್ಚಳ, ಸಾಮಾಜಿಕ ಮತ್ತು ರಾಜಕೀಯ ಸ್ಥಾನಮಾನಗಳಿಗಾಗಿ ಹೋರಾಟ ಮಾಡುತ್ತಿರುವುದನ್ನು ಕಾಣುತ್ತೇವೆ. ಇದರ ಇನ್ನೊಂದು ಮಗ್ಗಲಲ್ಲೇ ೧೯೭೦ರ ನಂತರದಲ್ಲಿ ಮೇಲ್ಜಾತಿಯವರಿಂದ ದಲಿತರ ಮೇಲಿನ ಪ್ರತಿಕಾರ ಮತ್ತು ದೌರ್ಜನ್ಯಗಳು ಕೂಡ ಶೇಕಡ ೩೭ರಷ್ಟು ಹೆಚ್ಚಾಗಿವೆ. ಇದರಿಂದಾಗಿ ದಲಿತರು ಸಾಮಾಜಿಕ ಸಂಪನ್ಮೂಲಗಳ ಕೊರತೆಯ ಜೊತೆಗೆ ಸಾಂಸ್ಕೃತಿಕ ಮತ್ತು ಭೌತಿಕ ಸಂಪನ್ಮೂಲಗಳ ಸೌಲಭ್ಯಗಳಿಂದ ವಂಚಿತರಾಗು ವಂತಾಗಿದೆ. ಅಲ್ಲದೆ ಅವರು ಇದುವರೆಗೂ ಸಾಮಾಜಿಕವಾಗಿ ಬಹಿಷ್ಕಾರವನ್ನು ಅನುಭವಿಸುತ್ತಾ, ಸಾಮಾಜಿಕ ಅಭಿವೃದ್ಧಿ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಒದಗಿಸಿದೆ.

ಭಾರತದ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಮೀಸಲಾತಿಯ ಮೂಲಕವಾಗಿ ಶಿಕ್ಷಣವು ದಲಿತರಿಗೆ ವಿವಿಧ ಕಸುಬುಗಳ ಚಲನಶೀಲತೆಯ ಮೂಲಕ, ಸಣ್ಣ ಪ್ರಮಾಣದ ಆರ್ಥಿಕ ಚೇತರಿಕೆಗೆ ಮುಖ್ಯಕಾರಣವಾಗಿದೆ. ಇದರಿಂದಾಗಿ ಮೇಲ್ಜಾತಿಯವರ ಮೇಲಿನ ಅವಲಂಬನೆ ಸ್ವಲ್ಪ ಕಡಿಮೆಯಾಗಿ ದಲಿತರು ಸಾಮಾಜಿಕ ಸ್ಥಾನ ಪಡೆಯುವಂತಾಗಿದೆ. ಮೇಲ್ಜಾತಿಯವರ ದಬ್ಬಾಳಿಕೆಯನ್ನು ಸಹಿಸದ ವಿದ್ಯಾವಂತ ದಲಿತರು ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕುಗಳಿಗಾಗಿ ಮೊದಲಿಗಿಂತ ಹೆಚ್ಚಿನ ಪ್ರಮಾಣದ ಪ್ರಯತ್ನಗಳನ್ನು ಮಾಡುತ್ತಿರುವುದು ಕಂಡುಬರುತ್ತಿದೆ. ಈ ರೀತಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಾಸ್ತವಾಂಶಗಳನ್ನು ಅನುಭವಿಸುತ್ತಿರುವ ದಲಿತರ ಜೀವನದಲ್ಲಿ ಶಿಕ್ಷಣ ಬದಲಾವಣೆಗಳನ್ನು ತರುವುದರ ಜೊತೆ ಜೊತೆಗೆ ದಲಿತ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಸುಧಾರಿಸುವ ಸಾಧ್ಯತೆ ಇದೆ (ಎಚ್.ಡಿ. ಪ್ರಶಾಂತ್, ೨೦೦೭).

ಅಧ್ಯಯನ ಕ್ಷೇತ್ರದ ದಲಿತರ ಆರ್ಥಿಕ ಸ್ಥಿತಿಯನ್ನು ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳನ್ನು ಸಂದರ್ಶನ ಮತ್ತು ಅವಲೋಕನದ ಮೂಲಕ ದೊರೆತ ಪ್ರಾಥಮಿಕ ಮಾಹಿತಿ ಪಡೆದುಕೊಳ್ಳುವ ಮೂಲಕ ತಿಳಿದುಕೊಳ್ಳಲಾಯಿತು. ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಆರ್ಥಿಕ ಸ್ಥಿತಿ ಯಾವ ರೀತಿಯಾಗಿದೆ? ಎಂಬ ಪ್ರಶ್ನೆ ಕೇಳಿದಾಗ ಜನಪ್ರತಿನಿಧಿಗಳು ಸಾಧಾರಣವಾಗಿದೆ, ಹಿಂದುಳಿದಿದೆ ಮತ್ತು ಅತ್ಯಂತ ಹಿಂದುಳಿದಿದೆ ಎಂಬಂತಹ ಉತ್ತರಗಳನ್ನು ನೀಡಿರುತ್ತಾರೆ. ಅಧ್ಯಯನ ಕ್ಷೇತ್ರದ ಶೇಕಡ ೫೪ರಷ್ಟು ಜನ ಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಹಿಂದುಳಿದಿದೆ ಎಂದು ಹೇಳಿದರೆ ಶೇಕಡ ೫ರಷ್ಟು ಜನ ಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಅತ್ಯಂತ ಹಿಂದುಳಿದಿದೆ ಎಂದು ಹೇಳುತ್ತಾರೆ. ಈ ಎರಡೂ ಅಂಶಗಳನ್ನು ಸೇರಿಸಿ ನೋಡಿದಾಗ ಶೇಕಡ ೫೯ರಷ್ಟು ಜನಪ್ರತಿನಿಧಿಗಳ ಪ್ರಕಾರ ಅಧ್ಯಯನ ಕ್ಷೇತ್ರದ ದಲಿತರ ಆರ್ಥಿಕ ಸ್ಥಿತಿ ಹಿಂದುಳಿದಿದೆ ಎಂಬುದು ತಿಳಿದುಬರುತ್ತದೆ. ಈ ವಿಷಯವಾಗಿ ಅಧ್ಯಯನ ಕ್ಷೇತ್ರದ ಎರಡು ಗ್ರಾಮಪಂಚಾಯತಿಗಳನ್ನು ಪ್ರತ್ಯೇಕವಾಗಿ ಗಮನಿಸಿದಾಗ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ಗ್ರಾಮಗಳ ಶೇಕಡ ೭೩.೬೮ರಷ್ಟು ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಹಿಂದುಳಿದಿದೆ ಎಂದು ಹೇಳಿದರೆ, ಆರ್ಥಿಕ ಸ್ಥಿತಿ ಅತ್ಯಂತ ಹಿಂದುಳಿದ ಬಗ್ಗೆ ಯಾವುದೇ ಜನಪ್ರತಿನಿಧಿ ತಿಳಿಸಿರುವುದಿಲ್ಲ.

ಆದರೆ ಆಲೂರು ಗ್ರಾಮಪಂಚಾಯತಿಯ ಗ್ರಾಮಗಳ ಶೇಕಡ ೩೫ರಷ್ಟು ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥತಿ ಹಿಂದುಳಿದಿದೆ ಎಂದು ಹೇಳಿದರೆ, ದಲಿತರ ಆರ್ಥಿಕ ಸ್ಥಿತಿ ಅತ್ಯಂತ ಹಿಂದುಳಿದಿದೆ ಎಂದು ಶೇಕಡ ೧೦ರಷ್ಟು ಜನಪ್ರತಿನಿಧಿಗಳು ಹೇಳುತ್ತಾರೆ. ಇದೇ ಆಲೂರು ಗ್ರಾಮ ಪಂಚಾಯತಿಯಲ್ಲಿನ ದಲಿತರ ಆರ್ಥಿಕ ಸ್ಥಿತಿ ಹಿಂದುಳಿದಿದೆ ಎಂದ ಶೇಕಡ ೩೫ರಷ್ಟು ಜನಪ್ರತಿನಿಧಿಗಳು ಮತ್ತು ಅತ್ಯಂತ ಹಿಂದುಳಿದಿದೆ ಎಂದ ಶೇಕಡ ೧೦ರಷ್ಟು ಜನಪ್ರತಿನಿಧಿಗಳನ್ನು ಸೇರಿಸಿ ನೋಡಿದಾಗ ಒಟ್ಟು ೪೫ರಷ್ಟು ಜನಪ್ರತಿನಿಧಿಗಳು ಆರ್ಥಿಕ ಸ್ಥಿತಿ ಹಿಂದುಳಿದಿರುವುದನ್ನು ಒಪ್ಪಿಕೊಂಡಿರುವುದು

ತಿಳಿಯುತ್ತದೆ. ಇದನ್ನೇ ತುಲನಾತ್ಮಕ ರೀತಿಯಲ್ಲಿ ನೋಡಿದಾಗ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯ ದಲಿತರ ಆರ್ಥಿಕ ಸ್ಥಿತಿಯು, ಮಳೆಯಾಶ್ರಿತ ಪ್ರದೇಶ ಆಲೂರು ಗ್ರಾಮಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿಗಿಂತ ಕೆಳಮಟ್ಟದಲ್ಲಿರುವಂತೆ ಕಂಡುಬರುತ್ತದೆ. ಆದರೆ ನೀರಾವರಿ ಪ್ರದೇಶದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿಯನ್ನು ಅದೇ ಪ್ರದೇಶದ ಇತರೆ ಜಾತಿ ವರ್ಗದ ಆರ್ಥಿಕ ಸ್ಥಿತಿಯೊಂದಿಗೆ ಹೋಲಿಸಿ ಹೇಳಿರುವುದನ್ನು ನಾವು ಗಮನಿಸಿದ್ದೇವೆ.

ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿಯ ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿಯನ್ನು ಅದೇ ಪ್ರದೇಶದ ಇತರೆ ಜಾತಿವರ್ಗದ ಆರ್ಥಿಕ ಸ್ಥಿತಿಯೊಡನೆ ಹೋಲಿಸಿ ಹೇಳಿರುವುದನ್ನು ಕೂಡ ನಾವು ಗಮನಿಸಿದ್ದೇವೆ. ಅಂದಮೇಲೆ ನೀರಾವರಿ ಪ್ರದೇಶದ ದಲಿತರ ಆರ್ಥಿಕ ಸ್ಥಿತಿ ಮಳೆಯಾಶ್ರಿತ ಪ್ರದೇಶಕ್ಕಿಂತ ಹಿಂದುಳಿದಿದೆ ಎಂಬ ತೀರ್ಮಾನಕ್ಕೆ ಬರುವುದು ವೈಜ್ಞಾನಿಕವಾದುದಲ್ಲ. ಒಂದರ್ಥದಲ್ಲಿ ಮಳೆಯಾಶ್ರಿತ ಪ್ರದೇಶದಲ್ಲಿನ ಸುಧಾರಿಸಿದ ಆರ್ಥಿಕ ಸ್ಥಿತಿಯು ನೀರಾವರಿ ಪ್ರದೇಶದ ಹಿಂದುಳಿದ ಆರ್ಥಿಕ ಸ್ಥಿತಿಗಿಂತ ಉತ್ತಮವಾಗಿರುವುದಿಲ್ಲವೆಂದೇ ಹೇಳಲಾಗುತ್ತದೆ. ಆದ್ದರಿಂದ ಮಾಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿಯಲ್ಲಿನ ದಲಿತರ ಆರ್ಥಿಕ ಸ್ಥಿತಿಗಿಂತ, ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿ ಕೆಳಮಟ್ಟದಲ್ಲಿದೆ ಎಂಬುದು ಸರಿಯಲ್ಲ. ಅಂತೆಯೇ ನೀರಾವರಿ ಪ್ರದೇಶ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿಗಿಂತ, ಮಳೆಯಾಶ್ರಿತ ಪ್ರದೇಶ ಆಲೂರು ಗ್ರಾಮ ಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂಬುದು ಕೂಡ ಸರಿಯಲ್ಲ.

ಅಧ್ಯಯನ ಕ್ಷೇತ್ರದ ಉಳಿದ ಶೇಕಡ ೪೧ರಷ್ಟು ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಸಾಧಾರಣವಾಗಿದೆ ಎಂಬ ಪ್ರತಿಕ್ರಿಯೆ ನೀಡಿದ್ದಾರೆ. ಇದನ್ನು ಕೂಡ ಗ್ರಾಮಪಂಚಾಯತಿವಾರು ಬಿಡಿ ಬಿಡಿಯಾಗಿ ನೋಡಿದಾಗ ನಂ. ೧೦ ಮುದ್ದಾಪುರದ ಶೇಕಡ ೨೬.೩೧ರಷ್ಟು ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಸಾಧಾರಣವಾಗಿದೆ ಎಂದರೆ, ಆಲೂರು ಗ್ರಾಮಪಂಚಾಯತಿಯ ಶೇಕಡ ೫೫ರಷ್ಟು ಜನಪ್ರತಿನಿಧಿಗಳು ದಲಿತರ ಆರ್ಥಿಕ ಸ್ಥಿತಿ ಸಾಧಾರಣವಾಗಿದೆ ಎಂದಿದ್ದಾರೆ. ಈ ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ತುಲನೆ ಮಾಡಿ ನೇರವಾಗಿ ಆಲೂರು ಗ್ರಾಮಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿ, ಮುದ್ದಾಪುರ ಗ್ರಾಮಪಂಚಾಯತಿಯ ದಲಿತರ ಆರ್ಥಿಕ ಸ್ಥಿತಿಗಿಂತ ಉತ್ತಮ ಎಂಬ ತೀರ್ಮಾನಕ್ಕೆ ಬರಲಾಗದು. ಏಕೆಂದರೆ ಜನಪ್ರತಿನಿಧಿಗಳು ಆಯಾ ಗ್ರಾಮಪಂಚಾಯತಿ ಪ್ರದೇಶದ ಇತರೆ ಜಾತಿವರ್ಗಗಳ ಆರ್ಥಿಕ ಸ್ಥಿತಿಗೆ ಹೋಲಿಸಿದಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಒಟ್ಟಾರೆಯಾಗಿ ಅಧ್ಯಯನ ಕ್ಷೇತ್ರದ ಎರಡೂ ಗ್ರಾಮ ಪಂಚಾಯತಿಗಳಲ್ಲಿ ದಲಿತರ ಆರ್ಥಿಕ ಸ್ಥಿತಿ ಅತ್ಯಂತ ಹಿಂದುಳಿದ, ಹಿಂದುಳಿದ ಮತ್ತು ಸಾಧಾರಣವಾಗಿರುವ ಅಭಿಪ್ರಾಯಗಳಿವೆಯೇ ವಿನಃ ಮುಂದುವರಿದ ಆರ್ಥಿಕ ಸ್ಥಿತಿಯ ಅಭಿಪ್ರಾಯಗಳಿಲ್ಲ.

೬.೩. ರಾಜಕೀಯ ಸ್ಥಿತಿ

ದಲಿತರ ಸಂಘಟನೆ ಮತ್ತು ಚಳುವಳಿಗಳು ೧೯೨೦ಕ್ಕಿಂತ ಪೂರ್ವದಲ್ಲಿಯೇ ಕಂಡುಬಂದರೂ ೧೯೨೦ರ ನಂತರದ ದಿನಗಳಲ್ಲಿ ದಲಿತರ ಹೋರಾಟಗಳಿಗೆ ಹೊಸ ಆಯಾಮ ದೊರೆಯಿತು. ಅಸ್ಪೃಶ್ಯತೆಯ ಆಚರಣೆಯ ವಿವಾದಗಳು ಸಾಮಾಜಿಕ ವಿವಾದಗಳಂತೆಯೇ ವ್ಯಾಖ್ಯಾನಿಸಲ್ಪಡುತ್ತಾ, ಪ್ರಜಾಪಕ್ಷದವರಿಂದ ಕೂಡಿದ ಕಾಂಗ್ರೆಸ್ ಪಕ್ಷವು ೧೯೩೦ ಮತ್ತು ೧೯೩೫ರ ನಡುವೆ ಅಸ್ಪೃಶ್ಯತಾ ನಿಷೇಧ ಕಾಯಿದೆಯನ್ನು ಜಾರಿಗೆ ತರುವಂತೆ ಸರ್ಕಾರವನ್ನು ಒತ್ತಾಯಿಸಿತು. ಇದೇ ಸಂದರ್ಭದಲ್ಲಿ ಹರಿಜನ ಸೇವಕ ಸಂಘವೂ ಇದಕ್ಕೆ ಬೆಂಬಲ ಸೂಚಿಸಿ, ಎಲ್ಲಾ ದೇವಾಲಯಗಳನ್ನು ಪ್ರವೇಶಿಸಲು, ರಸ್ತೆಗಳು, ಕೆರೆಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ಬಳಸಿಕೊಳ್ಳಲು ದಲಿತರಿಗೆ ಸಮಾನವಾದ ಹಕ್ಕುಗಳಿರಬೇಕೆಂದು ಆಗ್ರಹ ಪಡಿಸಿತು. ಅಲ್ಲದೆ ದಲಿತರ ಆರ್ಥಿಕ ಸುಧಾರಣೆಗಾಗಿ ಸರ್ಕಾರಿ ಭೂಮಿಗಳನ್ನು ದಲಿತರಿಗೆ ಹಂಚಬೇಕೆಂಬ ಸಲಹೆಗಳೂ ಕೂಡ ನೀಡಲ್ಪಟ್ಟ ಪರಿಣಾಮವಾಗಿ ೧೯೩೧ರ ವೇಳೆಗೆ ಆದಿಕರ್ನಾಟಕ ಜನಾಂಗಕ್ಕೆ ೬೭೬೩ ಎಕರೆಗಳಷ್ಟು ಭೂಮಿಯನ್ನು ಸರ್ಕಾರ ಹಂಚಿತಾದರೂ ಇದು ಬರೀ ಸಹಾನುಭೂತಿಯಿಂದ ಕೂಡಿದ ಸಹಾಯವಾಗಿತ್ತೇ ವಿನಃ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಿ ಗಳಿಸಿದ್ದಲ್ಲ. ಇಂದಿಗೂ ಕೂಡ ಗ್ರಾಮೀಣ ಪ್ರದೇಶದಲ್ಲಿ ದಲಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಲೇ ಇರಬೇಕಾದ ಸ್ಥಿತಿ ಇದ್ದು, ದಲಿತರನ್ನು ಸಂಘಟಿಸಿ ಸೂಕ್ತ ಮಾರ್ಗದರ್ಶನ ನೀಡಬಲ್ಲಂತಹ ದಲಿತ ವ್ಯಕ್ತಿ ಮತ್ತು ಶಕ್ತಿಗಳ ಕೊರತೆ ಎದ್ದುಕಾಣುತ್ತದೆ.

ಕರ್ನಾಟಕದಲ್ಲಿ ದಲಿತ ಸಂಘಟನೆ, ಚಳುವಳಿ ಮತ್ತು ಹೋರಾಟಗಳಿಗೆ ಪ್ರೇರಣೆಯಾದವರೆಂದರೆ ಜ್ಯೋತಿ ಬಾಪುಲೆ ಮತ್ತು ಡಾ. ಅಂಬೇಡ್ಕರ್ ಆಗಿದ್ದಾರೆ. ಜ್ಯೋತಿ ಬಾ ಪುಲೆಯವರು ದಲಿತರ ಹಿಂದುಳಿಯುವಿಕೆಗೆ ಅಜ್ಞಾನ ಕಾರಣ ಮತ್ತು ಅಜ್ಞಾನಕ್ಕೆ ಅನಕ್ಷರತೆಯೇ ಕಾರಣವೆಂಬುದನ್ನು ಪ್ರತಿಪಾದಿಸಿದರು. ಅದರಂತೆ 'ಜ್ಞಾನವೇ ಬಲ' ಎಂಬ ತತ್ವವನ್ನು ಪರಿಣಾಮಕಾರಿಯಾಗಿ ರೂಪಿಸಿದ ಡಾ. ಅಂಬೇಡ್ಕರ್ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ' ಎಂಬ ಮೂರು ಸಂಗತಿಗಳನ್ನು ಒತ್ತಿಹೇಳಿದ್ದಾರೆ. ಜ್ಯೋತಿ ಬಾಪುಲೆ ಮತ್ತು ಅಂಬೇಡ್ಕರ್ ಇವರುಗಳ ಪ್ರಯತ್ನಗಳು ಆಗಿನ ಮುಂಬಯಿ ಕರ್ನಾಟಕದ ಭಾಗವಾಗಿದ್ದ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಅದರಲ್ಲಿಯೂ ಬೆಳಗಾವಿ ಜಿಲ್ಲೆಯಲ್ಲಿ ವಿಶೇಷ ಪರಿಣಾಮ ಬೀರಿದವು. ಈ ನಿಟ್ಟಿನಲ್ಲಿ ದಲಿತರ ಒಗ್ಗಟ್ಟು ಮತ್ತು ಉದ್ಧಾರಗಳಿಗಾಗಿ ಶ್ರಮಿಸಿದವರಲ್ಲಿ ಬಳವಂತರಾವ್ ವರಾಳೆ, ದೇವರಾಯ ಇಂಗಳೆ, ಲಕ್ಷ್ಮಣ ಕಾಂಬಳೆ, ಎಂ.ಬಿ. ನಾಡಕರ್ಣಿ ಇನ್ನು ಮುಂತಾದವರು ಇದ್ದಾರೆ. ಈ ನಾಯಕರುಗಳ ಪ್ರಯತ್ನ ಮತ್ತು ಪ್ರೇರಣೆಗಳ ಫಲವಾಗಿ ೧೯೨೪ರ ವೇಳೆಗೆ ದಲಿತ ಚಳುವಳಿ ಬೆಳಗಾವಿ ಜಿಲ್ಲೆಯಾದ್ಯಂತ ಹಬ್ಬಿತು. ಅಲ್ಲದೆ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಕೆಲವು ಭಾಗಗಳಲ್ಲಿ ಅಸ್ಪೃಶ್ಯತಾ ವಿರೋಧಿ ಚಳುವಳಿಯನ್ನು ಮುನ್ನಡೆಸಿ, ಅದನ್ನು ಅಂಬೇಡ್ಕರ್‌ರವರಿಗೆ ಪರಿಚಯಿಸಲಾಯಿತು. ಈ

ಶತಮಾನದ ಎರಡನೇ ದಶಕದಿಂದ ಏಕೀಕರಣದವರೆಗಿನ ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿದರೆ, ಗಾಂಧಿ, ಅಂಬೇಡ್ಕರ್, ಕಾಂಗ್ರೆಸ್ ಪ್ರಜಾ ಸೋಶಿಯಲಿಸ್ಟ್ ಪಕ್ಷಗಳ ನಡುವಣ ಸಂಬಂಧ ಮತ್ತು ಸಂಘರ್ಷಗಳು ಎದ್ದುಕಾಣುತ್ತವೆ. ಈ ಹಿನ್ನೆಲೆಯಲ್ಲಿ ಡಾ. ಅಂಬೇಡ್ಕರ್ ರವರ ಪ್ರಯತ್ನಗಳಿಗೆ ಆರಂಭದ ಬೆಂಬಲ ಸಿಕ್ಕಿದ್ದು ಉತ್ತರ ಕರ್ನಾಟಕದಲ್ಲಿ ಮಾತ್ರ. ಆನಂತರ ಡಾ. ಅಂಬೇಡ್ಕರ್ ಬೆಳಗಾವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿದಾಗ ಹೋರಾಟಕ್ಕೆ ಚೈತನ್ಯ ಮೂಡಿತು.

ಮುಂದುವರಿದಂತೆ ಡಾ. ಅಂಬೇಡ್ಕರ್‌ರವರು ಬೆಳಗಾವಿಯಲ್ಲಿ ರಾಜಕೀಯವಾಗಿ ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಷನ್ ಮತ್ತು ರಿಪಬ್ಲಿಕ್ ಪಕ್ಷದ ಚಟುವಟಿಕೆಗಳನ್ನು ಸಂಘಟಿಸಿದರು. ಇದರ ಫಲವಾಗಿ ೧೯೫೭ರ ಲೋಕಸಭೆ ಚುನಾವಣೆಯಲ್ಲಿ ಚಿಕ್ಕೋಡಿ ಕ್ಷೇತ್ರದಿಂದ ರಿಪಬ್ಲಿಕನ್ ಪಕ್ಷದ ಡಿ.ಎ. ಕಟ್ಟಿಯವರು ಕಾಂಗ್ರೆಸ್ ಪಕ್ಷದ ಬಲವಂತರಾವ್ ದಾತರ್‌ರನ್ನು ಸೋಲಿಸುವುದರ ಮೂಲಕ ದಲಿತರ ರಾಜಕೀಯ ಶಕ್ತಿಯ ಪ್ರದರ್ಶನವಾಯಿತು. ಜೊತೆಗೆ ಸಾಮಾನ್ಯ ಮತಕ್ಷೇತ್ರದಿಂದ ದಲಿತ ಪ್ರತಿನಿಧಿಯೊಬ್ಬರು ಲೋಕಸಭೆಗೆ ಆಯ್ಕೆಯಾದದ್ದು, ಭಾರತದಲ್ಲಿಯೇ ಪ್ರಥಮ ಎಂಬ ಕೀರ್ತಿಯೂ ಲಭಿಸಿತು. ಆನಂತರದಲ್ಲಿ ದಲಿತ ಸಂಘಟನೆ, ಚಳುವಳಿ ಮತ್ತು ಹೋರಾಟಗಳು ಏಳು-ಬೀಳುಗಳನ್ನು ಕಂಡರೂ ದಲಿತ ಜನಾಂಗದ ಏಳಿಗೆ ಮತ್ತು ಉತ್ತಮ ಬದುಕಿಗಾಗಿ ಅನೇಕ ಬುದ್ಧಿಜೀವಿಗಳು, ಲೇಖಕರೂ, ವಿದ್ಯಾರ್ಥಿಗಳು ನಡೆಸಿದ ಚರ್ಚೆ ಮತ್ತು ಸಮಾಲೋಚನೆಗಳಿಂದ ಸೂಕ್ತ ಪರಿಹಾರದ ಪ್ರಯತ್ನಗಳು ಕಂಡುಬಂದವು. ಈ ನಿಟ್ಟಿನಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿ, ದಲಿತ ಸಂಘರ್ಷ ಸಮಿತಿ, ದಲಿತ ವಿದ್ಯಾರ್ಥಿ ಒಕ್ಕೂಟಗಳನ್ನು ಹೇಳಬಹುದು (ಲಕ್ಷ್ಮಣ್ ತೆಲಗಾವಿ, ೨೦೦೭).

ಇದಕ್ಕೆ ಪೂರಕವಾಗಿ ನಮ್ಮ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ರಾಜಕೀಯ ಸ್ಥಿತಿಯನ್ನು ತಿಳಿದುಕೊಳ್ಳಲು ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳ ಸಂದರ್ಶನವು ಸಹಕಾರಿಯಾಗಿದೆ. ಅಧ್ಯಯನ ಕ್ಷೇತ್ರದಲ್ಲಿ ದಲಿತರ ರಾಜಕೀಯ ತಿಳುವಳಿಕೆ ಎಷ್ಟರಮಟ್ಟಿಗೆ ಇದೆ? ಎಂಬ ಪ್ರಶ್ನೆಗೆ ಎದುರಾಗಿ ಜನಪ್ರತಿನಿಧಿಗಳಿಂದ ಕಡಿಮೆ ಇದೆ, ಸಾಧಾರಣವಾಗಿದೆ ಮತ್ತು ಸುಧಾರಿಸುತ್ತಿದೆ ಎಂಬ ಉತ್ತರಗಳು ಲಭಿಸಿವೆ. ಅಧ್ಯಯನ ಕ್ಷೇತ್ರದ ಶೇಕಡ ೨೧ರಷ್ಟು ಜನಪ್ರತಿನಿಧಿಗಳು ದಲಿತರಿಗೆ ರಾಜಕೀಯ ತಿಳುವಳಿಕೆ ಕಡಿಮೆ ಇದೆ ಎಂದು ಹೇಳಿದರೆ, ಶೇಕಡ ೪೧ರಷ್ಟು ಜನಪ್ರತಿನಿಧಿಗಳು ದಲಿತರ ರಾಜಕೀಯ ತಿಳುವಳಿಕೆ ಸಾಧಾರಣವಾಗಿದೆ ಎಂದು ಹೇಳಿದ್ದಾರೆ. ಈ ಎರಡೂ ಹೇಳಿಕೆಗಳ ಸ್ವರೂಪವು ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ಆಗಿರುವುದರಿಂದ, ಇವೆರಡನ್ನು ಜಂಟಿಯಾಗಿ ನೋಡಿದರೆ ಶೇಕಡ ೬೨ರಷ್ಟು ಜನಪ್ರತಿನಿಧಿಗಳು ದಲಿತರ ರಾಜಕೀಯ ತಿಳುವಳಿಕೆಗಳು ಕಡಿಮೆ ಎಂಬುದಾಗಿ ಹೇಳಿದಂತಾಗುತ್ತದೆ.

ಇದನ್ನು ಗ್ರಾಮಪಂಚಾಯತಿವಾರು ಬೇರೆ ಬೇರೆಯಾಗಿ ನೋಡಿದರೆ ನಂ. ೧೦ ಮುದ್ದಾಪುರದ ಶೇಕಡ ೫.೨೬ರಷ್ಟು ಜನಪ್ರತಿನಿಧಿಗಳು ಅಧ್ಯಯನ ಕ್ಷೇತ್ರದಲ್ಲಿ ದಲಿತರ ರಾಜಕೀಯ ತಿಳುವಳಿಕೆ ಕಡಿಮೆ ಇದೆ ಎಂದು ಹೇಳಿದರೆ ಶೇಕಡ ೬೮.೪೨ರಷ್ಟು ಜನಪ್ರತಿನಿಧಿಗಳು ಸಾಧಾರಣವಾಗಿದೆ ಎಂದು ಹೇಳಿದ್ದಾರೆ. ಇವೆರಡೂ ಹೇಳಿಕೆಯ ಅಭಿಪ್ರಾಯಗಳನ್ನು ಕೂಡಿಸಿದರೆ ಮುದ್ದಾಪುರದಲ್ಲಿ ಶೇಕಡ ೭೩.೬೮ರಷ್ಟು ಜನಪ್ರತಿನಿಧಿಗಳು (ಜಿಲ್ಲಾ ಸರಾಸರಿಗಿಂತ ಅಧಿಕವಾಗಿ) ದಲಿತರ ರಾಜಕೀಯ ತಿಳುವಳಿಕೆ ಕಡಿಮೆ ಇರುವುದನ್ನು ಒಪ್ಪಿಕೊಳ್ಳುವುದು ತಿಳಿಯುತ್ತದೆ. ಆದರೆ ಆಲೂರು ಗ್ರಾಮಪಂಚಾಯತಿಯಲ್ಲಿನ ಶೇಕಡ ೩೫ರಷ್ಟು ಜನಪ್ರತಿನಿಧಿಗಳು ಅಧ್ಯಯನ ಕ್ಷೇತ್ರದ ದಲಿತರ ರಾಜಕೀಯ ತಿಳುವಳಿಕೆ ಕಡಿಮೆ ಇದೆ ಮತ್ತು ಶೇಕಡ ೧೫ರಷ್ಟು ಜನಪ್ರತಿನಿಧಿಗಳು ದಲಿತರ ರಾಜಕೀಯ ತಿಳುವಳಿಕೆ ಸಾಧಾರಣವಾಗಿದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಎರಡೂ ಅಭಿಪ್ರಾಯಗಳನ್ನು ಒಗ್ಗೂಡಿಸಿದರೆ ಶೇಕಡ ೫೦ರಷ್ಟು ಆಲೂರು ಗ್ರಾಮಪಂಚಾಯತಿಯ ಜನಪ್ರತಿನಿಧಿಗಳು ದಲಿತರ ರಾಜಕೀಯ ತಿಳುವಳಿಕೆ ಕಡಿಮೆ ಇರುವುದನ್ನು ಒಪ್ಪಿಕೊಂಡಿರುವುದು ತಿಳಿಯುತ್ತದೆ.

ಈ ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಾಪೇಕ್ಷವಾಗಿ ನೋಡಿದಾಗ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ದಲಿತರ ರಾಜಕೀಯ ತಿಳುವಳಿಕೆ ಕಡಿಮೆಯಾಗಿದೆ ಎಂಬುದರ ಪರವಾಗಿ ಶೇಕಡ ೭೩.೬೮ರಷ್ಟು ಜನಪ್ರತಿನಿಧಿಗಳ ಬೆಂಬಲ ಇದೆ. ಆದರೆ ಆಲೂರು ಗ್ರಾಮಪಂಚಾಯತಿಯಲ್ಲಿ ದಲಿತರ ರಾಜಕೀಯ ತಿಳುವಳಿಕೆಯು ಕಡಿಮೆ ಎಂಬುದರ ಪರವಾಗಿ ಇನ್ನೂ ಕಡಿಮೆ ಪ್ರಮಾಣದ ಅಂದರೆ ಶೇಕಡ ೫೦ರಷ್ಟು ಜನಪ್ರತಿನಿಧಿಗಳ ಬೆಂಬಲ ವ್ಯಕ್ತವಾಗಿದೆ. ಅಂದಮೇಲೆ ನೀರಾವರಿ ಪ್ರದೇಶವಾದ ನಂ.೧೦. ಮುದ್ದಾಪುರ ಗ್ರಾಮಪಂಚಾಯತಿಯ ದಲಿತರ ರಾಜಕೀಯ ತಿಳುವಳಿಕೆಯು, ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿಯ ದಲಿತರ ರಾಜಕೀಯ ತಿಳುವಳಿಕೆಗಿಂತ ಕಡಿಮೆಯಾಗಿರುವುದು ತಿಳಿಯುತ್ತದೆ.

ಅಧ್ಯಯನ ಕ್ಷೇತ್ರದ ಉಳಿದ ಶೇಕಡ ೩೯ರಷ್ಟು ಜನ ಪ್ರತಿನಿಧಿಗಳು ದಲಿತರ ರಾಜಕೀಯ ತಿಳುವಳಿಕೆಯ ಪ್ರಮಾಣ ಸುಧಾರಿಸುತ್ತದೆ ಎಂಬ ಉತ್ತರ ನೀಡಿದ್ದಾರೆ. ಇದನ್ನು ಗ್ರಾಮಪಂಚಾಯತಿವಾರು ನೋಡಿದಾಗ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ಶೇಕಡ ೨೬.೩೧ರಷ್ಟು ಜನಪ್ರತಿನಿಧಿಗಳು ಮಾತ್ರ ದಲಿತರ ರಾಜಕೀಯ ತಿಳುವಳಿಕೆಯು ಸುಧಾರಿಸುತ್ತಿರುವುದನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಆಲೂರು ಗ್ರಾಮಪಂಚಾಯತಿಯ ಶೇಕಡ ೫೦ರಷ್ಟು ಜನಪ್ರತಿನಿಧಿಗಳು ದಲಿತರ ರಾಜಕೀಯವಾದ ತಿಳುವಳಿಕೆ ಸುಧಾರಿಸುತ್ತಿರುವುದನ್ನು ಒಪ್ಪಿಕೊಳ್ಳುತ್ತಾರೆ. ಅಧ್ಯಯನ ಕ್ಷೇತ್ರದಲ್ಲಿ ದಲಿತರ ರಾಜಕೀಯ ತಿಳುವಳಿಕೆ ಸುಧಾರಿಸುತ್ತಿದೆ ಎಂಬ ಅಭಿಪ್ರಾಯದ ಬೆಂಬಲವಾಗಿರುವ ಜನ ಪ್ರತಿನಿಧಿಗಳ ಸಂಖ್ಯೆ ಸಾಪೇಕ್ಷವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯಿತಿಗಿಂತ ಆಲೂರು ಗ್ರಾಮಪಂಚಾಯತಿಯಲ್ಲಿ ಅಧಿಕವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ ಮಳೆಯಾಶ್ರಿತ ಪ್ರದೇಶವಾದ

ಆಲೂರು ಗ್ರಾಮಪಂಚಾಯತಿಯ ದಲಿತರ ರಾಜಕೀಯ ತಿಳುವಳಿಕೆ ಸುಧಾರಿಸುವಂತೆ ಕಂಡುಬಂದರೂ ಇತರೆ ಜಾತಿವರ್ಗದವರ ರಾಜಕೀಯ ತಿಳುವಳಿಕೆಗಿಂತ ಕಡಿಮೆಯಾಗಿದೆ ಎಂಬುದು ಸತ್ಯ.

೬.೪. ದಲಿತರ ಮಕ್ಕಳ ಶಿಕ್ಷಣ

ನಮ್ಮ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿ ಹಾಗೂ ದಲಿತ ಮಕ್ಕಳ ಶಿಕ್ಷಣಗಳ ನಡುವೆ ಇರುವ ಸಂಬಂಧವನ್ನು ತಿಳಿದುಕೊಳ್ಳುವುದು ಮುಖ್ಯವಾಗುತ್ತದೆ. ಅದಕ್ಕಾಗಿ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳ ಬಗ್ಗೆ ಮಾಹಿತಿ ಒದಗಿಸಿದ ಜನಪ್ರತಿನಿಧಿಗಳಿಂದಲೇ ಮಾಹಿತಿ ಪಡೆಯುವುದು ಸೂಕ್ತವೆನಿಸುತ್ತದೆ. ಆದ್ದರಿಂದ ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳನ್ನು ಸಂದರ್ಶನ ಮಾಡಲಾಯಿತು. ಅಧ್ಯಯನ ಕ್ಷೇತ್ರದಲ್ಲಿ ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ದಲಿತ ಮಕ್ಕಳ ಶಿಕ್ಷಣದ ಸ್ಥಿತಿ ಹೇಗಿದೆ? ಎಂಬ ಪ್ರಶ್ನೆಗೆ ಉತ್ತರವಾಗಿ ಜನಪ್ರತಿನಿಧಿಗಳು ಹಿಂದುಳಿದಿದೆ, ಸಮಾನ ವಾಗಿದೆ, ಸುಧಾರಣೆಯಾಗಿಲ್ಲ ಮತ್ತು ಸುಧಾರಿಸಬೆಕಾಗಿದೆ ಎಂಬ ನಾಲ್ಕು ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಶೇಕಡ ೪೪ರಷ್ಟು ಜನಪ್ರತಿನಿಧಿಗಳು ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ಅಧ್ಯಯನ ಕ್ಷೇತ್ರದಲ್ಲಿ ದಲಿತರ ಮಕ್ಕಳ ಶಿಕ್ಷಣದ ಸ್ಥಿತಿ ಹಿಂದುಳಿದಿದೆ ಎಂಬ ಉತ್ತರವನ್ನು, ಶೇಕಡ ೧೦ರಷ್ಟು ಜನಪ್ರತಿನಿಧಿಗಳು ಸುಧಾರಣೆಯಾಗಿಲ್ಲವೆಂಬ ಉತ್ತರವನ್ನು ಮತ್ತು ಶೇಕಡ ೩೪ರಷ್ಟು ಜನಪ್ರತಿನಿಧಿಗಳು ಸುಧಾರಿಸಬೇಕಾಗಿದೆ ಎಂಬ ಉತ್ತರವನ್ನು ನೀಡಿದ್ದಾರೆ. ಈ ಮೂರು ರೀತಿಯಾದ ಉತ್ತರಗಳೆಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸ್ವಭಾವದ ಉತ್ತರಗಳಾಗಿರುವುದರಿಂದ ಇವೆಲ್ಲ ಉತ್ತರಗಳನ್ನು ಸಂಯುಕ್ತಗೊಳಿಸಿ ಹೇಳಬಹುದು. ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಯುಕ್ತಗೊಳಿಸಿದರೆ ಶೇಕಡ ೮೮ರಷ್ಟು ಜನಪ್ರತಿನಿಧಿಗಳ ಪ್ರಕಾರವಾಗಿ ಅಧ್ಯಯನ ಕ್ಷೇತ್ರದಲ್ಲಿನ ದಲಿತರ ಮಕ್ಕಳ ಶಿಕ್ಷಣದ ಸ್ಥಿತಿಯು ಇತರೆ ಜನಾಂಗದ ಮಕ್ಕಳ ಶಿಕ್ಷಣದ ಸ್ಥಿತಿಗಿಂತ ಹಿಂದುಳಿದಿರುವುದು ಸ್ಪಷ್ಟವಾಗುತ್ತದೆ.

ಇದನ್ನೇ ಪ್ರತಿ ಗ್ರಾಮಪಂಚಾಯತಿವಾರು ನೋಡಿದರೆ ನಂ.೧೦ ಮುದ್ದಾಪುರ ಗ್ರಾಮ ಪಂಚಾಯತಿಯ ಶೇಕಡ ೪೭.೬೧ ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿದೆ ಎಂದು, ಶೇಕಡ ೧೯.೦೪ರಷ್ಟು ಜನಪ್ರತಿನಿಧಿಗಳು ಸುಧಾರಣೆಯಾಗಿಲ್ಲವೆಂದು ಮತ್ತು ಶೇಕಡ ೧೪.೨೮ರಷ್ಟು ಜನಪ್ರತಿನಿಧಿಗಳು ಸುಧಾರಿಸಬೇಕಾಗಿದೆ ಎಂಬಂತಹ ಉತ್ತರಗಳನ್ನು ನೀಡಿದ್ದಾರೆ. ಇವೆಲ್ಲ ಅಭಿಪ್ರಾಯಗಳನ್ನು ಸೇರಿಸಿದರೆ ಶೇಕಡ ೮೦.೯೩ರಷ್ಟು ಜನಪ್ರತಿನಿಧಿಗಳ ಪ್ರಕಾರ ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣದ ಸ್ಥಿತಿ ಹಿಂದುಳಿದಿದೆ ಎಂಬುದು ತಿಳಿಯುತ್ತದೆ. ಅಂದರೆ ಅಧ್ಯಯನ ಕ್ಷೇತ್ರದ ಸರಾಸರಿ ಜನಪ್ರತಿನಿಧಿಗಳ ಅಭಿಪ್ರಾಯಕ್ಕಿಂತ (ಶೇಕಡ ೮೮ರಷ್ಟು) ಕಡಿಮೆ ಪ್ರಮಾಣದ ಜನಪ್ರತಿನಿಧಿಗಳಂತೆ ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣ, ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ಹಿಂದುಳಿದಿದೆ ಎಂದು ಅರ್ಥವಾಗುತ್ತದೆ. ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯಂತೆ

ಆಲೂರು ಗ್ರಾಮಪಂಚಾಯತಿಯ ಶೇಕಡ ೪೦ರಷ್ಟು ಜನಪ್ರತಿನಿಧಿಗಳು ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣದ ಸ್ಥಿತಿ ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ಹಿಂದುಳಿದಿದೆ ಎಂದು ಮತ್ತು ಶೇಕಡ ೫೫ರಷ್ಟು ಜನಪ್ರತಿನಿಧಿಗಳು ಸುಧಾರಿಸಬೇಕಾಗಿದೆ ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

ಈ ಎರಡೂ ರೀತಿಯ ಪ್ರತಿಕ್ರಿಯೆಗಳನ್ನು ಸೇರಿಸಿದರೆ ಒಟ್ಟು ಶೇಕಡ ೯೫ರಷ್ಟು ಜನಪ್ರತಿನಿಧಿಗಳು ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣ ಇತರೆ ಮಕ್ಕಳ ಶಿಕ್ಷಣಕ್ಕಿಂತ ಹಿಂದುಳಿದಿದೆ ಎಂಬುದನ್ನು ಒಪ್ಪಿಕೊಳ್ಳುವುದು ಗೊತ್ತಾಗುತ್ತದೆ. ಅಂದರೆ ಇದು ಅಧ್ಯಯನ ಕ್ಷೇತ್ರದ ಸರಾಸರಿ ಜನಪ್ರತಿನಿಧಿಗಳ ಅಭಿಪ್ರಾಯಕ್ಕಿಂತ (ಶೇಕಡ ೮೮ರಷ್ಟು) ಅಧಿಕ ಪ್ರಮಾಣದ ಜನಪ್ರತಿನಿಧಿಗಳ ಪ್ರಕಾರ ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣ, ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ಹಿಂದುಳಿದಿರುವುದು ಅರ್ಥವಾಗುತ್ತದೆ. ಆದರೆ ಆಲೂರು ಗ್ರಾಮಪಂಚಾಯತಿಯ ಯಾವೊಬ್ಬ ಜನಪ್ರತಿನಿಧಿಯೂ ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣ ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕಿಂತ ಸುಧಾರಣೆಯಾಗಿಲ್ಲ ಎಂಬುದನ್ನು ತಿಳಿಸಿರುವುದಿಲ್ಲ.

ಈ ಎರಡೂ ಗ್ರಾಮಪಂಚಾಯತಿಗಳ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಹೋಲಿಸಿ ನೋಡಿದಾಗ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯ ಹಿಂದುಳಿಯುವಿಕೆಗೆ ಬೆಂಬಲವಾಗಿರುವ ಜನಪ್ರತಿನಿಧಿಗಳ ಪ್ರಮಾಣ ಶೇಕಡ ೮೦.೯೩ರಷ್ಟು ಕ್ಕಿಂತ ಆಲೂರು ಗ್ರಾಮಪಂಚಾಯತಿಯ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಬೆಂಬಲವಾಗಿರುವ ಜನಪ್ರತಿನಿಧಿಗಳ ಪ್ರಮಾಣ ಶೇಕಡ ೯೫ರಷ್ಟು ಅಧಿಕವಾಗಿರುತ್ತದೆ. ಅಂದರೆ ಮೇಲ್ನೋಟಕ್ಕೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ದಲಿತರ ಮಕ್ಕಳ ಶಿಕ್ಷಣಕ್ಕಿಂತಲೂ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿದೆ ಎಂಬ ಅರ್ಥವು ಬರುತ್ತದೆ. ಆದರೆ ವಾಸ್ತವವಾಗಿ ಆಯಾ ಗ್ರಾಮಪಂಚಾಯತಿ ಪ್ರದೇಶದ ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕೆ ಹೋಲಿಕೆ ಮಾಡಿದಂತೆ ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯನ್ನು ಅಂದಾಜು ಮಾಡಿ ಹೇಳಿರುತ್ತಾರೆ. ಆದ್ದರಿಂದ ಆಲೂರು ಗ್ರಾಮಪಂಚಾಯತಿಯ ವ್ಯಾಪ್ತಿಯ ದಲಿತ ಮಕ್ಕಳ ಶಿಕ್ಷಣ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯ ದಲಿತ ಮಕ್ಕಳ ಶಿಕ್ಷಣಕ್ಕಿಂತ ಹಿಂದುಳಿದಿದೆ ಎಂತಾಗಲಿ ಅಥವಾ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ದಲಿತರ ಮಕ್ಕಳ ಶಿಕ್ಷಣ ಆಲೂರು ಗ್ರಾಮ ಪಂಚಾಯತಿಯ ದಲಿತ ಮಕ್ಕಳ ಶಿಕ್ಷಣದ ಸ್ಥಿತಿಗಿಂತ ಸುಧಾರಿಸಿದೆ ಎಂತಾಗಲಿ ಅರ್ಥೈಸಬಾರದು. ಒಟ್ಟಾರೆಯಾಗಿ ಎರಡೂ ಗ್ರಾಮಪಂಚಾಯತಿಗಳ ವ್ಯಾಪ್ತಿಯ ದಲಿತರ ಮಕ್ಕಳ ಶಿಕ್ಷಣದ ಸ್ಥಿತಿ ಸ್ವಲ್ಪ ಹೆಚ್ಚೂ ಕಡಿಮೆ ಹಿಂದುಳಿದಿದೆ ಎಂಬಂತೆ ಕಂಡುಬಂದರೂ ಆಲೂರು ಗ್ರಾಮಪಂಚಾಯತಿಯ ದಲಿತ ಮಕ್ಕಳ ಶಿಕ್ಷಣದ ಸ್ಥಿತಿಗಿಂತ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ಪ್ರದೇಶದ ದಲಿತ ಮಕ್ಕಳ ಶಿಕ್ಷಣದ ಸ್ಥಿತಿ ಹಿಂದುಳಿದಿರುವುದು ನಮ್ಮ ಅನುಭವಕ್ಕೆ ಬಂದಿರುತ್ತದೆ.

ಅಧ್ಯಯನ ಕ್ಷೇತ್ರದ ಉಳಿದ ಶೇಕಡ ೧೨ರಷ್ಟು ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯು ಇತರೆ ಜನಾಂಗದ ಮಕ್ಕಳ ಶಿಕ್ಷಣಕ್ಕೆ ಸಮಾನವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯವಾಗಿಯೂ ಎರಡು ಗ್ರಾಮಪಂಚಾಯತಿಗಲ್ಲಿ ಸ್ವಲ್ಪ ಮಟ್ಟಿನ ಭಿನ್ನತೆಗಳು ಕಂಡುಬರುತ್ತದೆ. ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ಶೇಕಡ ೧೯.೦೪ರಷ್ಟು ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣವು ಇತರೆ ಜನಾಂಗದ ಮಕ್ಕಳ ಶಿಕ್ಷಣದ ಸ್ಥಿತಿಗೆ ಸಮಾನವಾಗಿದೆ ಎಂದಿದ್ದಾರೆ. ಆದರೆ ಆಲೂರು ಗ್ರಾಮಪಂಚಾಯತಿಯ ಶೇಕಡ ೫ರಷ್ಟು ಜನಪ್ರತಿನಿಧಿಗಳು ಮಾತ್ರ ದಲಿತ ಮಕ್ಕಳ ಶಿಕ್ಷಣವು ಇತರೆ ಮಕ್ಕಳ ಶಿಕ್ಷಣಕ್ಕೆ ಸಮಾನವಾಗಿದೆ ಎಂದಿದ್ದಾರೆ. ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯು ಇತರೆ ಮಕ್ಕಳ ಶಿಕ್ಷಣದ ಸ್ಥಿತಿಗೆ ಸಮಾನವಾಗಿದೆ ಎಂಬ ವಿಷಯವಾಗಿ ಎರಡೂ ಗ್ರಾಮಪಂಚಾಯತಿಗಳನ್ನು ಹೋಲಿಸಿದರೆ, ಸಮಾನವಾಗಿದೆ ಎಂಬ ಜನಪ್ರತಿನಿಧಿಗಳ ಪ್ರಮಾಣವು ನಂ. ೧೦ ಮುದ್ದಾಪುರದಲ್ಲಿ ಜಾಸ್ತಿಯಾಗಿದೆ (ಶೇಕಡ ೧೯.೦೪ರಷ್ಟು) ಮತ್ತು ಆಲೂರು ಗ್ರಾಮಪಂಚಾಯತಿ ಪ್ರದೇಶದಲ್ಲಿ ಕಡಿಮೆಯಾಗಿದೆ. ಆದರೆ ಈ ವಿಷಯದಲ್ಲಿಯೂ ಜನಪ್ರತಿನಿಧಿಗಳು ಆಯಾ ಪ್ರದೇಶದ ಇತರ ಜಾತಿಯ ಮಕ್ಕಳ ಶಿಕ್ಷಣದ ಸ್ಥಿತಿಗೆ ದಲಿತ ಮಕ್ಕಳ ಶಿಕ್ಷಣದ ಸ್ಥಿತಿಯನ್ನು ಹೋಲಿಸಿ ಹೇಳಿರುವುದರಿಂದ ನಂ.೧೦ ಮುದ್ದಾಪುರದ ದಲಿತ ಮಕ್ಕಳ ಶಿಕ್ಷಣಕ್ಕಿಂತ ಮುಂದುವರಿದಿದೆ ಎಂದು ತಿಳಿಯುವುದು ಸರಿಯಲ್ಲ.

ಒಟ್ಟಾರೆಯಾಗಿ ಎರಡೂ ಗ್ರಾಮಪಂಚಾಯತಿಗಳ ದಲಿತ ಮಕ್ಕಳ ಶಿಕ್ಷಣ ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ರೀತಿಯಾಗಿರುವಂತೆ ಕಂಡರೂ ಆಲೂರು ಗ್ರಾಮಪಂಚಾಯತಿ ಪ್ರದೇಶದ ದಲಿತ ಮಕ್ಕಳ ಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮ ಎಂಬುದು ಕ್ಷೇತ್ರಕಾರ್ಯದಲ್ಲಿ ನಮಗೆ ಗೊತ್ತಾಗಿದೆ. ಇದೇನೇ ಇದ್ದರೂ ಕೂಡ ಇಡೀ ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣದ ಸ್ಥಿತಿಯು ಇತರೆ ಜನಾಂಗದ ಮಕ್ಕಳ ಶಿಕ್ಷಣದ ಸ್ಥಿತಿಗಿಂತ ಉತ್ತಮವಾಗಿಲ್ಲ ಮತ್ತು ಹಿಂದುಳಿದಿದೆ ಎಂಬುದು ವಾಸ್ತವ.

ಮುಂದುವರಿದಂತೆ ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣ ಹಿಂದುಳಿಯಲು ಇರುವ ಕಾರಣವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ, ಅಧ್ಯಯನ ಕ್ಷೇತ್ರ ವ್ಯಾಪ್ತಿಯಲ್ಲಿನ ಜನಪ್ರತಿನಿಧಿಗಳನ್ನು ಸಂದರ್ಶನ ಮಾಡುವುದರ ಮೂಲಕ ಮಾಹಿತಿ ಪಡೆಯಲಾಯಿತು. ಅಧ್ಯಯನ ಕ್ಷೇತ್ರದ ದಲಿತರ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು? ಎಂಬ ಪ್ರಶ್ನೆಯನ್ನು ಗ್ರಾಮಪಂಚಾಯತಿ ಸದಸ್ಯರಿಗೆ ಕೇಳಿದಾಗ, ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಲಾಲನೆ ಪಾಲನೆ ಮತ್ತು ಆತ್ಮಹತ್ಯೆಯಂತಹ ಕಾರಣಗಳು ಗೊತ್ತಾಗಿವೆ. ಅಧ್ಯಯನ ಕ್ಷೇತ್ರದ ಶೇಕಡ ೮೪ರಷ್ಟು ಜನಪ್ರತಿನಿಧಿಗಳು, ದಲಿತರ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಬಡತನವು ಕಾರಣವಾಗುತ್ತದೆ ಎಂಬ ಉತ್ತರ ನೀಡಿದ್ದಾರೆ. ಬಡತನವೇ ದಲಿತರ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಕಾರಣವೆಂದು ಹೇಳುವ ಜನಪ್ರತಿನಿಧಿಗಳು ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ

ಯಲ್ಲಿ ಶೇಕಡ ೮೩.೩೩ರಷ್ಟಿದ್ದರೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಪ್ರದೇಶದಲ್ಲಿ ಶೇಕಡ ೮೫ರಷ್ಟಿದ್ದಾರೆ. ಇದನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ನಂ. ೧೦ ಮುದ್ದಾಪುರಕ್ಕಿಂತ ಆಲೂರು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಬಡತನದ ಕಾರಣ ಹೆಚ್ಚಾಗಿ ಕಂಡುಬರುತ್ತದೆ. ನೀರಾವರಿ ಪ್ರದೇಶವಾದ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಗಿಂತ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ದಲಿತರಲ್ಲಿ ಬಡತನ ಹೆಚ್ಚಾಗಿರುವುದು ಮೇಲ್ನೋಟಕ್ಕೆ ಸರಿ ಎನಿಸುತ್ತದೆ.

ಆದರೆ ಬಡತನವೇ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಪ್ರಧಾನ ಕಾರಣವಾಗಿದೆಯೇ ಎಂಬುದನ್ನು ಇನ್ನಷ್ಟು ವಿಮರ್ಶಾತ್ಮಕವಾಗಿ ನೋಡಬೇಕಾಗುತ್ತದೆ. ಹಾಗೆ ನೋಡಿದರೆ ಬಡತನವು ಹೆಚ್ಚಾಗಿರುವ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿಯಲ್ಲಿ ದಲಿತ ಮಕ್ಕಳ ಶಿಕ್ಷಣ ನಂ.೧೦ ಮುದ್ದಾಪುರದ ದಲಿತ ಮಕ್ಕಳ ಶಿಕ್ಷಣಕ್ಕಿಂತ ಸ್ವಲ್ಪಮಟ್ಟಿಗೆ ಸುಧಾರಿಸಿದೆ. ಅಂದಮೇಲೆ ಬಡತನವೊಂದೇ ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣ ಹಿಂದುಳಿಯುವಿಕೆಗೆ ಕಾರಣವಾಗಿರದೆ ಇತರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಕಾರಣವಾಗಿರುತ್ತವೆ ಎಂಬುದು ಅರ್ಥವಾಗುತ್ತದೆ. ಆದ್ದರಿಂದ ಸಾಮಾಜಿಕ ಅಂಶವಾದ ಅನಕ್ಷರತೆಯ ಕಡೆಗೆ ಗಮನಹರಿಸಿ ನೋಡಿದರೆ ಅಧ್ಯಯನ ಕ್ಷೇತ್ರದ ಶೇಕಡ ೮ರಷ್ಟು ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಅನಕ್ಷರತೆಯ ಕಾರಣವನ್ನು ಹೇಳುವುದು ತಿಳಿಯುತ್ತದೆ.

ಇದನ್ನು ಪ್ರತಿ ಗ್ರಾಮಪಂಚಾಯತಿವಾರು ನೋಡಿದಾಗ ನಂ. ೧೦ ಮುದ್ದಾಪುರ ಗ್ರಾಮ ಪಂಚಾಯತಿಯಲ್ಲಿ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಅನಕ್ಷರತೆಯ ಕಾರಣವನ್ನು ಯಾವೊಬ್ಬ ಜನಪ್ರತಿನಿಧಿ ಹೇಳಿರುವುದಿಲ್ಲ. ಆದರೆ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೧೫ರಷ್ಟು ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಅನಕ್ಷರತೆಯ ಕಾರಣವನ್ನು ಸೂಚಿಸುತ್ತಾರೆ. ಆಲೂರು ಗ್ರಾಮಪಂಚಾಯತಿಯ ಜನಪ್ರತಿನಿಧಿಗಳು ಮಾತ್ರ ಅನಕ್ಷರತೆಯ ಕಾರಣ ಹೇಳುತ್ತಾ ಮುದ್ದಾಪುರ ಗ್ರಾಮಪಂಚಾಯತಿಯ ಜನಪ್ರತಿನಿಧಿಗಳು ಅನಕ್ಷರತೆಯ ಕಾರಣ ಹೇಳದಿರುವುದು, ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ದಲಿತರಲ್ಲಿ ಅನಕ್ಷರತೆ ಇಲ್ಲವೆಂದೇನಲ್ಲ. ಆದರೆ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ದಲಿತರಲ್ಲಿ ಅನಕ್ಷರತೆ ಇದ್ದರೂ, ಆ ಅನಕ್ಷರತೆಯು ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಕಾರಣವಾಗಿರುವುದನ್ನು ಗುರುತಿಸುವುದು ಆ ಪ್ರದೇಶದ ಜನಪ್ರತಿನಿಧಿಗಳಿಂದ ಸಾಧ್ಯವಾಗಿಲ್ಲವೆಂಬುದು ವಾಸ್ತವ ಸಂಗತಿಯಾಗಿದೆ.

ಅಧ್ಯಯನ ಕ್ಷೇತ್ರದ ಶೇಕಡ ೩ರಷ್ಟು ಜನಪ್ರತಿನಿಧಿಗಳು ದಲಿತರ ಮನೆಯಲ್ಲಿನ ಚಿಕ್ಕಮಕ್ಕಳ ಪಾಲನೆಯನ್ನು ಮಾಡಬೇಕಾದ ಕಾರಣದಿಂದ ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿದೆ ಎಂದಿದ್ದಾರೆ. ಇದನ್ನು ವಿವರವಾಗಿ ನೋಡಿದಾಗ, ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ಪ್ರದೇಶದಲ್ಲಿನ

ಶೇಕಡ ೫.೫೫ರಷ್ಟು ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣ ಹಿಂದುಳಿಯಲು ಚಿಕ್ಕಮಕ್ಕಳ ಪಾಲನೆಯು ಕಾರಣವಾಗಿದೆ ಎಂದು ಹೇಳುತ್ತಾರೆ. ಆದರೆ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಜನಪ್ರತಿನಿಧಿಗಳು ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಚಿಕ್ಕಮಕ್ಕಳ ಪಾಲನೆಯ ಕಾರಣವನ್ನು ಗುರುತಿಸುವುದಿಲ್ಲ. ಈ ವಿಷಯವನ್ನು ವಿಮರ್ಶಾತ್ಮಕವಾಗಿ ನೋಡಿದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಚಿಕ್ಕಮಕ್ಕಳ ಪಾಲನೆಯು ದಲಿತ ಮಕ್ಕಳ ಶಿಕ್ಷಣಕ್ಕೆ ತಕ್ಕಮಟ್ಟಿಗೆ ಅಡ್ಡಿಯಾಗಿದೆ ಮತ್ತು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಆಸಕ್ತಿ ಕಡಿಮೆ ಎಂಬುದು ಅರ್ಥವಾಗುತ್ತದೆ.

ಆದರಂತೆ ಆಲೂರು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ದಲಿತರ ಕುಟುಂಬಗಳಲ್ಲಿ ಚಿಕ್ಕಮಕ್ಕಳು ಇಲ್ಲವೆಂದೇನೂ ಅಲ್ಲ. ಆದರೆ ಚಿಕ್ಕಮಕ್ಕಳ ಪಾಲನೆಯನ್ನು ಮಾಡುವುದರ ಜೊತೆಯಲ್ಲಿಯೇ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರಿಗೆ ಹೆಚ್ಚಿನ ಆಸಕ್ತಿ ಇರುವುದು ತಿಳಿಯುತ್ತದೆ. ಇಲ್ಲಿ ಸ್ಪಷ್ಟವಾಗುವ ಇನ್ನೊಂದು ಅಂಶವೆಂದರೆ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ವ್ಯಾಪ್ತಿನಲ್ಲಿನ ದಲಿತರಲ್ಲಿ ತಮ್ಮ ಜೀವನ ನಿರ್ವಹಣೆಗಾಗಿ ಶಿಕ್ಷಣವನ್ನು ಅವಲಂಬಿಸಬೇಕೆಂಬ ಭಾವನೆ ಇಲ್ಲ. ಆದರೆ ಮಳೆಯಾಶ್ರಿತ ಪ್ರದೇಶವಾದಂತಹ ಆಲೂರು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿನ ದಲಿತರು ತಮ್ಮ ಜೀವನ ನಿರ್ವಹಣೆಗಾಗಿ ಶಿಕ್ಷಣದ ನಂತರ ಪಡೆಯಬಹುದಾದ ಉದ್ಯೋಗವನ್ನು ಅವಲಂಬಿಸುವ ಭಾವನೆ ಇದೆ. ಅಂದಮೇಲೆ ನೀರಾವರಿ ಪ್ರದೇಶದಲ್ಲಿ ಜೀವನ ನಿರ್ವಹಣೆಗೆ ಅವಕಾಶವಿರುವುದು ಮಕ್ಕಳ ಶಿಕ್ಷಣದ ಆಸಕ್ತಿಯನ್ನು ಕಡಿಮೆಗೊಳಿಸಿದೆ. ಇದಕ್ಕೆ ವಿರುದ್ಧವಾಗಿ ಜೀವನ ನಿರ್ವಹಣೆ ಕಷ್ಟವಾಗಿರುವ ಮಳೆಯಾಶ್ರಿತ ಪ್ರದೇಶದಲ್ಲಿ ಮಕ್ಕಳ ಶಿಕ್ಷಣದ ಆಸಕ್ತಿ ಹೆಚ್ಚಾಗಿರುತ್ತದೆ ಎಂಬುದನ್ನು ನಮ್ಮ ಅಧ್ಯಯನ ಗುರುತಿಸಿದೆ.

ಅಧ್ಯಯನ ಕ್ಷೇತ್ರದಲ್ಲಿನ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಆತ್ಮಹತ್ಯೆಯ ಬೆದರಿಕೆಯಂತಹ ನವೀನ ರೀತಿಯ ಕಾರಣವನ್ನು ನಮ್ಮ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ಅಧ್ಯಯನ ಕ್ಷೇತ್ರದ ಶೇಕಡ ೫ರಷ್ಟು ಜನಪ್ರತಿನಿಧಿಗಳು ಮಕ್ಕಳ ಆತ್ಮಹತ್ಯೆಯ ಬೆದರಿಕೆಯ ಕಾರಣದಿಂದ ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿದೆ ಎಂದು ಹೇಳುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶೇಕಡ ೧೧.೧೧ರಷ್ಟು ಜನಪ್ರತಿನಿಧಿಗಳ ಪ್ರಕಾರ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಮಕ್ಕಳ ಆತ್ಮಹತ್ಯೆಯ ಬೆದರಿಕೆಯು ಕಾರಣವಾಗಿದೆ. ಆದರೆ ಆಲೂರು ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿ ಈ ರೀತಿಯ ಕಾರಣ ಕಂಡುಬಂದಿರುವುದಿಲ್ಲ.

ವಸ್ತುನಿಷ್ಠವಾಗಿ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಕಣಿವೆ ತಿಮ್ಮಲಾಪುರ ಗ್ರಾಮದ ಪರಿಶಿಷ್ಟ ಜಾತಿಯ ಮಹಿಳಾ ಜನಪ್ರತಿನಿಧಿಯೊಬ್ಬರು ಅನುಭವದ ಮಾತುಗಳನ್ನು ನಮ್ಮ

ಅಧ್ಯಯನವು ಬಹಳ ಗಂಭೀರವಾಗಿ ಪರಿಗಣಿಸುತ್ತದೆ. ಈ ಮಹಿಳಾ ಜನಪ್ರತಿನಿಧಿಯ ಒಬ್ಬನೇ ಮಗ ೭ನೇ ತರಗತಿಯಲ್ಲಿ ಓದುತ್ತಿರುವಾಗಲೇ ಸರಿಯಾಗಿ ಶಾಲೆಗೆ ಹೋಗದಿರುವುದು ತಾಯಿಯ ಗಮನಕ್ಕೆ ಬಂದಿದೆ. ಆ ಸಂದರ್ಭದಲ್ಲಿ ತಾಯಿ ತನ್ನ ಮಗನನ್ನು ಸರಿಯಾಗಿ ಶಾಲೆಗೆ ಹೋಗುವಂತೆ ಒತ್ತಾಯಿಸಿದ್ದರಿಂದ, ಹೀಗೆ ಮತ್ತೊಮ್ಮೆ ಶಾಲೆಗೆ ಹೋಗುವಂತೆ ಒತ್ತಾಯ ಮಾಡಿದರೆ ಕಾಲುವೆಗೆ ಬಿದ್ದು ಸಾಯುತ್ತೇನೆ ಎಂಬ ಆತ್ಮಹತ್ಯೆಯ ಬೆದರಿಕೆ ತನ್ನ ಮಗನಿಂದ ಬಂದಿದೆ. ಈ ವಿಷಯವನ್ನು ಆ ಮಗುವಿನ ತಾಯಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಹೇಳುತ್ತಿದ್ದುದು ನಮ್ಮ ಗಮನಕ್ಕೆ ಬಂದಿರುತ್ತದೆ. ಒಬ್ಬನೇ ಮಗನ ತಾಯಿಯಾದ ಮಹಿಳಾ ಜನಪ್ರತಿನಿಧಿಗೆ ತನ್ನ ಮಗ ಸರಿಯಾಗಿ ಶಾಲೆಗೆ ಹೋಗದೆ ಅವಿದ್ಯಾವಂತನಾಗುವುದಕ್ಕಿಂತ ಆತ್ಮಹತ್ಯೆಯ ಬೆದರಿಕೆ ಅಪಾಯಕಾರಿಯಾಗಿದೆ. ಆದ್ದರಿಂದ ಅವಳಿಗೆ ತನ್ನ ಮಗ ಅವಿದ್ಯಾವಂತನಾದರೂ ಜೀವಂತವಾಗಿರಬೇಕೆಂಬುದೇ ಮುಖ್ಯವಾಗಿರುತ್ತದೆ. ಯಾವುದೇ ತಾಯಿಗೆ ತನ್ನ ಮಗ ವಿದ್ಯಾವಂತನಾಗಬೇಕೆಂಬ ಬಯಕೆ ಇದ್ದರೂ ಆತ್ಮಹತ್ಯೆಯಂತಹ ಬೆದರಿಕೆ ಬಂದಾಗ ತನ್ನ ಮಗ ಅವಿದ್ಯಾವಂತನಾದರೂ ಜೀವಂತವಾಗಿ ಕಣ್ಣೆದುರಿನಲ್ಲಿರಬೇಕೆಂಬ ಆಸೆ ಇರುವುದು ಸಹಜ. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿರುವುದು ಸ್ವಲ್ಪಮಟ್ಟಿಗೆ ಕಂಡುಬಂದರೂ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಇತ್ತೀಚಿನ ಜೀವನದ ಪರಿಸರದಲ್ಲಿ ಆತ್ಮಹತ್ಯೆಯು ಒಂದಲ್ಲ ಒಂದು ಕಾರಣದಿಂದ ಪದೇ ಪದೇ ಕೇಳಿಬರುತ್ತಿದೆ ಮತ್ತು ಕಂಡುಬರುತ್ತಿದೆ. ಈ ವಿಷಯದಲ್ಲಿ ಸುದ್ದಿ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳು ಮಾಡುವ ಪ್ರಚಾರದಿಂದ ಮಕ್ಕಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವಾಗುತ್ತದೆ. ಇದರಿಂದಾಗಿ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವಾಗುತ್ತಿದೆ. ಆದ್ದರಿಂದ ಈ ಆತ್ಮಹತ್ಯೆಯಂತಹ ವಿಷಯಗಳು ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಭೀರದಂತೆ ಇಡೀ ಶಿಕ್ಷಣ ವ್ಯವಸ್ಥೆ, ಆಡಳಿತ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಗಳು ಎಚ್ಚರವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ಅಧ್ಯಯನಗಳನ್ನು ಎದುರು ನೋಡಬೇಕಾಗಿದೆ.

೬.೫. ಉಪಸಂಹಾರ

ಹೀಗೆ ಹಿಂದುಳಿದ ಸಾಮಾಜಿಕ ಸನ್ನಿವೇಶ, ಸದೃಢವಾಗಿರದ ಆರ್ಥಿಕ ಸ್ಥಿತಿ, ಕಡಿಮೆ ಇರುವ ರಾಜಕೀಯ ತಿಳುವಳಿಕೆ ಮತ್ತು ಸಾಂಸ್ಕೃತಿಕ ಪರಿಸರ, ಅಧ್ಯಯನ ಕ್ಷೇತ್ರದಲ್ಲಿನ ದಲಿತ ವರ್ಗದಲ್ಲಿ ಕಂಡುಬರುತ್ತದೆ. ಈ ರೀತಿಯ ಪರಿಸರದಲ್ಲಿರುವ ದಲಿತ ವರ್ಗದ ಮಕ್ಕಳ ಶಿಕ್ಷಣವು ಹಿಂದುಳಿಯುವುದು ಮೇಲ್ನೋಟಕ್ಕೆ ಅರ್ಥವಾಗುತ್ತದೆ. ಆದರೂ ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಪಾಲನೆ-ಪೋಷಣೆ, ಕೀಳರಿಮೆ ಮತ್ತು ಆತ್ಮಹತ್ಯೆಯಂತಹ ಅಂಶಗಳು ಕಾರಣವಾಗುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಗುರುತಿಸಲಾದ ಅಂಶಗಳಲ್ಲಿ ಬಹುತೇಕವಾಗಿ

ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳಿದ್ದರೂ ಆತ್ಮಹತ್ಯೆಯು ಮಾತ್ರ ಹೊಸ ಅಂಶವಾಗಿರುತ್ತದೆ.

ಸಮಾಜೋ-ಆರ್ಥಿಕ ಅಂಶವಾದ ಬಡತನವು ದಲಿತಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆಗೆ ಮತ್ತು ಲಿಂಗತಾರತಮ್ಯಕ್ಕೆ ಕಾರಣವಾಗುವ ಅಂಶವನ್ನು ಅಲ್ಲಗಳೆಯಲಾಗದ ಸ್ಥಿತಿಯು ನಾವು ಅಧ್ಯಯನ ಕೈಗೊಂಡ ಅಧ್ಯಯನ ಕ್ಷೇತ್ರದಲ್ಲಿ ರುಜುವಾತಾಗಿದೆ. ಹಾಗಾಗಿ ದಲಿತರಿಗೆ ಉದ್ಯೋಗ ಸೃಷ್ಟಿಸುವುದರ ಮೂಲಕ ಬಡತನ ನಿರ್ಮೂಲನದೊಂದಿಗೆ ಅವರ ವಲಸೆಗಳನ್ನು ತಡೆಗಟ್ಟುವ ಉದ್ಯೋಗಖಾತ್ರಿ, ಎನ್.ಆರ್.ಇ.ಪಿ. ಕಾರ್ಯಕ್ರಮಗಳ ಪ್ರಾಮಾಣಿಕ ಅನುಷ್ಠಾನದ ಅಗತ್ಯವಿದೆ. ಈ ವಿಚಾರದಲ್ಲಿ ಸರ್ಕಾರವು ಬಜೆಟ್‌ನಲ್ಲಿ ನಿರ್ದಿಷ್ಟ ಪ್ರಮಾಣದ ಹಣವನ್ನು ಮೀಸಲಿಟ್ಟು ಹಣಕಾಸು ವರ್ಷದ ಕೊನೆಯಲ್ಲಿ ಅವಸರವಾಗಿ ಖರ್ಚುಮಾಡುವಂತಹ ಒತ್ತಡಕ್ಕೆ ಒಳಗಾಗುವುದನ್ನು ತಡೆಯುವ ಅಗತ್ಯವಿರುವುದನ್ನು ನಮ್ಮ ಅಧ್ಯಯನ ಸಂದರ್ಭದಲ್ಲಿ ಗಮನಿಸಲಾಗಿದೆ. ಅಂದ ಮಾತ್ರಕ್ಕೆ ಬಡತನವೊಂದೇ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯ ಹಿಂದುಳಿಯುವಿಕೆಗೆ ಕಾರಣವಲ್ಲ ಎಂಬುದು ನಮ್ಮ ಅಧ್ಯಯನದ ಅಭಿಪ್ರಾಯವಾಗಿದೆ.

ಅನಕ್ಷರತೆ ಮತ್ತು ಚಿಕ್ಕಮಕ್ಕಳ ಪಾಲನೆಯಂತಹ ಸಾಮಾಜಿಕ ಅಂಶಗಳು ದಲಿತಮಕ್ಕಳ ಶೈಕ್ಷಣಿಕ ಹಿಂದುಳಿಯುವಿಕೆಗೆ ಕಾರಣವಾಗಿರುವುದನ್ನು ನಮ್ಮ ಅಧ್ಯನವು ಸ್ಪಷ್ಟಪಡಿಸುತ್ತದೆ. ಈ ವಿಚಾರದಲ್ಲಿ ದಲಿತ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಹೆಚ್ಚಾಗಿ ಶೈಕ್ಷಣಿಕ ಅವಕಾಶ ವಂಚಿತರಾಗುತ್ತಾರೆ ಎಂಬುದು ನಮ್ಮ ಅಧ್ಯಯನದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಅವಿದ್ಯಾವಂತ ದಲಿತ ಪೋಷಕರಿಗೆ ಜಾಗೃತಿ ಮೂಡಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಿ, ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯವಿರುವುದನ್ನು ನಮ್ಮ ಅಧ್ಯಯನವು ಒತ್ತಿಹೇಳುತ್ತದೆ. ಈ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಸ್ಥಳೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಹಿನ್ನೆಲೆಯಲ್ಲಿ ರೂಪಿಸಿ, ಅನುಷ್ಠಾನಗೊಳಿಸಿದರೆ ಯಶಸ್ಸು ಕಾಣಬಹುದೆಂಬ ಆಶಾಭಾವನೆಯನ್ನು ನಮ್ಮ ಅಧ್ಯಯನವು ವ್ಯಕ್ತಪಡಿಸುತ್ತದೆ.

ದಲಿತರಲ್ಲಿ ನಾವು ಹೀನಜಾತಿಯವರು, ಕೀಳುಜಾತಿಯವರಾದ ನಮಗೆ ವಿದ್ಯೆ ಒಲಿಯುವುದಿಲ್ಲ, ಮೇಲ್ಜಾತಿಯವರಿಂದ ಮಾತ್ರ ವಿದ್ಯೆ ಕಲಿಯಲು ಸಾಧ್ಯ ಎಂಬ ಕೀಳರಿಮೆಯ ಭಾವನೆ ಇನ್ನೂ ದಲಿತರದಲ್ಲಿದೆ. ಈ ಕೀಳರಿಮೆ ಭಾವನೆ ದಲಿತ ಮಕ್ಕಳನ್ನು ಶೈಕ್ಷಣಿಕವಾಗಿ ಹಿಂದೆ ಬೀಳುವಂತೆ ಮಾಡುವುದನ್ನು ನಮ್ಮ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಈ ದಿಸೆಯಲ್ಲಿ ದಲಿತರಲ್ಲಿರುವ ಕೀಳರಿಮೆಯನ್ನು ಗುರುತಿಸಿ, ಅದನ್ನು ಹೋಗಲಾಡಿಸುವಂತಹ ಮತ್ತು ದಲಿತರ ಸಾಮರ್ಥ್ಯವನ್ನು ಪ್ರೋತ್ಸಾಹಿಸುವ ಅವಶ್ಯಕತೆ ಎದ್ದುಕಾಣುತ್ತದೆ. ಈ ನಿಟ್ಟಿನಲ್ಲಿ ದಲಿತರಲ್ಲಿ ಜಾಗೃತಿ ಮೂಡಿಸುವಂತ ಸಾಮಾಜಿಕ ಆಂದೋಲನವನ್ನು ಅತ್ಯಂತ ಪ್ರಾಮಾಣಿಕವಾದ ರೀತಿಯಲ್ಲಿ ಮಾಡಬೇಕಾಗಿದೆ. ಈ ದೃಷ್ಟಿಯಲ್ಲಿ ಇನ್ನಷ್ಟು ಅಧ್ಯಯನಗಳು ಆದರೆ ಉತ್ತಮ.

ಆತ್ಮಹತ್ಯೆಯಂತಹ ಹೊಸ ಅಂಶವು ದಲಿತ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ಹಿಂದೆ ತಳ್ಳಿರುವುದನ್ನು ನಮ್ಮ ಅಧ್ಯಯನವು ಗುರುತಿಸುತ್ತದೆ. ನಿಖರವಾಗಿ ಅಧ್ಯಯನ ಕ್ಷೇತ್ರದ ಶೇಕಡ ೫ರಷ್ಟು ಜನಪ್ರತಿನಿಧಿಗಳು ತಮ್ಮ ಮಕ್ಕಳ ಆತ್ಮಹತ್ಯೆಯ ಬೆದರಿಕೆಯನ್ನು ಹಾಕುತ್ತಾ ಮಧ್ಯಾಹ್ನದಲ್ಲಿಯೇ ಶಾಲೆ ಬಿಟ್ಟಿರುವದನು ದೃಢಪಡಿಸುತ್ತಾರೆ. ವಿವಿಧ ಕಾರಣಗಳಿಂದಾಗಿ ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಸಂಭವಿಸುವ ಆತ್ಮಹತ್ಯೆಗಳು ದಲಿತ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತಾ, ಮಕ್ಕಳು ಅದನ್ನೇ ಒಂದು ಅಸ್ತ್ರವನ್ನಾಗಿಸಿಕೊಳ್ಳುವಂತೆ ಮಾಡಿಬಿಟ್ಟಿವೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆ, ಆಡಳಿತ ವ್ಯವಸ್ಥೆ ಮತ್ತು ಇಡೀ ಸಾಮಾಜಿಕ ವ್ಯವಸ್ಥೆಯೇ ಎಚ್ಚರವಾಗಬೇಕಾದ ಅಗತ್ಯವಿದೆ. ಈ ನೆಲೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಾವು ಎದುರು ನೋಡಬಹುದಾಗಿದೆ.

ಗ್ರಂಥಸೂಚಿ

೧. ಅಮ್ಮಾನ್ ಮಧನ್, (೨೦೦೫), *ಫರ್‌ಸ್ಪೆಕ್ಟಿವ್ ಆನ್ ಎಜ್ಯುಕೇಶನ್,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಜುಲೈ ೩೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೨. ಕುಮಾರ ಸ್ವಾಮಿ ಎಚ್., (೨೦೦೭), *ಗುಣಮಟ್ಟದ ಶಿಕ್ಷಣ : ತರಗತಿಯಲ್ಲಿನ ಪ್ರಕ್ರಿಯೆಗಳು,* **ಅಭಿವೃದ್ಧಿ ಅಧ್ಯಯನ,** ಸಮಾಜ ವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೩. ಕೃಷ್ಣಕುಮಾರ್, ಮನಿಷ ಪ್ರಿಯಮ್, ಸಾಧನಾ ಸಕ್ಸೇನ್, (೨೦೦೧), *ಲುಕಿಂಗ್ ಬಿಯಾಂಡ್‌ದ ಸಮ್ ಸ್ಕ್ರೀನ್, ಡಿ.ಪಿ.ಇ.ಪಿ. ಅಂಡ್ ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಫೆಬ್ರವರಿ ೧೭), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೪. ಚಾರುಗುಪ್ತ, (೨೦೦೭), *ದಲಿತ್ ವೈರಂಗಣಾಸ್ ಅಂಡ್ ರಿ ಇನ್‌ವೆನ್ಷನ್ ಆಫ್ ೧೮೫೭,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೫. ಚಂದ್ರಶೇಖರ್ ಟಿ.ಆರ್., (೨೦೦೭), *ಕರ್ನಾಟಕದ ಪ್ರಾದೇಶಿಕ ಅಸಮಾನತೆ,* ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೬ ನೀರಾ ಬುರ್‍ರಾ, (೨೦೦೧), *ಕಲ್ಚರಲ್ ಸ್ಟೀರಿಯೋ ಟೈಪ್ಸ್ ಅಂಡ್ ಹೌಸ್ ಹೋಲ್ಡ್ ಬಿಹೇವಿಯರ್, ಗರ್ಲ್ ಚೈಲ್ಡ್ ಲೇಬರ್ ಇನ್ ಇಂಡಿಯಾ,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಫೆಬ್ರವರಿ ೩-೧೦), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೭. ನಿರಂಜನಾರಾಧ್ಯ ವಿ.ಪಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ : ಕರ್ನಾಟಕದ ಅನುಭವಗಳು*, ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೮. ಪದ್ಮ ಎಂ. ಸಾರಂಗ ಪಾಣಿ, (೨೦೦೩), *ಕನ್‌ಸ್ಟ್ರಕ್ಟಿಂಗ್ ಸ್ಕೂಲ್ ನಾಲೆಡ್ಜ್ ಆ್ಯನ್ ಎತ್ನಾಗ್ರಫಿ ಆಫ್ ಲರ್ನಿಂಗ್ ಇನ್ ಆ್ಯನ್ ಇಂಡಿಯನ್ ವಿಲೇಜ್*, ಸೇಜ್ ಪಬ್ಲಿಕೇಶನ್ಸ್, ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬಿ. ೪೨, ಪಂಚಶೀಲ ಎನ್‌ಕ್ಲೇವ್, ನವದೆಹಲಿ.

೯. ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೦. ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣ*, ಸುವರ್ಣ ಕರ್ನಾಟಕ ಅಭಿವೃದ್ಧಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೧೧. ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು : ಸಾಧನೆ-ಸವಾಲು-ಸಾಧ್ಯತೆ*, ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೨. ಪ್ರಶಾಂತ್ ಎಚ್.ಡಿ., (೨೦೦೯), ಶಾಲಾ ಶಿಕ್ಷಣದ ಸಾರ್ವತ್ರೀಕರಣ : ದಲಿತ ಮಕ್ಕಳ ಸ್ಥಿತಿ, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು.

೧೩. ಬಂಡಾರಿ ನಾರಾಯಣ ತಿವಾರಿ, (೨೦೦೭), *ರಿ ಆ್ಯಕ್ಟಿ ವೇಟಿಂಗ್ ದಿ ಪಾಸ್ಟ್, ದಲಿತ್ಸ್ ಅಂಡ್ ಮೆಮೋರಿಸ್ ಆಫ್ ೧೮೫೭*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೪. ರುಕ್ಮಿಣಿ ಬ್ಯಾನರ್ಜಿ, (೨೦೦೦), *ಪಾವರ್ಟಿ ಅಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರಮ್ ಮುಂಬೈ ಅಂಡ್ ದೆಹಲಿ*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಮಾರ್ಚ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೫. ಲಕ್ಷ್ಮಣ್ ತೆಲಗಾವಿ, (೨೦೦೭), *ಕರ್ನಾಟಕದ ದಲಿತ ಚಳುವಳಿ*, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೬. ವಾಸವಿ ಎ.ಆರ್., ಪಿ.ಜಿ. ವಿಜಯ ಶೆರ್ರಿಚಾಂದ್ , ಶೈಲೇಶ್ ಆರ್. ಶುಕ್ಲ, (೧೯೯೭), *ಬ್ಲ್ಯೂ ಪ್ರಿಂಟ್ ಫಾರ್ ರೂರಲ್ ಪ್ರೈಮರಿ ಎಜ್ಯುಕೇಶನ್, ಹೌ ವೈಯಬಲ್?*, ಎಕನಾಮಿಕ್

ಅಂಡ್ ಪೊಲಿಟಿಕಲ್ ವೀಕ್ಲಿ (ಡಿಸೆಂಬರ್ ೧೩), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

೧೭. ಶಾರದ ಜೈನ್, ಅಲೋಕ್ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಷಾ, (೧೯೯೯), *ಚಿಲ್ಡ್ರನ್ ವರ್ಕ್ಸ್ ಅಂಡ್ ಎಜ್ಯುಕೇಶನ್, ರಿಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್,* ಇಂಡಿಯಾ ಎಜ್ಯುಕೇಶನ್ ರಿಪೋರ್ಟ್, ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್.

೧೮. ಶಾರದ ಕೆ.ಎಸ್., (೨೦೦೭), *ವಯಸ್ಕರ ಶಿಕ್ಷಣ-ಸಾಕ್ಷರತಾ ಆಂದೋಲನ,* ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೧೯. ಸವಿತಾ ಕೆ., (೨೦೦೮), ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗಸಂಬಂಧಿ ಆಯಾಮಗಳು: ಸಮಾಜೋ-ಅರ್ಥಿಕ ಅಂಶಗಳು, (ಅಪ್ರಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

೨೦. ಕ್ಷೇತ್ರಕಾರ್ಯದ ಮಾಹಿತಿ.

• • •

ಅಧ್ಯಾಯ-೭

ದಲಿತರ ಶೈಕ್ಷಣಿಕ ಪರಿಸ್ಥಿತಿ

೭.೧. ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ

೭.೨. ದಲಿತ ಮಕ್ಕಳು ಮಧ್ಯದಲ್ಲಿಶಾಲೆ ಬಿಡುವುದೇಕೆ?

೭.೩. ಬಡತನ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಅಡ್ಡಿಯೇ?

೭.೪. ಶಿಕ್ಷಕರ ಮನೋಪ್ರವೃತ್ತಿ ಮತ್ತು ದಲಿತರ ಶಾಲಾ ಭಾಗವಹಿಸುವಿಕೆ

ಭಾರತದ ಸ್ವಾತಂತ್ರ್ಯದ ನಂತರ ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮ ಮತ್ತು ನೀತಿ ನಿಯಮಗಳು ರೂಪಿಸಲ್ಪಟ್ಟಿವೆ. ಆದರೆ ರೂಪಿಸಿದ ಕಾರ್ಯಕ್ರಮಗಳನ್ನು ಜಾರಿಗೆ ತರದಿರುವುದರಿಂದ ಪರಿಶಿಷ್ಟ ಜಾತಿಯ ಶೈಕ್ಷಣಿಕ ಸಾಧನೆಯು ಇತರ ಜನಾಂಗದವರ ಶೈಕ್ಷಣಿಕ ಸಾಧನೆಗೆ ಸಮಾನವಾಗಿಲ್ಲ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್.ಇ.ಪಿ.) ೦೬-೧೪ ವಯೋಮಾನದ ಎಲ್ಲಾ ದಲಿತ ಮಕ್ಕಳ ಶಾಲಾ ದಾಖಲಾತಿ, ಅವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನು ೧೯೯೦ರ ಒಳಗಾಗಿ ಹಂತ ಹಂತವಾಗಿ ಪೂರ್ಣಗೊಳಿಸಬೇಕೆಂದು ನಿರ್ಧರಿಸಿತು. ೧೯೯೦ರ ದಶಕದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ)ವು ಶೋಷಿತ ಸಮುದಾಯಗಳ ಮಕ್ಕಳಿಗೆ ಸುಧಾರಿತ ಶಾಲಾ ಭಾಗವಹಿಸುವಿಕೆಯ ಅವಕಾಶ ಮತ್ತು ಮಕ್ಕಳ ಕಲಿಕೆಯ ಬಗ್ಗೆ ಹೆಚ್ಚಿನ ಒತ್ತು ನೀಡಿತು. ಆದರೆ ಇದೇ ಗುರಿಗಳು ೧೯೯೨ರ ಪರಿಷ್ಕೃತ ರಾಷ್ಟ್ರೀಯ ಶಿಕ್ಷಣ ನೀತಿಯ ಕ್ರಿಯಾಯೋಜನೆಯಲ್ಲಿಯೂ ಇವೆ. ೨೦೦೦ದಲ್ಲಿ ಸರ್ವಶಿಕ್ಷಣ ಅಭಿಯಾನ ಪ್ರಾರಂಭವಾಗಿ ದಲಿತರನ್ನು ಶಾಲೆಯ ಆಡಳಿತದಲ್ಲಿ ಭಾಗವಹಿಸುವಂತೆ ಮಾಡಿದೆ. ಇದು ಶಾಲೆಗಳಿಲ್ಲದ ಕಡೆಯಲ್ಲಿ ಶಾಲೆ ಪ್ರಾರಂಭಿಸುವ ಸ್ಥಳೀಯ ಸಮುದಾಯದಿಂದ ಶಿಕ್ಷಕರನ್ನು ನೇಮಿಸಿಕೊಳ್ಳುವ, ಶಾಲೆಯ ಆಡಳಿತ ನಡೆಸುವ, ಮಕ್ಕಳ ಹಾಜರಾತಿಯನ್ನು ಗಮನಿಸುವ ಮತ್ತು ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ರೂಪಿಸಿದೆ.

೭.೧. ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ

ಅನೇಕ ರೀತಿಯ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರೂ ೦೬-೧೪ ವಯೋಮಾನದ ಸಾಮಾನ್ಯಜಾತಿ ವರ್ಗದ ಮಕ್ಕಳಿಗೆ ಹೋಲಿಸಿದಂತೆ ದಲಿತ ಮಕ್ಕಳು ಶಾಲೆಗೆ ಹೋಗುವುದು ಕಡಿಮೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಶೇಕಡ ೯೦ರಷ್ಟು ದಲಿತರಲ್ಲಿ ಶೇಕಡ ೬೪.೩ರಷ್ಟು ಮಕ್ಕಳು ಸರ್ಕಾರಿ ಶಾಲೆಗಳಲ್ಲಿದ್ದರೆ, ಇತರೆ ಜಾತಿಯ ಮಕ್ಕಳು ಶೇಕಡ ೭೪.೯೦ರಷ್ಟಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ದಲಿತ ಮಕ್ಕಳ ಹಾಜರಾತಿಯು ಹೆಚ್ಚಾಗಿದ್ದರೂ (ಶೇಕಡ ೭೭.೫ರಷ್ಟು) ಇತರೆ ಜಾತಿವರ್ಗದ ಮಕ್ಕಳಿಗಿಂತ ಶೇಕಡ ೧೦ರಷ್ಟು ಕಡಿಮೆ ಇದೆ. ಸಾಮಾನ್ಯ ಜಾತಿ ವರ್ಗದಲ್ಲಿರುವಂತೆ ದಲಿತರಲ್ಲಿಯೂ ಕೂಡ ಗಂಡುಮಕ್ಕಳ ಹಾಜರಾತಿಗಿಂತ ಹೆಣ್ಣುಮಕ್ಕಳ ಹಾಜರಾತಿ ಗಣನೀಯ ಪ್ರಮಾಣದಲ್ಲಿ ಕಡಿಮೆ ಇದೆ. ಇದು ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಹೆಚ್ಚಾಗಿ ಕಂಡುಬರುತ್ತದೆ. ಹೀಗೆ ದಲಿತರಲ್ಲಿರುವ ಕಡಿಮೆ ಶಾಲಾ ದಾಖಲಾತಿ - ಹಾಜರಾತಿ ಪ್ರಮಾಣವು ದಲಿತರಲ್ಲಿ ಹೆಚ್ಚಿನ ಪ್ರಮಾಣದ ಅವಿದ್ಯಾವಂತರನ್ನು ಹೊಂದುವಂತೆ ಮಾಡಿದೆ.

[illegible]

[illegible]

ವಿವಿಧ ರಾಜ್ಯಗಳಲ್ಲಿನ ದಲಿತ ಮಕ್ಕಳ ಶಾಲಾ ಹಾಜರಾತಿಯು ಭಿನ್ನತೆಯಿಂದ ಕೂಡಿದೆ. ೧೯೯೦-೨೦೦೦ದ ದಶಕದಲ್ಲಿ ಹಿಮಾಚಲ ಪ್ರದೇಶ ಮತ್ತು ಕೇರಳ ರಾಜ್ಯಗಳ ಗ್ರಾಮೀಣ ಭಾಗದ ಶಾಲೆಗಳಲ್ಲಿ ದಲಿತ ಗಂಡುಮಕ್ಕಳ ಹಾಜರಾತಿ ಶೇಕಡ ೮೫ಕ್ಕಿಂತಲೂ ಹೆಚ್ಚಿದ್ದರೆ, ಬಿಹಾರ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಶೇಕಡ ೬೬ಕ್ಕಿಂತಲೂ ಕಡಿಮೆ ಇತ್ತು. ಗ್ರಾಮೀಣ ಭಾಗದ ದಲಿತ ಹೆಣ್ಣುಮಕ್ಕಳ ಶಾಲಾ ಹಾಜರಾತಿಯೂ ಕೇರಳ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಶೇಕಡ ೮೮ಕ್ಕಿಂತಲೂ ಹೆಚ್ಚಿದ್ದು, ಬಿಹಾರ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಕೇವಲ ಶೇಕಡ ೪೩ರಷ್ಟಿತ್ತು. ಇಲ್ಲಿ ದೊಡ್ಡದಾಗಿ ಕಾಣಿಸುವಂತಹ ಅಂತರವು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಮತ್ತು ಪರಿಣಾಮಕಾರಿಯಾದ ಕೆಲಸ ಆಗಿರುವ ಹಿಮಾಚಲ ಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಇತರೆ ಜಾತಿಯ ಮಕ್ಕಳ ಶಾಲಾ ಭಾಗವಹಿಸುವಿಕೆಯ ಸಮಾನ ಪ್ರಮಾಣದಲ್ಲಿರುವುದನ್ನು ತೋರಿಸುತ್ತದೆ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಿರುವ ಬಿಹಾರ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಮತ್ತು ಇತರೆ ಜಾತಿಯ ಮಕ್ಕಳ ಶಾಲಾ ಭಾಗವಹಿಸುವಿಕೆಯ ನಡುವೆ ಇರುವ ಅಂತರವು ಹೆಚ್ಚಾಗಿದೆ.

೧೯೯೩-೯೪ ರಿಂದ ೨೦೦೩-೦೪ರ ಅವಧಿಯಲ್ಲಿ ದಲಿತ ಮಕ್ಕಳ ಶಾಲಾ ಹಾಜರಾತಿ ವಿಷಯದಲ್ಲಿ ಗಣನೀಯವಾದ ಪ್ರಗತಿ ಸಾಧಿಸಿದ ರಾಜ್ಯಗಳಲ್ಲಿ ಹಿಮಾಚಲ ಪ್ರದೇಶದ ಸಾಧನೆ ಗಮನೀಯವಾದದ್ದು. ೦೬-೧೪ ವಯೋಮಾನದ ದಲಿತ ಹೆಣ್ಣುಮಕ್ಕಳ ಶಾಲಾ ಹಾಜರಾತಿಯಲ್ಲಿ ಉತ್ತಮವಾದ ಸಾಧನೆ ಮಾಡಿದ್ದರಿಂದ ಹಿಮಾಚಲ ಪ್ರದೇಶ ಶಿಕ್ಷಣ ಮತ್ತು ಸಾಕ್ಷರತೆಯಲ್ಲಿ ಒಂದು ಹೊಸ ಶಕೆಯನ್ನೇ ಆರಂಭಿಸಿದ ರಾಜ್ಯ ಎಂಬಂತಹ ಹೆಗ್ಗಳಿಕೆಗೆ ಪಾತ್ರವಾಗಿದೆ. ೧೯೯೭-೯೮ರಲ್ಲಿ ಶೇಕಡ ೫೯ರಷ್ಟಿದ್ದ ದಲಿತ ಹೆಣ್ಣುಮಕ್ಕಳ ಶಾಲಾ ಹಾಜರಾತಿ ಪ್ರಮಾಣವು, ೨೦೦೨-೦೩ರಲ್ಲಿ ಶೇಕಡ ೮೨ರಷ್ಟಕ್ಕೇರಿದೆ ಮತ್ತು ೨೦೦೪-೦೫ರಲ್ಲಿ ಶೇಕಡ ೯೪.೩೦ರಷ್ಟಕ್ಕೆ ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಕೇರಳ ರಾಜ್ಯವು ಕೂಡ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಉತ್ತಮವಾದ ಸಾಧನೆ ಮಾಡಿದೆ. ಅದರಂತೆಯೇ ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿಯೂ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಯಲ್ಲಿ ಭಾರತದ ಸರಾಸರಿ ಪ್ರಗತಿಗಿಂತ ಹೆಚ್ಚಿನ ಪ್ರಮಾಣದ ಪ್ರಗತಿಯನ್ನು ಸಾಧಿಸಿವೆ. ಈ ಪ್ರಗತಿಯ ಪ್ರವೃತ್ತಿಯು ಇತ್ತೀಚಿನ ದಿನಗಳಲ್ಲಿ ಪೋಷಕರಲ್ಲಿ ತಮ್ಮ ಮಕ್ಕಳ ಶಿಕ್ಷಣದ ಆಸಕ್ತಿ ಹೆಚ್ಚಾಗಿರುವುದನ್ನು ತಿಳಿಸುತ್ತದೆ.

ಕರ್ನಾಟಕದಲ್ಲಿ ೧೯೯೧-೨೦೦೧ರ ದಶಕದಲ್ಲಿ ಪರಿಶಿಷ್ಟ ಜಾತಿಯ ಸಾಕ್ಷರತೆಯಲ್ಲಿ ಗಮನೀಯ ಸುಧಾರಣೆಯಾಗಿದ್ದರೂ ಸಂಪೂರ್ಣವಾಗಿ ಅಭಿವೃದ್ಧಿಯಾಗಿಲ್ಲ ಮತ್ತು ಸಾಧಿಸಬೇಕಾದದ್ದು ಇದೆ. ವಿಚಿತ್ರವೆಂದರೆ ೨೦೦೧ರಲ್ಲಿ ಶೇಕಡ ೫೨.೮೭ರಷ್ಟಿದ್ದ ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರತಾ ದರ ೧೯೯೧ರಲ್ಲಿನ ಸಾಮಾನ್ಯ ಜಾತಿಯ ಸಾಕ್ಷರತಾ ಪ್ರಮಾಣವಾದ ಶೇಕಡ ೫೨.೦೪ರಕ್ಕಿಂತ ಕಡಿಮೆ ಇದೆ. ಅಂದರೆ ಸಾಮಾನ್ಯ ಜಾತಿಯ ಸಾಕ್ಷರತಾ ಪ್ರಮಾಣಕ್ಕಿಂತ ದಲಿತರ ಸಾಕ್ಷರತಾ ದರವು ಒಂದು ದಶಕಕ್ಕಿಂತಲೂ ಹಿಂದಿದೆ ಎಂದಂತಾಯಿತು. ಇನ್ನು ಪರಿಶಿಷ್ಟ ಜಾತಿಯ ಮಹಿಳೆಯರ ಸಾಕ್ಷರತೆಯನ್ನು ಗಮನಿಸಿದರೆ ಕೊಪ್ಪಳ (ಶೇಕಡ. ೨೫.೬), ರಾಯಚೂರು (ಶೇಕಡ ೨೬.೦೦), ಗುಲಬರ್ಗಾ (ಶೇಕಡ

೨೭.೦೦), ಬಾಗಲಕೋಟೆ (ಶೇಕಡ ೨೮.೭), ಬಳ್ಳಾರಿ (ಶೇಕಡ ೨೯.೦೦), ಬಿಜಾಪುರ (ಶೇಕಡ ೩೧.೯), ಹಾವೇರಿ (ಶೇಕಡ ೩೬.೯), ದಾವಣಗೆರೆ (ಶೇಕಡ ೩೮.೨), ಚಿತ್ರದುರ್ಗ (ಶೇಕಡ ೪೦,೯೨) ಮತ್ತು ಬೆಳಗಾಂ (ಶೇಕಡ ೪೧.೬) ಜಿಲ್ಲೆಗಳು ಕನಿಷ್ಟ ಮಟ್ಟದ ಮಹಿಳಾ ಸಾಕ್ಷರತೆಯನ್ನು ಹೊಂದಿದ ಜಿಲ್ಲೆಗಳಾಗಿವೆ. ಇದನ್ನು ಮಾನವ ಅಭಿವೃದ್ಧಿ ದೃಷ್ಟಿಯಿಂದ ನೋಡಿದರೆ ಹಿಂದುಳಿದ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಯ ಮಹಿಳೆಯರ ಸ್ಥಿತಿ ಅತ್ಯಂತ ಕಠಿಣವಾಗಿದೆ.

ಕೋಷ್ಟಕ-೭.೧

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಸಾಮಾನ್ಯ ಜಾತಿಯ ಸಾಕ್ಷರತೆಯ ವ್ಯತ್ಯಾಸ

ವರ್ಷ	ಪ್ರದೇಶ	ಜಾತಿ	ಪುರುಷ	ಮಹಿಳೆ	ಒಟ್ಟು
೧೯೮೧	ಗ್ರಾಮೀಣ	ಪರಿಶಿಷ್ಟ ಜಾತಿ	೩೧.೮೩	೯.೨೪	೨೦.೬೭
	ನಗರ	ಪರಿಶಿಷ್ಟ ಜಾತಿ	೬೫.೩೯	೩೭.೮೨	೫೨.೦೩
	ಒಟ್ಟು	ಪರಿಶಿಷ್ಟ ಜಾತಿ	೩೯.೩೮	೧೫.೪೮	೨೭.೬೩
೧೯೯೧	ಗ್ರಾಮೀಣ	ಪರಿಶಿಷ್ಟ ಜಾತಿ	೪೩.೨೧	೧೯.೨೩	೩೧.೪೨
	ನಗರ	ಪರಿಶಿಷ್ಟ ಜಾತಿ	೭೦.೦೫	೪೭.೬೪	೫೯.೧೮
	ಒಟ್ಟು	ಪರಿಶಿಷ್ಟ ಜಾತಿ	೪೯.೬೯	೨೫.೯೫	೩೮.೧೦
೨೦೦೧	ಗ್ರಾಮೀಣ	ಪರಿಶಿಷ್ಟ ಜಾತಿ	೫೮.೭೧	೩೫.೫೬	೪೭.೨೫
	ನಗರ	ಪರಿಶಿಷ್ಟ ಜಾತಿ	೭೮.೩೨	೫೯.೮೮	೬೯.೨೭
	ಒಟ್ಟು	ಪರಿಶಿಷ್ಟ ಜಾತಿ	೬೩.೭೫	೪೧.೭೨	೫೨.೮೭
೧೯೮೧	ಗ್ರಾಮೀಣ	ಸಾಮಾನ್ಯ ಜಾತಿ	೫೧.೧೧	೨೩.೮೪	೩೭.೬೩
	ನಗರ	ಸಾಮಾನ್ಯ ಜಾತಿ	೭೬.೫೪	೫೬.೪೧	೬೬.೯೧
	ಒಟ್ಟು	ಸಾಮಾನ್ಯ ಜಾತಿ	೫೮.೭೩	೩೩.೧೭	೪೬.೨೧
೧೯೯೧	ಗ್ರಾಮೀಣ	ಸಾಮಾನ್ಯ ಜಾತಿ	೬೦.೩೦	೩೪.೭೬	೪೭.೬೯
	ನಗರ	ಸಾಮಾನ್ಯ ಜಾತಿ	೮೨.೦೪	೬೫.೭೪	೭೪.೨೦
	ಒಟ್ಟು	ಸಾಮಾನ್ಯ ಜಾತಿ	೬೭.೨೬	೪೪.೩೪	೫೬.೦೪
೨೦೦೧	ಗ್ರಾಮೀಣ	ಸಾಮಾನ್ಯ ಜಾತಿ	೭೦.೪೫	೪೮.೦೧	೫೯.೩೩
	ನಗರ	ಸಾಮಾನ್ಯ ಜಾತಿ	೮೬.೬೬	೭೪.೧೨	೮೦.೫೫
	ಒಟ್ಟು	ಸಾಮಾನ್ಯ ಜಾತಿ	೭೬.೧೦	೫೬.೮೭	೬೬.೬೪

ಮೂಲ : ೧೯೮೧, ೧೯೯೧ ಮತ್ತು ೨೦೦೧ರ ಜನಗಣತಿ

ಕರ್ನಾಟಕದ ಒಟ್ಟು ಶಾಲಾ ದಾಖಲಾತಿ (೧ ರಿಂದ ೮ನೇ ತರಗತಿ) ಪ್ರಮಾಣವು (ಜಿ.ಇ.ಆರ್) ೧೯೯೬-೯೭ರಲ್ಲಿದ್ದ ಶೇಕಡ ೯೨ ರಿಂದ ೨೦೦೦-೦೧ರಲ್ಲಿ ಶೇಕಡ ೯೯ರಷ್ಟಕ್ಕೆ ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಪರಿಶಿಷ್ಟ ಜಾತಿಯ ಮಕ್ಕಳ ಒಟ್ಟು ದಾಖಲಾತಿ ಪ್ರಮಾಣ ಶೇಕಡ ೧೦೪.೫೭ಕ್ಕಿಂತಲೂ ಅಧಿಕವಾಗಿದ್ದು ಸಾಮಾನ್ಯ ಜಾತಿ ವರ್ಗದ ಮಕ್ಕಳ ಒಟ್ಟು ದಾಖಲಾತಿ ಪ್ರಮಾಣವನ್ನು ಮೀರಿಸಿದೆ. ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕ (ಅಕ್ಷರ, ಆರೋಗ್ಯ ಮತ್ತು ಆದಾಯ)ದಲ್ಲಿ ಮುಂದುವರಿದ ಜಿಲ್ಲೆಗಳಲ್ಲಿ ದಲಿತ ಮಕ್ಕಳ ಶಾಲಾ ದಾಖಲಾತಿ ಪ್ರಮಾಣವು ಅಧಿಕವಾಗಿದೆ. ಉದಾಹರಣೆಗೆ ಉಡುಪಿ (೩೨೩.೨೭), ಶಿವಮೊಗ್ಗ (೧೫೪.೬೫) ಮತ್ತು ಬೆಂಗಳೂರು ನಗರ (೧೩೭) ಜಿಲ್ಲೆಗಳು ಕ್ರಮವಾಗಿ ಮುಂದುವರಿದ ಜಿಲ್ಲೆಗಳಾಗಿವೆ. ಅದರಂತೆಯೇ ಕರ್ನಾಟಕ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ದಲಿತ ಮಕ್ಕಳ ಒಟ್ಟು ಶಾಲಾ ದಾಖಲಾತಿಯ ಪ್ರಮಾಣ ಕೂಡ ಕಡಿಮೆ ಇದೆ. ಉದಾಹರಣೆಗೆ ರಾಯಚೂರು (೭೮.೯೭), ಬಳ್ಳಾರಿ (೮೪.೮೭) ಮತ್ತು ಕೊಪ್ಪಳ (೮೭.೮೯) ಜಿಲ್ಲೆಗಳು ಹಿಂದುಳಿದ ಜಿಲ್ಲೆಗಳಾಗಿವೆ.

ಎನ್.ಸಿ.ಇ.ಆರ್.ಟಿ. ವರದಿಗಳ ಮಾಹಿತಿಯನ್ನಾಧರಿಸಿ ಕುಲಕರ್ಣಿಯವರು ದಲಿತರು ಮತ್ತು ಇತರೆ ಜಾತಿಯ ವಿವಿಧ ವಯೋಗುಂಪಿನ ಮಕ್ಕಳು ಶಾಲಾ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸುವ ಪ್ರಮಾಣವನ್ನು ವಿವರಿಸಿದ್ದಾರೆ. ಕುಲಕರ್ಣಿಯವರ ವಿವರಣೆಯಂತೆ ಕಡಿಮೆ ಸಾಕ್ಷರತೆಯ ರಾಜ್ಯಗಳಾದ ಬಿಹಾರ, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಪೂರ್ಣ ಗೊಳಿಸುವಿಕೆಯ ಪ್ರಮಾಣ ವಿವಿಧ ಸಾಮಾಜಿಕ ಜಾತಿ ವರ್ಗಗಳಲ್ಲಿ ಅತ್ಯಂತ ಹೆಚ್ಚಾಗಿ ಕಂಡುಬರುತ್ತದೆ. ಈ ಸಂಗತಿಯು ಕಡಿಮೆ ಸಾಕ್ಷರತೆಯ ರಾಜ್ಯಗಳಲ್ಲಿ ಇತರೆ ಜಾತಿ-ವರ್ಗ ಮತ್ತು ದಲಿತ ವರ್ಗಗಳ ನಡುವಿನ ಶೈಕ್ಷಣಿಕ ಅಂತರ ಹೆಚ್ಚುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ. ಈ ಅಂತರ ಕಡಿಮೆ ಸಾಕ್ಷರತೆ ಯನ್ನು ಹೊಂದಿದ ರಾಜ್ಯಗಳ ಮಹಿಳೆಯರಲ್ಲಿ ಬಹಳ ಅಧಿಕವಾಗಿದೆ. ಈ ಅಂತರವು ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಂತದ ಶಿಕ್ಷಣ ಪೂರ್ಣಗೊಳಿಸುವುದರಲ್ಲಿ ಅತಿಯಾಗಿದೆ. ಇದನ್ನು ಇತರೆ ಜಾತಿ-ವರ್ಗಗಳಿಗೆ ಹೋಲಿಸಿದರೆ ದಲಿತರಿಗಿರುವ ಕಲಿಯುವ ಸಾಮಾಜಿಕ ಅವಕಾಶ ಕಡಿಮೆ ಇರುವುದೇ ಕಾರಣವೆಂಬುದು ಕುಲಕರ್ಣಿಯವರ ವಾದ. ಆದರೆ ಹಿಮಾಚಲ ಪ್ರದೇಶ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ದಲಿತರು ಮತ್ತು ಇತರೆ ಜಾತಿಗಳ ನಡುವಿನ ಸಾಕ್ಷರತೆ ಹಾಗೂ ಶಾಲಾ ಭಾಗವಹಿಸುವಿಕೆಗಳ ಅಂತರ ಗಣನೀಯವಾಗಿ ಇಳಿಕೆಯಾಗಿದೆ.

ನಮ್ಮ ಅಧ್ಯಯನ ಕ್ಷೇತ್ರದಲ್ಲಿಯೂ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆ ಇರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಅಧ್ಯಯನ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಶಾಲಾ ಶಿಕ್ಷಕರನ್ನು ಸಂದರ್ಶಿಸಿ, ದಲಿತ ಮಕ್ಕಳ ಶಾಲಾ ಹಾಜರಾತಿ ಕಡಿಮೆ ಇರಲು ಕಾರಣವೇನು ಎಂಬ ಪ್ರಶ್ನೆಯನ್ನು ಕೇಳಿ, ಉತ್ತರ ಪಡೆಯಲಾಯಿತು. ಈ ರೀತಿಯಾಗಿ ಕೇಳಿದ ಪ್ರಶ್ನೆಗೆ ಶಿಕ್ಷಕರು ಬಡತನ, ಪೋಷಕರ ಅಜ್ಞಾನ, ನಿರಾಸಕ್ತಿ ಮತ್ತು ಸಾಮಾಜಿಕ ಕಾರಣ ಎಂಬಂತಹ ವಿವಿಧ ರೀತಿಯ ಉತ್ತರ

ಗಳನ್ನು ನೀಡಿರುತ್ತಾರೆ. ಶೇಕಡ ೭೪ರಷ್ಟು ಶಿಕ್ಷಕರು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆ ಇರಲು ಬಡತನದ ಕಾರಣವನ್ನು ನೀಡಿದರೆ, ಶೇಕಡ ೧೦ರಷ್ಟು ಶಿಕ್ಷಕರು ಪೋಷಕರ ಅಜ್ಞಾನವನ್ನು, ಶೇಕಡ ೧೩ರಷ್ಟು ಶಿಕ್ಷಕರು ಮಕ್ಕಳ ನಿರಾಸಕ್ತಿಯನ್ನು ಮತ್ತು ಶೇಕಡ ೩ರಷ್ಟು ಶಿಕ್ಷಕರು ಸಾಮಾಜಿಕ ಕಾರಣವನ್ನು ತಿಳಿಸುತ್ತಾರೆ.

ದಲಿತ ಮಕ್ಕಳ ಶಿಕ್ಷಣದ ಹಿಂದುಳಿಯುವಿಕೆಗೆ ಶಿಕ್ಷಕರು ನೀಡಿದ ವಿವಿಧ ಕಾರಣಗಳಲ್ಲಿ ಬಡತನವೇ ಪ್ರಮುಖವಾಗಿದೆ. ಅಧ್ಯಯನ ಕ್ಷೇತ್ರದ ಶೇಕಡ ೭೪ರಷ್ಟು ಶಿಕ್ಷಕರು ಬಡತನದ ಕಾರಣದಿಂದ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆ ಇದೆ ಎಂದಿದ್ದಾರೆ. ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿನ ಶೇಕಡ ೮೪.೬೧ರಷ್ಟು ಶಿಕ್ಷಕರು ಬಡತನದ ಕಾರಣ ನೀಡಿದರೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೬೯.೨೩ರಷ್ಟು ಶಿಕ್ಷಕರು ಬಡತನದ ಕಾರಣ ನೀಡಿದ್ದಾರೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶಿಕ್ಷಕರಿಗಿಂತ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶಿಕ್ಷಕರೇ ಹೆಚ್ಚಾಗಿ ಬಡತನದ ಕಾರಣವನ್ನು ಗುರುತಿಸಿದ್ದಾರೆ. ಎರಡನೆಯದಾಗಿ ಮಕ್ಕಳ ನಿರಾಸಕ್ತಿಯು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಕಾರಣವೆಂದು ಶಿಕ್ಷಕ ವರ್ಗ ತಿಳಿಸುತ್ತದೆ. ಆ ಪ್ರಕಾರ ಅಧ್ಯಯನ ಕ್ಷೇತ್ರದ ಶೇಕಡ ೧೩ರಷ್ಟು ಶಿಕ್ಷಕರು, ಮಕ್ಕಳ ನಿರಾಸಕ್ತಿಯೇ ಅವರ ಕಡಿಮೆ ಶಾಲಾ ಭಾಗವಸುವಿಕೆಗೆ ಕಾರಣವೆಂಬ ಉತ್ತರ ನೀಡಿದ್ದಾರೆ. ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶೇಕಡ ೧೫.೩೮ರಷ್ಟು ಶಿಕ್ಷಕರು ಮತ್ತು ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯ ಶೇಕಡ ೧೧.೫೩ರಷ್ಟು ಶಿಕ್ಷಕರು ನಿರಾಸಕ್ತಿಯನ್ನು ಗುರುತಿಸುತ್ತಾರೆ. ಈ ವಿಷಯದಲ್ಲಿಯೂ ಕೂಡ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯಿತಿಗಿಂತ ನೀರಾವರಿ ಪ್ರದೇಶವಾದ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಮಕ್ಕಳ ನಿರಾಸಕ್ತಿ ಹೆಚ್ಚಾಗಿರುತ್ತದೆ.

ಮೂರನೆಯದಾಗಿ ದಲಿತ ಪೋಷಕರ ಅಜ್ಞಾನವು ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಕಡಿಮೆಗೊಳಿಸಿದೆ ಎಂಬುದಾಗಿ ಅಧ್ಯಯನ ಕ್ಷೇತ್ರದ ಶೇಕಡ ೧೦ರಷ್ಟು ಶಾಲಾ ಶಿಕ್ಷಕರು ಅಭಿಪ್ರಾಯ ಪಡುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶಾಲಾ ಶಿಕ್ಷಕರ ಪ್ರಕಾರವಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದಿರುವಂತಹ ಅಜ್ಞಾನವು ದಲಿತ ಪೋಷಕರಲ್ಲಿ ಕಂಡುಬಂದಿಲ್ಲ. ಆದರೆ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶೇಕಡ ೧೫.೩೮ರಷ್ಟು ಶಿಕ್ಷಕರು ದಲಿತ ಪೋಷಕರಿಗೆ ತಮ್ಮ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳಿಸದಿರುವ ಅಜ್ಞಾನವಿದೆ ಎನ್ನುತ್ತಾರೆ. ಅಂದರೆ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ದಲಿತ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಅಜ್ಞಾನವಿಲ್ಲ ಮತ್ತು ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ದಲಿತ ಪೋಷಕರಿಗೆ ಅಜ್ಞಾನವಿದೆ ಎಂದು ತಿಳಿದುಬರುತ್ತದೆ. ನಾಲ್ಕನೇ ಸ್ಥಾನದಲ್ಲಿ ಜಾತೀಯತೆ, ಅಸ್ಪೃಶ್ಯತೆ ಮತ್ತು ಜಾತಿ

ನಿಂದನೆಯಂತಹ ಸಾಮಾಜಿಕ ಕಾರಣದಿಂದ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆ ಇದೆ ಎಂಬ ಮಾಹಿತಿಯನ್ನು ಶೇಕಡ ೩ರಷ್ಟು ಶಿಕ್ಷಕರು ನೀಡುತ್ತಾರೆ. ಆದರೆ ಈ ರೀತಿಯ ಸಾಮಾಜಿಕ ಕಾರಣಗಳು ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿರದೆ, ಆಲೂರು ಗ್ರಾಮಪಂಚಾಯಿತಿ ಯಲ್ಲಿ ಮಾತ್ರ ಶೇಕಡ ೩.೮೪ರಷ್ಟು ಶಿಕ್ಷಕರಿಂದ ವ್ಯಕ್ತವಾಗಿವೆ.

ಈ ರೀತಿಯಾಗಿ ವಿವಿಧ ಕಾರಣಗಳಿಂದ ದಲಿತ ಮಕ್ಕಳ ಶಿಕ್ಷಣ ಹಿಂದುಳಿದಿರುವುದನ್ನು ಅರ್ಥ ಮಾಡಿಕೊಳ್ಳುವುದರ ಜೊತೆಯಲ್ಲಿ ದಲಿತ ಮಕ್ಕಳ ಶಿಕ್ಷಣದಲ್ಲಿನ ಲಿಂಗ ತಾರತಮ್ಯದ ಕಡೆಗೆ ನಮ್ಮ ಅಧ್ಯಯನ ಗಮನಹರಿಸಿದೆ. ಅಧ್ಯಯನ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಶಿಕ್ಷಕರನ್ನು ಸಂದರ್ಶನ ಮಾಡಿ ಶಾಲೆಗೆ ಗೈರು ಹಾಜರಾಗುವ ದಲಿತ ಗಂಡುಮಕ್ಕಳಿಗಿಂತ ದಲಿತ ಹೆಣ್ಣುಮಕ್ಕಳು ಹೆಚ್ಚಾಗಿರಲು ಕಾರಣವೇನು ಎಂಬುದನ್ನು ತಿಳಿದುಕೊಳ್ಳಲಾಯಿತು. ಈ ಪ್ರಶ್ನೆಗೆ ಅಧ್ಯಯನ ಕ್ಷೇತ್ರದ ಶಿಕ್ಷಕರಿಂದ ಚಿಕ್ಕಮಕ್ಕಳ ಪಾಲನೆ, ಮನೆ ಕೆಲಸ, ಹೆಣ್ಣುಮಕ್ಕಳು ಬೇಗನೆ ಪ್ರೌಢಾವಸ್ಥೆಗೆ ಬರುವುದು, ಪೋಷಕರ ಅಜ್ಞಾನ, ಬಡತನ, ಸಂಕುಚಿತ ಭಾವನೆ, ಬಾಲ್ಯವಿವಾಹ, ನಿರಾಸಕ್ತಿ, ಸೌಲಭ್ಯಗಳ ಕೊರತೆ ಇತ್ಯಾದಿ ಉತ್ತರಗಳು ಸಿಕ್ಕಿವೆ.

ಅಧ್ಯಯನ ಕ್ಷೇತ್ರದ ಶೇಕಡ ೩೪ರಷ್ಟು ಶಿಕ್ಷಕರ ಪ್ರಕಾರ ದಲಿತ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಗೆ ಗೈರು ಹಾಜರಾಗಲು ಮನೆಯಲ್ಲಿ ಚಿಕ್ಕಮಕ್ಕಳ ಪಾಲನೆಯು ಕಾರಣವಾಗಿರುತ್ತದೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೩೮.೪೬ರಷ್ಟು ಶಿಕ್ಷಕರು ಚಿಕ್ಕಮಕ್ಕಳ ಪಾಲನೆಯನ್ನು ಹೇಳಿದರೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೩೧.೦೩ರಷ್ಟು ಶಿಕ್ಷಕರು ಇದೇ ಉತ್ತರ ನೀಡಿದ್ದಾರೆ. ಅಂದರೆ ಮಳೆಯಾಶ್ರಿತ ಪ್ರದೇಶ್ಕಿಂತ ನೀರಾವರಿಯ ಪ್ರದೇಶದಲ್ಲಿ ಈ ಕಾರಣ ಹೆಚ್ಚಾಗಿ ಕಂಡುಬರುತ್ತದೆ. ಮುಂದುವರಿದಂತೆ ಅಧ್ಯಯನ ಕ್ಷೇತ್ರದ ಶೇಕಡ ೨೪ರಷ್ಟು ಶಿಕ್ಷಕರು ದಲಿತ ಗಂಡುಮಕ್ಕಳಿಗಿಂತ ದಲಿತ ಹೆಣ್ಣುಮಕ್ಕಳು ಶಾಲೆಗೆ ಗೈರುಹಾಜರಾಗಲು ಮನೆಕೆಲಸ ಕಾರಣವೆಂದು ಹೇಳುತ್ತಾರೆ. ಈ ಮನೆ ಕೆಲಸದ ಕಾರಣದಿಂದ ದಲಿತ ಹೆಣ್ಣುಮಕ್ಕಳು ಶಾಲೆಗೆ ಗೈರುಹಾಜರಾಗುತ್ತಾರೆಂದು ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೩೦.೭೬ರಷ್ಟು ಶಿಕ್ಷಕರು ಹೇಳಿದರೆ, ಆಲೂರು ಗ್ರಾಮಪಂಚಾಯತಿ ಪ್ರದೇಶದ ಶೇಕಡ ೨೦.೬೮ರಷ್ಟು ಶಿಕ್ಷಕರು ಹೇಳುತ್ತಾರೆ. ಈ ವಿಚಾರದಲ್ಲಿಯೂ ಕೂಡ ಮಳೆಯಾಶ್ರಿತ ಪ್ರದೇಶಕ್ಕಿಂತ ನೀರಾವರಿಯ ಪ್ರದೇಶದ ಶಿಕ್ಷಕರೇ ಹೆಚ್ಚಿನ ಪ್ರಮಾಣದ ಪ್ರತಿಕ್ರಿಯೆ ನೀಡಿದ್ದಾರೆ.

ಮತ್ತೆ ಮುಂದುವರಿದು ಅಧ್ಯಯನ ಕ್ಷೇತ್ರದ ಶೇಕಡ ೧೨ರಷ್ಟು ಶಿಕ್ಷಕರು ಹೆಣ್ಣುಮಕ್ಕಳು ಬೇಗನೆ ಪ್ರೌಢಾವಸ್ಥೆಗೆ ಬರುವುದರಿಂದ ದಲಿತ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಗೆ ಗೈರುಹಾಜರಾಗುತ್ತಾರೆ ಎಂಬ ಉತ್ತರ ಕೊಟ್ಟಿರುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೨೩.೦೭ರಷ್ಟು ಶಿಕ್ಷಕರು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ

೬.೮೯ರಷ್ಟು ಶಿಕ್ಷಕರು ಈ ವಿಚಾರವನ್ನು ಮಂಡಿಸುತ್ತಾರೆ. ಇಲ್ಲಿಯೂ ಕೂಡ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ಹೆಚ್ಚಾಗಿದೆ. ಇದೇ ರೀತಿಯಾಗಿ ದಲಿತ ಪೋಷಕರ ಅಜ್ಞಾನವು ತಮ್ಮ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಗೆ ಗೈರು ಹಾಜರಾಗಲು ಕಾರಣವಾಗುತ್ತದೆ ಎಂಬುದು ಅಧ್ಯಯನ ಕ್ಷೇತ್ರದ ಶೇಕಡ ೧೨ರಷ್ಟು ಶಿಕ್ಷಕರ ಅಭಿಪ್ರಾಯವಾಗಿದೆ. ಈ ಅಂಶವು ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಕಂಡುಬರದೆ, ಆಲೂರು ಗ್ರಾಮಪಂಚಾಯತಿಯಲ್ಲಿ ಮಾತ್ರ ಶೇಕಡ ೧೬.೨೪ರಷ್ಟು ಶಿಕ್ಷಕರು ಗುರುತಿಸಿದ್ದಾರೆ.

ಬಡತನವೂ ದಲಿತ ಹೆಣ್ಣುಮಕ್ಕಳ ಶಾಲಾ ಗೈರುಹಾಜರಾತಿಗೆ ಕಾರಣವಾಗುತ್ತದೆ ಎಂಬುದನ್ನು ಅಧ್ಯಯನ ಕ್ಷೇತ್ರದ ಶೇಕಡ ೭ರಷ್ಟು ಶಿಕ್ಷಕರು ಒಪ್ಪಿಕೊಳ್ಳುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೭.೬೯ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ಪ್ರದೇಶದ ಶೇಕಡ ೬.೮೯ರಷ್ಟು ಶಿಕ್ಷಕರು ಈ ವಿಷಯವನ್ನು ಒಪ್ಪಿಕೊಳ್ಳುತ್ತಾರೆ. ಹೆಣ್ಣುಮಕ್ಕಳು ವಿದ್ಯೆ ಕಲಿಯಬೇಕಾಗಿಲ್ಲ, ಅವರು ಮನೆಯಲ್ಲಿ ಅಡಿಗೆ ಮತ್ತು ಇತರೆ ಕೆಲಸ ಕಾರ್ಯಗಳನ್ನು ಮಾಡಿಕೊಂಡಿರುವುದೇ ಸಾಕು ಎಂಬಂತಹ ಸಂಕುಚಿತವಾದ ಭಾವನೆಗಳು ಕೂಡ ದಲಿತ ಹೆಣ್ಣುಮಕ್ಕಳ ಶಾಲಾ ಗೈರುಹಾಜರಿಯನ್ನು ಹೆಚ್ಚಿಸುತ್ತವೆ ಎಂಬುದು ಅಧ್ಯಯನ ಕ್ಷೇತ್ರದ ಶೇಕಡ ೫ರಷ್ಟು ಶಿಕ್ಷಕರ ಅಭಿಮತವಾಗಿದೆ. ಈ ರೀತಿಯಾದ ಸಂಕುಚಿತ ಭಾವನೆಗಳು ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶಿಕ್ಷಕರಲ್ಲಿರದೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೬.೮೯ರಷ್ಟು ಶಿಕ್ಷಕರಲ್ಲಿದೆ. ಅಧ್ಯಯನ ಕ್ಷೇತ್ರದಲ್ಲಿ ದಲಿತ ಹೆಣ್ಣುಮಕ್ಕಳು ಶಾಲೆಗೆ ಹೆಚ್ಚಾಗಿ ಗೈರುಹಾಜರಾಗಲು ಬಾಲ್ಯ ವಿವಾಹ, ಪೋಷಕರ ನಿರಾಸಕ್ತಿ ಮತ್ತು ಸೌಲಭ್ಯಗಳಿಲ್ಲದಿರುವ ಅಂಶಗಳು ಶೇಕಡ ೨ರಷ್ಟು ಶಿಕ್ಷಕರಿಂದ ಗುರುತಿಸಲ್ಪಟ್ಟಿವೆ. ನಿರ್ದಿಷ್ಟವಾಗಿ ಈ ಎಲ್ಲಾ ಅಂಶಗಳು ನಂ. ೧೦ ಮುದ್ದಾಪುರದ ಶಿಕ್ಷಕರಿಂದ ವರದಿಯಾಗದೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶಿಕ್ಷಕರ ಕಡೆಯಿಂದ ಮಾತ್ರ ವರದಿಯಾಗಿರುತ್ತದೆ.

ಹೀಗೆ ಅಧ್ಯಯನ ಕ್ಷೇತ್ರದ ದಲಿತ ಮಕ್ಕಳ ಶಾಲಾ ಗೈರುಹಾಜರಾತಿ ಹೆಚ್ಚಾಗುವುದರ ಮೂಲಕ ದಲಿತ ಮಕ್ಕಳ ಶಿಕ್ಷಣ ಹಿಂದುಳಿಯಲು ಕಂಡುಕೊಂಡ ಕಾರಣಗಳು ಆರ್ಥಿಕ, ಸಾಮಾಜಿಕ ಮತ್ತು ವೈಯಕ್ತಿಕ ಸ್ವಭಾವದಿಂದ ಕೂಡಿರುತ್ತವೆ. ಅದರಂತೆ ನಿರ್ದಿಷ್ಟವಾಗಿ ದಲಿತ ಗಂಡುಮಕ್ಕಳಿಗಿಂತ ದಲಿತ ಹೆಣ್ಣುಮಕ್ಕಳೇ ಶಾಲೆಗೆ ಹೆಚ್ಚಾಗಿ ಗೈರು ಹಾಜರಾಗುವುದರ ಮೂಲಕ ದಲಿತ ಮಕ್ಕಳ ಶಿಕ್ಷಣ ಹಿಂದುಳಿಯಲು ಗುರುತಿಸಿದ ಕಾರಣಗಳು. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ, ಜೈವಿಕ, ವೈಯಕ್ತಿಕ ಮತ್ತು ಭೌತಿಕ ಸ್ವಭಾವ ಪಡೆದಿರುತ್ತವೆ ಎಂಬುದನ್ನು ನಮ್ಮ ಅಧ್ಯಯನವು ಗುರುತಿಸುತ್ತದೆ.

೭.೨. ದಲಿತ ಮಕ್ಕಳು ಮಧ್ಯದಲ್ಲಿಶಾಲೆ ಬಿಡುವುದೇಕೆ?

ಶೈಕ್ಷಣಿಕ ಅಭಿವೃದ್ಧಿಯ ಸೂಚ್ಯಂಕವಾದ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದರ ಬಗ್ಗೆ ಇತ್ತೀಚೆಗೆ ಅನೇಕ ಅಧ್ಯಯನಗಳು ಹೊರಬಂದಿವೆ. ಅನೇಕ ಅಧ್ಯಯನಗಳ ಮಾಹಿತಿಯಂತೆ

ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ವಿಷಯದಲ್ಲಿ ದಲಿತರ ಶಾಲಾ ಭಾಗವಹಿಸುವಿಕೆಯು ಇತರೆ ಜಾತಿವರ್ಗದವರ ಶಾಲಾ ಭಾಗವಹಿಸುವಿಕೆಗಿಂತ ಕಡಿಮೆ ಇದೆ. ಅಂದರೆ ಇತರೆ ಜಾತಿವರ್ಗದ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಾರೆ. ೧೯೯೩-೯೪ರ ಸಮೀಕ್ಷೆಯ ಪ್ರಕಾರ ಗ್ರಾಮೀಣ ಭಾರತದ ಶೇಕಡ ೪೦.೦೫ ರಷ್ಟು ಮತ್ತು ಪಟ್ಟಣ ಪ್ರದೇಶದ ಶೇಕಡ ೨೪ರಷ್ಟು ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಟ್ಟಿದ್ದರೆ, ಮಧ್ಯದಲ್ಲಿ ಶಾಲೆ ಬಿಟ್ಟ ಇತರೆ ಜಾತಿವರ್ಗದ ಮಕ್ಕಳ ಪ್ರಮಾಣವು ಗಣನೀಯವಾಗ ಕಡಿಮೆ (ಶೇಕಡ ೧೩.೩) ಇದೆ.

ಗ್ರಾಮೀಣ ಪ್ರದೇಶದ ಶೇಕಡ ೪೯.೯ರಷ್ಟು ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಟ್ಟಿದ್ದರೆ, ಇತರ ಜಾತಿವರ್ಗದ ಶೇಕಡ ೩೬ರಷ್ಟು ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿದ್ದಾರೆ. ಅಂದರೆ ಮಧ್ಯದಲ್ಲಿಯೇ ಶಾಲೆ ಬಿಡುವ ಇತರೆ ಜಾತಿವರ್ಗದ ಹೆಣ್ಣುಮಕ್ಕಳಿಗಿಂತ ದಲಿತ ಹೆಣ್ಣುಮಕ್ಕಳಪ್ರಮಾಣ ಅಧಿಕವಾಗಿದೆ. ಆದರೆ ಸರ್ಕಾರಿ ದಾಖಲೆಗಳು ಮತ್ತು ಶಾಲಾ ಹಾಜರಾತಿ ಪುಸ್ತಕಗಳ ಮಾಹಿತಿಯಂತೆ ೧೯೯೦-೨೦೦೦ದ ದಶಕದಲ್ಲಿ ಮಧ್ಯದಲ್ಲಿಯೇ ಶಾಲೆ ಬಿಡುವ ದಲಿತ ಮಕ್ಕಳ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಆದರೂ ಕೂಡ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳ ಪ್ರಮಾಣ ದಲಿತರಲ್ಲಿ ಇತರೆ ಜಾತಿವರ್ಗದ ಮಕ್ಕಳಿಗಿಂತ ಹೆಚ್ಚಾಗಿತ್ತು. ೨೦೦೪ರಲ್ಲಿ ಕರ್ನಾಟಕದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ೦೭-೩೫ ವಯೋಮಾನದ ಜನತೆಯನ್ನು ಸಂದರ್ಶನ ಮಾಡುವುದರ ಮೂಲಕ ಒಂದು ಸಮೀಕ್ಷೆ ಮಾಡಿದೆ. ಸಂದರ್ಶಿಸಿದವರ ಪೈಕಿ ಶೇಕಡ ೫ರಷ್ಟು ಜನ ಪ್ರಾಥಮಿಕ ಶಾಲಾ ಶಿಕ್ಷಣದ ಹಂತದಲ್ಲಿ ಶಾಲೆಯನ್ನು ಬಿಟ್ಟಿದ್ದರೆ, ಶೇಕಡ ೧೭.೧೨ರಷ್ಟು ಜನ ಪ್ರೌಢಶಾಲಾ ಹಂತದಲ್ಲಿ ಮಧ್ಯದಲ್ಲಿ ಶಾಲೆ ಬಿಟ್ಟವರಾಗಿದ್ದಾರೆ. ಮಧ್ಯದಲ್ಲಿ ಶಾಲೆ ಬಿಟ್ಟ ದಲಿತ ಬಾಲಕರಿಗಿಂತ ಬಾಲಕಿಯರ ಪ್ರಮಾಣ ಸ್ವಲ್ಪ ಕಡಿಮೆ ಇದೆ.

ಕರ್ನಾಟಕದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಮೀಕ್ಷೆಯು ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುವುದಕ್ಕೆ ಅವರು ಅನುಭವಿಸುತ್ತಿರುವ ಸಾಮಾಜಿಕ ಅಸಮಾನತೆಯೇ ಗಂಭೀರವಾದುದು ಎಂಬುದನ್ನು ತಿಳಿಸುತ್ತದೆ. ಶಾಲೆ ಬಿಟ್ಟ ಮಕ್ಕಳಲ್ಲಿ ಶೇಕಡ ೩೬ರಷ್ಟು ಮಕ್ಕಳು ಶಿಕ್ಷಣಕ್ಕೆ ತಗುಲಬಹುದಾದ ಖಾಸಗಿ ವೆಚ್ಚವನ್ನು ಪೋಷಕರು ಭರಿಸಲಾಗದಿದ್ದ ಕಾರಣದಿಂದ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ಅದರಂತೆಯೇ ಶೇಕಡ ೩೨ರಷ್ಟು ಮಕ್ಕಳು ಅವರ ಮನೆಯಲ್ಲಿನ ಕೆಲಸಗಳಲ್ಲಿ ತಮ್ಮ ಪೋಷಕರಿಗೆ ನೆರವಾಗುವ ಕಾರಣದಿಂದಾಗಿ ಮಧ್ಯದಲ್ಲಿಯೇ ಶಾಲೆಯನ್ನು ಬಿಟ್ಟಿರುತ್ತಾರೆ. ದಲಿತರ ಶೇಕಡ ೨೬ರಷ್ಟು ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಶಾಲೆಯೇ ಕಾರಣವೆನ್ನುತ್ತಾರೆ. ಆದರೆ ಮಧ್ಯದಲ್ಲಿ ಶಾಲೆ ಬಿಡಲು ಶಾಲೆಯೇ ಕಾರಣವೆಂಬುದು

ದಲಿತ ಹೆಣ್ಣುಮಕ್ಕಳ ವಿಷಯವಾಗಿ ಸ್ಪಷ್ಟವಾಗಿಲ್ಲ. ಆದರೆ ಈ ದಲಿತ ಹೆಣ್ಣುಮಕ್ಕಳು ತಮ್ಮ ಮನೆಯಲ್ಲಿನ ಚಿಕ್ಕಮಕ್ಕಳನ್ನು ನೋಡಿಕೊಳ್ಳುವ ಕಾರಣಕ್ಕಾಗಿ ಮಧ್ಯದಲ್ಲಿಯೇ ಶಾಲೆ ಬಿಡುವುದು ದೃಢಪಟ್ಟಿದೆ. ಅಲ್ಲದೆ ದಲಿತ ಬಡಕುಟುಂಬಗಳು ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದರಿಂದ ಮಕ್ಕಳನ್ನು ಶಾಲೆಯ ಬದಲಿಯಾಗಿ ದುಡಿಮೆಗೆ ಕಳಿಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ಈ ಕಾರಣದಿಂದಲೂ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಾರೆ. ನಮ್ಮ ಅಧ್ಯಯನ ಕ್ಷೇತ್ರದಲ್ಲಿಯೂ ಕೂಡ ಈ ಮೇಲೆ ಹೇಳಿದ ಎಲ್ಲಾ ರೀತಿಯಾದ ಲಕ್ಷಣಗಳು ಕಂಡುಬರುತ್ತವೆ. ಅಧ್ಯಯನ ಕ್ಷೇತ್ರದ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಖಾಸಗಿ ವೆಚ್ಚ, ಮನೆ ಕೆಲಸ, ಚಿಕ್ಕಮಮಕ್ಕಳ ಪಾಲನೆ, ಬಡತನ ಇತ್ಯಾದಿ ಅಂಶಗಳು ಕಾರಣವಾಗಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಮೇಲಿನ ಅಧ್ಯಯನದಲ್ಲಿ ದಲಿತ ಗಂಡುಮಕ್ಕಳು ಶಾಲೆಯನ್ನು ದೂಷಿಸುವುದು ಕಂಡುಬಂದರೆ, ನಮ್ಮ ಅಧ್ಯಯನದಲ್ಲಿ ಶಿಕ್ಷಕರನ್ನು ಆರೋಪಿಸುವುದು ಕಂಡುಬರುತ್ತದೆ. ಇದರ ಜೊತೆಗೆ ಮಕ್ಕಳ ಆತ್ಮಹತ್ಯೆಯಂತಹ ವಿಚಿತ್ರ ಅಂಶವು ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವಾಗಿದೆ ಎಂಬುದನ್ನು ನಮ್ಮ ಅಧ್ಯಯನ ಗುರುತಿಸಿದೆ. ಇದಕ್ಕೆ ಸಂಬಂಧಿಸಿದಂತೆ ೬ನೇ ಅಧ್ಯಾಯದಲ್ಲಿ ಹೆಚ್ಚಿನ ವಿವರ ದೊರೆಯುತ್ತದೆ.

ಕೋಷ್ಟಕ-೭.೨

ಶಾಲೆಯಿಂದ ಹೊರಗುಳಿದ ೦೭-೧೪ ವಯೋಮಾನದ ಮಕ್ಕಳ ಪ್ರಮಾಣ

ಕ್ರ.ಸಂ.	ಸಾಮಾಜಿಕ ವರ್ಗ	ಗಂಡುಮಕ್ಕಳು	ಹೆಣ್ಣುಮಕ್ಕಳು	ಒಟ್ಟು
೦೧	ಎಲ್ಲಾ ಸಾಮಾಜಿಕ ವರ್ಗ	೧.೪೭%	೧.೬೨%	೧.೫೪%
೦೨.	ಪರಿಶಿಷ್ಟ ಜಾತಿ	೧.೯೯%	೨.೪೭%	೨.೨೨%
೦೩.	ಪರಿಶಿಷ್ಟ ಪಂಗಡ	೨.೧೧%	೨.೬೭%	೨.೪೨%
೦೪.	ಮುಸ್ಲಿಂ	೧.೩%	೧.೨೪%	೧.೨೭%

ಮೂಲ : ಮಕ್ಕಳ ಗಣತಿ ೨೦೦೫, ಸಾರ್ವಜನಿಕ ಶಿಕ್ಷಣ ಇಲಾಖೆ.

ಈ ಮೇಲಿನ ಕೋಷ್ಟಕವು ತಿಳಿಸುವಂತೆ ಶಾಲೆಯಿಂದ ಹೊರಗುಳಿದ ೦೭-೧೪ ವಯೋಮಾನದ ಮಕ್ಕಳು ಇತರೆ ಎಲ್ಲಾ ಸಾಮಾಜಿಕ ಜಾತಿವರ್ಗಗಳಿಗಿಂತ ಪರಿಶಿಷ್ಟ ಪಂಗಡದಲ್ಲಿ ಅತ್ಯಂತ ಹೆಚ್ಚಾಗಿ (ಶೇಕಡ ೨.೪೨ರಷ್ಟಿ)ದ್ದಾರೆ. ಅದರ ನಂತರದ ಸ್ಥಾನದಲ್ಲಿ ಪರಿಶಿಷ್ಟ ಜಾತಿಯ (ಶೇಕಡ ೨.೨೨ರಷ್ಟು) ಮಕ್ಕಳಿದ್ದಾರೆ. ಈ ಕೋಷ್ಟಕದಂತೆ ಶಾಲೆಯಿಂದ ಹೊರಗುಳಿದ ದಲಿತ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ

(ಶೇಕಡ ೧.೯೯ರಷ್ಟು), ಹೆಣ್ಣುಮಕ್ಕಳು (ಶೇಕಡ ೨.೪೭ರಷ್ಟು) ಅಧಿಕವಾಗಿದ್ದಾರೆ. ಇದು ಶಾಲೆಯಿಂದ ಹೊರಗುಳಿದ ಒಟ್ಟು ದಲಿತ ಮಕ್ಕಳ ಪ್ರಮಾಣ(ಶೇಕಡ ೨.೨೨ರಷ್ಟು)ಕ್ಕಿಂತಲೂ ಹೆಚ್ಚಾಗಿ ಕಂಡುಬರುತ್ತದೆ.

೨೦೦೪ರ ಮಾದರಿ ಸಮೀಕ್ಷೆಯು ಶೈಕ್ಷಣಿಕ ಬೆಳವಣಿಗೆ ಮತ್ತು ಶಿಕ್ಷಣದ ಗುಣಮಟ್ಟಗಳು ಹೆಚ್ಚಾದಂತೆ, ಮಧ್ಯದಲ್ಲಿಯೇ ಶಾಲೆ ಬಿಟ್ಟು ಶಿಕ್ಷಣದಿಂದ ವಂಚಿತರಾಗುವ ದಲಿತ ಮಕ್ಕಳ ಪ್ರಮಾಣ ಕೂಡ ಹೆಚ್ಚಾಗಿದೆ ಎಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ಈ ಮಾದರಿ ಸಮೀಕ್ಷೆಗೆ ಒಳಪಡಿಸಿದವರಲ್ಲಿ ಶೇಕಡ ೫೧ಕ್ಕಿಂತಲೂ ಹೆಚ್ಚಿನ ಪ್ರಮಾಣದ ಸಾಕ್ಷರರು ಪ್ರಾಥಮಿಕ ಶಿಕ್ಷಣಕ್ಕಿಂತಲೂ ಕಡಿಮೆ ಶಿಕ್ಷಣ ಹೊಂದಿದವರಾಗಿದ್ದಾರೆ. ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಪಡೆದವರು ಅನಂತರದಲ್ಲಿ ಬಂದರೆ, ಶೇಕಡ ೪೫ಕ್ಕಿಂತ ಹೆಚ್ಚಿನ ಜನರು ಪ್ರೌಢಶಿಕ್ಷಣವನ್ನು ತಲುಪೇ ಇಲ್ಲ. ಈ ಮಾದರಿ ಸಮೀಕ್ಷೆಗೆ ಒಳಪಡಿಸಿದವರಲ್ಲಿ ಶೇಕಡ ೧.೪೭ರಷ್ಟು ಪುರುಷ ಪದವೀಧರರಿದ್ದರೆ, ಶೇಕಡ ೦.೨೨ರಷ್ಟು ಮಹಿಳಾ ಪದವೀಧರರಿದ್ದಾರೆ. ಈ ಎಲ್ಲಾ ಮಾಹಿತಿಗಳು ದಲಿತರಲ್ಲಿರುವ ಕಡಿಮೆ ಶಿಕ್ಷಣ ಮಟ್ಟ ಮತ್ತು ಹೆಚ್ಚಿನದಾಗಿ ಶಿಕ್ಷಣದಿಂದ ವಂಚಿತರಾಗುವಿಕೆಯನ್ನು ಖಚಿತಪಡಿಸುತ್ತದೆ. ಅಲ್ಲದೆ ವಿವಿಧ ರಾಜ್ಯಗಳ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಧ್ಯದಲ್ಲಿಯೇ ಶಾಲೆ ಬಿಡುವ ದಲಿತ ಮಕ್ಕಳ ಪ್ರಮಾಣ ಹೆಚ್ಚಾಗಿದ್ದರೂ, ಶಾಲೆಯ ಮುಖವನ್ನೇ ನೋಡದ ದಲಿತ ಮಕ್ಕಳನ್ನು ಕುರಿತಂತೆ ಹೆಚ್ಚಿನ ಅಧ್ಯಯನಗಳನ್ನು ಎದುರು ನೋಡಬೇಕಾಗಿದೆ.

ನಮ್ಮ ಅಧ್ಯಯನ ಕ್ಷೇತ್ರದಲ್ಲಿಯೂ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ಕುರಿತಂತೆ ಅಧ್ಯಯನ ಮಾಡಲಾಗಿದೆ. ಅಧ್ಯಯನ ಕ್ಷೇತ್ರವ್ಯಾಪ್ತಿಯ ಎಲ್ಲಾ ಶಿಕ್ಷಕರನ್ನು ಸಂದರ್ಶಿಸಿ ಇತರೆ ಜಾತಿಯ ಮಕ್ಕಳಿಗಿಂತ ದಲಿತ ಮಕ್ಕಳು ಹೆಚ್ಚಾಗಿ ಮಧ್ಯದಲ್ಲಿಯೇ ಶಾಲೆ ಬಿಡುವುದೇಕೆ? ಎಂಬ ನೇರವಾದ ಪ್ರಶ್ನೆಯನ್ನು ಕೇಳಲಾಯಿತು. ಈ ಪ್ರಶ್ನೆಗೆ ಶಿಕ್ಷಕರು ಬಡತನ, ಪೋಷಕರ ಅಜ್ಞಾನ ಮತ್ತು ನಿರುತ್ಸಾಹ, ಕೌಟುಂಬಿಕ ಕೆಲಸ ಕಾರ್ಯಗಳು, ಸಾಮಾಜಿಕ ಕಾರಣ, ವಲಸೆ, ದುಶ್ಚಟ ಹಾಗೂ ಕೀಳರಿಮೆಯಂತಹ ಕಾರಣಗಳನ್ನು ತಿಳಿಸಿರುತ್ತಾರೆ. ಅಧ್ಯಯನ ಕ್ಷೇತ್ರದ ಶೇಕಡ ೪೪ರಷ್ಟು ಶಿಕ್ಷಕರು ಬಡತನದ ಕಾರಣದಿಂದ ದಲಿತ ಮಕ್ಕಳು ಹೆಚ್ಚಾಗಿ ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆಂದು ಹೇಳುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೫೭.೧೪ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ಪ್ರದೇಶದಲ್ಲಿ ಶೆಕಡ ೩೬.೬೬ರಷ್ಟು ಶಿಕ್ಷಕರು ಬಡತನದ ಕಾರಣದಿಂದ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆಬಿಡುವುದನ್ನು ಸಮ್ಮತಿಸುತ್ತಾರೆ.

ಇಲ್ಲಿ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶಿಕ್ಷಕರಿಗಿಂತ ಹೆಚ್ಚಾಗಿ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯ ಶಿಕ್ಷಕರು ಬಡತನದ ಕಾರಣಗಳನ್ನು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಶೇಕಡ ೨೦ರಷ್ಟು ಶಿಕ್ಷಕರು ಅಧ್ಯಯನ ಕ್ಷೇತ್ರದ ದಲಿತ ಪೋಷಕರ ಅಜ್ಞಾನವೇ ದಲಿತ ಮಕ್ಕಳು ಮಧ್ಯದಲ್ಲಿಯೇ

ಶಾಲೆ ಬಿಡುವುದಕ್ಕೆ ಕಾರಣವೆಂಬ ಮಾಹಿತಿ ಒದಗಿಸಿದ್ದಾರೆ. ಪೋಷಕರ ಈ ಅಜ್ಞಾನದ ವಿಷಯವಾಗಿ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದರ ಬಗ್ಗೆ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ಯಲ್ಲಿನ ಶಿಕ್ಷಕರು ಮಾಹಿತಿ ಕೊಟ್ಟಿರುವುದಿಲ್ಲ. ಆದರೆ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ದಲಿತ ಪೋಷಕರ ಅಜ್ಞಾನವು ಆ ಮಕ್ಕಳು ಮಧ್ಯದಲ್ಲಿ ಶಾಲೆ ಬಿಡುವುದಕ್ಕೆ ಕಾರಣವಾಗಿರುವ ಮಾಹಿತಿ ಶೇಕಡ ೩೦ರಷ್ಟು ಶಿಕ್ಷಕರಿಂದ ಲಭ್ಯವಾಗಿದೆ. ನಾವಿಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ನೀರಾವರಿ ಪ್ರದೇಶವಾದ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬಡತನ ಹೆಚ್ಚಾಗಿದ್ದರೂ ದಲಿತ ಪೋಷಕರ ಅಜ್ಞಾನ ಕಡಿಮೆ ಇದೆ. ಇದಕ್ಕೆ ವಿರುದ್ಧವಾಗಿ ಮಳೆಯಾಶ್ರಿತ ಪ್ರದೇಶವಾದ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ತುಲನಾತ್ಮಕವಾಗಿ ಬಡತನ ಕಡಿಮೆಯಾಗಿದ್ದರೂ ದಲಿತ ಪೋಷಕರ ಅಜ್ಞಾನ ಅಧಿಕವಾಗಿದೆ.

ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಅವರ ನಿರಾಶಕ್ತಿಯೇ ಕಾರಣವೆಂಬುದನ್ನು ಅಧ್ಯಯನ ಕ್ಷೇತ್ರದ ಶೇಕಡ ೧೬ರಷ್ಟು ಶಿಕ್ಷಕರು ಗುರುತಿಸುತ್ತಾರೆ. ನಿರ್ದಿಷ್ಟವಾಗಿ ಈ ನಿರಾಶಕ್ತಿಯನ್ನು ಕಾರಣವಾಗಿ ಗುರುತಿಸಿರುವ ಶಿಕ್ಷಕರ ಪ್ರಮಾಣ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯಲ್ಲಿ ಶೇಕಡ ೨೧.೪೨ರಷ್ಟಿದ್ದರೆ, ಆಲೂರು ಗ್ರಾಮಪಂಚಾಯತಿಯ ಪ್ರದೇಶದಲ್ಲಿ ಶೇಕಡ ೧೩.೩೩ರಷ್ಟಿದೆ. ಈ ನಿರಾಶಕ್ತಿಯು ಮಳೆಯಾಶ್ರಿತ ಪ್ರದೇಶಕ್ಕಿಂತ ನೀರಾವರಿ ಪ್ರದೇಶದಲ್ಲಿಯೇ ಅಧಿಕವಾಗಿ ಕಂಡುಬರುತ್ತದೆ. ಕೌಟುಂಬಿಕ ಕೆಲಸ ಕಾರ್ಯಗಳಿಂದಾಗಿ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ಅಧ್ಯಯನ ಕ್ಷೇತ್ರ ವ್ಯಾಪ್ತಿಯ ಶೇಕಡ ೯ರಷ್ಟು ಶಿಕ್ಷಕರು, ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಶೇಕಡ ೧೪.೨೮ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೬.೬೬ರಷ್ಟು ಶಿಕ್ಷಕರು ಅಭಿಪ್ರಾಯ ಪಡುತ್ತಾರೆ. ಅಧ್ಯಯನ ಕ್ಷೇತ್ರದ ಶೇಕಡ ೫ರಷ್ಟು ಶಿಕ್ಷಕರು ಜಾತಿ, ಅಸ್ಪೃಶ್ಯತೆ, ಜಾತಿನಿಂದನೆಯಂತಹ ಸಾಮಾಜಿಕ ಕಾರಣಗಳಿಂದ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆಂದಿದ್ದಾರೆ. ಈ ಸಾಮಾಜಿಕ ಕಾರಣ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶಿಕ್ಷಕರಿಂದ ದೊರೆಯದೆ, ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೬.೬೬ರಷ್ಟು ಶಿಕ್ಷಕರಿಂದ ದೊರೆತಿದೆ. ವಲಸೆ ಹೋಗುವಿಕೆ, ಕೀಳರಿಮೆ ಮತ್ತು ಮಕ್ಕಳ ದುಶ್ಚಟಗಳು ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಟ್ಟು ಬರಲು ಕಾರಣವಾಗುತ್ತವೆ ಎಂಬಂತಹ ಮಾತುಗಳನ್ನು ಅಧ್ಯಯನ ಕ್ಷೇತ್ರದ ಶೇಕಡ ೨ರಷ್ಟು ಶಿಕ್ಷಕರು ಹೇಳುತ್ತಾರೆ. ಈ ವಲಸೆ ಹೋಗುವಿಕೆ, ಕೀಳರಿಮೆ ಮತ್ತು ಮಕ್ಕಳ ದುಶ್ಚಟಗಳನ್ನು ಬರೀ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶಿಕ್ಷಕರು ಗುರುತಿಸುತ್ತಾರೆ. ಆದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿಯ ವ್ಯಾಪ್ತಿಯಲ್ಲಿನ ಶಿಕ್ಷಕರು ಈ ಅಂಶಗಳನ್ನು ಗುರುತಿಸಿಲ್ಲ.

ಹೀಗೆ ನಮ್ಮ ಅಧ್ಯಯನ ಕ್ಷೇತ್ರದಲ್ಲಿನ ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡಲು ಇರುವ ಕಾರಣಗಳನ್ನು ಗುರುತಿಸಲಾಗಿದೆ. ಗುರುತಿಸಲಾದ ಕಾರಣಗಳು ಆರ್ಥಿಕ, ಸಾಮಾಜಿಕ,

ಸಾಂಸ್ಕೃತಿಕ, ಕೌಟುಂಬಿಕ ಹಾಗೂ ವೈಯಕ್ತಿಕ ಸ್ವರೂಪವನ್ನು ಪಡೆದುಕೊಂಡಿವೆ ಎಂಬುದು ನಮ್ಮ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ದಲಿತ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಇರುವ ತೊಂದರೆಗಳನ್ನು ಈಗಾಗಲೇ ಗುರುತಿಸಲಾಗಿದೆ. ಹೀಗೆ ಗುರುತಿಸಲ್ಪಟ್ಟ ತೊಂದರೆ ಅಥವಾ ಕಾರಣಗಳು ಮಧ್ಯದಲ್ಲಿ ಶಾಲೆ ಬಿಡುವ ದಲಿತ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ವಿಷಯದಲ್ಲಿ ಒಂದೇ ರೀತಿಯಾಗಿದ್ದರೂ ಸ್ವಲ್ಪ ಭಿನ್ನತೆಯೂ ಇದೆ. ಅಧ್ಯಯನಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಶಿಕ್ಷಕರನ್ನು ಸಂದರ್ಶನ ಮಾಡಿ ದಲಿತ ಗಂಡುಮಕ್ಕಳು ಮಧ್ಯದಲ್ಲಿ ಶಾಲೆ ಬಿಡಲು ಕಾರಣವೇನೆಂಬುದನ್ನು ತಿಳಿದುಕೊಳ್ಳಲಾಯಿತು. ಅದರಂತೆ ಶೇಕಡ ೫೪ರಷ್ಟು ಶಿಕ್ಷಕರು ಬಡತನದ ಕಾರಣದಿಂದ ದಲಿತ ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆಂದು ಹೇಳುತ್ತಾರೆ. ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೫೭.೧೪ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೫೩.೩೩ರಷ್ಟು ಶಿಕ್ಷಕರು ಈ ಸಂಗತಿಯನ್ನು ಒಪ್ಪುತ್ತಾರೆ. ಶೇಕಡ ೧೫ರಷ್ಟು ಶಿಕ್ಷಕರು ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೨೮.೫೭ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೧೦ರಷ್ಟು ಶಿಕ್ಷಕರು ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿರುವ ಕಾರಣದಿಂದ ದಲಿತ ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆಯನ್ನು ಬಿಡುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೯ರಷ್ಟು ಶಿಕ್ಷಕರು, ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೭.೧೪ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೧೦ರಷ್ಟು ಶಿಕ್ಷಕರು ದಲಿತ ಗಂಡುಮಕ್ಕಳು ಮಧ್ಯದಲ್ಲಿ ಶಾಲೆ ಬಿಡಲು ಮಕ್ಕಳ ನಿರಾಶಕ್ತಿಯೇ ಕಾರಣವೆನ್ನುತ್ತಾರೆ. ಅಧ್ಯಯನ ಕ್ಷೇತ್ರದ ಶೇಕಡ ೭ರಷ್ಟು, ನಿರ್ದಿಷ್ಟವಾಗಿ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೭ರಷ್ಟು ಶಿಕ್ಷಕರು ದಲಿತ ಪೋಷಕರ ಅಜ್ಞಾನವು ದಲಿತ ಗಂಡುಮಕ್ಕಳನ್ನು ಮಧ್ಯದಲ್ಲಿಯೇ ಶಾಲೆ ಬಿಡಿಸುತ್ತದೆ ಎಂದಿದ್ದಾರೆ. ಆದರೆ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶಿಕ್ಷಕರಿಂದ ಈ ಭಾವನೆ ವ್ಯಕ್ತವಾಗಿರುವುದಿಲ್ಲ. ಅಧ್ಯಯನ ಕ್ಷೇತ್ರದ ಸರಾಸರಿ ಶೇಕಡ ೫ರಷ್ಟು ಶಿಕ್ಷಕರು ಚಿಕ್ಕಮಕ್ಕಳ ಪಾಲನೆ ಕೌಟುಂಬಿಕ ಕೆಲಸಗಳು ಮತ್ತು ದುಶ್ಚಟಗಳಲ್ಲಿ ತೊಡಗುವ ಕಾರಣ ದಿಂದ ಮಧ್ಯದಲ್ಲಿ ಶಾಲೆಯನ್ನು ಬಿಡುವ ದಲಿತ ಗಂಡುಮಕ್ಕಳು ಹೆಚ್ಚಾಗಿರುತ್ತಾರೆ ಎಂಬ ಅಭಿಮತ ವನ್ನು ಹೊಂದಿರುತ್ತಾರೆ ಎಂಬುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ.

ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದಕ್ಕೆ ಇರುವ ಕಾರಣಗಳನ್ನು ಅಧ್ಯಯನ ಕ್ಷೇತ್ರದ ಎಲ್ಲಾ ಶಿಕ್ಷಕರ ಸಂದರ್ಶನದಿಂದಲೇ ಅರ್ಥಮಾಡಿಕೊಳ್ಳಲಾಗಿದೆ. ಸಂದರ್ಶಿಸಿದ ಶಿಕ್ಷಕರಿಂದ ಬಡತನ, ಚಿಕ್ಕಮಕ್ಕಳ ಪಾಲನೆ, ಮನೆಕೆಲಸ, ಬಾಲ್ಯವಿವಾಹ ಮತ್ತು ಸಂಕುಚಿತ ಭಾವನೆಯಂತಹ ಕಾರಣಗಳು ದಲಿತ ಹೆಣ್ಣುಮಕ್ಕಳನ್ನು ಮಧ್ಯದಲ್ಲಿಯೇ ಶಾಲೆ ಬಿಡುವಂತೆ ಮಾಡಿವೆ ಎಂದು

ತಿಳಿದುಬಂದಿದೆ. ಅಧ್ಯಯನ ಕ್ಷೇತ್ರದ ಶೇಕಡ ೩೦ರಷ್ಟು ಶಿಕ್ಷಕರು, ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೨೮.೫೭ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೨೩.೩೩ರಷ್ಟು ಶಿಕ್ಷಕರು ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದಕ್ಕೆ ಬಡತನವು ಕಾರಣವಾಗಿದೆ ಎನ್ನುತ್ತಾರೆ. ಸರಾಸರಿಯಾಗಿ ಶೇಕಡ ೨೭ರಷ್ಟು ಶಿಕ್ಷಕರು, ನರ್ದಿಷ್ಟವಾಗಿ ನಂ.೧೦ ಮುದ್ದಾಪುರದ ಶೇಕಡ ೨೧.೪೨ರಷ್ಟು ಮತ್ತು ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯ ಶೇಕಡ ೨೩.೩೩ರಷ್ಟು ಶಿಕ್ಷಕರು ಮನೆಕೆಲಸದ ನಿಮಿತ್ತವಾಗಿ ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುತ್ತಾರೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚಿಕ್ಕಮಕ್ಕಳ ಪಾಲನೆಯು ದಲಿತ ಹೆಣ್ಣುಮಕ್ಕಳನ್ನು ಮಧ್ಯದಲ್ಲಿಯೇ ಶಾಲೆ ಬಿಡುವಂತೆ ಮಾಡಿದೆ ಎಂಬುದನ್ನು ಅಧ್ಯಯನ ಕ್ಷೇತ್ರದ ಶೇಕಡ ೨೪ರಷ್ಟು, ನಿರ್ದಿಷ್ಟವಾಗಿ ನಂ. ೧೦ ಮುದ್ದಾಪುರದ ಶೇಕಡ ೨೮.೫೭ರಷ್ಟು ಮತ್ತು ಆಲೂರು ವ್ಯಾಪ್ತಿಯ ಶೇಕಡ ೧೬.೬೬ರಷ್ಟು ಶಿಕ್ಷಕರು ತಿಳಿಸುತ್ತಾರೆ. ಸರಾಸರಿ ಶೇಕಡ ೧೬ರಷ್ಟು ಶಿಕ್ಷಕರು ನಿರ್ದಿಷ್ಟವಾಗಿ ನಂ.೧೦ ಮುದ್ದಾಪುರದ ಶೇಕಡ ೧೪.೨೮ರಷ್ಟು ಮತ್ತು ಆಲೂರು ವ್ಯಾಪ್ತಿಯ ಶೇಕಡ ೧೩.೩೩ರಷ್ಟು ಶಿಕ್ಷಕರು ಬಾಲ್ಯವಿವಾಹದ ಕಾರಣದಿಂದ ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವಂತಾಗಿದೆ ಎಂಬ ಉತ್ತರ ನೀಡುತ್ತಾರೆ. ಉಳಿದಂತೆ ಅಧ್ಯಯನ ಕ್ಷೆತ್ರದ ಶೇಕಡ ೩ರಷ್ಟು ಶಿಕ್ಷಕರು, ನಿರ್ದಿಷ್ಟವಾಗಿ ಆಲೂರು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಶೇಕಡ ೩.೩೩ರಷ್ಟು ಶಿಕ್ಷಕರು ಹೆಣ್ಣುಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯೇ ಇಲ್ಲ ಎಂಬ ಸಂಕುಚಿತ ಭಾವನೆಯು ದಲಿತ ಹೆಣ್ಣುಮಕ್ಕಳನ್ನು ಮಧ್ಯದಲ್ಲಿಯೇ ಶಾಲೆ ಬಿಡಿಸುತ್ತದೆ ಎಂದಿದ್ದಾರೆ. ಆದರೆ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಈ ಭಾವನೆ ಕಂಡುಬಂದಿರುವುದಿಲ್ಲ.

ಹೀಗೆ ದಲಿತ ಮಕ್ಕಳು ನಿರ್ದಿಷ್ಟವಾಗಿ ದಲಿತ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಮಧ್ಯದಲ್ಲಿ ಶಾಲೆ ಬಿಡುವುದೇಕೆ? ಎಂಬುದನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

೭.೩. ಬಡತನ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಅಡ್ಡಿಯೇ?

ಈಗಾಗಲೇ ಅರ್ಥಮಾಡಿಕೊಂಡಂತೆ ಬಹುತೇಕವಾಗಿ ದಲಿತ ಕುಟುಂಬಗಳು ಬಡತನ ರೇಖೆಗಿಂತಲೂ ಕೆಳಗಿನ ಹಂತದಲ್ಲಿವೆ. ಅವರ ಮುಖ್ಯ ಕಸುಬು ಕೃಷಿ ಮತ್ತಿತರ ಕೂಲಿ ಕೆಲಸಗಳಾಗಿವೆ ಎಂಬುದು ಕೂಡ ನಿರ್ವಿವಾದ. ಐತಿಹಾಸಿಕವಾಗಿ ನೋಡಿದಾಗ ಉದ್ಯೋಗ-ಆದಾಯ ಮತ್ತು ಆಸ್ತಿಗಳನ್ನು ಪಡೆದುಕೊಳ್ಳುವ ಅವಕಾಶಗಳು ಮೇಲ್ಜಾತಿಯವರಿಗಿಂತಲೂ ಕೆಳಜಾತಿಯವರಿಗೆ ಕಡಿಮೆಯಾಗಿವೆ. ಮೇಲ್ಜಾತಿಯ ಹಿಂದೂಗಳಲ್ಲಿ ಸಾಮಾಜಿಕವಾಗಿ ಗೌರವ ಹೊಂದಿರುವ ಉದ್ಯೋಗಗಳು ತನ್ನ ಜಾತಿಯ ಜನರಿಗೆ ಹೆಚ್ಚಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ನೀಡುತ್ತವೆ. ಆದರೆ ಇತ್ತೀಚೆಗೆ ಜಾತಿ ಮತ್ತು ಕಸುಬುಗಳ ನಡುವಿನ ಸಬಂಧ ಗಣನೀಯವಾಗಿ ಕಡಿಮೆಯಾಗುತ್ತಿದ್ದರೂ, ಉದ್ಯೋಗ ಸೃಷ್ಟಿಯ ವಿಷಯದಲ್ಲಿ ಹೆಚ್ಚಿನ ಪ್ರಮಾಣದ ಪರಿವರ್ತನೆಗಳು ಕಂಡುಬರುತ್ತಿಲ್ಲ.

ನಿರ್ದಿಷ್ಟವಾಗಿಯೇ ಹೇಳಬೇಕೆಂದರೆ, ದಲಿತರಲ್ಲಿ ಉದ್ಯೋಗ ವೈವಿಧ್ಯತೆಯನ್ನು ರೂಪಿಸಲು ಸರ್ಕಾರದ ನೀತಿಗಳಲ್ಲಿ ಏನೆಲ್ಲಾ ಪ್ರಯತ್ನಗಳನ್ನು ಮಾಡಿದರೂ ಅಸ್ಪೃಶ್ಯತೆಯನ್ನು ಅನುಭವಿಸುವ ಜನ ಇನ್ನು ಹೆಚ್ಚಿನ ಪ್ರಮಾಣದಲ್ಲಿದ್ದಾರೆ.

ಬಹುತೇಕವಾಗಿ ಸಣ್ಣ ಹಿಡುವಳಿದಾರರಾಗಿರುವ ಕೆಲವು ದಲಿತರಿಗೆ ೧೯೬೧ರ ಕರ್ನಾಟಕ ಭೂಸುಧಾರಣೆ ಕಾಯ್ದೆ ಮತ್ತು ೧೯೯ರ ಭೂಮಿ ಹಂಚಿಕೆ ಯೋಜನೆಗಳು ಭೂಮಿಯನ್ನು ಹೊಂದುವಂತೆ ಮಾಡಿರುವುದು ಒಂದು ಸುಧಾರಣೆ ಎನ್ನಲಾಗುತ್ತದೆ. ಆದರೂ ೨೦೦೧ರ ಜನಗಣತಿಯಂತೆ ಕರ್ನಾಟಕದಲ್ಲಿರುವ ಒಟ್ಟು ೭೦.೭೯ಲಕ್ಷ ಭೂಹಿಡುವಳಿದಾರ ಪೈಕಿ ೮.೨೩ಲಕ್ಷದಷ್ಟು (ಶೇಕಡ ೧೧.೬೫) ದಲಿತರು ಭೂಹಿಡುವಳಿಗಳನ್ನು ಹೊಂದಿದ್ದಾರೆಂದು ಗೊತ್ತಾಗಿದೆ. ಸಣ್ಣ ಹಿಡುವಳಿದಾರರ ಪೈಕಿ ಶೇಕಡ ೩೦ರಷ್ಟು ಮತ್ತು ಅತಿಸಣ್ಣ ಭೂಹಿಡುವಳಿದಾರರ ಪೈಕಿ ಶೇಕಡ ೫೨ರಷ್ಟು ದಲಿತ ಭೂಹಿಡುವಳಿದಾರರಿದ್ದಾರೆ. ಕರ್ನಾಟಕದಲ್ಲಿ ಕೃಷಿಯಿಂದ ಆದಾಯ ಪಡೆಯುವ ಒಟ್ಟು ಕುಟುಂಬಗಳಲ್ಲಿ ಶೇಕಡ ೫೩.೬ರಷ್ಟು ಕುಟುಂಬಗಳು ಕೃಷಿ ಮತ್ತು ತತ್ಸಬಂದಿತವಾದ ಚಟುವಟಿಕೆಗಳಿಂದ, ಶೇಕಡ ೨೧ರಷ್ಟು ಕುಟುಂಬಗಳು ಕೃಷಿ ಕೂಲಿಯಿಂದ ಮತ್ತು ಶೇಕಡ ೮.೫ರಷ್ಟು ಕುಟಂಬಗಳು ಕೃಷಿಯೇತರ ಚಟುವಟಿಕೆಗಳ ಕೂಲಿಯಿಂದ ತಮ್ಮ ಆದಾಯವನ್ನು ಪಡೆಯುತ್ತಿದ್ದಾರೆ. ಈ ಸಮೀಕ್ಷೆಯಂತೆ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ದಲಿತರ ತಲಾ ಮಾಸಿಕ ವೆಚ್ಚ ೪೧೯ ರೂಪಾಯಿ, ಹಿಂದುಳಿದ ವರ್ಗಗಳದ್ದು ೫೦೭ ರೂಪಾಯಿ ಮತ್ತು ಇತರರದು ೫೦೬ ರೂ.ಗಿಂತ ಕಡಿಮೆಯಾಗಿದೆ.

ಇತ್ತೀಚಿನ ಅಧ್ಯಯನಗಳಿಂದ ತಿಳಿದುಬಂದಂತೆ ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಪೋಷಕರು ತಮ್ಮ ಮಕ್ಕಳಿಗೆ ಉತ್ತಮವಾಗಿ ಶಿಕ್ಷಣ ನೀಡಬೇಕೆಂಬ ಆಸೆ ಹೊಂದಿದ್ದರೂ, ಬಡತನದಿಂದಾಗಿ ಅವರ ಆಸೆಯು ಈಡೇರದಂತಾಗಿದೆ. ಬಡತನ ಹೆಚ್ಚಾಗಿರುವ ಕುಟುಂಬಗಳಲ್ಲಿಯೇ ಶಾಲೆಗೆ ಹಾಜರಾಗದ ಮಕ್ಕಳ ಪ್ರಮಾಣ ಅಧಿಕವಾಗಿರುವುದು ಕಂಡುಬಂದಿದೆ. ತಲಾ ಮಾಸಿಕ ವೆಚ್ಚ ೫೬೦ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿರುವ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದ ೦೬-೧೪ ವಯೋಮಾನದ ಶೇಕಡ ೨೦ರಷ್ಟು ಮಕ್ಕಳು, ತಲಾ ಮಾಸಿಕ ವೆಚ್ಚ ೧೯೦-೨೦೦ ರೂಪಾಯಿಗಳಿರುವ ಸನ್ನಿವೇಶದಲ್ಲಿ ಶೇಕಡ ೪೦ರಷ್ಟು ಮಕ್ಕಳು ಹಾಗೂ ತಲಾ ಮಾಸಿಕ ವೆಚ್ಚ ೧೨೦ ರೂಪಾಯಿಗಿಂತ ಕಡಿಮೆ ಇರುವ ಸ್ಥಿತಿಯಲ್ಲಿ ಶೇಕಡ ೬೦ಕ್ಕಿಂತಲೂ ಹೆಚ್ಚಿನ ಮಕ್ಕಳು ಶಾಲೆಗೆ ಸೇರಲಾಗುವುದಿಲ್ಲ.

ಇತ್ತೀಚಿನ ಇನ್ನೊಂದು ಅಧ್ಯಯನ ಬಿಹಾರ ಮತ್ತು ಉತ್ತರ ಪ್ರದೇಶದ ಗ್ರಾಮಗಳಲ್ಲಿ ೧೯೯೭-೯೮ರಲ್ಲಿ ಅರ್ಧಕ್ಕಿಂತಲೂ ಹೆಚ್ಚಿನ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಮತ್ತು ಶೇಕಡ ೬೦ರಷ್ಟು ಕಡುಬಡತನದ ಕುಟುಂಬಗಳ ದಲಿತ ಮಕ್ಕಳು ಶಾಲೆಗಳಲ್ಲಿಲ್ಲ ಎಂಬುದನ್ನು ಗುರುತಿಸಿದೆ. ಕಡುಬಡತನದ ಕುಟುಂಬಗಳು ಗಳಿಸುವ ಮಿತವಾದ ಆದಾಯವು ಮಕ್ಕಳು ಶಾಲೆಗೆ ಹೋಗುತ್ತಾರೋ, ಇಲ್ಲವೋ, ಸಮಯಕ್ಕೆ ಸರಿಯಾಗಿ ಹೋಗುತ್ತಾರೆಯೇ? ಎಷ್ಟು ಕಾಲವಾದಿಯಲ್ಲಿ ಶಿಕ್ಷಣವನ್ನು

[illegible]

ಮುಗಿಸುತ್ತಾರೆ ಎಂಬುದನ್ನು ನಿರ್ಧರಿಸುತ್ತದೆ. ಮಿತವಾದ ಆದಾಯ, ಕೆಲಸಕ್ಕಾಗಿ ಹುಡುಕಾಟ, ಮನೆಯ ಯಜಮಾನ ಅಥವಾ ತಂದೆ ತಾಯಿಯರ ಖಾಯಿಲೆಗಳು ಅಥವಾ ಸಾವುಗಳು ಆ ಕುಟುಂಬದ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುತ್ತವೆ.

ದಲಿತ ಜಾತಿಯ ಗಂಡು ಅಥವಾ ಹೆಣ್ಣುಮಕ್ಕಳ ಶಾಲಾ ಶಿಕ್ಷಣವು ಅವರ ಕುಟುಂಬದ ಯಜಮಾನ, ತಂದೆ ತಾಯಿ ಮತ್ತು ಇತರೆ ಸದಸ್ಯರು ಖಾಯಿಲೆಗೆ ಬಿದ್ದ ಕೂಡಲೇ ನಿಲ್ಲುತ್ತದೆ. ನಿರ್ದಿಷ್ಟವಾಗಿ ಪ್ರತಿ ಹತ್ತು ಮಕ್ಕಳಲ್ಲಿ ಇಬ್ಬರು ದಲಿತ ಮಕ್ಕಳು ತಮ್ಮ ಕುಟುಂಬದವರ ಖಾಯಿಲೆ ಅಥವಾ ಸಾವಿನ ಕಾರಣದಿಂದ ಶಾಲೆ ಬಿಟ್ಟವರಾಗಿದ್ದಾರೆ. ಈ ಎಲ್ಲಾ ರೀತಿಯ ಲಕ್ಷಣಗಳು ನಮ್ಮ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿಯೂ ಕಂಡುಬರುತ್ತವೆ. ಅಲ್ಲದೆ ದಲಿತ ಮಕ್ಕಳಲ್ಲಿ ಅತೀಯಾಗಿ ಕಂಡುಬರುವಂತಹ ಬಡವರೆಂಬ ಕೀಳರಿಮೆಯು ಅವರನ್ನು ಶಾಲೆಯಿಂದ ದೂರವಿರಲು ಮತ್ತು ಮಧ್ಯದಲ್ಲಿಯೇ ಶಾಲೆಯನ್ನು ಬಿಡಲು ಕಾರಣವಾಗಿರುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಲಾಗಿದೆ.

ಗ್ರಾಮೀಣ ಪ್ರದೇಶದ ದಲಿತ ಕುಟುಂಬದ ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪಠ್ಯಪುಸ್ತಕ, ನೋಟ್ ಪುಸ್ತಕ, ಲೇಖನ ಸಾಮಾಗ್ರಿ, ಸಮವಸ್ತ್ರ ಇತ್ಯಾದಿಗಳಿಗಾಗಿ ಖಾಸಗಿಯಾಗಿ ಖರ್ಚು ಮಾಡುತ್ತಾರೆ. ಈ ಉದ್ದೇಶಗಳಿಗಾಗಿ ದಲಿತ ಪೋಷಕರು ಒಬ್ಬ ವಿದ್ಯಾರ್ಥಿಗೆ ಸರ್ಕಾರಿ ಶಾಲೆಗಳಲ್ಲಿ ಸರಾಸರಿಯಾಗಿ ೩೦೩ ರೂಪಾಯಿಗಳನ್ನು ಖರ್ಚು ಮಾಡುವುದು ತಿಳಿದುಬಂದಿದೆ. ಈ ರೀತಿಯಾದ ದಲಿತ ಪೋಷಕರ ಖರ್ಚು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ೩೨೫ ರೂಪಾಯಿ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ೭೫೭ ರೂಪಾಯಿಗಳಿರುವುದು ಅನೇಕ ದಲಿತ ಮಕ್ಕಳು ಶಿಕ್ಷಣದಿಂದ ದೂರವಾಗುವಂತೆ ಮಾಡಿದೆ. ದಲಿತ ಪೋಷಕರು ತಮ್ಮ ಮಕ್ಕಳ ಶಾಲಾ ಖಾಸಗಿ ವೆಚ್ಚವನ್ನು ಭರಿಸಲು ಶಕ್ತರಾಗದ ಕಾರಣದಿಂದ ಅವರ ಮಕ್ಕಳು ಶಾಲೆಯಿಂದ ಹೊರಗುಳಿಯುವ ಪರಿಸ್ಥಿತಿ ಇದೆ. ೧೯೯೩ ರಲ್ಲಿ ಶೇಕಡ ೫೪.೦೭ರಷ್ಟು ಪ್ರಾಥಮಿಕ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕಗಳನ್ನು ಹಂಚಲಾಗುತ್ತಿದ್ದರಿಂದ ಕೇವಲ ಶೇಕಡ ೧೦ರಷ್ಟು ದಲಿತರಿಗೆ ಮಾತ್ರ ಈ ಸೌಲಭ್ಯ ಸಿಗುತ್ತಿತ್ತು.

ಇದೇ ಅವಧಿಯಲ್ಲಿ ಉಚಿತ ಸಮವಸ್ತ್ರ ಪಡೆದ ಶೇಕಡ ೨೯.೦೩ರಷ್ಟು ಮಕ್ಕಳಲ್ಲಿ ದಲಿತ ಮಕ್ಕಳು ಕೇವಲ ಶೇಕಡ ೩.೯ರಷ್ಟಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವೈಯಕ್ತಿಕವಾಗಿ ಹಣ ಖರ್ಚು ಮಾಡಬೇಕಾದ ಅನಿವಾರ್ಯತೆ ಉಂಟಾಗುತ್ತಿತ್ತು. ಈ ಖಾಸಗಿ ಖರ್ಚುಗಳನ್ನು ಭರಿಸಲು ಶಕ್ತರಾಗದ ದಲಿತ ಪೋಷಕರ ಮಕ್ಕಳು ಕೂಡ ಅನಿವಾರ್ಯ ವಾಗಿಯೇ ಶಾಲೆಯಿಂದ ಹೊರಗುಳಿಯುವಂತಾಗುತ್ತಿತ್ತು. ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಊಟ ಇತ್ಯಾದಿ ವಿವಿಧ ಉಚಿತ ಸೌಲಭ್ಯಗಳನ್ನು ಒದಗಿಸುವ ಸರ್ಕಾರಿ ಕಾರ್ಯನೀತಿಯು ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದೆ. ಆ ಮೂಲಕ ದಲಿತರ ಶಿಕ್ಷಣದ ಖಾಸಗಿ ವೆಚ್ಚದ ಭಾರವನ್ನು ಕಡಿಮೆ ಮಾಡುತ್ತಾ ಶಿಕ್ಷಣದಿಂದ ವಂಚಿತರಾದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಿದೆ. ಮಧ್ಯಾಹ್ನದ

[illegible]

[illegible]

[illegible]

[illegible]

ಊಟವಿರುವ ಶಾಲೆಗಳಲ್ಲಿ ಶಾಲೆಯ ಮಕ್ಕಳ ಹಾಜರಾತಿ ಹೆಚ್ಚಾಗಿರುವುದನ್ನು ಶಿಕ್ಷಕರು ಹೇಳುತ್ತಿದ್ದರೆ, ಪೋಷಕರುಕೂಡ ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಆದರೆ ದಲಿತ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ಇನ್ನಷ್ಟು ಕಡಿಮೆ ಮಾಡುವ ಮತ್ತು ನೂರಕ್ಕೆ ನೂರರಷ್ಟು ಶಾಲಾಮಕ್ಕಳ ಹಾಜರಾತಿಯನ್ನು ಹೆಚ್ಚಿಸುವ ಅಗತ್ಯವಿದೆ.

ಈ ಮೇಲೆ ಹೇಳಿದ ಉಚಿತ ಶೈಕ್ಷಣಿಕ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶಗಳಿಗಿಂತ ಉತ್ತಮ ರೀತಿಯಲ್ಲಿ ಅನುಷ್ಠಾನ ಗೊಳಿಸಲಾಗಿದೆ. ಆದರೆ ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಎನಿಸುತ್ತದೆ. ಕರ್ನಾಟಕದಲ್ಲಿ ಮಕ್ಕಳಿಗೆ ಒದಗಿಸುವ ಉಚಿತ ಸಮವಸ್ತ್ರ ಮತ್ತು ಪುಸ್ತಕಗಳ ಗುಣಮಟ್ಟವು ಆಡಳಿತದ ಬದ್ಧತೆ ಮತ್ತು ಭ್ರಷ್ಟಾಚಾರವನ್ನು ಬಿಂಬಿಸುತ್ತದೆ. ಮಕ್ಕಳಿಗೆ ಒದಗಿಸಲ್ಪಡುವ ಬಟ್ಟೆಗಳು ನಿಜವಾಗಿ ಮಕ್ಕಳ ದೇಹದ ಎತ್ತರ ಮತ್ತು ದಪ್ಪಕ್ಕೆ ತಕ್ಕಂತೆ ಇರುವುದೇ ಇಲ್ಲ. ಇದಲ್ಲದೆ ಶಾಲೆಗಳಲ್ಲಿ ಬಟ್ಟೆ ಮತ್ತು ಪುಸ್ತಕಗಳನ್ನು ಮಕ್ಕಳಿಗೆ ಹಂಚುವಾಗಲೂ ಇನ್ನೊಂದು ರೀತಿಯ ರಾಜಕೀಯ ನಡೆಯುತ್ತದೆ. ಕೆಲವು ಶಾಲೆಗಳಲ್ಲಿ ಪುಸ್ತಕ ಮತ್ತು ಬಟ್ಟೆಗಳನ್ನು ವಿತರಿಸುವಾಗ ಶಿಕ್ಷಕರು ಉತ್ತಮವಾದ ಬಟ್ಟೆ ಮತ್ತು ಪುಸ್ತಕಗಳನ್ನು ಆಯ್ಕೆ ಮಾಡಿ ಮೊದಲು ತಮಗೆ ಬೇಕಾದ ಮಕ್ಕಳಿಗೆ ಮತ್ತು ತಮಗೆಬೇಕಾದವರ ಮಕ್ಕಳಿಗೆ ನೀಡುತ್ತಾರೆ. ಇಂತಹ ಸಂದರ್ಭದಲ್ಲಿ ಆ ಶಾಲೆ ಸ್ಥಾಪಿಸಲ್ಪಟ್ಟಿರುವ ಗ್ರಾಮದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜಾತಿವರ್ಗಗಳಿಗೆ ಅನುಕೂಲಗಳಾಗುತ್ತವೆ. ಆದರೆ ಕೆಳಜಾತಿಗೆ ಸೇರಿದ ಮಕ್ಕಳಿಗೆ ಸರಿಯಾಗಿ ಹೋಲಿಗೆಯಾಗದ, ಹೆಚ್ಚು ಉದ್ದ ಅಥವಾ ಚಿಕ್ಕದಾಗಿರುವ ಬಟ್ಟೆಗಳು ಸಿಗುತ್ತವೆ. ಒಂದು ವೇಳೆ ಆ ಶಾಲೆಯಲ್ಲಿರುವ ಮಕ್ಕಳ ಸಂಖ್ಯೆಗಿಂತ ಕಡಿಮೆ ಪ್ರಮಾಣದ ಬಟ್ಟೆ ಮತ್ತು ಪುಸ್ತಕಗಳು ಸರಬರಾಜು ಆಗಿದ್ದರೆ ಮೊದಲು ಪ್ರಬಲ ಜಾತಿವರ್ಗದ ಮಕ್ಕಳಿಗೆ ನೀಡಲಾಗುತ್ತದೆ. ಆದರೆ ಕೆಳಜಾತಿಯ ಮಕ್ಕಳು ಮತ್ತೊಂದು ಬಾರಿ ಶಾಲೆಗೆ ಬಟ್ಟೆ ಮತ್ತು ಪುಸ್ತಕಗಳು ಬರುವವರೆಗೆ ಕಾಯಬೇಕು ಹಾಗೂ ಬಟ್ಟೆ ಪುಸ್ತಕಗಳು ಶಾಲೆಗೆ ಬರದಿದ್ದರೆ ಅವರಿಗೆ ಬಟ್ಟೆ ಪುಸ್ತಕಗಳು ದೊರಕುವುದೇ ಇಲ್ಲ. ಈ ರೀತಿಯಾದ ವಂಚನೆಗೆ ಒಳಗಾಗುವುದು ಹೆಚ್ಚಾಗಿ ದಲಿತ ಜಾತಿಯ ಮಕ್ಕಳೇ ಆಗಿದ್ದಾರೆ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ.

ಇದರೊಂದಿಗೆ ಶಾಲೆಯಲ್ಲಿ ನೀಡಲ್ಪಡುವ ಮಧ್ಯಾಹ್ನದ ಬಿಸಿಯೂಟದಲ್ಲಿ ಭಾರಿ ಪ್ರಮಾಣದ ಅವ್ಯವಹಾರಗಳು ವರದಿಯಾಗುತ್ತಿರುವುದು ಮಕ್ಕಳಿಗೆ ಪ್ರಯೋಜನವಾಗದಿರುವುದನ್ನು ತೋರಿಸುತ್ತದೆ. ಆದರೂ ಉಚಿತ ಸಮವಸ್ತ್ರ, ಪುಸ್ತಕ ಬಿಸಿಯೂಟ ಇತ್ಯಾದಿ ಯೋಜನೆಗಳು ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಪ್ರಾಶಸ್ತ್ಯದ ಮೇರೆಗೆ ದೊರಕುತ್ತವೆ ಎಂಬ ಸಾರ್ವಜನಿಕ ಅಭಿಪ್ರಾಯ ಮೂಡುವಂತೆ ಮಾಡಿದೆ. ಆದರೆ ಕರ್ನಾಟಕದಲ್ಲಿ ಶಾಲಾ ಬಿಸಿಯೂಟವನ್ನು ೬ ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವಂತಹ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ವಿಸ್ತರಿಸಿರುವುದು ಕಾರ್ಯಕ್ರಮದ

ವ್ಯಾಪಕ ಮತ್ತು ಪರಿಣಾಮಕಾರಿಯಾದ ಅನುಷ್ಠಾನವನ್ನು ಸೂಚಿಸುತ್ತದೆ. ಆದರೂ ಉಚಿತ ಸಮವಸ್ತ್ರ, ಪುಸ್ತಕ, ಮಧ್ಯಾಹ್ನದ ಶಾಲಾ ಬಿಸಿಯೂಟ ಇನ್ನು ಮುಂತಾದ ಯೋಜನೆಗಳ ಪ್ರಯೋಜನ ದಲಿತ ಮಕ್ಕಳಿಗೆ ಸರಿಯಾದ ಸಮಯಕ್ಕೆ ಮತ್ತು ಸರಿಯಾದ ಪ್ರಮಾಣದಲ್ಲಿ ದೊರಕದಿರುವುದು ದಲಿತ ಮಕ್ಕಳ ಶಾಲಾ ಶಿಕ್ಷಣದ ಖಾಸಗಿ ವೆಚ್ಚ ಹೆಚ್ಚಾಗಲು ಕಾರಣವಾಗುತ್ತದೆ. ಈ ಖಾಸಗಿ ವೆಚ್ಚವನ್ನು ಸರಿದೂಗಿಸಲಾಗದ ದಲಿತ ಬಡಕುಟುಂಬಗಳ ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗುತ್ತಾರೆ.

ಎನ್.ಎಸ್.ಎಸ್.ಓ (೨೦೦೦-೦೧) ವರದಿ ಪ್ರಕಾರ ಬಡವರು ತಮ್ಮ ಜೀವನಕ್ಕಾಗಿ ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿದ್ದಾರೆ. ಇದೇ ವರದಿಯ ಪ್ರಕಾರ ಕೆಲಸಗಾರರೆಂದು ನೋಂದಾಯಿಸಲ್ಪಟ್ಟಂತಹ ಶೇಕಡ ೮.೧೧ರಷ್ಟು ದಲಿತ ಮಕ್ಕಳಲ್ಲಿ ಶಾಲೆಗೆ ಹಾಜರಾಗುತ್ತಿದ್ದ ಶೇಕಡ ೨ರಷ್ಟು ಮಕ್ಕಳು ಮಾತ್ರ ಕೆಲಸ ಮಾಡುತ್ತಿದ್ದರು. ಉಳಿದವರು ಶಾಲೆ ಬಿಟ್ಟ ಕೆಲಸಗಾರರ ಪಟ್ಟಿಯಲ್ಲಿ ಸೇರಿದ್ದಾರೆ. ಬಹುದೊಡ್ಡ ಸಂಖ್ಯೆಯ ಶೇಕಡ ೩೦ರಷ್ಟು ದಲಿತ ಮಕ್ಕಳು ತಂದೆತಾಯಿಗಳಿಗೆ ತಮ್ಮ ಮನೆಯ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರೂ ಇದನ್ನು ಕೆಲಸವೆಂದು ಪರಿಗಣಿಸುವುದಿಲ್ಲ. ಅಲ್ಲದೇ ಇಂತಹ ಕೆಲಸ ಕಾರ್ಯಗಳಿಂದ ಮಕ್ಕಳ ಕಲಿಕೆಯ ಮೇಲೆ ಬೀರುವ ಪರಿಣಾಮವನ್ನು ಕೂಡ ಗಂಭೀರವಾಗಿ ಪರಿಣಿಸಿರುವುದಿಲ್ಲ. ಆದರೂ ಇದು ಪರೋಕ್ಷವಾಗಿ ಬಾಲಕಾರ್ಮಿಕ ಪದ್ಧತಿಯನ್ನು ಪ್ರತಿಬಿಂಬಿಸುತ್ತದೆ. ಈ ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಿ ಮಕ್ಕಳ ಶಿಕ್ಷಣದ ಹಕ್ಕನ್ನು ರಕ್ಷಿಸಲು ಕಡ್ಡಾಯ ಪ್ರಾಥಮಿಕ ಶಿಕ್ಷಣವು ಒಂದು ಪರಿಹಾರವಾಗಿದೆ ಎಂಬ ವಾದವಿದೆ.

ಆದರೆ ಬಡತನದ ದೃಷ್ಟಿಯಿಂದ ನೋಡಿದಾಗ ಅಂತಹ ಮಕ್ಕಳಿಗಾಗಿ ಸರಳವಾದ ಅವಕಾಶಗಳನ್ನು ನೀಡುತ್ತಾ, ಅವರ ದುಡಿಮೆಯ ಜೊತೆಗೆ ಅನೌಪಚಾರಿಕ ಶಿಕ್ಷಣವನ್ನು ಒದಗಿಸುವುದು ಕೂಡ ಸೂಕ್ತವೆಂಬ ಇನ್ನೊಂದು ವಾದವಿದೆ. ಆದರೆ ಅನೌಪಚಾರಿಕ ಶಿಕ್ಷಣ ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯ ಎನಿಸುವುದಿಲ್ಲವೆಂಬುದು ವಾಸ್ತವವಾಗಿದೆ. ಆದರೆ ಇಂತಹ ಮಕ್ಕಳಿಗೆ ಅವರ ದುಡಿಮೆಯ ಜೊತೆಯಲ್ಲಿ ಶಿಕ್ಷಣ ಕಲಿಸಬೇಕೋ? ಅಥವಾ ಆ ಮಕ್ಕಳು ದುಡಿಮೆಯಿಂದ ಶಾಲೆಗೆ ಹೋಗುವ ಪ್ರಕ್ರಿಯೆ ಹಠಾತ್ತನೆ ಏಕಕಾಲಕ್ಕೆ ಆಗಬೇಕೋ? ಅಥವಾ ಆ ಮಕ್ಕಳಿಗೆ ಅವಶ್ಯಕವಾಗಿ ಬೇಕಾಗಿರುವ ಸೌಲಭ್ಯಗಳನ್ನು ಪೂರೈಸುವಂತಾಗಿರಬೇಕೋ ಎಂಬ ವಿವಾದಾಂಶಗಳಿವೆ. ಹೀಗಿರುವಾಗ ಈ ಅಂಶಗಳೆಲ್ಲಾ ಮಕ್ಕಳ ಒಟ್ಟಾರೆ ಬೆಳವಣಿಗೆಯಲ್ಲಿ ಮತ್ತು ಶೈಕ್ಷಣಿಕ ಪರಿಸರವನ್ನು ಸೃಷ್ಟಿ ಮಾಡುವಲ್ಲಿ ವಹಿಸುವ ಪಾತ್ರವನ್ನು ಗಮನಿಸಿ ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ವಿಸ್ತೃತವಾದ ಅಧ್ಯಯನಗಳು ಆಗಬೇಕಾಗಿದೆ.

ಒಟ್ಟಾರೆಯಾಗಿ ಹೇಳಬೇಕೆಂದರೆ, ಬಡತನ ಮತ್ತು ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚ ಹಾಗೂ ಮಕ್ಕಳ ಶಾಲಾ ಭಾಗವಹಿಸುವಿಕೆಗಳ ಮಧ್ಯದಲ್ಲಿ ನೇರವಾದ ಸಂಬಧವಿದೆ. ಜೊತೆಗೆ ಇವುಗಳು ಒಂದಕ್ಕೊಂದು ಪರಸ್ಪರ ಕಾರಣ ಮತ್ತು ಪರಿಣಾಮಗಳಾಗಿ ಕಂಡುಬರುತ್ತವೆ. ಅದರಂತೆಯೇ ಬಡತನ

ಮತ್ತು ಮಕ್ಕಳ ದುಡಿಮೆ ಹಾಗೂ ಮಕ್ಕಳು ಶಾಲಾ ಶಿಕ್ಷಣದಿಂದ ದೂರವಾಗುವಿಕೆಗಳ ನಡುವೆಯೂ ಕೂಡ ನೇರವಾದ ಸಂಬಂಧವಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಬಡತನದಿಂದಾಗಿ ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚದ ಹೊರೆಯನ್ನು ಹೊರಲಾಗದೆ. ಮಕ್ಕಳ ಶಾಲಾ ಭಾಗವಹಿಸುವಿಕೆ ಕಡಿಮೆಯಾದರೆ, ಬಡತನವು ಮಕ್ಕಳ ದುಡಿಮೆಗೆ ಪ್ರಚೋದಿಸುವುದರಿಂದ ಮಕ್ಕಳು ಶಾಲೆಗೆ ಹೋಗಲಾಗುವುದಿಲ್ಲ. ಆದ್ದರಿಂದ ಬಡತನವು ಮಕ್ಕಳ ಶಾಲಾ ಭಾಗವಹಿಸುವಿಕೆಗೆ ಇರುವ ಒಂದು ಕಠಿಣ ತೊಡಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಆದರೆ ದಲಿತ ಜಾತಿವರ್ಗದ ಬಡಕುಟುಂಬಗಳ ಮಕ್ಕಳ ಶಾಲಾ ಭಾಗವಹಿಸುವಿಕೆಯು ದಲಿತರು ಜೀವಿಸುವ ಪರಿಸರ, ಅವರ ಕಸುಬು, ಅವರ ಜೀವನ ಮೌಲ್ಯಗಳು, ವ್ಯಕ್ತಿಗತ ಮತ್ತು ಕುಟುಂಬದ ಶಿಕ್ಷಣದ ಮಟ್ಟ ಹಾಗೂ ಅವರುಗಳ ಭವಿಷ್ಯದ ಚಿಂತನೆ ಇತ್ಯಾದಿಗಳಿಂದ ನಿರ್ಧಾರವಾಗುತ್ತದೆ. ಇದೇ ಸಂದರ್ಭದಲ್ಲಿ ದಲಿತ ಮಕ್ಕಳ ಶಾಲಾ ಶಿಕ್ಷಣದ ಮೇಲೆ ಜಾತಿಯ ಕ್ರಿಯಾಶೀಲತೆ ಬೀರುವ ಪರಿಣಾಮವನ್ನು ಕೂಡ ಅಲ್ಲಗಳೆಯಲಾಗುವುದಿಲ್ಲ. ಈ ಎಲ್ಲಾ ಅಂಶಗಳ ಜೊತೆಯಲ್ಲಿ ದಲಿತರಲ್ಲಿರುವ ಬಡತನದ ಕೀಳರಿಮೆಯು ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಕಡಿಮೆ ಮಾಡಿದೆ ಎಂಬುದನ್ನು ನಮ್ಮ ಅಧ್ಯಯನ ಗುರುತಿಸುತ್ತದೆ.

೭.೪. ಶಿಕ್ಷಕರ ಮನೋಪ್ರವೃತ್ತಿ ಮತ್ತು ದಲಿತರ ಶಾಲಾ ಭಾಗವಹಿಸುವಿಕೆ

ಶಾಲಾ ಶಿಕ್ಷಕರ ಮನೋಭಾವ ಮತ್ತು ದಲಿತ ಮಕ್ಕಳ ಶಿಕ್ಷಣ ಕುರಿತಾದ ಅಧ್ಯಯನಗಳು ವಿರಳ ಎನಿಸುತ್ತದೆ. ಶಾಲಾ ಚಟುವಟಿಕೆಗಳಲ್ಲಿನ ಸಾಮಾಜಿಕ ಭೇದ ಭಾವ ಮತ್ತು ಶಿಕ್ಷಕರ ಭೇದ ಭಾವನೆಗಳು ಆಚರಣೆಯಲ್ಲಿರುವುದು ಸಾಮಾಜಿಕವಾಗಿರುವ ಜಾತಿ ಸಂಬಂಧಗಳನ್ನು ತೋರಿಸುತ್ತದೆ. ಶಾಲಾ ಶಿಕ್ಷಕರಿಗೆ ದಲಿತ ಮಕ್ಕಳು ಕಾಡುಜನ, ಅವರಿಗೆ ಏಟು ಬೀಳದೆ ಕಲಿಯುವುದಿಲ್ಲ ಎಂಬ ಭಾವನೆ ಇರುವುದನ್ನು ಅನಿತಾ(೨೦೦೦)ರವರು ಗುರುತಿಸಿದ್ದಾರೆ. ಮುಂದುವರಿದು ಅನಿತಾ ಅವರ ಅಧ್ಯಯನವು ದಲಿತ ಮಕ್ಕಳಲ್ಲಿ ಕಲಿಯುವ ಅರ್ಹತೆ ಇಲ್ಲದಿರುವುದು, ಪೋಷಕರ ನಿರಾಸಕ್ತಿಯ ಭಾವನೆ ಮತ್ತು ಅವರಲ್ಲಿನ ಜಾತಿಯ ಪಾರಂಪರಿಕ ಸಾಮಾಜಿಕ ಮೌಲ್ಯದ ಅನಿವಾರ್ಯತೆಯನ್ನು ತಿಳಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಶ್ರೀವಾಸ್ತವ ಅವರು ಉತ್ತರ ಪ್ರದೇಶದಲ್ಲಿ ನಡೆಸಿದ ಅಧ್ಯನಯದಲ್ಲಿ ಕೆಳಜಾತಿಯ ಮಕ್ಕಳು ಸಾಮಾನ್ಯವಾಗಿ ಸಾಮಾಜಿಕ ಸಹಿಷ್ಣುತೆ ಇರುವ ಶಾಲೆಗಳಲ್ಲಿ ದಾಖಲಾಗುತ್ತಾರೆ. ಇಂತಹ ಶಾಲೆಗಳಲ್ಲಿ ಶಿಕ್ಷಕರು ಮತ್ತು ಆಡಳಿತ ವರ್ಗದವರೂ ಅವರ ಜಾತಿಯವರೇ ಆಗಿರುತ್ತಿದ್ದರೂ ಆ ಶಾಲೆಗಳು ಅವರ ಮನೆಗಳಿಗೆ ಸಮೀಪ ಇರುತ್ತಿರಲಿಲ್ಲ ಎನ್ನುತ್ತಾರೆ.

ಆದರೆ ದಲಿತ ಸಮುದಾಯದ ಮಹಿಳೆಯರನ್ನು ಸಂದರ್ಶನ ಮಾಡಿದಾಗ, ಶಿಕ್ಷಕರ ಬೇಜವಾಬ್ದಾರಿತನ, ಸಮಯಕ್ಕೆ ಸರಿಯಾ ಶಾಲೆಗೆ ಬರದಿರುವುದು, ತಮಗೆ ಇಷ್ಟಬಂದಾಗ ಶಾಲೆಗೆ ಬರುವುದು, ತಮ್ಮ ವೈಯಕ್ತಿಕ ಕೆಲಸಗಳಿಗೆ ಮಕ್ಕಳನ್ನು ಬಳಸಿಕೊಳ್ಳುವುದು ಮತ್ತು ಕಡಿಮೆ

ಗುಣಮಟ್ಟದ ಬೋಧನೆ ಕಲಿಕೆಗಳು ಇರುವುದು ಮುಂತಾದ ಆರೋಪಗಳಿರುವುದು ತಿಳಿದುಬಂದಿದೆ. ರಾಜಸ್ಥಾನದಲ್ಲಿನ ಒಂದು ಅಧ್ಯಯನದಲ್ಲಿ ಶಿಕ್ಷಕರು ಸೃಷ್ಟಿಸುವ ಭಯ ಮತ್ತು ಅವರು ಮಕ್ಕಳಿಗೆ ನೀಡುವ ಕಠಿಣ ಶಿಕ್ಷೆ ಹಾಗೂ ಆ ಶಿಕ್ಷೆಗಳನ್ನು ಎದುರಿಸಲಾಗದ ದಲಿತ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಹಿಂಜರಿಯುತ್ತಾರೆ ಎಂಬುದನ್ನು ಗುರುತಿಸಲಾಗಿದೆ. ಆದರೆ ಅನಿತಾ ಅವರು ದಲಿತ ಮಕ್ಕಳು ಹೊಂದಿರುವ ಕಷ್ಟದಾಯಕವಾದ ಪರಿಸರ ಮತ್ತು ಆ ಮಕ್ಕಳ ಶೈಕ್ಷಣಿಕ ಅಗತ್ಯಗಳ ಬಗ್ಗೆ ಉತ್ತಮ ಭಾವನೆಗಳನ್ನು ಇಟ್ಟುಕೊಂಡಿರುವ ಶಾಲಾ ಶಿಕ್ಷಕರು, ದಲಿತ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸಿದ್ದಾರೆ ಎಂದು ಹೇಳಿರುವುದು ಈ ಮೇಲಿನ ಅಭಿಪ್ರಾಯಗಳಿಗೆ ವಿರುದ್ಧವಾಗಿದೆ. ಆದರೂ ಇಂತಹ ಸಕಾರಾತ್ಮಕವಾದ ಭಾವನೆಯಿಂದ ದಲಿತ ಮಕ್ಕಳ ಶಿಕ್ಷಣಕ್ಕೆ ಸಹಕಾರಿಯಾಗುವ ಶಿಕ್ಷಕರ ಪ್ರಮಾಣವು ಕಡಿಮೆ.

ಶಿಕ್ಷಕರ ಮನೋಪ್ರವೃತ್ತಿಯನ್ನು ಶಿಕ್ಷಣ ಮತ್ತು ಸಾಮಾಜಿಕ ಜವಾಬ್ದಾರಿಗಳನ್ನು ಗಮನದಲ್ಲಿಟ್ಟುಕೊಂಡು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಶಿಕ್ಷಕರ ಮನೋಪ್ರವೃತ್ತಿಯು ಶೈಕ್ಷಣಿಕ ವ್ಯವಸ್ಥೆಯಿಂದ ನಿರ್ಮಾಣವಾಗುವ ಏಕಮಾತ್ರ ಸಂಗತಿಯಲ್ಲ. ಶಿಕ್ಷಕರ ಮನೋಭಾವನೆಯನ್ನು ಬದಲಾಯಿಸಿದರೆ ಬೋಧನೆ ಮತ್ತು ಕಲಿಕೆಯ ಗುಣಮಟ್ಟಗಳಲ್ಲಿ ಸಂಪೂರ್ಣ ಸುಧಾರಣೆ ಸಾಧ್ಯವಾಗುತ್ತದೆ ಎಂಬುದೂ ಸರಿಯಾಗುವುದಿಲ್ಲ. ಬದಲಿಯಾಗಿ ಪ್ರತಿಯೊಬ್ಬ ಶಾಲಾ ಶಿಕ್ಷಕರು ತಮ್ಮ ದೋಷಗಳನ್ನು ಗುರುತಿಸಿಕೊಂಡು, ಅವುಗಳನ್ನು ತಿದ್ದಿಕೊಂಡು, ಹೊಸಸಾಮರ್ಥ್ಯಗಳನ್ನು ರೂಢಿಸಿಕೊಂಡು ಅವುಗಳನ್ನು ಅಭಿವ್ಯಕ್ತಿಗೊಳಿಸುವ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರ ಇಲ್ಲಿ ನಿರ್ಮಾಣವಾಗಬೇಕಾಗಿದೆ. ಈ ರೀತಿಯ ಪರಿಸರವನ್ನು ನಿರ್ಮಿಸಲು ಶೈಕ್ಷಣಿಕ ಮತ್ತು ಸಾಮಾಜಿಕ ರಚನಾ ವ್ಯವಸ್ಥೆಯಲ್ಲಿ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಅಂಶಗಳನ್ನು ಹೆಚ್ಚಿಸುವಂತಹ ನಿಟ್ಟಿನಲ್ಲಿ ಇಡೀ ಸಾಮಾಜಿಕ ವ್ಯವಸ್ಥೆಯೇ ಶ್ರಮವಹಿಸಬೇಕು. ಈ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ತರಬೇತಿ, ಕಾರ್ಯಾಗಾರ, ಸಂವಾದ, ಚರ್ಚೆ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಶಿಕ್ಷಕ ವರ್ಗವನ್ನು ಪುನಶ್ಚೇತನಗೊಳಿಸಬೇಕು. ಆಗ ಮಾತ್ರ ಶಿಕ್ಷಕರ ಮನೋಪ್ರವೃತ್ತಿಯಲ್ಲಿ ಸಮಾನತೆಯ ದೃಷ್ಟಿಕೋನವನ್ನು ಹೆಚ್ಚಿಸಲು ಸಾಧ್ಯವಿದೆಯೇ ಹೊರತು ಬರೀ ಶಿಕ್ಷಕರ ನಡವಳಿಕೆಯಲ್ಲಿನ ಬದಲಾವಣೆಯಿಂದಲ್ಲ ಎಂಬುದು ಮುಖ್ಯವಾಗುತ್ತದೆ.

ಶಾಲಾ ಶಿಕ್ಷಣದ ವಿಕೇಂದ್ರೀಕರಣ ಮತ್ತು ಸ್ಥಳೀಯವಾಗಿ ಸಮುದಾಯದ ಸಹಭಾಗಿತ್ವದ ಬಗ್ಗೆ ನಮ್ಮ ಶಿಕ್ಷಣ ನೀತಿಗಳಲ್ಲಿ ಹೆಚ್ಚಿನ ಗಮನ ನೀಡುತ್ತಿರುವ ಇಂದಿನ ದಿನಗಳಲ್ಲಿ ಶಿಕ್ಷಕರ ಮನೋಭಾವನೆಯನ್ನು ತಿಳಿಯಬೇಕಾಗುತ್ತದೆ. ಶಿಕ್ಷಣದ ವಿಕೇಂದ್ರೀಕರಣ ಮತ್ತು ಸ್ಥಳೀಯ ಭಾಗವಹಿಸುವಿಕೆಯು ಗ್ರಾಮಮಟ್ಟದ ಎಸ್.ಡಿ.ಎಂ.ಸಿ ರೂಪದಲ್ಲಿದೆ. ಈ ಎಸ್.ಡಿ.ಎಂ.ಸಿಗಳಲ್ಲಿ ಕಾನೂನು ಪ್ರಕಾರ ಕನಿಷ್ಟ ಪ್ರಮಾಣದಲ್ಲಿ ದುರ್ಬಲ ವರ್ಗದ ಜನರು ಇರಬೇಕಾಗುತ್ತದೆ. ಆದರೆ

ಗ್ರಾಮಮಟ್ಟದಲ್ಲಿರುವ ಜಾತಿ ಸಂಬಂಧಗಳು ಅಷ್ಟೊಂದು ಸುಲಭವಾಗಿರುವುದಿಲ್ಲ. ಕರ್ನಾಟಕದಲ್ಲಿ ಗ್ರಾಮಮಟ್ಟದ ಸಮಿತಿಗಳ ಬಗ್ಗೆ ಅಧ್ಯಯನ ನಡೆಸಿದ ಕೌಲ್ ಅವರು ಗ್ರಾಮಮಟ್ಟದ ಶಿಕ್ಷಣ ಸಮಿತಿಗಳಲ್ಲಿ ದಲಿತರ ಭಾಗವಹಿಸುವಿಕೆಯು ಮೇಲ್ಜಾತಿಯವರಿಗೆ ಇಷ್ಟವಾಗುವುದಿಲ್ಲ ಎಂದಿದ್ದಾರೆ. ಒಂದು ವೇಳೆ ಈ ಸಮತಿಗಳಲ್ಲಿ ದಲಿತರ ಪ್ರಾತಿನಿಧ್ಯವಿದ್ದರೂ ಕೇವಲ ದಾಖಲೆಗಳಲ್ಲಿ ನಾಮಮಾತ್ರಕ್ಕೆ ಇರುತ್ತದೆ. ಹಾಗೂ ಪಟ್ಟಣ ಪ್ರದೇಶಗಳ ಶಾಲಾಭಿವೃದ್ಧಿ ಸಮಿತಿಗಳಲ್ಲಿಯೂ ದಲಿತರ ಭಾಗವಹಿಸುವಿಕೆ ಬೆರಳವಣಿಕೆಯಷ್ಟಿದೆ. ದಲಿತರ ಭಾಗವಹಿಸುವಿಕೆಯಿಂದ ಶಾಲಾ ಚಟುವಟಿಕೆಗಳಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ ಎಂಬ ನಂಬಿಕೆಯ ಭಾವನೆ ದಲಿತರಲ್ಲಿರುವುದೇ ಇದಕ್ಕೆಲ್ಲಾಕಾರಣವೆಂಬುದನ್ನು ಕೌಲ್ ಅವರು ಗುರುತಿಸಿದ್ದಾರೆ. ಆದರೆ ಅನಿತಾರವರು ಸಮುದಾಯದ ಭಾಗವಹಿಸುವಿಕೆಯು ಪ್ರಾಥಮಿಕ ಶಾಲಾ ಕಾರ್ಯಗಳ ಮೇಲೆ ಬೀರುವಂತಹ ಪರಿಣಾಮ ಮತ್ತು ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಶಾಲಾ ಶಿಕ್ಷಕರ ಪಾತ್ರವನ್ನು ಕಡೆಗಣಿಸಲಾಗದು ಎನ್ನುತ್ತಾರೆ. ಒಂದರ್ಥದಲ್ಲಿ ಶಿಕ್ಷಕರು ಸಮುದಾಯದ ಸಹಭಾಗಿತ್ವ ಮತ್ತು ಶಾಲಾ ಶಿಕ್ಷಣಗಳ ನಡುವಿನ ಕೊಂಡಿಯಂತೆ ಕೆಲಸ ನಿರ್ವಹಿಸಬೇಕಾಗಿದೆ. ಕರ್ನಾಟಕದಲ್ಲಿ ಇಂತಹ ಸನ್ನಿವೇಶದಲ್ಲಿ ಕೆಲಸ ಮಾಡಿದ ಶಿಕ್ಷಕಿಯೊಬ್ಬರ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಇಡೀ ಎಸ್.ಡಿ.ಎಂ.ಸಿಯನ್ನೇ ನಿಷೇದಿಸುವಂತ ಪ್ರಯತ್ನ ಈಗಾಗಲೇ ನಡೆದಿದೆ. ಆದರೆ ನಿಜವಾಗಿಯೂ ಎಸ್.ಡಿ.ಎಂ.ಸಿಯನ್ನು ಪ್ರಬಲವಾಗಿ ವಿರೋಧಿಸಿದವರು ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಸ್ಥಳೀಯವಾಗಿ ಪ್ರಬಲರಾಗಿರುವ ಜನರು ಹಾಗೂ ಶಿಕ್ಷಕ ವರ್ಗದವರಾಗಿದ್ದರು ಎಂಬ ಸೂಕ್ಷ್ಮ ಅಂಶವು ಬೆಳಕಿಗೆ ಬಂದಿದೆ. ಈ ಪ್ರಬಲರು ದಲಿತ ಸಮುದಾಯ ವನ್ನು ಅವಿದ್ಯಾವಂತರು, ಅಯೋಗ್ಯರು, ಅಪ್ರಯೋಜಕರು ಎಂದು ಅಪಪ್ರಚಾರ ಮಾಡುತ್ತಲೇ ತಮ್ಮ ಗುಂಪಿನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ವಿಯಾಗಿದ್ದಾರೆ. ಒಟ್ಟಾರೆಯಾಗಿ ಎಸ್.ಡಿ.ಎಂ.ಸಿಯಿಂದ ಶಾಲೆಯ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಆರೋಪಿಸುವ ಪ್ರಬಲ ಮೇಲ್ಜಾತಿ ಯವರಿಗೆ ಹಿಂದುಳಿದ ಜಾತಿಯ, ಅನಕ್ಷರಸ್ಥ, ಕೂಲಿ ಮಾಡುವಂತಹ ಮಹಿಳೆ ಮತ್ತು ಪೋಷಕರ ಬಗ್ಗೆ ತಿರಸ್ಕಾರದ ಭಾವನೆ ಇದೆ. ಇದಕ್ಕೆ ಪ್ರತಿಕ್ರಿಯೆಯಾಗಿ ದಲಿತ ಪೋಷಕರು ಪ್ರತಿದಿನ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲ, ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡುವ ಮನೆಕೆಲಸದ ಮೇಲ್ವಿಚಾರಣೆ ಮಾಡುವುದಿಲ್ಲ, ಎಷ್ಟು ಕರೆದರೂ ಕೂಡ ಅವರು ಎಸಂ.ಡಿ.ಎಂ.ಸಿ. ಸಭೆಗಳಿಗೆ ಹಾಜರಾಗುವುದಿಲ್ಲ. ಒಂದು ವೇಳೆ ಸಭೆಗೆ ಹಾಜರಾದರೂ ತಮ್ಮ ಪ್ರಮುಖ ಹಿತಾಸಕ್ತಿಗಳಾದ ಕಾಮಗಾರಿಗಳ ಬಗ್ಗೆ ಆಸಕ್ತಿ ವಹಿಸುತ್ತಾರೆಯೇ ವಿನಃ ಶಾಲಾ ಅಭಿವೃದ್ಧಿ ಮತ್ತು ಶಿಕ್ಷಣದ ಗುಣಮಟ್ಟಗಳ ಬಗ್ಗೆ ಆಸಕ್ತಿ ತೋರಿಸುವುದಿಲ್ಲ. ಶಾಲೆಯ ಅಭಿವೃದ್ಧಿಗಾಗಿ ಬಿಡುಗಡೆಯಾದ ಹಣವನ್ನು ಅದೇ ಉದ್ದೇಶಕ್ಕೆ ಬಳಸಲು ಅವಕಾಶ ಮಾಡಿಕೊಡುವುದಿಲ್ಲ ಎಂಬಂತಹ ಇನ್ನೂ ಮುಂತಾದ ಆರೋಪಗಳನ್ನು ಶಿಕ್ಷಕರು ಮಾಡುತ್ತಾರೆ.

ಆದರೆ ಪ್ರಬಲ ಮೇಲ್ಜಾತಿಯವರ ಅಭಿಪ್ರಾಯ ಮತ್ತು ಶಿಕ್ಷಣದ ಆರೋಪಗಳ ಹಿಂದೆ ಇರುವ ಆರ್ಥಿಕ, ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸಿ, ವಸ್ತುನಿಷ್ಠ ಮತ್ತು ವಿಮರ್ಶಾತ್ಮಕವಾಗಿ

ನೋಡಿದಾಗ ಇವೆಲ್ಲಾ ಪೂರ್ವಾಗ್ರಹ ಪೀಡಿತ ಮತ್ತು ಕಾಲ್ಪನಿಕ ಅಂಶಗಳೆಂದು ತಿಳಿಯುತ್ತದೆ. ಏಕೆಂದರೆ ಶೈಕ್ಷಣಿಕ ಸಮಾಲೋಚನೆಯ ಸಂದರ್ಭದಲ್ಲಿ ಎಸ್.ಡಿ.ಎಂ.ಸಿಯವರು ಮಾಡಿರುವಂತಹ ಕಾಮಗಾರಿಗಳು ಮತ್ತು ಶಾಲಾ ಬೆಂಬಲಿತ ಕೆಲಸ ಕಾರ್ಯಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಇನ್ನೊಂದು ಕಡೆ, ಎಸ್.ಡಿ.ಎಂ.ಸಿ. ಮೂಲಕ ಸಮುದಾಯವನ್ನು ಹೇಗೆ ಬೋಧನೆ ಮತ್ತು ಕಲಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡಬೇಕೆಂಬುದರ ಬಗ್ಗೆ ಶಿಕ್ಷಕರಲ್ಲೇ ಗೊಂದಲಗಳಿವೆ. ಈ ಗೊಂದಲಗಳಿಗೆ ಸಮುದಾಯದ ಬಗ್ಗೆ ಶಿಕ್ಷಕರಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದೇ ಕಾರಣವೆಂದು ತಿಳಿದುಬಂದಿದೆ. ಇಂತಹ ಗೊಂದಲ, ಅಪನಂಬಿಕೆ ಮತ್ತು ಅಸಹಕಾರಗಳನ್ನು ಹೋಗಲಾಡಿಸಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿಯ ಎಲ್ಲಾ ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಾಗ ಮಾತ್ರ ಶಾಲೆಯ ಅಭಿವೃದ್ಧಿ ಮತ್ತು ಗುಣಾತ್ಮಕ ಕಲಿಕೆಗಳಲ್ಲಿ ಸಮುದಾಯವನ್ನು ಪಾಲ್ಗೊಳ್ಳುವಂತೆ ಮಾಡಲು ಸಾಧ್ಯ ಹಾಗೂ ಶಾಲಾ ಆಡಳಿತ ಮತ್ತು ಶಾಲಾ ಭಾಗವಹಿಸವಿಕೆಯಲ್ಲಿ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಎಸ್.ಡಿ.ಎಂ.ಸಿ.ಗಳನ್ನು ಸಬಲೀಕರಿಸಬೇಕಾಗಿದ್ದು, ಪ್ರಜಾಸತ್ತಾತ್ಮಕವಾಗಿ ದಲಿತರಿಗೆ, ಸಾಮಾಜಿಕವಾಗಿ ಹಿಂದುಳಿದವರಿಗೆ ಮತ್ತು ಮಹಿಳೆಯರಿಗೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಎಸ್.ಡಿ.ಎಂ.ಸಿ.ಗಳಲ್ಲಿ ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಶಿಕ್ಷಕರ ಪಾತ್ರವೂ ಪ್ರಧಾನವಾಗಿದ್ದು, ಎಲ್ಲಾ ಕಾರ್ಯಗಳು ಶಿಕ್ಷಕರಿಂದಲೇ ಆಗುವುದಿಲ್ಲವಾದ್ದರಿಂದ ಇಡೀ ನಮ್ಮ ಸಾಮಾಜಿಕ ವ್ಯವಸ್ಥೆಯೇ ಕಾರ್ಯಪ್ರವೃತ್ತವಾಗಬೇಕಾಗಿದೆ.

ಗ್ರಂಥಸೂಚಿ

೧. ಕರೂರ ಎನ್.ಜಿ., (೨೦೦೩), **ಶಿಕ್ಷಣ ಮಾರ್ಗ**, ಸ್ವಪ್ನ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು.

೨. ಚಂದ್ರಶೇಖರ್ ಟಿ.ಆರ್., (೨೦೦೮), **ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೩. ಚಂದ್ರಶೇಖರ್ ಬಿ.ಎಸ್., (೨೦೦೧), **ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೪. ಚಂದ್ರಶೇಖರ್ ಟಿ.ಆರ್., (೧೯೯೯), **ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೫. ಪದ್ಮರಾಮಚಂದ್ರನ್ ಮತ್ತು ವಸಂತ ರಾಮಕುಮಾರ್, (೨೦೦೫), *ಎಜ್ಯುಕೇಶನ್ ಇನ್ ಇಂಡಿಯಾ*, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ಎ-೫, ಗ್ರೀನ್ ಪಾರ್ಕ್, ನವದೆಹಲಿ.

೬. ಪಾಂಡುರಂಗ ಬಾಬು ಡಿ., (೨೦೦೬), ದಲಿತರು, ಭಾಷೆ ಮತ್ತು ಶಿಕ್ಷಣ, ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೭. ಪುಟ್ಟಯ್ಯ ಬಿ.ಎಂ., (೨೦೦೮), ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೮. ಪ್ರಶಾಂತ್ ಎಚ್.ಡಿ., (೨೦೦೪), ಶಾಲಾ ಬಿಸಿಯೂಟ ಅಧ್ಯಯನ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೯. ಪ್ರಶಾಂತ್ ಎಚ್.ಡಿ., (೨೦೦೫), *ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ ೫೮೩ ೨೭೬.

೧೦. ಪ್ರಶಾಂತ್ ಎಚ್.ಡಿ., (೨೦೦೬), ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ. ಕಾರ್ಯಕ್ಷಮತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೧. ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣ,* ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೨. ಪ್ರಶಾಂತ್ ಎಚ್.ಡಿ., (೨೦೦೯), ಶಾಲಾ ಶಿಕ್ಷಣದ ಸಾರ್ವತ್ರೀಕರಣ : ದಲಿತ ಮಕ್ಕಳ ಸ್ಥಿತಿ, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

೧೩. ಲಕ್ಷ್ಮಣ್ ತೆಲಗಾವಿ, ಬಿ.ಎಂ. ಪುಟ್ಟಯ್ಯ ಮತ್ತು ಚಂದ್ರಶೇಖರ ಟಿ.ಆರ್., (೨೦೦೫), *ದಲಿತ ಚಳುವಳಿಗಳು ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಇತರೆ ಚಳುವಳಿಗಳು,* ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

೧೪. ವೇಣುಗೋಪಾಲರಾವ್ ಎ.ಎಸ್., (೨೦೦೦), *ದಲಿತ ಪ್ರಜ್ಞೆ ಚಿಂತನೆಯ ಭಿನ್ನ ಆಯಾಮಗಳು,* ದಲಿತಪ್ರಜ್ಞ, ದಲಿತ ಸಾಹಿತ್ಯ ಪರಿಷತ್, ಗದಗ.

೧೫. ಸವಿತಾ ಕೆ., (೨೦೦೮), ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ ಸಂಬಂಧಿ ಆಯಾಮಗಳು ಸಮಾಜೋ-ಆರ್ಥಿಕ ಅಂಶಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

• • •

ಅಧ್ಯಾಯ-೮

ಸಮಾರೋಪ

ಮಾನವನ ಕುಶಲತೆ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸುವುದರಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತದೆ. ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿರುವ ಯಾವುದೇ ರಾಷ್ಟ್ರವು ಸುಲಭವಾಗಿಯೇ ಅಭಿವೃದ್ಧಿ ಹೊಂದುತ್ತದೆ. ಇದಕ್ಕೆ ಪೂರಕವಾಗಿ ಇಂದು ಜಗತ್ತಿನ ಅನೇಕ ಹಿಂದುಳಿದ ರಾಷ್ಟ್ರಗಳು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಹೇಳಬಹುದು. ಸ್ವಾತಂತ್ರ್ಯದ ಸಾಧನ ಮತ್ತು ಸ್ವಾಭಿಮಾನದ ಸಂಕೇತವೂ ಆದ ಶಿಕ್ಷಣ, ಸಮಾಜದಲ್ಲಿ ಗೌರವ ಸ್ಥಾನಮಾನಗಳನ್ನು ತಂದುಕೊಡುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಮನುಷ್ಯ ತನ್ನ ಬದುಕನ್ನು ಉತ್ತಮ ಪಡಿಸಿಕೊಳ್ಳಲು ಇರುವ ಅವಕಾಶಗಳನ್ನು ಬಳಸಿಕೊಳ್ಳುವ ಧಾರಣಶಕ್ತಿ, ಸಾಮರ್ಥ್ಯಗಳನ್ನು ಶಿಕ್ಷಣ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಸಾಕ್ಷರತೆ ಎಂದರೆ ಸ್ವಾತಂತ್ರ್ಯ ಎಂದಿರುವ ಅಮರ್ತ್ಯಸೇನ್ ಅವರ ಮಾತು ಅರ್ಥಗರ್ಭಿತವಾಗಿದೆ.

ಶಿಕ್ಷಣದಿಂದ ಅಭಿವೃದ್ಧಿ ಎಂಬುದಕ್ಕಿಂತ 'ಶಿಕ್ಷಣವೇ ಅಭಿವೃದ್ಧಿ' ಎಂಬ ಮಾತು ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಮೂಲಕ ಇತ್ತೀಚೆಗೆ ಪ್ರಚಲಿತವಾಗಿದೆ. ಅಮರ್ತ್ಯಸೇನ್‌ರವರ ಪ್ರಕಾರ ಅಭಿವೃದ್ಧಿಯ ದೃಷ್ಟಿಯಿಂದ ಶಿಕ್ಷಣವು ಎಲ್ಲರಿಗೂ ದೊರೆಯಬೇಕಾದ ಒಂದು ಸಾಮಾಜಿಕ ಅಗತ್ಯವಾಗಿದೆ. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣವನ್ನು ೦೬-೧೪ ವಯೋಮಾನದ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯವಾಗಿ ಒದಗಿಸಬೇಕೆಂಬುದು ನಮ್ಮ ಸಂವಿಧಾನ ರಚನಾ ಪೂರ್ವದ ಆಶಯ ವಾಗಿರುತ್ತದೆ. ಅದರಂತೆಯೇ ಪ್ರಾಥಮಿಕ ಶಿಕ್ಷಣದ ಸೌಲಭ್ಯಗಳು ಎಲ್ಲರಿಗೂ ದೊರಕಬೇಕೆಂಬ ಪ್ರಯತ್ನಗಳು ಸಹ ನಿರಂತರವಾಗಿವೆ. ಆದರೆ ಸಮಾಜದ ಎಲ್ಲಾ ವರ್ಗದ ಜನರು ಸಮಾನವಾಗಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವುದು ಸಾಧ್ಯವಾಗಿಲ್ಲ. ಅಲ್ಲದೇ ಇಂದಿಗೂ ಶಿಕ್ಷಣದ ವಿಷಯ ದಲ್ಲಿ ಜಾತಿ, ವರ್ಗ, ಲಿಂಗ ಮತ್ತು ಪ್ರಾದೇಶಿಕ ಭಿನ್ನತೆಗಳು ಜೀವಂತವಾಗಿವೆ. ಹಾಗಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮತ್ತು ಪಡೆದುಕೊಳ್ಳುವ ಶಕ್ತಿ ಆಸಕ್ತಿಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಗೆ ಪರಿಗಣಿಸುವಾಗ ಶೈಕ್ಷಣಿಕವಾಗಿ ವಂಚಿತರಾಗಿರುವ ದಲಿತರ ಶಿಕ್ಷಣವನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಗಮನಿಸಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯಗಳ ಅಭಿವೃದ್ಧಿಗೆ ಮತ್ತು ಅವರ ಶಾಲಾ ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಪ್ರಯತ್ನಗಳನ್ನು ಸಂವಿಧಾನದ ಮೂಲಕವೇ ಮಾಡಲಾಯಿತು. ಆದರೂ ಕನಿಷ್ಟ ವರ್ಷಗಳ ಶಾಲಾ ಭಾಗವಹಿಸುವಿಕೆಯಲ್ಲಿ ದಲಿತ ಮಕ್ಕಳ ಶಾಲಾ ಭಾಗವಹಿಸುವಿಕೆ ನಿರೀಕ್ಷಿತ ಮಟ್ಟವನ್ನು ತಲುಪಲಿಲ್ಲ. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಕಟಿಸಿರುವ ಅಂಕಿ-

ಅಂಶಗಳು, ಸರ್ಕಾರ ವಿವಿಧ ಇಲಾಖೆಗಳು ಮತ್ತು ಸರ್ಕಾರವೇ ನಡೆಸುತ್ತಿರುವ ಸಂಶೋಧನಾ ಸಂಸ್ಥೆಗಳು (ಎನ್.ಸಿ.ಇ.ಆರ್.ಪಿ., ಎನ್.ಐ.ಇ.ಪಿ.ಪಿ ಮತ್ತು ಡಿ.ಎಸ್.ಇ.ಆರ್.ಟಿ) ವಿವಿಧ ರಾಜ್ಯಗಳ (ಕರ್ನಾಟಕವೂ ಸೇರಿದಂತೆ) ವಾರ್ಷಿಕ ವರದಿಗಳು ಹಾಗೂ ಶಿಕ್ಷಣ ಕ್ಷೇತ್ರದಲ್ಲಿನ ಸಮಾಜ ವಿಜ್ಞಾನಗಳ ಸಂಶೋಧನೆಗಳು ಪ್ರಕಟಿಸಿರುವ ಪುಸ್ತಕಗಳು ಮತ್ತು ಲೇಖನಗಳು ಸೂಚಿಸುವ ಅಂಶವೆಂದರೆ, ಶಿಕ್ಷಣ ಪಡೆದುಕೊಳ್ಳುವಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶ್ರೀಮಂತ ಪುರುಷರು ಮತ್ತು ಗಂಡುಮಕ್ಕಳು (೧೫ ರಿಂದ ೧೯ ವರ್ಷದವರು) ಪ್ರಥಮ ಸ್ಥಾನದಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಧ್ಯಮ ವರ್ಗದ ಪುರುಷರು ಕಂಡುಬರುತ್ತಾರೆ. ಮೂರನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉನ್ನತ ಆದಾಯದ ಕುಟುಂಬಕ್ಕೆ ಸೇರಿದ ಮಹಿಳೆಯರು ಬರುತ್ತಾರೆ. ನಾಲ್ಕನೇ ಸ್ಥಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಬಡತನದಲ್ಲಿರುವ ಕುಟುಂಬಗಳ ಪುರುಷರು ಬರುತ್ತಾರೆ. ಈ ನಾಲ್ಕು ಗುಂಪುಗಳ ನಂತರ ಶ್ರೀಮಂತ ವರ್ಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಬರುತ್ತಾರೆ. ಆನಂತರದಲ್ಲಿ ಬಡತನದ ಬೇಗೆಯಲ್ಲಿರುವ ಕುಟುಂಬದ ಮಹಿಳೆಯರು ಬರುತ್ತಾರೆ.

ಈ ಹಿನ್ನೆಲೆಯಲ್ಲಿ ದಲಿತ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು? ಇಲ್ಲಿ ಏನು ತಪ್ಪುಗಳಿವೆ? ದಲಿತ ಪೋಷಕರ ಮನಸ್ಸಿನಲ್ಲಿದೆ? ಅನುಷ್ಠಾನದಲ್ಲಿರುವ ಶಿಕ್ಷಣದ ಸೌಲಭ್ಯಗಳು ದಲಿತ ಮಕ್ಕಳಿಗೆ ತಲುಪುತ್ತಿವೆಯೇ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಹಾಗಾಗಿ ದಲಿತ ಸಾಕ್ಷರತೆಯ ಸ್ಥಿತಿ, ದಲಿತರ ಶೈಕ್ಷಣಿಕ ಮನೋಭಾವನೆ ಮತ್ತು ದಲಿತ ಮಕ್ಕಳ ಶಿಕ್ಷಣದ ಸಂಬಂಧ, ದಲಿತರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿ ಹಾಗೂ ದಲಿತ ಮಕ್ಕಳ ಶಿಕ್ಷಣದ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಈ ಮಹಾಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಆಡಳಿತಶಾಹಿ ವರ್ಗ ಮತ್ತು ಅಧಿಕಾರದಲ್ಲಿರುವ ವರ್ಗ ಹಾಗೂ ಯೋಜನಾಕಾರರ ನಂಬಿಕೆ ಅಥವಾ ನಿಲುವುಗಳಿಗೆ ವಿರೋಧವಾದ ಅಂಶವಿರುವುದು ಸ್ಪಷ್ಟವಾಗುತ್ತದೆ. ಅದೇನೆಂದರೆ ದಲಿತ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಜೊತೆಗೆ ಇಂದಿನ ಆಧುನಿಕ ದಿನಮಾನದಲ್ಲಿ ಯಾರೊಬ್ಬರೂ ಕೂಡ ಶಿಕ್ಷಣವನ್ನು ಕಡೆಗಣಿಸುವುದಿಲ್ಲ ಎಂಬ ಸ್ಪಷ್ಟ ಭಾವನೆಯನ್ನು ಬಹುತೇಕ ದಲಿತ ಪೋಷಕರು ವ್ಯಕ್ತಪಡಿಸುತ್ತಾರೆ. ನಿರ್ದಿಷ್ಟವಾಗಿ ಹೇಳುವುದಾದರೆ ನಾವು ದಡ್ಡರಾಗಿದ್ದೇವೆ, ನಮ್ಮ ಮಕ್ಕಳು ದಡ್ಡರಾಗುವುದು ಬೇಡ, ನಾವು ಅನುಭವಿಸಿದ ಕಷ್ಟ-ನಷ್ಟಗಳು ನಮ್ಮ ಮಕ್ಕಳಿಗೆ ಬರಲೇಬಾರದು, ನಮ್ಮ ಮಕ್ಕಳು ಓದಿ ಬುದ್ಧಿವಂತರಾಗಬೇಕು, ಉತ್ತಮವಾದ ಜೀವನ ಮಾಡಬೇಕು ಎಂಬಂತಹ ನೇರವಾದ ಮತ್ತು ಪ್ರಾಮಾಣಿಕವಾದ ರೀತಿಯಲ್ಲಿ ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ತೋರಿಸುತ್ತಾರೆ. ಈ ಭಾವನೆಯು ಕಡುಬಡನತದಲ್ಲಿರುವ ದಲಿತ ಪೋಷಕರು ಮತ್ತು ಸ್ವಲ್ಪಮಟ್ಟಿಗೆ ಸುಧಾರಿಸಿದ ದಲಿತ ಪೋಷಕರಲ್ಲಿಯೂ ಒಂದೇ ರೀತಿಯಾಗಿರುತ್ತದೆ.

ಆದರೆ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಬಂದಾಗ ಸ್ವಲ್ಪ ವ್ಯತ್ಯಾಸಗಳು ಕಾಣುತ್ತವೆ. ಗಂಡುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವ ದಲಿತ ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅದೇ ರೀತಿಯ ಆದ್ಯತೆಯನ್ನು ತೋರಿಸುವುದಿಲ್ಲ. ಅಂದರೆ ದಲಿತ ಪೋಷಕರು ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದೇ ಇಲ್ಲವೆಂದು ಅರ್ಥವಲ್ಲ. ಬಹುತೇಕವಾಗಿ ದಲಿತ ಪೋಷಕರು ತಮ್ಮ ಮಕ್ಕಳಿಗೆ ಕೊಡಿಸುವ ಶಿಕ್ಷಣವನ್ನು ಕೇವಲ ಆದಾಯವನ್ನು ಹೆಚ್ಚಿಸುವ ಒಂದು ಆರ್ಥಿಕ ಸಾಧನವನ್ನಾಗಿ ಪರಿಗಣಿಸುತ್ತಾರೆ.

ಈ ದೃಷ್ಟಿಕೋನದಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುವುದರಿಂದ ಹಣದ ದುಂದುವೆಚ್ಚ ವಾಗುತ್ತದೆ ಎಂಬ ಭಾವನೆ ನಾವು ಅಧ್ಯಯನಕ್ಕೊಳಪಡಿಸಿದ ಬಹುತೇಕ ಪೋಷಕರಲ್ಲಿದೆ. ಇದಕ್ಕೆ ಪೂರಕವಾಗಿ ಪೋಷಕರು ಬಹುತೇಕವಾಗಿ ಸಾಮಾಜಿಕ ಕಾರಣಗಳನ್ನು ಹೇಳುತ್ತಾರೆ. ಅವುಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಿಂದ ಅಥವಾ ಅವಳ ರಕ್ಷಣೆಯ ದೃಷ್ಟಿಯಂದ ನೋಡುವುದು ಮುಖ್ಯವಾಗಿದೆ. ಅಲ್ಲದೇ ಪುರುಷರಿಗಿಂತ ಮಹಿಳೆಯರಿಗೆ ಉದ್ಯೋಗದ ಅವಕಾಶಗಳು ಕಡಿಮೆ ಎಂಬುದಾಗಿ ಬಹುತೇಕ ಪೋಷಕರು ಭಾವಿಸಿರುವುದಿರಂದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಮಾನ ಆದ್ಯತೆ ಲಭಿಸುತ್ತಿಲ್ಲ. ಈ ವಿಚಾರದಲ್ಲಿ ಸಾಮಾಜಿಕವಾಗಿ ಬದಲಾವಣೆಗಳಾಗುತ್ತಿದ್ದರೂ ಹೆಣ್ಣುಮಕ್ಕಳ ಶಿಕ್ಷಣವನ್ನು ಶೈಕ್ಷಣಿಕ ಅಂಶಗಳಿಂದಾಚೆ ನೋಡಬೇಕಾದ ಅಗತ್ಯವಿದೆ. ಅದರಂತೆ ಕೇವಲ ಬೆರಳೆಣಿಕೆ ಯಷ್ಟು ಪೋಷಕರು ಮಾತ್ರ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಹೆಣ್ಣುಮಕ್ಕಳ ಶಿಕ್ಷಣದ ನಕಾರಾತ್ಮಕ ಭಾವನೆಗಳು ಕೇವಲ ಪೋಷಕರಿಂದ ಮಾತ್ರ ಹುಟ್ಟಿಕೊಳ್ಳದೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನಡವಳಿಕೆಗಳಿಂದ ಪ್ರಭಾವಿತವಾಗಿರುತ್ತವೆ ಎಂಬುದು ಸ್ಪಷ್ಟ. ಹಾಗಾಗಿ ಹೆಣ್ಣುಮಕ್ಕಳ ಶಿಕ್ಷಣ ಕುರಿತಾದ ಸಕಾರಾತ್ಮಕ ಭಾವನೆಗಳು ಕೇವಲ ವ್ಯಕ್ತಿಗತವಾಗಿ ಹೆಚ್ಚಳವಾಗದೆ ಸಾಮಾಜಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಬದಲಾವಣೆಯಾಗಬೇಕಾದ ಅಗತ್ಯವಿದೆ.

ನಾವು ಅಧ್ಯಯನಕ್ಕೊಳಪಡಿಸಿದ ಗ್ರಾಮಗಳಲ್ಲಿ ೦೬-೧೪ ವಯೋಮಾನದ ದಲಿತ ಗಂಡುಮಕ್ಕಳಿಗೆ ಹೋಲಿಸಿದರೆ ದಲಿತ ಹೆಣ್ಣುಮಕ್ಕಳ ಶಾಲಾ ಭಾಗಹಿಸುವಿಕೆಯು ಅಸಮಾನತೆಯಿಂದ ಕೂಡಿರುತ್ತದೆ. ವಿವಿಧ ಶೈಕ್ಷಣಿಕ ಕಾರ್ಯಯೋಜನೆಗಳ ಅನುಷ್ಠಾನ ಮತ್ತು ಇತರೆ ಅಂಶಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆ ಹೆಚ್ಚಾಗಿದೆ. ಆದರೆ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಗಳ ನಡುವಿನ ಅಂತರ ಮಾತ್ರ ಅದೇ ರೀತಿಯಾಗಿ ಉಳಿದು ಕೊಂಡಿರುವುದು ತಿಳಿದುಬರುತ್ತದೆ. ನಾವು ಅಧ್ಯಯನಕ್ಕೊಳಪಡಿಸಿದ ಬಹುತೇಕ ದಲಿತ ಪೋಷಕರು ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸುವುದು ಅವಶ್ಯಕವೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಬಡತನ ರೇಖೆಗಿಂತ ಕೆಳಗಿರುವ ದಲಿತ ಕುಟುಂಬಗಳ ಹೆಣ್ಣುಮಕ್ಕಳು ಹೆಚ್ಚಾಗಿ ಶಾಲೆಯಿಂದ ಹೊರಗಿರುವುದು

ಕಂಡುಬರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ದಲಿತ ಕುಟುಂಬಗಳ ಆದಾಯದಲ್ಲಿ ವ್ಯತ್ಯಾಸಗಳಾಗಿ ಜೀವನ ನಿರ್ವಹಣೆ ಕಷ್ಟವಾದಾಗ ತಮ್ಮ ಮಕ್ಕಳ ಶಿಕ್ಷಣದ ವೆಚ್ಚವನ್ನು ಭರಿಸಲಾಗದ ಸ್ಥಿತಿಯಲ್ಲಿ ಪೋಷಕರು ದುಡಿಮೆಗಾಗಿ ವಲಸೆ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ದಲಿತ ಮಕ್ಕಳು ಅದರಲ್ಲಿಯೂ ಹೆಣ್ಣುಮಕ್ಕಳು ಶಾಲಾ ಶಿಕ್ಷಣದಿಂದ ದೂರವಾಗುತ್ತಾರೆ ಎಂಬುದು ನಮ್ಮ ಗಮನಕ್ಕೆ ಬಂದಿರುತ್ತದೆ.

ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಅಂತರಕ್ಕೆ ಶೈಕ್ಷಣಿಕವಲ್ಲದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸ್ಥಳೀಯ ಅಂಶಗಳು ಕಾರಣಗಳಾಗುತ್ತವೆ. ನಾವು ಅಧ್ಯಯನ ಕ್ಕೊಳಪಡಿಸಿದ ದಲಿತ ಪೋಷಕರು ತಮ್ಮ ಹೆಣ್ಣುಮಕ್ಕಳ ಶಿಕ್ಷಣವನ್ನು ಅವಳ ವಿವಾಹದ ದೃಷ್ಟಿಯಲ್ಲಿ ಅಥವಾ ವಿವಾಹ ಹಂತದಲ್ಲಿ ಮಾತ್ರ ನೋಡುವುದು ಸರ್ವೇಸಾಮಾನ್ಯವಾಗಿದೆ. ಇದು ಮೇಲ್ಜಾತಿಯ ಪೋಷಕರು ತಮ್ಮ ಹೆಣ್ಣುಮಕ್ಕಳ ಭವಿಷ್ಯ ಮತ್ತು ಶಿಕ್ಷಣದ ಬಗ್ಗೆ ಹೊಂದಿರುವ ಭಾವನೆಯ ಪ್ರಭಾವದಿಂದಾದ ಸಾಮಾಜಿಕ ಅನುಕರಣೆಯೂ ಆಗಿರುತ್ತದೆ ಎಂಬುದು ಮನವರಿಕೆಯಾಗಿದೆ. ಈ ದೃಷ್ಟಿಕೋನವು ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯ ಮೇಲೆ ಖಂಡಿತವಾಗಿ ಪರಿಣಾಮ ಬೀರುತ್ತದೆ.

ಹೀಗೆ ಹೆಣ್ಣುಮಕ್ಕಳ ಶಿಕ್ಷಣ ಮತ್ತು ವಿವಾಹಗಳನ್ನು ತಳುಕು ಹಾಕಿ ನೋಡುವ ಪೋಷಕರ ಭಾವನೆಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಮಧ್ಯಮವರ್ಗ, ಕೆಳವರ್ಗ ಮತ್ತು ದಲಿತ ವರ್ಗಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವುದು ತಿಳಿದುಬಂದಿದೆ. ಹೆಚ್ಚಿಗೆ ಓದಿದ ದಲಿತ ಜಾತಿಯ ಹೆಣ್ಣುಮಕ್ಕಳಿಗೆ ತಕ್ಕನಾದ ಹೆಚ್ಚು ಓದಿದ ಅದೇ ಜಾತಿಯ ವರ ಸಿಗುವುದು ಕಷ್ಟಕರ ಎನ್ನುವ ದಲಿತ ಪೋಷಕರಿದ್ದಾರೆ. ಅಲ್ಲದೆ ಹೆಚ್ಚು ಓದಿದ ಹೆಣ್ಣುಮಕ್ಕಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಸ್ವೀಕರಿಸಿದರೆ ಅಪಾಯವಿದೆ ಎಂಬ ದಲಿತ ಪೋಷಕರೂ ಇದ್ದಾರೆ. ಓದಿದ ದಲಿತ ಹೆಣ್ಣುಮಕ್ಕಳಿಗೆ ತಕ್ಕನಾದ ವರನನ್ನು ಹುಡುಕಬಹುದು ಮತ್ತು ಓದಿದ ದಲಿತ ಹೆಣ್ಣುಮಕ್ಕಳನ್ನು ಸೊಸೆಯನ್ನಾಗಿ ಸ್ವೀಕರಿಸುವುದರಿಂದ ಯಾವ ಅಪಾಯವೂ ಇಲ್ಲವೆಂದರೆ ದಲಿತ ಪೋಷಕರು ಒಪ್ಪುವುದಿಲ್ಲ. ಹಾಗಾಗಿ ದಲಿತ ಪೋಷಕರ ಸಂಕುಚಿತ ಭಾವನೆಯನ್ನು ಹೋಗಲಾಡಿಸುವ ಅಗತ್ಯವಿದ್ದು, ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ಎದುರು ನೋಡಬೇಕಾಗಿದೆ.

ಅಧ್ಯಯನಕ್ಕೆ ಒಳಪಡಿಸಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿ ವ್ಯಾಪ್ತಿಯ ಬೆಳಗೋಡ್ ಹಾಳ್ ಗ್ರಾಮದ ಕೆಲವು ದಲಿತ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿರುತ್ತಾರೆ. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡುಸುವಿರಾ? ಎಂದು ಕೆಲವು ದಲಿತ ಪೋಷಕರನ್ನು ಪ್ರಶ್ನಿಸಿದಾಗ, ಮಕ್ಕಳನ್ನು ಶಾಲೆಗೆ ಕಳಿಸಿದರೆ ಏನು ಉಪಯೋಗ? ಅವರನ್ನು ಕೂಲಿ ಕೆಲಸಕ್ಕೆ ಕಳಿಸಿದರೆ ಒಬ್ಬರಿಗೆ ಒಂದು ದಿನಕ್ಕೆ ೫೦ರೂಪಾಯಿ ಪ್ರಕಾರ ಹಣ ಸಿಗುತ್ತದೆ, ಬಡವರಾದ ನಮಗೆ

ಜೀವನ ಮಾಡಲು ಅನುಕೂಲವಾಗುತ್ತದೆ. ಆದರೆ ಮಕ್ಕಳನ್ನು ಎಷ್ಟೇ ಓದಿಸಿದರೂ ವ್ಯರ್ಥವೆಂಬ ಉತ್ತರ ಲಭ್ಯವಾಗಿದೆ.

ಈ ಸಂದರ್ಭದಲ್ಲಿ ಬಡತನದಲ್ಲಿರುವ ದಲಿತ ಪೋಷಕರಿಗೆ ತಮ್ಮ ಜೀವನ ನಿರ್ವಹಣೆಗಾಗಿ ತಮ್ಮ ಮಕ್ಕಳ ದುಡಿಮೆಯನ್ನು ಅವಲಂಬಿಸಿರುವುದು ಮುಖ್ಯವಾಗಿ ಕಂಡುಬರುತ್ತದೆ. ಹಾಗಾಗಿ ತಮ್ಮ ಮಕ್ಕಳ ಬದುಕಿನ ಅಥವಾ ಭವಿಷ್ಯದ ದೃಷ್ಟಿಯಿಂದ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕೆಂಬ ಮುಂದಾಲೋಚನೆ ದಲಿತ ಪೋಷಕರಿಗೆ ಕಡಿಮೆ ಇರುವುದನ್ನು ಕ್ಷೇತ್ರಕಾರ್ಯದಲ್ಲಿ ಗಮನಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ದಲಿತ ಪೋಷಕರಿಗೆ ಕೂಲಿಗಾಗಿ ಕಾಳು, ಎನ್.ಆರ್.ಇ.ಜಿ.ಪಿ. ಅಥವಾ ಉದ್ಯೋಗ ಖಾತ್ರಿಯಂತಹ ಯೋಜನೆಗಳ ಪ್ರಕಾರ ಉದ್ಯೋಗಗಳನ್ನು ಒದಗಿಸಿದರೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಸಾಧ್ಯತೆಗಳಿರುತ್ತವೆ. ಈ ದೃಷ್ಟಿಯಂದ ಇನ್ನಷ್ಟು ಅಧ್ಯಯನಗಳನ್ನು ನಿರೀಕ್ಷೆ ಮಾಡುವ ಅವಶ್ಯಕತೆ ಇದೆ.

ಶಾಲಾ-ಶಿಕ್ಷಣ ವ್ಯವಸ್ಥೆಯಲ್ಲಿ ಕಂಡುಬರುವಂತಹ ನಿರುತ್ಸಾಹದಾಯಕ ಅಂಶವು ಪೋಷಕರು ಅಥವಾ ಅವರ ಮಕ್ಕಳ ಮೇಲೆ ಪ್ರಭಾವವನ್ನುಂಟು ಮಾಡಿದರೂ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಇನ್ನೂ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ. ನಿರ್ದಿಷ್ಟವಾಗಿ ಹೇಳಬೇಕೆಂದರೆ ಕನಿಷ್ಟ ಪ್ರಮಾಣದ ಕಲಿಕೆಯು ನಡೆಯದಿರುವ ಶಾಲೆಗಳಿರುವ ಪ್ರದೇಶದಲ್ಲಿ ಇದು ಪ್ರಧಾನವಾಗಿ ಕಂಡುಬರುತ್ತದೆ. ಈ ನಿರುತ್ಸಾಹದ ಮಾತುಗಳು ಕೆಳವರ್ಗದ ಅದರಲ್ಲಿಯೂ ದಲಿತ ಸಮುದಾಯದ ಜನರ ಮೇಲೆ ತೀವ್ರವಾದ ಪರಿಣಾಮವನ್ನುಂಟು ಮಾಡುತ್ತವೆ. ಹಾಗಾಗಿ ದಲಿತ ಪೋಷಕರು ಆಗಾಗ್ಗೆ ತಮ್ಮನ್ನು ತಾವೇ ಬೈದುಕೊಳ್ಳುವ ರೂಪದಲ್ಲಿ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ದೋಷಗಳನ್ನು ಗುರುತಿಸುತ್ತಾರೆ. ಈ ರೀತಿಯಾಗಿ ದಲಿತ ಪೋಷಕರು ಸ್ಥಳೀಯವಾಗಿ ಗುರುತಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ಗ್ರಾಮೀಣ ಭಾಗದಲ್ಲಿ ನಡೆದರೆ ಉತ್ತಮ.

ಒಂದು ಮಗುವನ್ನು ಪ್ರಾಥಮಿಕ ಶಾಲೆಗೆ ಕಳುಹಿಸಲು ಒಂದು ಸಾವಿರದಿಂದ ಐದು ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಮಕ್ಕಳು ಶಾಲೆಗೆ ಬರುವಾಗ ಕೊಳುಕಾದ ಬಟ್ಟೆ, ಹರಿದ ಬ್ಯಾಗ್, ಪುಸ್ತಕ ಮತ್ತು ನೋಟ್ ಬುಕ್, ಒಡೆದ ಸ್ಲೇಟ್, ಮುರಿದ ಬಳಪ ಅಥವಾ ಸೀಸದ ಕಡ್ಡಿಗಳನ್ನು ತೆಗೆದುಕೊಂಡು ಬರುವುದನ್ನು ನಮ್ಮ ಅಧ್ಯಯನದಲ್ಲಿ ಗಮನಿಸಲಾಗಿದೆ. ಹಾಗಾಗಿ ನಮ್ಮ ಅಧ್ಯಯನದಲ್ಲಿ ಮಕ್ಕಳಿಗೆ ಇವೆಲ್ಲವುಗಳನ್ನು ಕೊಡಿಸಲು ಮತ್ತು ಇತರೆ ಖರ್ಚುಗಳಿಂದಾಗಿ ಒಂದು ಮಗುವಿಗೆ ಸಾವಿರಾರು ರೂಪಾಯಿಗಳು ಬೇಕಾಗುತ್ತವೆ ಎಂಬ ನಿರ್ಧಾರಕ್ಕೆ ಬರಲಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳು ಶಾಲೆಗೆ ಹೋಗುವಾಗ ಹೇಗೆ ಶುಚಿತ್ವದಿಂದ ಇರಬೇಕು ಮತ್ತು ಮಕ್ಕಳ ಶಿಕ್ಷಣದ ಖಾಸಗಿ ವೆಚ್ಚವನ್ನು ಮಿತಗೊಳಿಸುವುದು ಹೇಗೆ? ಎಂಬುದರ ಬಗ್ಗೆ ವಿಸ್ತೃತವಾದ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆ ಇದೆ.

ಶಾಲೆಯಿಂದ ಹೊರಗಿರುವ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ಈಗಾಗಲೇ ಅನೇಕ ಔಪಚಾರಿಕ ಮತ್ತು ಅನೌಪಚಾರಿಕ ಕಾರ್ಯಕ್ರಮ ಅಥವಾ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸಲಾಗಿದೆ. ಇವುಗಳಲ್ಲಿ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರುವಲ್ಲಿ ಯಶಸ್ವಿಯಾದ ಕಾರ್ಯಕ್ರಮಗಳಿಗಿಂತ ವಿಫಲವಾದ ಕಾರ್ಯಕ್ರಮಗಳೇ ಹೆಚ್ಚಾಗಿವೆ. ಇದು ಸ್ಥಳೀಯವಾಗಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳದೆ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನ ಗೊಳಿಸುವ ಕ್ರಮದ ಫಲಿತಾಂಶವಾಗಿದೆ. ಹಾಗಾಗಿ ಶಾಲೆಯಂದ ಹೊರಗಿರುವ ಮಕ್ಕಳನ್ನು ನಿಗದಿತ ಸಮಯದಲ್ಲಿ ಮರಳಿ ಶಾಲೆಗೆ ಬರುವಂತೆ ಸ್ಥಳೀಯ ಸಮುದಾಯದ ಸಹಭಾಗಿತ್ವದ ಮೂಲಕ ಜನರ ಯೋಜನೆಗಳನ್ನು ರೂಪಿಸಿ, ಕ್ರಮಬದ್ಧವಾಗಿ ಜಾರಿಗೊಳಿಸುವ ಅಗತ್ಯವಿದೆ. ಆಗ ಮಾತ್ರ ಶೈಕ್ಷಣಿಕ ಅಭಿವೃದ್ಧಿ ಸಾಧ್ಯವಾಗುತ್ತದೆ.

ಶಾಲೆಗಳು ಎಲ್ಲರಿಗೂ ಲಭಿಸುತ್ತವೆ ಎಂಬುದನ್ನು ಸರ್ಕಾರದ ಅಂಕಿ-ಅಂಶಗಳು ಸೇರಿದಂತೆ ಶೈಕ್ಷಣಿಕ ಸಮೀಕ್ಷೆಗಳು, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಶೈಕ್ಷಣಿಕ ಅಧ್ಯಯನಗಳು ಗುರುತಿಸುತ್ತವೆ. ಇವೆಲ್ಲವುಗಳ ಪ್ರಕಾರ ಗ್ರಾಮೀಣ ಪ್ರದೇಶದ ಹೆಚ್ಚಿನ ಕುಟುಂಬಗಳಿಗೆ ಸುಲಭವಾದ ದೂರದಲ್ಲಿಯೇ ಪ್ರಾಥಮಿಕ ಶಾಲೆಗಳು ಲಭಿಸುತ್ತವೆ. ಆದರೆ ಇಡೀ ರಾಷ್ಟ್ರ ಮಟ್ಟದಲ್ಲಿ ನೋಡಿದಾಗ ಶೇಕಡ ೭೧ರಷ್ಟು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಗಳೇ ಇಲ್ಲವೆಂಬುದು ಬಹಳ ಗಂಭೀರವಾದ ಅಂಶವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಗ್ರಾಮೀಣ ಭಾಗದ ದಲಿತ ಪೋಷಕರು ತಮ್ಮ ಮಕ್ಕಳನ್ನು ಅದರಲ್ಲಿಯೂ ವಿಶೇಷವಾಗಿ ಹೆಣ್ಣುಮಕ್ಕಳನ್ನು ಪಕ್ಕದ ಇನ್ನೊಂದು ಗ್ರಾಮದಲ್ಲಿರುವ ಶಾಲೆಗೆ ಕಳುಹಿಸಲು ಇಷ್ಟ ಪಡುವುದಿಲ್ಲ. ಹಾಗಾಗಿ ೫, ೬ ಮತ್ತು ೭ನೇ ತರಗತಿಯ ನಂತರದಲ್ಲಿ ಗ್ರಾಮೀಣ ಪ್ರದೇಶದ ಹೆಚ್ಚಿನ ಪ್ರಮಾಣದ ಹೆಣ್ಣುಮಕ್ಕಳು ಶಾಲೆಗೆ ಹೋಗುವ ಆಸಕ್ತಿ ಇದ್ದರೂ, ಪೋಷಕರ ಇಚ್ಛೆಗೆ ವಿರುದ್ಧವಾಗಿ ಶಾಲೆಗೆ ಹೋಗಲಾರದ ಸ್ಥಿತಿ ಇರುತ್ತದೆ. ಆದರೆ ಮುಂಬರುವ ದಿನಗಳಲ್ಲಿ ಈ ಪರಿಸ್ಥಿತಿ ಬದಲಾಗಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಶಾಲಾ ಬಿಸಿಯೂಟ ಯೋಜನೆಯು ಕೆಲವು ಲೋಪದೋಷಗಳ ನಡುವೆಯೂ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಸುಧಾರಣೆಯನ್ನು ತಂದುಕೊಟ್ಟಿದೆ. ಅದರಲ್ಲಿಯೂ ಸಮಾಜದ ಅಂಚಿನಲ್ಲಿರುವ ಮತ್ತು ಅವಕಾಶ ವಂಚಿತ ದಲಿತ ಕುಟುಂಬಗಳ ಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಈ ಯೋಜನೆಯ ಹೆಚ್ಚಿಸಿದೆ. ಈ ಯೋಜನೆಯ ಅನುಷ್ಠಾನದಿಂದ ಸಮಾಜದಲ್ಲಿನ ಜಾತಿ ವರ್ಗಗಳ ಏಣಿ-ಶ್ರೇಣಿಯ ಅಂತರಗಳು ಸ್ವಲ್ಪಮಟ್ಟಿಗೆ ಶಮನಗೊಂಡು ಸಾಮಾಜಿಕ ಸಮಾನತೆಯನ್ನು ಹೆಚ್ಚಿಸುವುದರ ಮೂಲಕ ಸಾಮಾಜೀಕರಣದ ಸಾಧನೆಯಾಗುತ್ತಿದೆ. ಅಲ್ಲದೆ ಈ ಯೋಜನೆಯು ಶಿಕ್ಷಣ ಕ್ಷೇತ್ರದಲ್ಲಿನ ಲಿಂಗ ತಾರತಮ್ಯದ ಅಂತರವನ್ನು ಕಡಿಮೆ ಮಾಡುತ್ತಾ ಲಿಂಗ ಸಮಾನತೆಯನ್ನು ಸಾಧಿಸಲು ಹೆಚ್ಚಿನ ಸಹಕಾರಿಯಾಗಿದೆ. ಒಟ್ಟಾರೆಯಾಗಿ ಶಾಲಾ ಬಿಸಿಯೂಟ ಯೋಜನೆಯು ಸಾಮಾಜಿಕ ಅಭಿವೃದ್ಧಿಗೆ

ಒಂದು ತಳಹದಿಯಾಗಿದೆ ಎಂಬುದು ನಮ್ಮ ಅಧ್ಯಯನದಲ್ಲಿ ಅನುಭವಕ್ಕೆ ಬಂದಿದೆ. ಹಾಗಾಗಿ ಈ ಯೋಜನೆಯನ್ನು ಪ್ರತಿಯೊಬ್ಬರ ಆಹಾರದ ಹಕ್ಕಿನ ದೃಷ್ಟಿಯಿಂದ ಒಂದು ಸಾಮಾಜಿಕ ಚಳುವಳಿಯಾಗಿ ರೂಪಿಸುವುದು ಎಲ್ಲರ ಜವಾಬ್ದಾರಿಯಾಗಬೇಕು.

ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರೂಪಿಸಿ ಅನುಷ್ಠಾನಗೊಳಿಸಿದ ಬಹುತೇಕ ಕಾರ್ಯಕ್ರಮಗಳು ವಾಸ್ತವಿಕವಾಗಿ ದಲಿತ ಮಕ್ಕಳಿಗೆ ದೊರಕದಿರುವುದು ನಮ್ಮ ಅಧ್ಯಯನ ದಿಂದ ತಿಳಿದುಬಂದಿದೆ. ಒಂದು ಪಕ್ಷ ದೊರಕುತ್ತಿದ್ದರೂ, ದಲಿತ ಮಕ್ಕಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ದೊರೆಯದಿರುವುದು ನಮ್ಮ ಗಮನಕ್ಕೆ ಬಂದಿದೆ. ಉದಾಹರಣೆಗೆ. ಸಮವಸ್ತ್ರಗಳನ್ನು ಹಂಚುವ ಸಂದರ್ಭದಲ್ಲಿ ದಲಿತ ಮಕ್ಕಳಿಗೆ ಅವರ ದೈಹಿಕ ಅಳತೆಗೆ ಸರಿ ಹೊಂದದ ಹಾಗೂ ಸರಿಯಾಗಿ ಹೊಲಿಗೆಯಾಗದಿರುವ ಸಮವಸ್ತ್ರಗಳನ್ನು ಹಂಚುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಇದೇ ಸಮವಸ್ತ್ರಗಳನ್ನು ಗ್ರಾಮದ ಮೇಲ್ಜಾತಿಯ ಮಕ್ಕಳಿಗೆ ನೀಡುವಾಗ ಅವರ ದೈಹಿಕ ಅಳತೆಗೆ ಸರಿಹೊಂದುವ ಸಮವಸ್ತ್ರಗಳನ್ನು ನೀಡುವುದನ್ನು ನಾವು ಕಂಡಿದ್ದೇವೆ. ಈ ಬಗೆಯ ಅಸಮಾನತೆ ಶಾಲೆಯಲ್ಲಿ ಕೆಲಸಗಳನ್ನು ನಿಯೋಜಿಸುವ ಸಂದರ್ಭದಲ್ಲಿ ದಲಿತ ಮಕ್ಕಳಿಗೆ ಶ್ರಮದಾಯಕವಾದ ಕೆಲಸಗಳನ್ನು ಶಿಕ್ಷಕರು ನಿಯೋಜಿಸುತ್ತಿರುವುದು ದಲಿತ ಮಕ್ಕಳನ್ನು ಸಮಾನನಾಗಿ ಪರಿಗಣಿಸದೆ ಅವರನ್ನು ಎರಡನೇ ದರ್ಜೆಯ ನಾಗರೀಕರಂತೆ ಕಾಣುತ್ತಿರುವುದು ನಮ್ಮ ಕ್ಷೇತ್ರ ಅಧ್ಯಯನದಲ್ಲಿ ಸೂಕ್ಷ್ಮವಾಗಿ ನೋಡಿದಾಗ ಕಂಡುಬರುತ್ತದೆ. ಆದರೆ ಮೇಲ್ನೋಟಕ್ಕೆ ಅಸಮಾನತೆಗಳಿಲ್ಲ, ಸಮಾನತೆಗಳಿವೆ ಎಂದು ಒತ್ತಿ ಹೇಳುವ ಪ್ರಯತ್ನ ದಲಿತೇತರ ಜನವರ್ಗಗಳಲ್ಲಿ, ಶಿಕ್ಷಕರಲ್ಲಿ ಹಾಗೂ ಅಧಿಕಾರಿವರ್ಗದಲ್ಲಿ ಕಂಡುಬರುತ್ತಿದೆ.

ಈ ಬಿಸಿಯೂಟ ಯೋಜನೆ, ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ, ಕಲಿಕೆಯ ಕನಿಷ್ಟ ಮಟ್ಟದ ಕಾರ್ಯಕ್ರಮ, ಶಿಕ್ಷಣ ಗ್ಯಾರಂಟಿ ಯೋಜನೆ, ಉಚಿತ ಪಠ್ಯ ಪುಸ್ತಕ, ನೋಟ್ ಪುಸ್ತಕ, ಸಮವಸ್ತ್ರ, ಶಾಲಾ ಬ್ಯಾಗ್‌ಗಳ ವಿತರಣೆ, ವಿದ್ಯಾರ್ಥಿ ವೇತನ ಸಂದಾಯ, ಸರ್ವಶಿಕ್ಷಣ ಅಭಿಯಾನ ಇನ್ನೂ ಮುಂತಾದ ಕಾರ್ಯಯೋಜನೆಗಳ ಮೂಲಕವಾಗಿ ಸರ್ಕಾರದ ಗಮನ ಮತ್ತು ಪ್ರಯತ್ನಗಳು ದಲಿತ ಮಕ್ಕಳ ಶಿಕ್ಷಣದ ಕಡೆಗೆ ಇವೆ. ಆದರೂ ದಲಿತ ಮಕ್ಕಳ ಶಿಕ್ಷಣದಲ್ಲಿ ಸಂಪೂರ್ಣವಾದ ಸುಧಾರಣೆಗಳಾಗಲೇ ಇಲ್ಲ. ಈಗಾಗಲೇ ತಿಳಿಸಿದ ಅಧ್ಯಯನ ವಿಧಾನಗಳನ್ನು ಬಳಸಿ ವಿಮರ್ಶಾತ್ಮಕವಾಗಿ ನಮ್ಮ ಅಧ್ಯಯನವು ಈ ಕೆಳಗಿನ ನಿರ್ಧಾರಕ್ಕೆ ಬಂದಿದೆ. ಈ ಅಂಶಗಳು ಪ್ರಸ್ತುತ ಅಧ್ಯಯನದ ಫಲಿತಗಳು ಹೌದು, ಮುಂದಿನ ಅಧ್ಯಯನಗಳಿಗೆ ಸೂಚನೆಗಳು ಹೌದು.

- ಅಧ್ಯಯನಕ್ಕೊಳಪಡಿಸಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯತಿಯ ಒಟ್ಟು ದಲಿತರ ಪ್ರಾಥಮಿಕ ಶಿಕ್ಷಣದ ಪ್ರಮಾಣ ಶೇಕಡ ೪೦.೪೮ರಷ್ಟು ಮತ್ತು ಮಹಿಳೆಯರ ಪ್ರಮಾಣ ಶೇಕಡ ೪೪.೦೦ರಷ್ಟಾಗಿದೆ. ಅಧ್ಯಯನಕ್ಕೊಳಪಡಿಸಿದ ಇನ್ನೊಂದು ಗ್ರಾಮಪಂಚಾಯತಿ ಆಲೂರು ಪ್ರದೇಶದ

ದಲಿತರ ಒಟ್ಟು ಪ್ರಾಥಮಿಕ ಶಿಕ್ಷಣದ ಪ್ರಮಾಣ ಶೇಕಡ ೨೧.೦೭ರಷ್ಟರಲ್ಲಿ ಶೇಕಡ ೫೩.೯ರಷ್ಟು ಪುರುಷರು ಮತ್ತು ಶೇಕಡ ೪೬.೦೧ರಷ್ಟು ಮಹಿಳೆಯರಿದ್ದಾರೆ. ಈ ಎರಡು ಗ್ರಾಮಪಂಚಾಯತಿಗಳ ದಲಿತರ ಪ್ರಾಥಮಿಕ ಶಿಕ್ಷಣವನ್ನು ಹೋಲಿಕೆ ಮಾಡಿ ನೋಡಿದರೆ, ನಂ.೧೦ ಮುದ್ದಾಪುರ ಗ್ರಾಮ ಪಂಚಾಯತಿಗಿಂತ ಆಲೂರು ಗ್ರಾಮಪಂಚಾಯತಿಯ ದಲಿತರ ಪ್ರಾಥಮಿಕ ಶಿಕ್ಷಣ ಶೇಕಡ ೧೯ರಷ್ಟು ಹಿಂದುಳಿದಿದೆ. ಪುರಷರ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿಯೂ ನಂ.೧೦ ಮುದ್ದಾಪುರ ಗ್ರಾಮ ಪಂಚಾಯತಿಗಿಂತ ಆಲೂರು ಗ್ರಾಮಪಂಚಾಯತಿಯ ದಲಿತರು ಶೇಕಡ ೨.೧ರಷ್ಟು ಹಿಂದುಳಿದಿದ್ದಾರೆ. ಆದರೆ ಮಹಿಳಾ ಪ್ರಾಥಮಿಕ ಶಿಕ್ಷಣದಲ್ಲಿ ಆಲೂರು ಗ್ರಾಮಪಂಚಾಯಿತಿಗಿಂತ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯ ದಲಿತರು ಶೇಕಡ ೨.೧ರಷ್ಟು ಹಿಂದುಳಿದಿದ್ದಾರೆ.

- ಅಧ್ಯಯನ ಮಾಡಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ಪ್ರದೇಶದ ಶೇಕಡ ೫೦ರಷ್ಟು ದಲಿತ ಪೋಷಕರಂತೆ ಮಧ್ಯದಲ್ಲಿಯೇ ಶಾಲೆ ಬಿಡುವ ತಮ್ಮ ಮಕ್ಕಳಲ್ಲಿ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಅಧಿಕವಾಗಿದ್ದಾರೆ. ಅದೇ ರೀತಿಯಾಗಿ ಅಧ್ಯಯನ ಮಾಡಿದ ಇನ್ನೊಂದು ಗ್ರಾಮ ಪಂಚಾಯತಿ ಆಲೂರು ಪ್ರದೇಶದಲ್ಲಿನ ಶೇಕಡ ೭೪.೪ರಷ್ಟು ದಲಿತ ಪೋಷಕರ ಪ್ರಕಾರ ಮಧ್ಯ ದಲ್ಲಿ ಶಾಲೆ ಬಿಡುವ ತಮ್ಮ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಅಧಿಕವಾಗಿದ್ದಾರೆ. ಇದನ್ನು ತುಲನಾತ್ಮಕವಾಗಿ ನೋಡಿದಾಗ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳು ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಗಿಂತ ಆಲೂರು ಗ್ರಾಮಪಂಚಾಯತಿಯಲ್ಲಿಯೇ ಅಧಿವಾಗಿರುವುದು ತಿಳಿಯುತ್ತದೆ. ಆದರೆ ಈ ಎರಡೂ ಪ್ರದೇಶಗಳಲ್ಲಿಯೂ ಮಧ್ಯದಲ್ಲಿಯೇ ಶಾಲೆ ಬಿಡುವ ದಲಿತ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ಜಾಸ್ತಿಯಾಗಿರುವುದು ಸಾಮ್ಯತೆಯಾಗಿದೆ. ಇದು ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶದ ಲಕ್ಷಣವೂ ಆಗಿರುತ್ತದೆ.

- ಅಧ್ಯಯನಕ್ಕೆ ಒಳಪಡಿಸಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ದಲಿತ ಪೋಷಕರಲ್ಲಿ ಮೌಢ್ಯತೆಗಳು ಅಧಿವಾಗಿರುವುದರಿಂದ ದಲಿತ ಗಂಡುಮಕ್ಕಳ ಶಿಕ್ಷಣಕ್ಕಿರುವ ಪ್ರಾಶಸ್ತ್ಯ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಲಭಿಸುವುದಿಲ್ಲ. ಆದರೆ ಅಧ್ಯಯನಕ್ಕೆ ಒಳಪಡಿಸಿದ ಇನ್ನೊಂದು ಗ್ರಾಮಪಂಚಾಯಿತಿ ಆಲೂರು ಪ್ರದೇಶದ ಹೆಚ್ಚಿನ ಪ್ರಮಾಣದ ದಲಿತ ಪೋಷಕರು ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳ ಶಿಕ್ಷಣಗಳಿಗೆ ಸಮಾನ ಪ್ರಾಶಸ್ತ್ಯ ನೀಡುತ್ತಾರೆ. ಉಳಿದಂತೆ ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವ ಪ್ರಮಾಣ ಆಲೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬಹಳ ಕಡಿಮೆ ಇರುತ್ತದೆ.

- ಮಕ್ಕಳ ಶಿಕ್ಷಣದ ಬಗ್ಗೆ ದಲಿತ ಪೋಷಕರ ಮನೋಪ್ರವೃತ್ತಿಯು ಅಧ್ಯಯನ ಮಾಡಿದ ನಂ.೧೦ ಮುದ್ದಾಪುರ ಗ್ರಾಮಪಂಚಾಯಿತಿಯ ಪ್ರದೇಶಕ್ಕಿಂತ ಅಧ್ಯಯನಕ್ಕೆ ಒಳಪಡಿಸಿದ ಇನ್ನೊಂದು ಗ್ರಾಮಪಂಚಾಯಿತಿ ಆಲೂರು ಪ್ರದೇಶದಲ್ಲಿ ಸ್ವಲ್ಪಮಟ್ಟಿಗೆ ಅಧಿಕವಾಗಿರುವುದು ಕಂಡುಬರುತ್ತದೆ.

- ಅಧ್ಯಯನ ಕ್ಷೇತ್ರದ ದಲಿತ ಪೋಷಕರಲ್ಲಿ ಹೆಣ್ಣುಮಕ್ಕಳು ಹೆಚ್ಚು ಓದುವ ಅವಶ್ಯಕತೆ ಇಲ್ಲ. ಹೆಣ್ಣುಮಕ್ಕಳು ಹೆಚ್ಚಾಗಿ ಓದಿದರೆ ಅವಳಿಗೆ ಹೆಚ್ಚು ಓದಿಕೊಂಡ ವರ ಸಿಗುವುದಿಲ್ಲ. ಅಲ್ಲದೆ ಹೆಚ್ಚು ಓದಿದ ದಲಿತ ಹೆಣ್ಣುಮಕ್ಕಳನ್ನು ಸೊಸೆಯರನ್ನಾಗಿ ಸ್ವೀಕರಿಸಲು ಹಿಂಜರಿಯುವ ದಲಿತ ಪೋಷಕರಿದ್ದಾರೆ. ಹಾಗಾಗಿ ಅವಿದ್ಯಾವಂತ ದಲಿತ ಪೋಷಕರಿಗೆ ಅರಿವು ಮೂಡಿಸುವ ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಮಹತ್ವವನ್ನು ತಿಳಿಸುವಂತಹ ಕಾರ್ಯಕ್ರಮದ ಅವಶ್ಯಕತೆ ಇದೆ.
- ದಲಿತ ಮಕ್ಕಳಲ್ಲಿ ಇರುವ ಜಾತಿಯ ಕೀಳರಿಮೆಯು ಅವರ ಕಲಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಆದುದರಿಂದ ದಲಿತ ಮಕ್ಕಳಲ್ಲಿ ಕಂಡುಬರುವ ಕೀಳರಿಮೆಯನ್ನು ಗುರುತಿಸಿ, ಅದನ್ನು ಹೋಗಲಾಡಿಸುವ ಮತ್ತು ದಲಿತ ಮಕ್ಕಳ ಕಲಿಕೆಯನ್ನು ಉತ್ತೇಜಿಸುವಂತಹ ಕಾರ್ಯ ನಡೆಯ ಬೇಕಾಗಿದೆ.
- ಇತ್ತೀಚೆಗೆ ದಲಿತ ಮಕ್ಕಳಲ್ಲಿ ಕಂಡುಬರುವ ಆತ್ಮಹತ್ಯೆಯ ಬೆದರಿಕೆಗಳು ದಲಿತ ಮಕ್ಕಳ ಶಿಕ್ಷಣ ಹಿಂದುಳಿಯಲು ಮತ್ತು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವಾಗಿರುವುದು ನಮ್ಮ ಅಧ್ಯಯನ ದಿಂದ ಬೆಳಕಿಗೆ ಬಂದಿದೆ. ಆದ್ದರಿಂದ ದಲಿತ ಮಕ್ಕಳ ಅಥವಾ ಯಾವುದೇ ಸಾಮಾಜಿಕ ವರ್ಗದ ಮಕ್ಕಳ ತಲೆಯಲ್ಲಿ ಆತ್ಮಹತ್ಯೆಯ ಆಲೋಚನೆಗಳು ಸುಳಿಯಲಾರದಂತೆ ಇಡೀ ಸಾಮಾಜಿಕ ವ್ಯವಸ್ಥೆಯೇ ಜಾಗೃತವಾಗಬೇಕಾಗಿದೆ.
- ಅಧ್ಯಯನ ನಡೆಸಿದ ಒಂದು ಗ್ರಾಮಪಂಚಾಯಿತಿಯ ದಲಿತರು ಶೈಕ್ಷಣಿಕವಾಗಿ ಹಿಂದುಳಿಯಲು ಮತ್ತು ಇನ್ನೊಂದು ಗ್ರಾಮಪಂಚಾಯಿತಿಯ ದಲಿತರು ಸ್ವಲ್ಪ ಮುಂದುವರಿಯಲು ಸ್ಥಳೀಯವಾದ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳು ಕಾರಣವಾಗಿರುವುದನ್ನು ನಮ್ಮ ಅಧ್ಯಯನದಲ್ಲಿ ಗುರುತಿಸಲಾಗಿದೆ. ಹಾಗಾಗಿ ಶೈಕ್ಷಣಿಕ ಅಭಿವೃದ್ಧಿಯ ಕಾರ್ಯಕ್ರಮ(ಯೋಜನೆ)ಗಳನ್ನು ಸ್ಥಳೀಯವಾದ ಸಾಮಾಜಿಕ ಪರಿಸರದ ಆಧಾರದಲ್ಲಿ ರೂಪಿಸಿ ಅನುಷ್ಠಾನಗೊಳಿಸುವ ಅಗತ್ಯವಿರುತ್ತದೆ.
- ಶಿಕ್ಷಣದ ಭೌತಿಕ ಮೂಲಸೌಲಭ್ಯಗಳಾದ ಶಾಲೆಯ ಕೊಠಡಿ, ಶಿಕ್ಷಕರ ನೇಮಕ, ಕುಡಿಯುವ ನೀರಿನ ಬಗ್ಗೆ ತೃಪ್ತಿ ಮತ್ತು ಶೌಚಾಲಯ ಸೌಲಭ್ಯದ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುವ ದಲಿತ ಪೋಷಕರು ಶಿಕ್ಷಣದ ಬೌದ್ಧಿಕ ಪರಿಸರದ ಸೌಲಭ್ಯದ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗದೆ ಶಾಲಾ ಶಿಕ್ಷಕರನ್ನು ದೂಷಿಸುತ್ತಾರೆ. ಆದರೆ ಶಿಕ್ಷಣದ ಪ್ರೋತ್ಸಾಹದಾಯಕ ಸೌಲಭ್ಯಗಳಾದ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶಾಲಾಬ್ಯಾಗ್, ನೋಟ್‌ಪುಸ್ತಕಗಳ ವಿತರಣೆ, ಮಧ್ಯಾಹ್ನದ ಶಾಲಾ ಬಿಸಿಯೂಟ, ವಿದ್ಯಾರ್ಥಿ ವೇತನದ ಸಂದಾಯ ಇತ್ಯಾದಿಗಳ ಬಗ್ಗೆ ದಲಿತ ಪೋಷಕರಲ್ಲಿ ಅತೃಪ್ತಿ ಕಂಡುಬರುತ್ತದೆ.
- ದಲಿತ ಪೋಷಕರು ತಮ್ಮ ಜೀವನ ನಿರ್ವಹಣೆಯ ಕೆಲಸ ಕಾರ್ಯಗಳಿಗೆ ತೋರಿಸುವಷ್ಟು ಆಸಕ್ತಿಯನ್ನು ತಮ ಮಕ್ಕಳ ಶಿಕ್ಷಣದ ಬಗ್ಗೆ ತೋರಿಸುವುದಿಲ್ಲ. ಮಕ್ಕಳನ್ನು ಹೊಲ ಗದ್ದೆ

ಅಥವಾ ಕೂಲಿ ಕೆಲಸಗಳಿಗೆ ಕರೆದುಕೊಂಡು ಹೋಗದೆ ಶಾಲೆಗೆ ಕಳಿಸುವುದು ಮಾತ್ರ ತಮ್ಮ ಕೆಲಸ ಎಂಬ ಭಾವನೆ ದಲಿತ ಪೋಷಕರಲ್ಲಿರುವುದನ್ನು ನಮ್ಮ ಅಧ್ಯಯನ ಗುರುತಿಸಿದೆ.

- ಅಧ್ಯಯನ ಕ್ಷೇತ್ರದ ದಲಿತರು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿರುವುದರಿಂದ ಬಡತನ, ಅನಕ್ಷರತೆ, ಚಿಕ್ಕಮಕ್ಕಳ ಪೋಷಣೆ ಇನ್ನೂ ಮುಂತಾದ ಸಾಮಾಜಿಕ ಅಂಶಗಳ ಜೊತೆಯಲ್ಲಿ ಆತ್ಮಹತ್ಯೆಯಂತಹ ಅಂಶವೂ ಕೂಡ ದಲಿತ ಮಕ್ಕಳ ಶೈಕ್ಷಣಿಕ ಹಿಂದುಳಿದ ಪರಿಸ್ಥಿತಿಗೆ ಕಾರಣವಾಗಿರುವುದನ್ನು ನಮ್ಮ ಅಧ್ಯಯನವು ಸ್ಪಷ್ಟಪಡಿಸುತ್ತದೆ.

ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದ ಹಿನ್ನೆಲೆಯಲ್ಲಿ ಎಸ್.ಡಿ.ಎಂ.ಸಿ.ಗಳನ್ನು ಸಬಲೀಕರಿಸಿ, ಅದರಲ್ಲಿ ಪ್ರಜಾಸತ್ತಾತ್ಮಕವಾಗಿ, ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳ ದೃಷ್ಟಿಯಿಂದ ಹಿಂದುಳಿದ ವರ್ಗ, ದಲಿತರು ಮತ್ತು ಮಹಿಳೆಯರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಮುಖ್ಯವಾಗಿದ್ದರೂ, ಇಡೀ ನಮ್ಮ ಸಾಮಾಜಿಕ ವ್ಯವಸ್ಥೆಯೇ ಕಾರ್ಯ ಪ್ರವೃತ್ತವಾಗ ಬೇಕಾಗಿದೆ ಎಂಬುದು ನಮ್ಮ ಅಧ್ಯಯನದ ಆಶಯವಾಗಿರುತ್ತದೆ. ಈ ಎಲ್ಲಾ ಅಂಶ ಗಳನ್ನು ಕುರಿತು ಸ್ಥಳೀಯ ಮಟ್ಟದಲ್ಲಿ ಇನ್ನಷ್ಟು ಅಧ್ಯಯನ ಮತ್ತು ಚರ್ಚೆಗಳು ನಡೆಯಬೇಕಾದ ಅಗತ್ಯವಿದೆ.

• • •

ಅನುಬಂಧಗಳು

೧. ಆಕರ ಗ್ರಂಥಸೂಚಿ
೨. ಪ್ರಶ್ನಾವಳಿ
೩. ಛಾಯಾಚಿತ್ರ

೧. ಆಕರ ಗ್ರಂಥಸೂಚಿ

ಅಖಿಲ ಆರ್., (೨೦೦೫), *ರೀಚಿಂಗ್ ಗ್ಲೋಬರ್ ಗೋಲ್ಸ್ ಇನ್ ಪ್ರೈಮರಿ ಎಜ್ಯುಕೇಶನ್, ಸಮ್ ಜಂಡರ್ ಕನ್ಸರ್ನ್ ಫಾರ್ ತಮಿಳುನಾಡು,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಹಿತಕಾರಿ ಹೌಸ್ ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಅಗರವಾಲ್, (೨೦೦೦), *ಆ್ಯನ್ ಅಸೆಸ್‌ಮೆಂಟ್ ಆಫ್ ಟ್ರೆಂಡ್ ಇನ್ ಆಕ್ಸೆಸ್ ಅಂಡ್ ರಿಟೆನ್ಷನ್,* ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್, ನ್ಯೂಡೆಲ್ಲಿ.

ಅರವಿಂದ ಮಾಲಗುತ್ತಿ, (೨೦೦೦), *ದಲಿತ ಸಾಹಿತ್ಯದ ತಾತ್ವಿಕ ನೆಲೆ-ನಿಲುವುಗಳು,* ದಲಿತಜ್ಞ, ದಲಿತ ಸಾಹಿತ್ಯ ಪರಿಷತ್ ರಾಜ್ಯ ಘಟಕ ಗದಗ.

ಅಮ್ಮಾನ್ ಮಧನ್, (೨೦೦೫), *ಫರ್‌ಸ್ಪೆಕ್ಟೀವ್ ಆನ್ ಎಜ್ಯುಕೇಶನ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜುಲೈ ೩೦), ಹಿತಕಾರಿ ಹೌಸ್, ಶಾಹಿದ್ ಭಗವತ್‌ಸಿಂಗ್ ರೋಡ್, ಮುಂಬೈ.

ಅರವಿಂದ ಚೊಕ್ಕಾಡಿ, (೨೦೦೭), ಶಿಕ್ಷಣ ದೃಷ್ಟಿ, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಮಾಗಡಿರಸ್ತೆ, ಬೆಂಗಳೂರು

ಅರವಿಂದ ಚೊಕ್ಕಾಡಿ, (೨೦೦೭), ಬದುಕಿಗಾಗಿ ಶಿಕ್ಷಣ, ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರಸ್ತೆ, ಬಳ್ಳಾರಿ

ಇಂದಿರಾ ಆರ್., (೨೦೦೨), ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಉದಯಕುಮಾರ ಇರ್ವತ್ತೂರು ಮತ್ತು ತೀ.ನಂ. ಶ್ರೀಧರ್, (೨೦೦೧-೦೨), *ಮಹಿಳಾ ಅಭಿವೃದ್ಧಿಯನ್ನು ರೂಪಿಸಿದ ಅಗತ್ಯ ಮತ್ತು ಅನಿವಾರ್ಯತೆಗಳು ಒಂದು ಚಿಂತನೆ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂಪುಟ ೧, ಸಂಚಿಕೆ ೧, ಡಿಸೆಂಬರ್-ಮೇ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಉಷಾ ರಾಮಕುಮಾರ್, (೨೦೦೭), *ಕರ್ನಾಟಕದಲ್ಲಿ ಸಾಕ್ಷರತಾ ಕಾರ್ಯಕ್ರಮಗಳ ಪ್ರಗತಿ ಒಂದು ವಿಶ್ಲೇಷಣೆ,* ಯೋಜನಾ ಅಭ್ಯುದಯ ಮಾಸಪತ್ರಿಕೆ (ಅಕ್ಟೋಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಕರ್ನಾಟಕ ಸರ್ಕಾರ, (೨೦೦೨-೦೩), ಶೈಕ್ಷಣಿಕ ಅಂಕಿ-ಅಂಶಗಳ ಪಕ್ಷಿನೋಟ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ, (೨೦೦೩), ಮಕ್ಕಳ ಸಮೀಕ್ಷೆ, (ಸಿ.ಪಿ.ಇ). ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ, (೧೯೯೯), ಮಾನವ ಅಭಿವೃದ್ಧಿ ವರದಿ, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ, (೨೦೦೫), ಮಾನವ ಅಭಿವೃದ್ಧಿ ವರದಿ, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಕರ್ನಾಟಕ ಸರ್ಕಾರ, (೨೦೦೫), ಮಕ್ಕಳ ಜನಗಣತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಕರೂರ ಎನ್.ಜಿ., (೧೯೯೯), ಶಿಕ್ಷಣದ ಪರಮಗುರಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರೂರ ಎನ್.ಜಿ., (೨೦೦೧), ಪ್ರಾಥಮಿಕ ಶಿಕ್ಷಣ-ಸಮಸ್ಯೆಗಳು ಹಾಗೂ ಪರಿಹಾರಗಳು, ಶಿಕ್ಷಣ ಮಾರ್ಗ, ಸ್ವಪ್ನಬುಕ್ ಹೌಸ್, ಬೆಂಗಳೂರು.

ಕರೂರ ಎನ್.ಜಿ., (೨೦೦೩), ಶಿಕ್ಷಣ ಮಾರ್ಗ, ಸ್ವಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು.

ಕುಮಾರ ಸ್ವಾಮಿ ಎಚ್., (೨೦೦೭), *ಗುಣಮಟ್ಟದ ಶಿಕ್ಷಣ : ತರಗತಿಯಲ್ಲಿನ ಪ್ರಕ್ರಿಯೆಗಳು,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಕುಮಾರ್ ಟಿ.ಎಂ., (೨೦೦೪), ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ಶ್ರೀದೇವಿ ಪ್ರಕಾಶನ, ನಾಗಸಂದ್ರ ಪೋಸ್ಟ್, ಬೆಂಗಳೂರು

ಕುಲಕರ್ಣಿ ಎನ್.ಕೆ., (೧೯೯೭), ಸಮಗ್ರ ಶಿಕ್ಷಣ, ಮಿರಾಂಬಿಕ ಮುದ್ರಣಾಲಯ, ಶ್ರೀ ಅರವಿಂದ ಸಂಕೀರ್ಣ, ೯ನೇ ಅಡ್ಡರಸ್ತೆ, ಜೆ.ಪಿ. ನಗರ, ಬೆಂಗಳೂರು

ಕುಲಕರ್ಣಿ ಕೆ.ಜಿ., (೨೦೦೬), ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪ್ರದೀಪ ಪ್ರಕಾಶನ, ಜೆ.ಟಿ. ಕಾಲೇಜು ಹತ್ತಿರ, ಗದಗ.

ಕೃಷ್ಣಕುಮಾರ್, ಮನಿಷ ಪ್ರಿಯಮ್, ಸಾಧನಾ ಸಕ್ಸೇನ್, (೨೦೦೧), ಲುಕಿಂಗ್ ಬಿಯಾಂಡ್‌ದ ಸಮ್ ಸ್ಕ್ರೀನ್, ಡಿ.ಪಿ.ಇ.ಪಿ. ಅಂಡ್ ಪ್ರೈಮರಿ ಎಜ್ಯುಕೇಶನ್ ಇನ್ ಇಂಡಿಯಾ, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, (ಫೆಬ್ರವರಿ ೧೭), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಕೃಷ್ಣಕುಮಾರ್, ಕನ್ನಡಕ್ಕೆ ರಜನೀಕಾಂತ್ ಎಂ.ಎಸ್., (೨೦೦೬), *ಹೊಸಶೈಕ್ಷಣಿಕ ಸವಾಲಿನಲ್ಲಿ ಗ್ರಾಮೀಣ ಮಕ್ಕಳು*, **ಯೋಜನಾ ಅಭ್ಯುದಯ ಮಾಸಪತ್ರಿಕೆ**, (ಡಿಸೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಕೊಥಾರಿ ಬ್ರಿಜ್ ಆ್ಯಂಡ್ ಪಿ.ಜಿ.ವಿ. ಶೇರಿ ಚಂದ್, (೨೦೦೩), **ರೀಡಿಂಗ್ ಬಿಯಾಂಡ್ ದಿ ಆಲ್ಫಾಬೆಟ್ಸ್**, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ

ಗಣೇಶ ಭಟ್ಟ, (೨೦೦೭), *ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಶಿಕ್ಷಕರ ಪಾತ್ರ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಸೆಪ್ಟೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಗಣೇಶ ಭಟ್ಟ, (೨೦೦೭), *ಮೂಲ ಸೌಲಭ್ಯಗಳಿಲ್ಲದೆ ಸಾರ್ವತ್ರಿಕ ಶಿಕ್ಷಣ ಸಾಧ್ಯವಿಲ್ಲ*. **ಟೀಚರ್ ಶೈಕ್ಷಣಿಕ ಮಾಸಪತ್ರಿಕೆ** (ಮಾರ್ಚ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

ಗವರ್ನಮೆಂಟ್ ಆಫ್ ಇಂಡಿಯಾ, (೧೯೮೬), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, ನ್ಯೂಡೆಲ್ಲಿ

ಗವರ್ನಮೆಂಟ್ ಆಫ್ ಇಂಡಿಯಾ, (೧೯೯೨), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, (ರಿವೈಸ್ಡ್), ನ್ಯೂಡೆಲ್ಲಿ

ಗವರ್ನಮೆಂಟ್ ಆಫ್ ಇಂಡಿಯಾ, (೧೯೯೩), **ಸಿ.ಎ.ಬಿ.ಇ. ಕಮಿಟಿ ಆನ್ ಡಿಸೆಂಟ್ರಲೈಜ್ಡ್ ಮ್ಯಾನೇಜ್‌ಮೆಂಟ್ ಆಫ್ ಎಜುಕೇಷನ್**, ಮಿನಿಷ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲ್ಪಮೆಂಟ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ನ್ಯೂಡೆಲ್ಲಿ

ಗವರ್ನಮೆಂಟ್ ಆಫ್ ಕರ್ನಾಟಕ, (೨೦೦೧), ***ಸ್ಕೂಲ್ ಡೆವಲಪ್‌ಮೆಂಟ್ ಆ್ಯಂಡ್ ಮಾನಿಟರಿಂಗ್ ಕಮಿಟಿ (ಎಸ್.ಡಿ.ಎಂ.ಸಿ.)***, ರೆಕಮಂಡೇಷನ್ ಆಫ್ ದಿ ಸ್ಟೇಟ್ ಟಾಸ್ಕ್‌ಫೋರ್ಸ್ ಆಫ್ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ಬೆಂಗಳೂರು

ಗೋಪಾಲ್ ಸಿ.ಆರ್., (೨೦೦೪), *ಸಾಕ್ಷರತಾ ಸಿದ್ಧಾಂತ, ಕಾರ್ಯನೀತಿ ಮತ್ತು ಆಚರಣೆ : ಅರ್ಧ ಶತಮಾನದ ಅನುಭವ*, **ಸಾಕ್ಷರತಾ ಅಧ್ಯಯನ**, ಸಂಚಿಕೆ ೫, ಸಂಶೋಧನಾ ವಿಭಾಗ, ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ, ಮೈಸೂರು

ಗೋವಿಂದೇಗೌಡ ಎಚ್.ಜಿ., (೧೯೯೬), *ಸರ್ಕಾರಗಳ ರಾಜಕೀಯ ಬದ್ಧತೆ ಹಾಗೂ ಸಹಾಯ ಆಗ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯ*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಸೆಪ್ಟೆಂಬರ್),

ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಗೋವಿಂದ ಆರ್ ಅಂಡ್ ವರ್ಗೀಸ್ ಎನ್.ವಿ., (೧೯೯೩), *'ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್ : ಇನ್ ಎಮ್‌ಪೆರಿಕಲ್ ಸ್ಟಡಿ', ಜರ್ನಲ್ ಆಫ್ ಎಜುಕೇಷನಲ್ ಪ್ಲ್ಯಾನಿಂಗ್ ಅಂಡ್ ಆಡ್ಮಿನಿಸ್ಟ್ರೇಶನ್-೬.*

ಗೋವಿಂದ ಆರ್., (೧೯೯೭), ಡಿಸೆಂಟ್ರಲೈಜೆಷನ್ ಆಫ್ ಎಜುಕೇಷನಲ್ ಮ್ಯಾನೇಜ್‌ಮೆಂಟ್ ಎಕ್ಸ್‌ಪೀರಿಯನ್ಸ್ ಫ್ರಮ್ ಸೌತ್ ಏಷಿಯಾ, ಯು.ಎನ್.ಇ. ಎಸ್.ಸಿ.ಓ ; ಎನ್.ಐ.ಇ.ಪಿ.ಎ.

ಗೋವಿಂದ. ಆರ್., (೧೯೯೯), ಡೈನಾಮಿಕ್ಸ್ ಆಫ್ ಡಿಸೆಂಟ್ರಲೈಜಡ್ ಮೆನೆಜ್‌ಮೆಂಟ್ ಆಂಡ್ ಕಮ್ಯುನಿಟಿ ಎಮ್‌ಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್ : ಎ ಕಂಪ್ಯಾರಿಟೀವ್ ಎನಾಲಿಸಿಸ್ ಆಫ್ ಪಾಲಿಸಿ ಆಂಡ್ ಪ್ರಾಕ್ಟೀಸ್ ಇನ್ ಟು ಸ್ಟೇಟ್ಸ್ ಆಫ್ ಇಂಡಿಯಾ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲ್ಯಾನಿಂಗ್ ಆಂಡ್ ಅಡ್ಮಿಸ್ಟ್ರೇಶನ್, ನ್ಯೂ ಡೆಲ್ಲಿ.

ಗೋವಿಂದ. ಆರ್., (೨೦೦೨), ಇಂಡಿಯಾ ಎಜುಕೇಷನ್ ರಿಪೋರ್ಟ್, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

ಗೋವಿಂದ ಆರ್., (೨೦೦೨.ಬಿ), ಇಂಡಿಯಾ ಎಜುಕೇಶನ್ ರಿಪೋರ್ಟ್ : ಎ ಪ್ರೊಫೈಲ್ ಆಫ್ ಬೇಸಿಕ್ ಎಜುಕೇಷನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

ಗೋವಿಂದ ಆರ್., (೨೦೦೩.ಎ), ಕಮ್ಯೂನಿಟಿ ಪಾರ್ಟಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

ಗೋವಿಂದ ಆರ್., (೨೦೦೩.ಬಿ), ಡೈನಾಮಿಕ್ಸ್ ಆಫ್ ಡಿಸೆಂಟ್ರಲೈಜ್ಡ್ ಮ್ಯಾನೆಜ್‌ಮೆಂಟ್ ಇನ್ ಪ್ರೈಮರಿ ಎಜುಕೇಶನ್: ಪಾಲಿಸಿ ಆ್ಯಂಡ್ ಪ್ರಾಕ್ಟೀಸ್ ಇನ್ ರಾಜಸ್ಥಾನ್ ಆ್ಯಂಡ್ ಮಧ್ಯಪ್ರದೇಶ್, ಇನ್, ಗೋವಿಂದ ಆರ್., (ಎಡ್) *ಕಮ್ಯೂನಿಟಿ ಪಾರ್ಟಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್,* ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

ಗಂಗಾಧರಪ್ಪ ಎನ್.ಆರ್., (೨೦೦೪), ಶಿಕ್ಷಣದ ಮೂಲತತ್ವಗಳು, ರೇಖಾ ಪ್ರಕಾಶನ, ನಂ. ೧೨೭೫, ತರಳೂರು ಬಡಾವಣೆ, ದಾವಣಗೆರೆ

ಗಂಗಾಧರಪ್ಪ ಎನ್.ಆರ್., (೨೦೦೬), ಶಿಕ್ಷಣದ ಮೂಲತತ್ವಗಳು, ರೇಖಾ ಪ್ರಕಾಶನ, ತರಳಬಾಳು ಬಡಾವಣೆ, ದಾವಣಗೆರೆ.

ಚಾರುಗುಪ್ತ, (೨೦೦೭), *ದಲಿತ್ ವೈರಂಗಣಾಸ್ ಅಂಡ್ ರಿ ಇನ್‌ವೆನ್ಷನ್ ಆಫ್ ೧೮೫೭,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಚಿದ್ರೆ ಶಂಕರಯ್ಯ ಸ್ವಾಮಿ (೨೦೦೮), ಸಾಧಕ, ಅಭಿಂದನಾ ಗ್ರಂಥ, ಚಿದ್ರೆ ಶಂಕರಯ್ಯಸ್ವಾಮಿ ಅಭಿನಂದನಾ ಸಮಿತಿ, ಈಶಾನ್ಯ ವಲಯ ಗುಲಬರ್ಗಾ.

ಚಂದ್ರಪೂಜಾರಿ ಎಂ., (೨೦೦೨), ಸಮುದಾಯ ಮತ್ತು ಸಹಭಾಗಿತ್ವ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚಂದ್ರಪೂಜಾರಿ ಎಂ., (೨೦೦೫), ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಟಿ.ಆರ್., (೧೯೯೩), ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರ್ ಟಿ.ಆರ್., (೧೯೯೪), ಬಳ್ಳಾರಿ ಜಿಲ್ಲೆ ನಿಸರ್ಗ ಸಂಪತ್ತು, ಪ್ರಭು ಪ್ರಿಂಟಿಗ್ ಪ್ರೆಸ್, ಗದಗ

ಚಂದ್ರಶೇಖರ್ ಟಿ.ಆರ್., (೧೯೯೯), ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ಕ್ರೈಸ್ಟ್ ಕಾಲೇಜು, ಬೆಂಗಳೂರು

ಚಂದ್ರಶೇಖರ್ ಟಿ.ಆರ್., (೧೯೯೯), ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಬಿ.ಎಸ್., (೨೦೦೧), ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಟಿ.ಆರ್., (೨೦೦೩), ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿವಿಜಿ ಪ್ರಕಾಶನ, ಬೆಂಗಳೂರು.

ಚಂದ್ರಶೇಖರ್ ಟಿ.ಆರ್., (೨೦೦೪), ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕರಣ ರಾಜಕೀಯ ವೈಫಲ್ಯದ ಒಂದು ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಟಿ.ಆರ್. (೨೦೦೬), *ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ*, ಅಭಿವೃದ್ಧಿ ಅಧ್ಯಯನ *ಸಮಾಜ ವಿಜ್ಞಾನ ಪತ್ರಿಕೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಂದ್ರಶೇಖರ್ ಟಿ.ಆರ್. (೨೦೦೭), *ಕರ್ನಾಟಕದ ಪ್ರಾದೇಶಿಕ ಅಸಮಾನತೆ*, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ-೧, ಸಂ. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಚಂದ್ರಶೇಖರಯ್ಯ ಪಿ., (೨೦೦೭), ಶಿಕ್ಷಣ ದರ್ಶನ, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, ಬೆಂಗಳೂರು

ಚಂದ್ರಶೇಖರ್ ಟಿ.ಆರ್., (೨೦೦೮), ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಜನಾರ್ದನ (೨೦೦೩), *ಕರ್ನಾಟಕ ತಾಲ್ಲೂಕುವಾರು ಜನಸಂಖ್ಯೆ ಅಕ್ಷರಸ್ಥರು ಮತ್ತು ಸಾಕ್ಷರತೆ,* ಅಭಿವೃದ್ಧಿ ಅಧ್ಯಯನ *ಸಮಾಜ ವಿಜ್ಞಾನ ಪತ್ರಿಕೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಜನದ್ಯಾಲ ಬಿ.ಬಿ. ತಿಲಕ್, (೨೦೦೪), *ಎಜ್ಯುಕೇಷನ್ ಇನ್ ದ ಯು.ಪಿ.ಎ. ಗೌರ್ನಮೆಂಟ್* ಕಾಮನ್ *ಮಿನಿಮಮ್ ಪ್ರೋಗ್ರಾಮ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಅಕ್ಟೋಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಜಯಕುಮಾರ ಅನಗೋಳ್ (ಕನ್ನಡಕ್ಕೆ), (೧೯೮೬), **ಭಾರತೀಯ ಶಿಕ್ಷಣದಲ್ಲಿ ಸಮಾನತೆ, ಗುಣ ಮತ್ತು ಪರಿಮಾಣ,** ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು

ಜಯಣ್ಣ ಸಿ.ವಿ., (೨೦೦೫), **ಉದಯೋನ್ಮುಖ ಭಾರತದಲ್ಲಿ ಶಿಕ್ಷಣ,** ಸ್ವಪ್ನ ಬುಕ್‌ಹೌಸ್, ಗಾಂಧಿನಗರ, ಬೆಂಗಳೂರು

ಜೋಸೆಫ್ ಎ. ಥಾಮಸ್., (೨೦೦೦), *ಡೈನಮಿಕ್ಸ್ ಆಫ್ ಎಜುಕೇಷನಲ್ ಡೆವಲಪ್‌ಮೆಂಟ್ : ಎ ಕೇಸ್ ಸ್ಟಡಿ ಆಫ್ ಸೆಲೆಕ್ಟೆಡ್ ಬ್ಯಾಕ್‌ವರ್ಡ್ ವಿಲೇಜಸ್ಸ್,* ಇನ್ ಕೇರಳ, ಇನ್, ವೈಧ್ಯನಾಥನ್ ಎ. ಆ್ಯಂಡ್ ಪಿ.ಆರ್.ಜಿ. ನಾಯರ್ (ಎಡ್) **ಎಲಿಮೆಂಟರಿ ಎಜುಕೇಶನ್ ಇನ್ ರೂರಲ್ ಇಂಡಿಯಾ : ಎ ಗ್ರಾಸ್ ರೂಟ್ಸ್ ವ್ಯೂ,** ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ

ಡ್ರೀಜ್ ಜೀನ್ ಅಂಡ್ ಸೆನ್ ಅಮರ್ತ್ಯ, (೧೯೯೫.ಎ), **ಇಂಡಿಯಾ : ಎಕನಾಮಿಕ್ ಡೆವಲಪ್‌ಮೆಂಟ್ ಅಂಡ್ ಸೋಶಿಯಲ್ ಅಪರ್‌ಚ್ಯುನಿಟಿ,** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ.

ಡ್ರೀಜ್ ಜೀನ್, ಅಂಡ್ ಸೆನ್ ಅಮರ್ತ್ಯ, (೧೯೯೫.ಬಿ), **ಬೇಸಿಕ್ ಎಜುಕೇಷನ್ ಆಸ್ ಎ ಪೊಲಿಟಿಕಲ್ ಇಶ್ಯು,** ಜರ್ನಲ್ ಆಫ್ ಎಜುಕೇಷನ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶರ್ನ್.

ಡ್ರೀಜ್ ಜೀನ್ ಆ್ಯಂಡ್ ಸೇನ್ ಅಮರ್ತ್ಯ, (೧೯೯೫.ಸಿ), **ಇಂಡಿಯಾ : ಎಕನಾಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಶಿಯಲ್ ಆಪರ್ಚುನಿಟಿ,** ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

ಡ್ರೀಜ್ ಜೀನ್ ಮತ್ತು ಅಮರ್ತ್ಯ ಸೆನ್, (೨೦೦೧), **ಇಂಡಿಯಾ ಡೆವಲಪ್‌ಮೆಂಟ್ಸ್ ಅಂಡ್ ಪಾರ್ಟಿಸಿಪೇಷನ್,** ಆಕ್ಸ್‌ಫರ್ಡ್ ಯೂನಿವರ್ಸಿಟಿ, ನ್ಯೂ ಡೆಲ್ಲಿ.

ಡ್ರೀಜ್ ಜೀನ್ ಆ್ಯಂಡ್ ಕಿಂಗ್‌ಡಂ, ಗೀತಾ ಗಾಂಧಿ, (೨೦೦೧), **ಸ್ಕೂಲ್ ಪಾರ್ಟಿಸಿಪೇಶನ್ ಇನ್ ರೂರಲ್ ಇಂಡಿಯಾ,** *ರಿವ್ಯೂ ಆಫ್ ಡೆವಲಪ್‌ಮೆಂಟ್ ಎಕನಾಮಿಕ್ಸ್, ೫.*

ದಾಸ್‌ಗುಪ್ತ ಆರ್.ಕೆ., (೨೦೦೦), *ಶಿಕ್ಷಣ ಮತ್ತು ಜನಸಂಖ್ಯೆ,* **ಯೋಜನಾ ಅಭ್ಯುದಯ ಮಾಸಪತ್ರಿಕೆ,** (ಆಗಸ್ಟ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ನಾಗರಾಜು ಟಿ., (೨೦೦೫), ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ, ಚೇತನ ಬುಕ್ ಹೌಸ್, ಮೈಸೂರು.

ನಾಗರಾಜ ಹಬ್ಬು, (೨೦೦೬), *ಬಡಮಕ್ಕಳಿಗೆ ಆಶಾದೀಪವಾದ ಸಮುದಾಯದ ವಸತಿನಿಲಯ,* ಸಾಲುಹೆಜ್ಜೆ. ಕನ್ನಡ ಮಾಸಪತ್ರಿಕೆ, ಸಂ. ೨, ಸಂಚಿಕೆ ೮ (ಅಕ್ಟೋಬರ್), ಜಯನಗರ, ಮೈಸೂರು.

ನಾಗೂರ ಎನ್.ಎಚ್., (೨೦೦೭), *ಕೆ.ಜಿ.ಬಿ.ವಿ. ಶಾಲೆಗಳು,* ಟೀಚರ್ ಶೈಕ್ಷಣಿಕ ಮಾಸಪತ್ರಿಕೆ (ಏಪ್ರಿಲ್ ೧೪). ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ನಾಯರ್ ಪಿ.ಆರ್.ಜಿ., (೧೯೮೧), ಪ್ರೈಮರಿ ಎಜುಕೇಷನ್ ಪಾಪುಲೇಷನ್ ಗ್ರೋತ್ ಅಂಡ್ ಸೋಶಿಯಲ್ ಎಕನಾಮಿಕ್ ಚೇಂಜ್ ಎ ಕಂಪ್ಯಾರಿಟೀವ್ ಸ್ಟಡಿ ವಿತ್ ಪರ್ಟಿಕ್ಯುಲರ್ ರೆಫರೆನ್ಸ್ ಟು ಕೇರಳ, ಅಲೈಡ್, ನ್ಯೂ ಡೆಲ್ಲಿ.

ನಾಯರ್ ಕೆ.ಎನ್., ಶಿವಾನಂದನ್ ಪಿ., ಅಂಡ್ ರೆತ್ನಾಮ್ ವಿ.ಸಿ.ವಿ., (೧೯೮೪), *ಎಜುಕೇಷನ್, ಎಂಪ್ಲಾಯ್‌ಮೆಂಟ್ ಆಂಡ್ ಲ್ಯಾಂಡ್ ಹೋಲ್ಡಿಂಗ್ ಪ್ಯಾಟ್ರನ್ ಇನ್ ಎ ತಮಿಳ್ ವಿಲೇಜ್, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* (೧೬-೨೩ ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ನಾಯಕ್ ಜೆ.ಪಿ., (೧೯೯೦), ಭಾರತದಲ್ಲಿ ಪ್ರಾಥಮಿಕ ಶಿಕ್ಷಣ, ಗೀತಾ ಬುಕ್ ಹೌಸ್, ಮೈಸೂರು.

ನ್ಯಾಷನಲ್ ಲಿಟ್ರೆಸಿ ಮಿಷನ್, (೧೯೯೪), ಆನ್ಯೂಯಲ್ ರಿಪೋರ್ಟ್ ೧೯೯೩-೯೪ ಲಿಟ್ರೆಸಿ ಆ್ಯಂಡ್ ಪೋಸ್ಟ್ ಲಿಟ್ರೆಸಿ ಕ್ಯಾಂಪೆನ್ಸ್ ಇನ್ ಇಂಡಿಯಾ, ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಷನ್, ನ್ಯೂ ಡೆಲ್ಲಿ.

ನ್ಯಾಷನಲ್ ಲಿಟ್ರೆಸಿ ಮಿಷನ್, (೨೦೦೦), ಲಿಟ್ರೆಸಿ ರೇಟ್ಸ್ : ಆ್ಯನ್ ಅನಾಲಿಸಿಸ್ ಬೇಸ್ಡ್ ಆನ್ ದಿ ಎನ್.ಎಸ್.ಎಸ್.ಓ. ಸರ್ವೇ, ೧೯೯೮, ಡೈರೆಕ್ಟರೇಟ್ ಆಫ್ ಅಡಲ್ಟ್ ಎಜುಕೇಶನ್, ನ್ಯೂ ಡೆಲ್ಲಿ.

ನಿರಂಕರ್ ಶ್ರೀವಾಸ್ತವ ಮತ್ತು ಅಮರೇಶ್ ದುಬೆ, (೨೦೦೭), *ಎಲಿಮೆಂಟರಿ ಎಜ್ಯುಕೇಶನ್ ಪಾವರ್ಟಿ ಅಂಡ್ ಜಂಡರ್ ಡಿಫರೆನ್ಸಿಯಲ್ಸ್ ಇನ್ ನಾರ್ತ್ ಈಸ್ಟ್ ಇಂಡಿಯಾ : ಸಮ್ ಇಶ್ಯೂಸ್, ಎಜ್ಯುಕೇಶನ್ ಫ್ಲಾನಿಂಗ್ ಅಂಡ್ ಅಡ್ಮನಿಸ್ಟ್ರೇಶನ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜುಲೈ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ನಿರಂಜನಾರಾಧ್ಯ ವಿ.ಪಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ : ಕರ್ನಾಟಕದ ಅನುಭವಗಳು,* ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ನೀರಾ ಬುರ್ರಾ, (೨೦೦೧), *ಕಲ್ಚರಲ್ ಸ್ಟೀರಿಯೋ ಟೈಪ್ಸ್ ಅಂಡ್ ಹೌಸ್ ಹೋಲ್ಡ್ ಬಿಹೇವಿಯರ್, ಗರ್ಲ್ ಚೈಲ್ಡ್ ಲೇಬರ್ ಇನ್ ಇಂಡಿಯಾ,* **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಫೆಬ್ರವರಿ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ನಂಜುಂಡಪ್ಪ ಡಿ.ಎಂ., ಆ್ಯಂಡ್ ಅದರ್‍ಸ್., (೨೦೦೨), **ಹೈಪವರ್ ಕಮಿಟಿ, ಫಾರ್ ರೀ ಅಡ್ರೆಸಲ್ ಆಫ್ ರೀಜಿನಲ್ ಇಮ್‌ಬ್ಯಾಲನ್ಸ್,** (ಎಚ್.ಪಿ.ಸಿ.ಎಫ್.ಆರ್.ಆರ್.ಐ)ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು.

ನಂಜುಂಡ ಸ್ವಾಮಿ ಎಂ., (೨೦೦೬), *ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು,* **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಏಪ್ರಿಲ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ನಂಬಿಸನ್, ಗೀತ ಬಿ., (೧೯೯೬), **ಈಕ್ವಿಟಿ ಇನ್ ಎಜುಕೇಶನ್ : ದಿ ಸ್ಕೂಲಿಂಗ್ ಆಫ್ ಡಿಲಿಟ್ ಚಿಲ್ಡ್ರನ್,** ಡಿಸ್‌ಕಷನ್ ಪೇಪರ್-೧೫, ಸ್ಟಡೀಸ್ ಆನ್ ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯಾ, ಯು.ಎನ್.ಡಿ.ಪಿ, ನ್ಯೂ ಡೆಲ್ಲಿ.

ಪದ್ಮ ಎಂ. ಸಾರಂಗ ಪಾಣಿ, (೨೦೦೩), *ಕನ್‌ಸ್ಟ್ರಕ್ಟಿಂಗ್ ಸ್ಕೂಲ್ ನಾಲೆಡ್ಜ್ ಆ್ಯನ್ ಎತ್ನಾಗ್ರಫಿ ಆಫ್ ಲರ್ನಿಂಗ್ ಇನ್ ಆ್ಯನ್ ಇಂಡಿಯನ್ ವಿಲೇಜ್,* **ಸೇಜ್** ಪಬ್ಲಿಕೇಶನ್ಸ್, ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬಿ. ೪೨, ಪಂಚಶೀಲ ಎನ್‌ಕ್ಲೇವ್, ನವದೆಹಲಿ.

ಪರ್ಜಾನ ಅಫ್ರಿದಿ, *ಮಿಡ್ ಡೇ ಮಿಲ್ಸ್ ಇನ್ ಟು ಸ್ಟೇಟ್ಸ್ ಕನ್‌ಫರ್‌ಮಿಂಗ್ ದ ಫೈನಾನ್ಸಿಯಲ್ ಇನ್‌ಸ್ಟಿಟೂಷನಲ್ ಆರ್ಗನೈಜೇಷನ್ ಆಫ್ ಪ್ರೋಗ್ರಾಮ್,* (೨೦೦೫), **ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ** (ಏಪ್ರಿಲ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಪದ್ಮಪ್ರಸಾದ್ ಎಸ್.ಪಿ., (೨೦೦೬), **ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು,** ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಬೆಂಗಳೂರು

ಪದ್ಮಾರಾಮಚಂದ್ರನ್ ಮತ್ತು ವಸಂತ ಕುಮಾರ್, (೨೦೦೫), ಎಜ್ಯುಕೇಶನ್ ಇನ್ ಇಂಡಿಯಾ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನ್ಯೂಡೆಲ್ಲಿ.

ಪರಮೇಶ್ವರಯ್ಯ ಸೊಪ್ಪಿನ ಮಠ, (೨೦೦೬), *ಪ್ರಾಥಮಿಕ ಶಿಕ್ಷಣದತ್ತ ಹಂಪಿ ಕನ್ನಡ ವಿಶ್ವವಿದ್ಯಾಲಯ, ಒಂದು ವರದಿ,* ***ಟೀಚರ್ ಶೈಕ್ಷಣಿಕ ಮಾಸಪತ್ರಿಕೆ*** (ಅಕ್ಟೋಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

ಪಾರ್ವತಮ್ಮ ಸಿ., (೨೦೦೨), ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪಾರ್ವತಿ ಪಿ.ಎನ್., (೨೦೦೬), *ಪರಿಸರ ಬದಲಾವಣೆಗಾಗಿ ಸ್ವಚ್ಛ ಶಾಲೆ,* ಯೋಜನಾ ಅಭ್ಯುದಯ ಮಾಸಪತ್ರಿಕೆ, (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಪುಟ್ಟಯ್ಯ ಬಿ.ಎಂ., (೨೦೦೮), ದಲಿತರು ಮತ್ತು ಭೂಮಿಯ ಪ್ರಶ್ನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪೂನಂ ಬಟ್ರಾ, (೨೦೦೫), *ವಾಯ್ಸ್ ಅಂಡ್ ಏಜನ್ಸಿ ಆಫ್ ಟೀಚರ್ಸ್ ಮಿಸ್‌ಲಿಂಕ್ ಇನ್ ನ್ಯಾಷನಲ್ ಕರಿಕ್ಯುಲಂ ಫ್ರೆಂ-ವರ್ಕ್ಸ್ ೨೦೦೫,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಅಕ್ಟೋಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಪಾಂಡುರಂಗ ಬಾಬು, (೨೦೦೬), *ದಲಿತರು ಭಾಷೆ ಮತ್ತು ಶಿಕ್ಷಣ,* ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೪), ಶಾಲಾ ಬಿಸಿಯೂಟ ಅಧ್ಯಯನ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), *ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ,* ಅಭಿವೃದ್ಧಿ ಅಧ್ಯಯನ *ಸಮಾಜ ವಿಜ್ಞಾನ ಪತ್ರಿಕೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೫), *ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರೊಂದಿಗೆ ಸಂವಾದ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), ಶಾಲಾ ಶಿಕ್ಷಣದ ವಿಕೇಂದ್ರೀಕರಣ ಎಸ್.ಡಿ.ಎಂ.ಸಿ. ಕಾರ್ಯಕ್ಷಮತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), *ಹೆಣ್ಣುಮಕ್ಕಳ ಶಿಕ್ಷಣ : ಒಂದು ಸ್ಥೂಲನೋಟ,* ಅಭಿವೃದ್ಧಿ ಅಧ್ಯಯನ *ಸಮಾಜ ವಿಜ್ಞಾನ ಪತ್ರಿಕೆ, ಸಂ.೫,* ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ. (ಸಂ.), (೨೦೦೬), *ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ನಡುವೆ ಭಿನ್ನಮತ-ಅಪನಂಬಿಕೆ-ಗೊಂದಲ-ಅಸಹಕಾರ,* ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಸಂ.೫, ಸಂಚಿಕೆ ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೬), ಹೈದ್ರಾಬಾದ್ ಕರ್ನಾಟಕದಲ್ಲಿ : ಶಾಲಾ ಶಿಕ್ಷಣ ಸಾರ್ವತ್ರೀಕರಣದ ಅನುಭವಗಳು, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಗತಿಶೀಲತೆ, ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ (ಆಗಸ್ಟ್), ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣ*, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೭), *ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು : ಸಾಧನೆ-ಸವಾಲು-ಸಾಧ್ಯತೆ*, ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ, (ಜನವರಿ-ಜೂನ್), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಪ್ರಶಾಂತ್ ಎಚ್.ಡಿ., (೨೦೦೮), *ಗುಣಾತ್ಮಕ ಶಾಲಾ ಶಿಕ್ಷಣ : ಸಮುದಾಯದ ಸಹಭಾಗಿತ್ವ ಕರ್ನಾಟಕದಲ್ಲಿ ಗ್ರಾಮಪಂಚಾಯಿತಿಯ ನಾಗರೀಕ ಸೌಲಭ್ಯ ಸಮಿತಿ ಸದಸ್ಯರಿಗೆ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ತರಬೇತಿ ನೀಡುವ ಸಂಪನ್ಮೂಲವ್ಯಕ್ತಿಗಳಿಗೆ ಮತ್ತು ಸದಸ್ಯರಿಗೆ ರೂಪಿಸಿದ ತರಬೇತಿ ಸಾಹಿತ್ಯ*, ಕರ್ನಾಟಕ ಸರ್ಕಾರ ಸರ್ವಶಿಕ್ಷಣ ಅಭಿಯಾನ, ಕರ್ನಾಟಕ.

ಪ್ರಶಾಂತ್ ಎಚ್.ಡಿ., (೨೦೦೯), *ಶಾಲಾ ಶಿಕ್ಷಣದ ಸಾರ್ವತ್ರೀಕರಣದ : ದಲಿತ ಮಕ್ಕಳ ಸ್ಥಿತಿ*, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು.

ಪ್ರಶಾಂತ್ ಎಚ್.ಡಿ., (೨೦೦೯), ಪರ್ಯಾಯ ಅಭಿವೃದ್ಧಿ ನಾವೇನು ಮಾಡಬಹುದು,: ಜನವರಿ ೨೦೦೯ರಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಕುರಿತು ಕಾಲೇಜು ಅಧ್ಯಾಪಕರಿಗೆ ಸಂಘಟಿಸಿದ ರಾಜ್ಯಮಟ್ಟದ ಎರಡು ದಿನಗಳ ಕಾರ್ಯಗಾರದಲ್ಲಿ ಮಂಡಿಸಿದ ಲೇಖನ (ಅಪ್ರಕಟಿತ).

ಬಳ್ಳಾರಿ ಜಿಲ್ಲೆಯ ಅಂಕಿ-ಅಂಶಗಳ ನೋಟ (೨೦೦೨-೦೩), ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ಬಳ್ಳಾರಿ.

ಬಂಡಾರಿ ನಾರಾಯಣ ತಿವಾರಿ, (೨೦೦೭), *ರಿ ಆ್ಯಕ್ಟಿ ವೇಟಿಂಗ್ ದಿ ಪಾಸ್ಟ್, ದಲಿತ್ಸ್ ಅಂಡ್ ಮೆಮೋರಿಸ್ ಆಫ್ ೧೮೫೭*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಮೇ ೧೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಮಧುಮಿತ ಬಂಡೋಪಾಧ್ಯಾಯ, (೨೦೦೬), *ಎಜ್ಯುಕೇಶನ್ ಆಫ್ ಮಾರ್ಜಿನಲೈಸ್ಡ್ ಗ್ರೂಪ್ ಇನ್ ಇಂಡಿಯಾ, ಸೋಷಿಯಲ್ ಚೇಂಜ್*, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಮಧು ಎಸ್. ಪರಂಜಪೆ, (೨೦೦೭), *ಅನ್ ಈವನ್ ಡಿಸ್ಟ್ರಿಬ್ಯೂಶನ್ ಆಫ್ ಎಜ್ಯುಕೇಶನ್ ಇನ್ ಮಹಾರಾಷ್ಟ್ರ ರೂರಲ್, ಅರ್ಬನ್, ಜಂಡರ್ ಅಂಡ್ ಕ್ಯಾಸ್ಟ್ ಇನ್ ಈಕ್ವಾಲಿಟೀಸ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜನವರಿ), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಮಹಾಬಲೇಶ್ವರ ರಾವ್, (೧೯೯೨), ಬಹುಮುಖಿ ಶಿಕ್ಷಣ, ಎಸ್.ಬಿ.ಎಸ್. ಪಬ್ಲಿಷರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲರ್ ರೋಡ್, ಬೆಂಗಳೂರು

ರಜನಿಕಾಂತ್ ಎಂ.ಎಸ್., (೨೦೦೬), *ಮಕ್ಕಳ ಹಕ್ಕುಗಳು ಸ್ಥಿತಿಗತಿ,* ಯೋಜನಾ ಅಭ್ಯುದಯ ಮಾಸಪತ್ರಿಕೆ (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ರತನ್ ಖಾಸ್ ನಬೀಸ್, ತಾನಿಯಾ ಚಟರ್ಜಿ, (೨೦೦೭), *ಎನ್‌ರೋಲಿಂಗ್ ಅಂಡ್ ರಿಟೈನಿಂಗ್ ಸ್ಲಮ್ ಚಿಲ್ಡ್ರನ್ ಇನ್ ಫಾರ್ಮಲ್ ಎಜ್ಯುಕೇಷನ್, ಎ ಫೀಲ್ಡ್ ಸರ್ವೇ ಇನ್ ಈಸ್ಟರ್ನ್* ಸ್ಲಮ್ಸ್ ಆಫ್ ಕೋಲ್ಕತ್ತಾ, ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜೂನ್ ೨), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ರಿತೀಕ್ ಖೇರ, (೨೦೦೬), *ಮಿಡ್‌ಡೇ ಮೀಲ್ಸ್ ಇನ್ ಪ್ರೈಮರಿ ಸ್ಕೂಲ್ ಅಚೀವ್‌ಮೆಂಟ್ಸ್ ಅಂಡ್ ಚಾಲೆಂಜಸ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ನವೆಂಬರ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ರುಕ್ಮಿಣಿ ಬ್ಯಾನರ್ಜಿ, (೧೯೯೭), *ವೈಡೋಂಟ್ ಚಿಲ್ಡ್ರನ್ ಕಂಪ್ಲೀಟ್ ಪ್ರೈಮರಿ ಸ್ಕೂಲ್? ಎ ಕೇಸ್ ಸ್ಟಡಿ ಆಫ್ ಲೋ ಇನ್‌ಕಂ ನೈಬರ್‌ಹುಡ್ ಇನ್ ದೆಹಲಿ,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ರುಕ್ಮಿಣಿ ಬ್ಯಾನರ್ಜಿ, (೨೦೦೦), *ಪಾವರ್ಟಿ ಅಂಡ್ ಪ್ರೈಮರಿ ಸ್ಕೂಲಿಂಗ್ ಫೀಲ್ಡ್ ಸ್ಟಡೀಸ್ ಫ್ರಮ್ ಮುಂಬೈ ಅಂಡ್ ದೆಹಲಿ,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಮಾರ್ಚ್ ೪), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ರೇಖಾ ಕೌಲ್., (೧೯೯೩), ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಷನ್, ಸೇಜ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ.

ರೇಖಾ ಕೌಲ್, (೨೦೦೧), *ಅಸೆಸಿಂಗ್ ಪ್ರೈಮರಿ ಎಜುಕೇಶನ್ ಗೋಯಿಂಗ್ ಬಿಯಾಡ್ ದಿ ಕ್ಲಾಸ್‌ರೂಂ,* ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ (ಜನವರಿ ೧೩), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ರೇಖಾ ವಾಜೀರ್, (೨೦೦೧), ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜ್ಯುಕೇಷನ್, ಎನ್‌ಜಿಒ ಆಸ್ ಚೇಂಜ್ ಎಜೆನ್ಸಿ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

ರೋಹಿಡೇಕರ್ ಎಸ್.ಆರ್., (೧೯೯೫), ೨೧ನೇ ಶತಮಾನಕ್ಕಾಗಿ ಶಿಕ್ಷಣದ ಉದ್ದೇಶಗಳು, ಕರ್ನಾಟಕ ಎಜ್ಯುಕೇಷನ್ ಬೋರ್ಡ್, ಧಾರವಾಡ.

ಲಕ್ಷ್ಮಣ್ ತೆಲಗಾವಿ, ಬಿ.ಎಂ. ಪುಟ್ಟಯ್ಯ ಮತ್ತು ಚಂದ್ರಶೇಖರ ಟಿ.ಆರ್., (೨೦೦೫), *ದಲಿತ ಚಳುವಳಿಗಳು ದಲಿತರ ಮೇಲಿನ ದೌರ್ಜನ್ಯಗಳು ಮತ್ತು ಇತರೆ ಚಳುವಳಿಗಳು,* ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಲಕ್ಷ್ಮಣ್ ತೆಲಗಾವಿ, (೨೦೦೭), *ಕರ್ನಾಟಕದ ದಲಿತ ಚಳುವಳಿ,* ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಲಿಥಿನ್ ಜಿ.ಕೆ., (೨೦೦೦), *'ಚಿಲ್ಡ್ರನ್ ವರ್ಕ್ಸ್ ಅಂಡ್ ಎಜುಕೇಷನ್',* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಜೂನ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಲೈಟನ್ ಜಿ.ಕೆ., (೨೦೦೦), *ಚಿಲ್ಡ್ರನ್ ವರ್ಕ್ ಅಂಡ್ ಎಜ್ಯುಕೇಷನ್-೧ ಜನರಲ್ ಫ್ಯಾರ್ ಮೀಟರ್ಸ್,* ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ವಾಸವಿ ಎ.ಆರ್, (೨೦೦೦), ಎಕ್ಸ್‌ಕ್ಲೂಷನ್, ಎಲಿಮಿನೇಷನ್ ಆ್ಯಂಡ್ ಆಪರ್ಚುನಿಟಿ ಪ್ರೈಮರಿ ಸ್ಕೂಲ್ಸ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು

ವಾಸವಿ ಎ.ಆರ್., (೨೦೦೦), ಎಕ್ಸ್‌ಕ್ಲೂಷನ್ ಎಲಿಮಿನೇಷನ್ ಆ್ಯಂಡ್ ಅಪರ್ಚುನಿಟೀಸ್ : ಪ್ರೈಮರಿ ಸ್ಕೂಲ್ಸ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ, ಡ್ರಾಫ್ಟ್ ರಿಪೋರ್ಟ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್, ಬೆಂಗಳೂರು

ವಿಲ್‌ಫ್ರೆಡ್ ಡಿಸೋಜ, (೨೦೦೬), *ರೈತರಿಗೆ ಆಸೆ ಕಂಪನಿಗಳಿಗೆ ಲಾಭದ ದಾಹ, ಶಿಕ್ಷಣದಿಂದ ವಂಚಿತರಾಗುತ್ತಿರುವ ಕಂದಮ್ಮಗಳು,* ಸಾಲುಹೆಜ್ಜೆ, ಕನ್ನಡ ಮಾಸಿಕಪತ್ರಿಕೆ, ಸಂಪುಟ ೨, ಸಂಚಿಕೆ ೯, (ನವೆಂಬರ್), ಜಯನಗರ, ಮೈಸೂರು.

ವಿಜಯ ಭಾಸ್ಕರ್ ತ.ಮ., (೨೦೦೭), *ಕಟ್ಟಕಡೆಯ ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು.* ಟೀಚರ್ ಶೈಕ್ಷಣಿಕ ಮಾಸಪತ್ರಿಕೆ (ಡಿಸೆಂಬರ್), ಭಾರತ ಜ್ಞಾನ ವಿಜ್ಞಾನ ಸಮಿತಿ, ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ, ಬೆಂಗಳೂರು.

ವೇಣುಗೋಪಾಲರಾವ್ ಎ.ಎಸ್., (೨೦೦೦), *ದಲಿತ ಪ್ರಜ್ಞೆ ಚಿಂತನೆಯ ಭಿನ್ನ ಆಯಾಮಗಳು*, ದಲಿತಜ್ಞ, ದಲಿತ ಸಾಹಿತ್ಯ ಪರಿಷತ್, ಗದಗ.

ವೈದ್ಯನಾಥನ್.ಎ. ಆ್ಯಂಡ್ ಪಿ.ಆರ್.ಜಿ. ನಾಯರ್ (೨೦೦೦), ಎಲಿಮೆಂಟರಿ ಎಜ್ಯುಕೇಷನ್ ಇನ್ ರೂರಲ್ ಇಂಡಿಯಾ: ಎ ಗ್ರಾಸ್ ರೂಟ್ಸ್ ವ್ಯೂ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ

ವೈದ್ಯನಾಥ ಮಿಶ್ರ, (೨೦೦೦), *ಶಿಕ್ಷಣದಲ್ಲಿ ಸಂಸ್ಕೃತಿ ಗಾಂಧಿ ವಿಚಾರಧಾರೆ*, ಯೋಜನಾ ಅಭ್ಯುದಯ ಮಾಸಪತ್ರಿಕೆ (ಅಕ್ಟೋಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ವೆಂಕಟೇಶ್ ಟಿ., (೨೦೦೭), *ಸರ್ವರಿಗೂ ಶಿಕ್ಷಣ ಗುರಿ ಸಾಧನೆಗೆ ಐ.ಸಿ.ಟಿ.*, ಯೋಜನಾ ಅಭ್ಯುದಯ ಮಾಸಪತ್ರಿಕೆ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಶರ್ಮ, ಕೆ.ಎಸ್., (೨೦೦೦), ಜನತೆಗಾಗಿ ಶೈಕ್ಷಣಿಕ ಪ್ರಕ್ರಿಯೆ : ಸಹಸ್ರಮಾನದ ಒಂದು ಸವಾಲು, ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ

ಶಾರದ ಜೈನ್, ಅಲೋಕ್ ಮತೂರ್, ಶೋಭಿತ ರಾಜ ಗೋಪಾಲ್ ಜ್ಯೂಹಿಪಾ, (೧೯೯೯), ಚಿಲ್ಡ್ರನ್ ವರ್ಕ್ಸ್ ಅಂಡ್ ಎಜ್ಯುಕೇಶನ್, ರಿಥಿಂಕಿಂಗ್ ಆನ್ ಔಟ್ ಆಫ್ ಸ್ಕೂಲ್ ಚಿಲ್ಡ್ರನ್, ಇಂಡಿಯಾ ಎಜ್ಯುಕೇಶನ್ ರಿಪೋರ್ಟ್, ಡಿಪಾರ್ಟ್‌ಮೆಂಟ್ ಆಫ್ ಎಜ್ಯುಕೇಶನ್.

ಶಾರದ ಕೆ.ಎಸ್., (೨೦೦೭), *ವಯಸ್ಕರ ಶಿಕ್ಷಣ-ಸಾಕ್ಷರತಾ ಆಂದೋಲನ*, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು. ಹಿ.ಚಿ. ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಶಿವರಾಜ ಬಿ.ಕೆ. ಮತ್ತು ವಿಠೋಬ ಭೀಮಣ್ಣ, (೨೦೦೫), *ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ*, ಸಂವಾದ ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ಬೆಂಗಳೂರು

ಶೈಲಜಾ ಎಂ.ಸಿ., (೨೦೦೬), *ಕೇರಳದ ಮಹಿಳೆಯರ ಸ್ಥಿತಿಗತಿ ಒಂದು ಅಲೋಕನ*, ಸಾಲುಹೆಜ್ಜೆ, ಕನ್ನಡ ಮಾಸಿಕಪತ್ರಿಕೆ, ಸಂಪುಟ ೨, ಸಂಚಿಕೆ ೪ (ಜೂನ್), ಜಯನಗರ, ಮೈಸೂರು.

ಶಾಂತಾ ಸಿನ್ಹ, ಕನ್ನಡಕ್ಕೆ ಜಿ.ಡಿ. ಪಾಟೀಲ, (೨೦೦೬), *ಶಾಲೆಗಳಿಗಾಗಿ ಸಮಗ್ರ ಶಿಕ್ಷಣ ಹಕ್ಕಿಗಾಗಿ ಬಡವರ ಹೋರಾಟ*, ಯೋಜನಾ ಅಭ್ಯುದಯ ಮಾಸಪತ್ರಿಕೆ (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಶ್ರೀವಾಸ್ತವ, (೧೯೯೭), ಅಸೆಸ್ ಟು ಬೇಸಿಗ್ ಎಜ್ಯುಕೇಷನ್ ಇನ್ ಉತ್ತರ ಪ್ರದೇಶ ರಿಜಲ್ಟ್ ಫ್ರಮ್ ಫೀಲ್ಡ್ ಸರ್ವೇ, ಪ್ರಾಜೆಕ್ಟ್ ಆನ್ ಸ್ಟ್ರೆಟಜೀಸ್ ಅಂಡ್ ಫೈನಾನ್‌ಸಿಂಗ್ ಫಾರ್ ಹ್ಯೂಮನ್ ಡೆವಲಪ್‌ಮೆಂಟ್, ಯು.ಎನ್.ಡಿ.ಪಿ., ನ್ಯೂಡೆಲ್ಲಿ.

ಶ್ರೀವಾತ್ಸವ, ರವಿ, (೨೦೦೧ ಎ), ಇನ್ ಇಕ್ವ್ಯಾಲಿಟಿ ಆ್ಯಂಡ್ ಎಜ್ಯುಕೇಷನಲ್ ಸೆಕ್ಯೂರಿಟಿ, ಇನ್ ಮಹೇಂದ್ರ ದೇವ್ ಎಟ್ ಆಲ್.

ಶ್ರೀವಾತ್ಸವ, ರವಿ, (೨೦೦೧ ಬಿ), **ಅಸೆಸ್ ಟು ಬೇಸಿಕ್ ಎಜುಕೇಷನ್ ಇನ್ ರೂರಲ್ ಉತ್ತರ ಪ್ರದೇಶ್**, ಇನ್ ವೈಧ್ಯನಾಥನ್ ಆ್ಯಂಡ್ ನಾಯರ್.

ಸವಿತಾ ಕೆ., (೨೦೦೭), *ಬಳ್ಳಾರಿ ಜಿಲ್ಲಾ ಗ್ರಾಮವಾರು ಸಾಕ್ಷರತೆ ೨೦೦೫*, ಅಭಿವೃದ್ಧಿ ಅಧ್ಯಯನ, **ಸಮಾಜ ವಿಜ್ಞಾನಗಳ ಪತ್ರಿಕೆ (ಜನವರಿ-ಜೂನ್)**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಸೆನ್ಸಸ್ ಆಫ್ ಇಂಡಿಯಾ (೨೦೦೧), ಡಿಸ್ಟ್ರಿಕ್ಟ್ ಪಾಪ್ಯುಲೇಶನ್ ಬುಕ್‌ಲೆಟ್, ಬಳ್ಳಾರಿ.

ಸೂರ್ಯನಾತ್ ಯು ಕಾಮತ್, (೧೯೮೭), ಮೈಸೂರು ಗೆಜೆಟಿಯರ್ ಭಾಗ-೩, ವಿ.ವಿ. ಸುಬ್ಬಯ್ಯ ಅಂಡ್ ಸನ್ಸ್, ಬೆಂಗಳೂರು.

ಸಂಜಯ್ ಕುಮಾರ್, ಬಿ.ಜೆ. ಕೊಪ್ಪರ್, ಎಸ್. ಬಾಲಸುಬ್ರಮಣಿಯನ್, (೨೦೦೩), *ಪ್ರೈಮರಿ ಎಜ್ಯುಕೇಶನ್ ಇನ್ ರೂರಲ್ ಏರಿಯಾಸ್*, **ಎನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ**, (ಆಗಸ್ಟ್), ಹಿತಕಾರಿ ಹೌಸ್, ಶಾಹಿದ್ ಭಗತ್‌ಸಿಂಗ್ ರೋಡ್, ಮುಂಬೈ.

ಸುಂದರ ಕೇನಾಜಿ, ಮಂಡೆಕೋಲು, ೨೦೦೬, *ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶಿಕ್ಷಣ ಪೋಷಕರು ಎಡವಿರುವುದು ಎಲ್ಲಿ*, **ಹೊನ್ನಾರು** ಮಾಸಪತ್ರಿಕೆ, ಸಂ. ೩, ಸಂಚಿಕೆ ೩೦ (ಸೆಪ್ಟೆಂಬರ್).

ಹಜೇಲ ಪಿ.ಡಿ., (೧೯೯೬), *ಸಾಮಾಜಿಕ ಏಳಿಗೆಗೆ ಸಾಧನವಾಗಿ ಶಿಕ್ಷಣ*, **ಯೋಜನಾ ಅಭ್ಯುದಯ ಮಾಸಪತ್ರಿಕೆ** (ಜನವರಿ), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಹಿರೇಮಠ ಸಿ.ಜಿ. ತಳವಾರ ಜಿ.ಕೆ. ಮತ್ತು ಉಗರಗೋಳ ಎಂ.ಬಿ. (ಸಂ), (೨೦೦೬), **ಆಧುನಿಕ ಶಿಕ್ಷಣದ ಒಲವುಗಳು**, ನಿಶಾಂತ ಪ್ರಕಾಶನ, ಸೀಮಿಕೇರಿ, ಬಾಗಲಕೋಟೆ

ಹೆಗಡೆ ಡಿ.ವಿ., (೨೦೦೪), *ಮಕ್ಕಳ ಅಭಿವೃದ್ಧಿ ಎಲ್ಲರ ಹೊಣೆ*, **ಅಭ್ಯುದಯ ಮಾಸಪತ್ರಿಕೆ, ಯೋಜನಾ** (ನವೆಂಬರ್), ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

ಕ್ಷೇತ್ರಕಾರ್ಯದ ಮಾಹಿತಿ.

ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು

ಕೃಷ್ಣ ಜೆ., (೨೦೦೦), ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಗಣಪತಿ ಕೆ. ಲಮಾಣಿ (೨೦೦೮), ಲಂಬಾಣಿಗರ ಗೋವಾ ವಲಸೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಬಾಲರಾಜು ಎಚ್., (೨೦೦೨), ಸಮುದಾಯದಲ್ಲಿ ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಮಲ್ಲಿಕಾರ್ಜುನ ಕಿಚಡಿ, (೨೦೦೩), ಬಳ್ಳಾರಿ ಜಿಲ್ಲೆ ಬೇಡ ಸಮುದಾಯದ ಶಿಕ್ಷಣದ ಪ್ರಗತಿ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

ಯರಿಸ್ವಾಮಿ ಎಂ. (೨೦೦೨), ಗ್ರಾಮಪಂಚಾಯಿತಿ ಮತ್ತು ಸಬಲೀಕರಣ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಸವಿತಾ ಕೆ., (೨೦೦೮), ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ ಸಂಬಂಧಿ ಆಯಾಮಗಳು, ಸಮಾಜೋರ್ಥಿಕ ಅಂಶಗಳು, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

• • •

೨. ಪ್ರಶ್ನಾವಳಿ

ದಲಿತ ಪೋಷಕರ ಸಂದರ್ಶನ

೧. ಹೆಸರು ಮತ್ತು ವಿಳಾಸ (ಕುಟುಂಬದ ಮುಖ್ಯಸ್ಥರು) :

೨. ಕುಟುಂಬದ ಸದಸ್ಯರ ವಿವರಗಳು

ಕ್ರ.ಸಂ.	ಹೆಸರು	ಲಿಂಗ	ವಯಸ್ಸು	ಶಿಕ್ಷಣ	ಉದ್ಯೋಗ	ಆದಾಯ
೧.						
೨.						
೩.						
೪.						
೫.						

೩. ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಬಯಸುವಿರಾ?

ಅ. ಹೌದು

ಆ. ಇಲ್ಲ

೪. ಹೌದಾದರೆ ಏಕೆ?

೫. ಇಲ್ಲವಾದರೆ ಕಾರಣವೇನು?

ಅ. ಬಡತನ

ಆ. ಆಸಕ್ತಿ ಇಲ್ಲ

ಇ. ಅವಕಾಶವಿಲ್ಲ

ಈ. ಸಾಮಾಜಿಕ ಕಾರಣ

೬. ಗಂಡುಮಕ್ಕಳಿಗೆ ಶಿಕ್ಷಣ ಕೊಡಿಸಲು ಬಯಸುತ್ತೀರ?

ಅ. ಹೌದು

ಆ. ಇಲ್ಲ.

೭. ಹೌದಾದರೆ ಯಾವ ಕಾರಣಕ್ಕಾಗಿ?

ಅ. ನೌಕರಿ ಪಡೆಯುವುದು

ಆ. ವ್ಯಾಪಾರ ಮಾಡುವುದು

ಇ. ಸುಧಾರಿತ ಕೃಷಿ ಮಾಡುವುದು

ಈ. ಉತ್ತಮ ಜೀವನ ನಡೆಸುವುದು

೮. ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಬಗ್ಗೆ ಅಭಿಪ್ರಾಯವೇನು?

೯. ಶಿಕ್ಷಣ ಕೊಡಿಸುವುದರಲ್ಲಿ ಆದ್ಯತೆಯನ್ನು ಗಂಡುಮಕ್ಕಳಿಗೆ ಕೊಡುವಿರಾ ಅಥವಾ ಹೆಣ್ಣುಮಕ್ಕಳಿಗೆ ಕೊಡುವಿರಾ?

ಅ. ಗಂಡುಮಕ್ಕಳಿಗೆ

ಆ. ಹೆಣ್ಣುಮಕ್ಕಳಿಗೆ

೧೦. ಗಂಡುಮಕ್ಕಳ ಶಿಕ್ಷಣಕ್ಕೆ ಆದ್ಯತ ಕೊಡುವುದಕ್ಕೆ ನಿರ್ದಿಷ್ಟ ಕಾರಣವಿದೆಯೆ?

೧೧. ನಿಮ್ಮ ಕುಟುಂಬದ ಸದಸ್ಯರು ಪ್ರಾಥಮಿಕ ಶಿಕ್ಷಣವನ್ನು ಮಧ್ಯದಲ್ಲಿಯೇ ನಿಲ್ಲಿಸಿದ್ದಾರೆಯೆ?

ಅ. ಹೌದು

ಆ. ಇಲ್ಲ

೧೨. ಹೌದಾದರೆ ಅದಕ್ಕೆ ಕಾರಣ ಹೇಳಿರಿ?

೧೩. ನಿಮ್ಮ ಕುಟುಂಬದ ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವೇನು?

೧೪. ನಿಮ್ಮ ಕುಟುಂಬದ ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವೇನು?

೧೫. ನಿಮ್ಮ ಕುಟುಂಬದ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವೇನು?

೧೫. ಶಿಕ್ಷಣ ಕ್ಷೇತ್ರದಲ್ಲಿನ ಸರ್ಕಾರಿ ಉಚಿತ ಸೌಲಭ್ಯಗಳು ನಿಮಗೆ ಸರಿಯಾಗಿ ಲಭ್ಯವಾಗಿವೆಯೆ?

ಅ. ಹೌದು

ಆ. ಇಲ್ಲ

೧೬. ಹೌದಾದರೆ ಶಿಕ್ಷಣದ ಮೇಲೆ ಅವುಗಳ ಪರಿಣಾಮವಾಗಿದೆಯೆ?

ಅ. ಹೌದು

ಆ. ಇಲ್ಲ

೧೭. ಸರ್ಕಾರದಿಂದ ಸಿಗುವ ಉಚಿತ ಸೌಲಭ್ಯಗಳ ಜೊತೆಗೆ ನಿಮ್ಮ ಮಕ್ಕಳ ಶಿಕ್ಷಣಕ್ಕೆ ನೀವು ಹಣ ಖರ್ಚು ಮಾಡುತ್ತೀರ?

ಅ. ಹೌದು

ಆ. ಇಲ್ಲ

೧೮. ಹೌದಾದರೆ ಒಂದು ಮಗುವಿನ ಶಿಕ್ಷಣಕ್ಕೆ ನೀವು ಖರ್ಚು ಮಾಡುವ ಹಣವೆಷ್ಟು?

೧೯. ಶಿಕ್ಷಣ ಕ್ಷೇತ್ರದ ಸರ್ಕಾರಿ ಉಚಿತ ಸೌಲಭ್ಯ ಸರಿಯಾಗಿ ಸಿಗದಿದ್ದರಿಂದ ನಿಮ್ಮ ಮಕ್ಕಳ ಶಿಕ್ಷಣದ ಹಿನ್ನಡೆಯಾಗಿದೆಯೆ?

ಅ. ಹೌದು

ಆ. ಇಲ್ಲ

೨೦. ಸರ್ಕಾರಿ ಉಚಿತ ಸೌಲಭ್ಯಗಳು ಸರಿಯಾಗಿ ಸಿಗದಿರಲು ಕಾರಣವಿದೆಯೆ?

೨೧. ಶಾಲೆಯಲ್ಲಿ ನಿಮ್ಮ ಮಕ್ಕಳಿಗೆ ತೊಂದರೆಗೊಳಾಗುತ್ತಿವೆಯೆ?

ಅ. ಹೌದು

ಆ. ಇಲ್ಲ

೨೨. ಹೌದಾದರೆ ಯಾವ ರೀತಿಯ ತೊಂದರೆಗಳಾಗುತ್ತವೆ?

೨೩. ನಿಮ್ಮ ಮಕ್ಕಳಿಗೆ ಜಾತಿ ನಿಂದನೆಯಾಗುತ್ತಿದೆಯೆ?

ಅ. ಹೌದು

ಆ. ಇಲ್ಲ

೨೪. ನಿಮಗೆ ಜಾತಿ ನಿಂದನೆಯ ತೊಂದರೆಯಾಗುತ್ತದೆಯೆ?

ಅ. ಹೌದು

ಆ. ಇಲ್ಲ

೨೫. ಜಾತಿ ನಿಂದನೆಯ ತೊಂದರೆಯಿಂದ ನಿಮ್ಮ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆಯೆ?

ಅ. ಹೌದು

ಆ. ಇಲ್ಲ

೨೬. ಹೌದಾದರೆ ಅಂತಹ ತೊಂದರೆ ನಿವಾರಿಸುವ ಪ್ರಯತ್ನ ಮಾಡಿದ್ದೀರ?

ಅ. ಹೌದು

ಆ. ಇಲ್ಲ

೨೭. ನೀವು ಮಾಡಿದ ಪ್ರಯತ್ನದಿಂದ ನಿಮ್ಮ ಮಕ್ಕಳ ಶಿಕ್ಷಣದ ಸುಧಾರಣೆಗೆ ಕಂಡುಬಂದಿದೆಯೆ?

ಅ. ಹೌದು

ಆ. ಇಲ್ಲ

೨೮. ನಿಮ್ಮ ಮಕ್ಕಳನ್ನು ಶಿಕ್ಷಕರು ಹೇಗೆ ನೋಡಿಕೊಳ್ಳುತ್ತಾರೆ?

೨೯. ಮೀಸಲಾತಿ ಮೂಲಕ ನಿಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಆಸಕ್ತಿ ಹೊಂದಿದ್ದೀರ?

ಅ. ಹೌದು

ಆ. ಇಲ್ಲ

೩೦. ನಿಮ್ಮ ಮಕ್ಕಳ ಶೈಕ್ಷಣಿಕ ಪರಿಸ್ಥಿತಿಯನ್ನು ಸುಧಾರಿಸಲು ಇನ್ನೂ ಹೆಚ್ಚಿನ ಸಲಹೆಗಳಿವೆಯೆ?

ಶಿಕ್ಷಕರ ಸಂದರ್ಶನ

೧. ಹೆಸರು ಮತ್ತು ವಿಳಾಸ :

೨. ವಿವರಗಳು :

ವಿದ್ಯಾರ್ಹತೆ	ಸೇವಾ ಅನುಭವ	ಜಾತಿ	ಲಿಂಗ	ವಯಸ್ಸು	ಇತರೆ

೩. ನಿಮ್ಮ ಶಾಲೆಗೆ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ

೪. ಅದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳೆಷ್ಟು?

೫. ಪರಿಶಿಷ್ಟ ಜಾತಿಯ ಮಕ್ಕಳಲ್ಲಿ ಗಂಡುಮಕ್ಕಳೆಷ್ಟು ಮತ್ತು ಹೆಣ್ಣುಮಕ್ಕಳೆಷ್ಟಿದ್ದಾರೆ?

ಗಂ. ಹೆ.

೬. ಪರಿಶಿಷ್ಟ ಜಾತಿಯ ಮಕ್ಕಳ ಸಂಖ್ಯೆ ಇತರೆ ಜಾತಿಯ ಮಕ್ಕಳ ಸಂಖ್ಯೆಗಿಂತ ಹೆಚ್ಚಾಗಿದೆಯೆ ಅಥವಾ ಕಡಿಮೆಯಾಗಿದೆಯೆ?

ಅ. ಕಡಿಮೆಯಾಗಿದೆ

ಆ. ಹೆಚ್ಚಾಗಿದೆ.

೭. ಪರಿಶಿಷ್ಟ ಜಾತಿಯ ಮಕ್ಕಳ ಸಂಖ್ಯೆ ಕಡಿಮೆ ಅಥವಾ ಹೆಚ್ಚಾಗಿರಲು ಕಾರಣವೇನು?

ಅ. ಬಡತನ

ಆ. ನಿರಾಸಕ್ತಿ

ಇ. ಕಡಿಮೆ ಅವಕಾಶಗಳು

ಈ. ಸಾಮಾಜಿಕ ಕಾರಣ

೮. ಪರಿಶಿಷ್ಟ ಜಾತಿಯ ಮಕ್ಕಳ ಶಾಲಾ ಹಾಜರಾತಿ ಪ್ರಮಾಣ ಹೇಗಿದೆ?

ಅ. ಕಡಿಮೆಯಾಗಿದೆ

ಆ. ಹೆಚ್ಚಾಗಿದೆ

೯. ಪರಿಶಿಷ್ಟ ಜಾತಿಯ ಮಕ್ಕಳ ಹಾಜರಾತಿ ಪ್ರಮಾಣ ಕಡಿಮೆ ಇರಲು ಕಾರಣವೇನು?

ಅ. ಬಡತನ

ಆ. ನಿರಾಸಕ್ತಿ

ಇ. ವಲಸೆ ಹೋಗುವುದು

ಈ. ಸಣ್ಣಮಕ್ಕಳ ಪೋಷಣೆ

೧೦. ಪರಿಶಿಷ್ಟ ಜಾತಿಯ ಮಕ್ಕಳ ಕಡಿಮೆ ಶಾಲಾ ಹಾಜರಾತಿಯಲ್ಲಿ ಗಂಡುಮಕ್ಕಳ ಪ್ರಮಾಣವೆಷ್ಟು ಮತ್ತು ಹೆಣ್ಣುಮಕ್ಕಳ ಪ್ರಮಾಣವೆಷ್ಟು?

ಗಂ. ಹೆ.

೧೧. ಶಾಲೆಗೆ ಗೈರುಹಾಜರಾಗುವ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗಿರಲು ಕಾರಣವೇನು?

ಅ. ಮಕ್ಕಳ ಪೋಷಣೆ

ಆ. ಪಾಲಕರ ನಿರಾಸಕ್ತಿ

ಇ. ದೈಹಿಕ ತೊಂದರೆ

ಈ. ಬಡತನ

೧೨. ಶಾಲೆಗೆ ದಾಖಲಾದ ಪರಿಶಿಷ್ಟ ಜಾತಿಯ ಎಲ್ಲಾ ಮಕ್ಕಳು ಶಿಕ್ಷಣವನ್ನು ಪೂರ್ಣಗೊಳಿಸುವರೆ?

ಅ. ಹೌದು

ಆ. ಇಲ್ಲ

೧೩. ಇಲ್ಲವಾದರೆ ಅದಕ್ಕೆ ಕಾರಣಗಳನ್ನು ಗುರುತಿಸುವಿರಾ?

ಅ. ವಲಸೆ ಹೋಗುವುದು

ಆ. ಸಣ್ಣಮಕ್ಕಳ ಪೋಷಣೆ

ಇ. ಮಕ್ಕಳ ಆಧಾರಿತ ಜೀವನ

ಈ. ಪೋಷಕರ ಕಾಳಜಿ ಇಲ್ಲದಿರುವುದು

೧೪. ದಲಿತೇತರ ಮಕ್ಕಳಿಗೆ ಹೋಲಿಸಿದರೆ ದಲಿತರ ಮಕ್ಕಳು ಹೆಚ್ಚಾಗಿ ಮಧ್ಯದಲ್ಲಿಯೇ ಏಕೆ ಶಾಲೆ ಬಿಡುತ್ತಾರೆ?

ಅ. ದುಡಿಮೆಗೆ ಬೇರೆ ಊರಿಗೆ ಹೋಗುವುದರಿಂದ

ಆ. ಹೆಣ್ಣುಮಕ್ಕಳನ್ನು ಓದಿಸುವುದರಲ್ಲಿ ನಿರಾಸಕ್ತಿ

೧೫. ದಲಿತ ಗಂಡುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವೇನು?

ಅ. ದುಡಿಮೆಗಾಗಿ

ಆ. ಪಾಲಕರ ನಿರಾಸಕ್ತಿ

ಇ. ಆರ್ಥಿಕ ತೊಂದರೆ

ಈ. ಸಣ್ಣಮಕ್ಕಳ ಪೋಷಣೆ

೧೬. ದಲಿತ ಹೆಣ್ಣುಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡಲು ಏನು ಕಾರಣವಿದೆ?

ಅ. ಮಕ್ಕಳ ಪೋಷಣೆ

ಆ. ಮನೆಗೆಲಸ.

ಇ. ಬಡತನ

ಈ. ಪೋಷಕರ ಬೇಜವಾಬ್ದಾರಿತನ

೧೭. ಮಧ್ಯದಲ್ಲಿಯೇ ಶಾಲೆ ಬಿಡುವ ಪರಿಶಿಷ್ಟ ಜಾತಿಯ ಮಕ್ಕಳ ಪೋಷಕರು ಭೂಮಿಯನು ಹೊಂದಿದ್ದಾರೆಯೇ?

ಅ. ಹೊಂದಿದ್ದಾರೆ

ಆ. ಹೊಂದಿಲ್ಲ

ಇ. ಕೆಲವರಿಗಿದೆ, ಕೆಲವರಿಗಿಲ್ಲ

೧೮. ದಲಿತ ಪೋಷಕರು ಭೂಮಿಯನ್ನು ಹೊಂದಿದ್ದರೂ, ಅವರ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದೇಕೆ?

ಅ. ಹೊಲದ ಕೆಲಸಕ್ಕೆ ಕಳುಹಿಸುವುದು

ಆ. ಕೆಲಸದಲ್ಲಿ ಮಗುವನ್ನು ಹೆಚ್ಚಾಗಿ ತೊಡಗಿಸಿಕೊಳ್ಳುವುದು

ಇ. ಸಾಮಾಜಿಕ ಪ್ರಜ್ಞೆ ಪೋಷಕರಲ್ಲಿ ಕಡಿಮೆ ಇರುವುದು

೧೯. ಭೂಮಿಯನ್ನು ಹೊಂದಿರದ ದಲಿತ ಪೋಷಕರ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದಕ್ಕೆ ಕಾರಣವೇನು?

ಅ. ದುಡಿಮೆಗಾಗಿ ವಲಸೆ ಹೋಗುವುದರಿಂದ

ಆ. ವಿದ್ಯಾರ್ಹತೆಯ ಕೊರತೆ (ಪೋಷಕರಲ್ಲಿ)

೨೦. ತಮ್ಮ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದರ ಬಗ್ಗೆ ದಲಿತ ಪೋಷಕರ ಪ್ರತಿಕ್ರಿಯೆ ಏನಿದೆ?

ಅ. ಮನೆಯಲ್ಲಿ ಆರ್ಥಿಕ ತೊಂದರೆ

ಆ. ವಿದ್ಯೆಯಲ್ಲಿನ ನಿರಾಸಕ್ತಿ

ಇ. ಮಕ್ಕಳ ಬಗ್ಗೆ ಕಾಳಜಿ ಇಲ್ಲದಿರುವುದು

೨೧. ದಲಿತ ಪೋಷಕರು ಜಾತಿ ನಿಂದನೆಯ ತೊಂದರೆಯನ್ನು ಅನುಭವಿಸುತ್ತಿದ್ದಾರೆಯೆ?

ಅ. ಹೌದು

ಆ. ಇಲ್ಲ

೨೨. ಹೌದಾದರೆ ಅದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆಯೇ?

ಅ. ಹೌದು

ಆ. ಇಲ್ಲ

೨೩. ಜಾತಿ ನಿಂದನೆಯ ಸಮಸ್ಯೆಯ ಪರಿಹಾರಕ್ಕೆ ನೀವು ದಲಿತ ಪೋಷಕರಿಗೆ ಸಹಕಾರ ನೀಡಿದ್ದೀರಾ?

ಅ. ಹೌದು

ಆ. ಇಲ್ಲ

೨೪. ಜಾತಿ ನಿಂದನೆಯ ಸಮಸ್ಯೆಯ ಪರಿಹಾರಕ್ಕೆ ನೀವು ನೀಡಿದ ಸಹಕಾರದಿಂದ ಮಕ್ಕಳ ಶಿಕ್ಷಣದ ಸುಧಾರಣೆಯಾಗಿದೆಯೇ?

ಅ. ಹೌದು

ಆ. ಇಲ್ಲ

೨೫. ದಲಿತರ ಮೇಲೆ ನಡೆಯುವ ದೌರ್ಜನ್ಯಗಳಿಂದ ಅವರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆಯೆ?

ಅ. ಹೌದು

ಆ. ಇಲ್ಲ

೨೬. ದಲಿತ ಮಕ್ಕಳ ಶಿಕ್ಷಣದ ಸಮಸ್ಯೆಗಳ ಬಗ್ಗೆ ನೀವು ಪೋಷಕರೊಂದಿಗೆ ಸಮಾಲೋಚನೆ ಮಾಡಿದ್ದೀರಾ?

ಅ. ಹೌದು

ಆ. ಇಲ್ಲ

೨೭. ದಲಿತ ಪೋಷಕರೊಂದಿಗೆ ಸಮಾಲೋಚನೆ ಮಾಡಿದ್ದರೆ ಅವರಿಂದ ಮಕ್ಕಳ ಶಿಕ್ಷಣದ ಸುಧಾರಣೆಯಾಗಿದೆಯೇ?

ಅ. ಹೌದು

ಆ. ಇಲ್ಲ

೨೮. ದಲಿತ ಮಕ್ಕಳ ಶಿಕ್ಷಣದ ಬಗ್ಗೆ ಇರುವ ಸಾಮಾಜಿಕ ಅಭಿಪ್ರಾಯವೇನು?

೨೯. ದಲಿತ ಮಕ್ಕಳು ದಲಿತೇತರ ಮಕ್ಕಳ ಶಿಕ್ಷಣದ ಸ್ಥಿತಿಯ ಬಗ್ಗೆ ನಿಮ್ಮ ವೈಯಕ್ತಿಕ ಅಭಿಪ್ರಾಯವೇನು?

೩೦. ದಲಿತ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ನಿಮ್ಮಿಂದ ಹೆಚ್ಚಿನ ಸಲಹೆ ಸೂಚನೆಗಳೇನು?

ಜನಪ್ರತಿನಿಧಿಗಳ ಸಂದರ್ಶನ

೧. ಹೆಸರು ಮತ್ತು ವಿಳಾಸ :

೨. ವಿವರಗಳು :

ಪ್ರತಿನಿಧಿಸುವ ಕ್ಷೇತ್ರ	ಜಾತಿ	ಲಿಂಗ	ವಯಸ್ಸು	ವಿದ್ಯಾರ್ಹತೆ	ಇತರೆ

೩. ನಿಮ್ಮ ಕ್ಷೇತ್ರದ ಒಟ್ಟು ಜನಸಂಖ್ಯೆ ಎಷ್ಟಿದೆ?

೪. ನಿಮ್ಮ ಕ್ಷೇತ್ರದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಎಷ್ಟು?

೫. ನಿಮ್ಮ ಕ್ಷೇತ್ರದ ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಪುರುಷರು ಮತ್ತು ಮಹಿಳೆಯರು ಎಷ್ಟಿದ್ದಾರೆ?

ಗಂ. ಹೆ.

೬. ನಿಮ್ಮ ಕ್ಷೇತ್ರದಲ್ಲಿ ದಲಿತರ ಆರ್ಥಿಕ ಸ್ಥಿತಿ ಯಾವ ರೀತಿಯಾಗಿದೆ?

೭. ನಿಮ್ಮ ಕ್ಷೇತ್ರದ ದಲಿತರ ಸಾಮಾಜಿಕ ಪರಿಸ್ಥಿತಿ ಹೇಗಿದೆ.?

೮. ನಿಮ್ಮ ಕ್ಷೇತ್ರದ ದಲಿತರ ರಾಜಕೀಯ ತಿಳುವಳಿಕೆ ಎಷ್ಟರಮಟ್ಟಿಗಿದೆ?

೯. ನಿಮ್ಮ ಕ್ಷೇತ್ರದ ಜನರಿಗೆ ಸರ್ಕಾರದ ವಿವಿಧ ಸೌಲಭ್ಯಗಳು ದೊರೆಯುತ್ತಿವೆಯೇ?

ಅ. ಹೌದು

ಆ. ಇಲ್ಲ

೧೦. ಹೌದಾದರೆ ಯಾವ ರೀತಿಯ ಸೌಲಭ್ಯಗಳು ದೊರೆಯುತ್ತಿವೆ?

೧೧. ನಿಮ್ಮ ಕ್ಷೇತ್ರದ ಜನರಿಗೆ ಸರ್ಕಾರದ ಶೈಕ್ಷಣಿಕ ಸೌಲಭ್ಯಗಳು ಸರಿಯಾಗಿ ಸಿಗುತ್ತಿವೆಯೇ?

ಅ. ಹೌದು

ಆ. ಇಲ್ಲ

೧೨. ಹೌದಾದರೆ ಯಾವ ರೀತಿಯ ಶೈಕ್ಷಣಿಕ ಸೌಲಭ್ಯಗಳು ಸಿಗುತ್ತವೆ?

ಅ. ಶಾಲಾ ಕಟ್ಟಡ ಮತ್ತು ಪೀಠೋಪಕರಣಗಳು

ಆ. ಶಿಕ್ಷಕರ ನೇಮಕಾತಿ ಮತ್ತು ತರಬೇತಿಗಳು

ಇ. ಪಠ್ಯಪುಸ್ತಕ ಮತ್ತು ಪಾಠೋಪಕರಣಗಳು

ಈ. ಸಾಕ್ಷರತಾ ಕಾರ್ಯಕ್ರಮ ಮತ್ತು ಸಾರ್ವಜನಿಕ ಗ್ರಂಥಾಲಯಗಳು

೧೩. ನಿಮ್ಮ ಕ್ಷೇತ್ರದಲ್ಲಿ ಇತರ ಜನಾಂಗದ ಮಕ್ಕಳಿಗಿಂತ ಪರಿಶಿಷ್ಟ ಜಾತಿಯ ಮಕ್ಕಳ ಶಿಕ್ಷಣದ ಸ್ಥಿತಿ ಹೇಗಿದೆ?

ಅ. ಹಿಂದುಳಿದಿದೆ

ಆ. ಸಮಾನಾಗಿದೆ

ಇ. ಸುಧಾರಣೆಯಾಗಿಲ್ಲ

ಈ. ಸುಧಾರಿಸಬೇಕಾಗಿದೆ

೧೪. ಪರಿಶಿಷ್ಟ ಜಾತಿಯ ಮಕ್ಕಳ ಶಿಕ್ಷಣ ಹಿಂದುಳಿಯಲು ಕಾರಣವೇನು?

೧೫. ನಿಮ್ಮ ಕ್ಷೇತ್ರದ ಪರಿಶಿಷ್ಟ ಜಾತಿಯ ಜನರಿಗೆ ಶೈಕ್ಷಣಿಕ ಸೌಲಭ್ಯಗಳು ಸರಿಯಾಗಿ ಸಿಗುತ್ತಿವೆಯೇ?

ಅ. ಹೌದು

ಆ. ಇಲ್ಲ

೧೬. ಪರಿಶಿಷ್ಟ ಜಾತಿಯ ಮಕ್ಕಳಲ್ಲಿ ಶಿಕ್ಷಣ ಸೌಲಭ್ಯವನ್ನು ಹೆಚ್ಚಾಗಿ ಯಾವ ಮಕ್ಕಳು ಪಡೆದು ಕೊಳ್ಳುತ್ತಾರೆ?

ಅ. ಗಂಡುಮಕ್ಕಳು

ಆ. ಹೆಣ್ಣುಮಕ್ಕಳು

೧೭. ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳಿಗಿಂತ ಗಂಡುಮಕ್ಕಳು ಹೆಚ್ಚಾಗಿ ಶಿಕ್ಷಣ ಸೌಲಭ್ಯ ಪಡೆಯಲು ಕಾರಣವೇನು?

೧೮. ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ಕಡಿಮೆ ಶಿಕ್ಷಣದ ಸೌಲಭ್ಯವನ್ನು ಪಡೆಯಲು ಕಾರಣವೇನು?

೧೯. ಪರಿಶಿಷ್ಟ ಜಾತಿಯ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುವುದು ನಿಮಗೆ ತಿಳಿದಿದೆಯೇ?

೨೦. ಪರಿಶಿಷ್ಟ ಜಾತಿಯ ಮಕ್ಕಳಲ್ಲಿ ಹೆಚ್ಚಾಗಿ ಮಧ್ಯದಲ್ಲಿಯೇ ಶಾಲೆ ಬಿಡುವ ಮಕ್ಕಳಾರು?

೨೧. ಪರಿಶಿಷ್ಟ ಜಾತಿಯ ಹೆಣ್ಣುಮಕ್ಕಳು ಹೆಚ್ಚಾಗಿ ಮಧ್ಯದಲ್ಲಿಯೇ ಶಾಲೆ ಬಿಡಲು ಕಾರಣವೇನು?

೨೨. ನಿಮ್ಮ ಕ್ಷೇತ್ರದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತವೆಯೇ?

ಅ. ಹೌದು

ಆ. ಇಲ್ಲ

೨೩. ಹೌದಾದರೆ ದೌರ್ಜನ್ಯಗಳಿಂದ ದಲಿತರ ಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗಿದೆಯೇ?

ಅ. ಹೌದು

ಆ. ಇಲ್ಲ

೨೪. ಈ ಎಲ್ಲಾ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ಪೋಷಕರು ತಮ್ಮಮಕ್ಕಳ ಶಿಕ್ಷಣದ ಬಗ್ಗೆ ಹೊಂದಿರುವ ಅಭಿಪ್ರಾಯವೇನು?

೨೫. ಈ ಎಲ್ಲಾ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ಮಕ್ಕಳ ಶಿಕ್ಷಣ ಸುಧಾರಣೆಗೆ ನೀವು ಮಾಡಿದ ಪ್ರಯತ್ನಗಳೇನಿವೆ?

೩. ಛಾಯಾಚಿತ್ರಗಳು

ನಾವು ಕ್ಷೇತ್ರ ಕಾರ್ಯಮಾಡಿದಾಗ ಶಾಲೆನಡೆಯುತ್ತಿರುವ ದಿನಗಳು ಮತ್ತು ಅವಧಿಯಲ್ಲಿ ಮಕ್ಕಳು ಶಾಲೆಯಿಂದ ಹೊರಗಿದ್ದುದನ್ನು ಗುರುತ್ತಿಸಿದ್ದೇವೆ

ದಲಿತರ ವಾಸದ ಸ್ಥಿತಿಯನ್ನು ಈ ಕೆಳಗಿನ ಛಾಯಚಿತ್ರಗಳು ತಿಳಿಸುತ್ತವೆ.











ಾಲಾ ಅವಧಿಯಲ್ಲಿ ಶಾಲೆಗೆ ಹೋಗದೆ ಹೊರಗಡೆ ಇರುವ ದಲಿತ ಮಕ್ಕಳು



ಶಾಲಾ ಅವಧಿಯಲ್ಲಿ ಮನೆಯಲ್ಲಿ ಇರುವ ದಲಿತ ಮಕ್ಕಳು



ನೀರು ತರುತ್ತಿರುವ ದಲಿತ ಬಾಲಕಿ



ೋಷಕರೊಂದಿಗೆ ಬಟ್ಟೆ ತೊಳೆಯಲು ನೆರವಾಗುತ್ತಿರುವ ದಲಿತ ಬಾಲಕಿ



ಸೊಪ್ಪು ಮಾರುತ್ತಿರುವ ದಲಿತ ಬಾಲಕ



ಬಟ್ಟೆತೊಳೆಯುತ್ತಿರುವ ಬಾಲಕಿಯರು



ಮಕ್ಕಳು ಕಲಿಕೆಯಲ್ಲಿ ತೊಡಗಿರುವುದು



ಶಾಲಾ ಅವಧಿಯಲ್ಲಿ ಆಟ ಆಡುತ್ತಿರುವ ಮಕ್ಕಳು



